ಅಭಿಷೇಕ್ ಅಭ್ಯಾಸ

ಅಹಮದಾಬಾದಿನಲ್ಲಿ ಭಾನುವಾರ ನಡೆಯುವ ಟಿ20 ವಿಶ್ವಕಪ್ ಸೂಪರ್ 8ರ ಪಂದ್ಯದಲ್ಲಿ ಆಡಲಿರುವ ಭಾರತ ತಂಡದ ಅಭಿಷೇಕ್ ಶರ್ಮಾ ಫೀಲ್ಡಿಂಗ್ ಅಭ್ಯಾಸ ನಡೆಸಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸಂಭ್ರಮ

ದೆಹಲಿಯಲ್ಲಿ ನಡೆದ 'ಎ.ಐ ಇಂಪ್ಯಾಕ್ಟ್ ಶೃಂಗಸಭೆ–2026'ರಲ್ಲಿ ಭಾಗಿಯಾಗಿದ್ದ ವ್ಯಕ್ತಿಯೊಬ್ಬರು ಮ್ಯಾಸ್ಕಟ್ ಅನ್ನು ಅಪ್ಪಿಕೊಂಡು ಸಂಭ್ರಮಿಸಿದರು

‘ಸದಸ್ಯರ ದುರ್ನಡತೆ: ವಜಾಕ್ಕೆ ಆಧಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದುರ್ನಡತೆ ಆರೋಪ ಸಾಬೀತಾಗಿದ್ದರೆ ಅಂತಹ ಸಂದರ್ಭದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಸದಸ್ಯರನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ವಜಾ-ಗೊಳಿಸಬಹುದು’ ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಸ್ಪಷ್ಟಪಡಿಸಿದೆ.

ಈ ಮೂಲಕ, ಗದಗ-ಬೆಟಗೇರಿ ನಗರಸಭೆ ಸದಸ್ಯರಾದ ಉಷಾ ಮಹೇಶ್ ದಾಸರ, ಅನಿಲ ಎಂ.ಅಬ್ಬಿಗೇರಿ ಮತ್ತು ಗೂಳಪ್ಪ ಎಸ್.ಮುಶಿಗೇರಿ ಅವರನ್ನು ಸದಸ್ಯತ್ವದಿಂದ ವಜಾಗೊಳಿಸಿದ್ದ ಸರ್ಕಾರದ ಕ್ರಮವನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) ಎತ್ತಿಹಿಡಿದಿದೆ.

ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರ ವಾದವನ್ನು ಪುರಸ್ಕರಿಸಿ ರುವ ನ್ಯಾಯಪೀಠ, ‘ನಾವು ಅಮಾಯಕರು ಎಂಬ ಆರೋಪಿಗಳ ಹೇಳಿಕೆಯನ್ನು ಕ್ರಿಮಿನಲ್ ಪ್ರಕರಣಗಳಲ್ಲಿ ಪರಿಗಣಿಸ ಬಹುದು. ಆದರೆ, ಆಡಳಿತಾತ್ಮಕ ಕ್ರಮ ಕೈಗೊಳ್ಳುವಾಗ ಈ ಹೇಳಿಕೆ ಅಡ್ಡಿಯಾಗದು. ಹೀಗಾಗಿ ಸರ್ಕಾರ, ಕರ್ನಾಟಕ ನಗರಪಾಲಿಕೆಗಳ ಕಾಯ್ದೆ–1964ರ ಕಲಂ 41ರ ಅನ್ವಯ ಸದಸ್ಯ ರನ್ನು ವಜಾಗೊಳಿಸಿರುವ ಕ್ರಮ ಸರಿಯಾ ಗಿಯೇ ಇದೆ’ ಎಂದು ಅಭಿಪ್ರಾಪಟ್ಟಿದೆ.

ಸಾರ್ವಜನಿಕ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದ ಕೆಲವು ವ್ಯಕ್ತಿಗಳ ಜತೆ ಶಾಮೀಲಾಗಿ ನಗರಸಭೆ ಪೌರಾಯುಕ್ತರ ಸಹಿಯನ್ನು ನಕಲು ಮಾಡಿ, ಸುಳ್ಳು ನಿರ್ಣಯ ಸೃಷ್ಟಿಸಿ ಒತ್ತುವರಿದಾರರಿಗೆ ಭೂ ಸ್ವಾಧೀನ ಪತ್ರ ನೀಡಿದ್ದ ಆರೋಪದ ಮೇರೆಗೆ ಅರ್ಜಿದಾರರನ್ನು ಸದಸ್ಯತ್ವದಿಂದ ವಜಾಗೊಳಿಸಲಾಗಿತ್ತು. ಇದನ್ನು ಪ್ರಶ್ನಿಸಿ ಮೂವರೂ ಹೈಕೋರ್ಟ್ ಮೆಟ್ಟಿಲೇರಿದ್ದರು.

ಎಸ್‌ಸಿ, ಎಸ್‌ಟಿ ದೌರ್ಜನ್ಯ ಹೆಚ್ಚಳ

ಮಹಿಳೆಯರ ಮೇಲಿನ ದೌರ್ಜನ್ಯ ಇಳಿಕೆ: ಪೋಕ್ಸೊ ಪ್ರಕರಣ ಏರಿಕೆ

• ಆದಿತ್ಯ ಕೆ.ಎ.

ಬೆಂಗಳೂರು: ರಾಜ್ಯದಲ್ಲಿ 2024ಕ್ಕೆ ಹೋಲಿಸಿದರೆ ಕಳೆದ ವರ್ಷ (2025) ಪೋಕ್ಸೊ, ಹಲ್ಲೆ, ಡ್ರಗ್ಸ್, ಅಬಕಾರಿ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚಳವಾಗಿವೆ.

ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ 10 ಡಿಸಿಆರ್‌ಇ (ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ) ಘಟಕಗಳು ಸೀಮಿತ ಅಧಿಕಾರ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಆದರೆ, 2024ರ ಡಿಸೆಂಬರ್‌ನಲ್ಲಿ ಡಿಸಿಆರ್‌ಇ ಘಟಕಗಳಿಗೆ ಹೆಚ್ಚಿನ ಅಧಿಕಾರ ನೀಡಿ, 33 ವಿಶೇಷ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಗಿತ್ತು. ಕಳೆದ ವರ್ಷ 2,277 ಎಸ್‌ಸಿ/ಎಸ್‌ಟಿ ದೌರ್ಜನ್ಯ ಪ್ರಕರಣಗಳು ದಾಖಲಾಗಿದ್ದವು. ದಲಿತರ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಹೊಸದಾಗಿ ಸ್ಥಾಪಿಸಿರುವ ವಿಶೇಷ ಪೊಲೀಸ್ ಠಾಣೆಗಳಲ್ಲಿಯೇ ನೂರಾರು ಪ್ರಕರಣಗಳು ದಾಖಲಾಗಿವೆ. ಎಫ್‌ಐಆರ್ ದಾಖಲು ಪ್ರಕ್ರಿಯೆ, ತನಿಖೆ, ದೋಷಾರೋಪ ಪಟ್ಟಿ ಸಲ್ಲಿಕೆಗೂ ವೇಗ ಸಿಕ್ಕಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

2024ಕ್ಕೆ ಹೋಲಿಸಿದರೆ 2025ರಲ್ಲಿ ಎರಡು ಸಾವಿರದಷ್ಟು ಎನ್‌ಡಿಪಿಎಸ್ ಪ್ರಕರಣಗಳು ಏರಿಕೆ ಕಂಡಿವೆ. ಅಧಿಕೃತ ಮಾರಾಟ ಮಳಿಗೆ ಹೊರತು ಪಡಿಸಿಯೂ ಗ್ರಾಮೀಣ ಪ್ರದೇಶದ ಕಿರಾಣಿ ಅಂಗಡಿಗಳಲ್ಲೂ ಮದ್ಯ ಮಾರಾಟ ಮಾಡಲಾಗುತ್ತಿದೆ. ಇಂತಹ ಕಿರಾಣಿ ಅಂಗಡಿಗಳ ಮೇಲೆ ಅಬಕಾರಿ ಪೊಲೀಸರು ದಾಳಿ ನಡೆಸಿ, ಕಳೆದ ವರ್ಷ 9,242 ಪ್ರಕರಣ ದಾಖಲಿಸಿದ್ದರು.

ಇದೇ ಹೊತ್ತಿನಲ್ಲಿ ಕೆಲವು ಅಪರಾಧ ಪ್ರಕರಣಗಳು ಇಳಿಕೆ ಕಂಡಿವೆ. ಕೊಲೆ, ರಾಬರಿ, ಡಕಾಯಿತಿ, ಗಲಭೆ, ಅತ್ಯಾಚಾರ ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಇಳಿಕೆ ಆಗಿರುವುದು ಪೊಲೀಸ್ ಇಲಾಖೆ ಸಂಗ್ರಹಿಸಿರುವ ಅಂಕಿಅಂಶದಿಂದ ಗೊತ್ತಾಗಿದೆ.

2023ರಲ್ಲಿ 1,293 ಕೊಲೆಗಳು ನಡೆದಿದ್ದವು. ಅದೇ 2024ರಲ್ಲಿ 1,208 ಹಾಗೂ 2025ರಲ್ಲಿ 1,131 ಕೊಲೆಗಳು ನಡೆದಿವೆ. ಹಳೆಯ ದ್ವೇಷ, ಶೀಲ ಶಂಕೆ, ಜಮೀನಿಗೆ ಸಂಬಂಧಿಸಿದ ವ್ಯಾಜ್ಯ, ಪ್ರೇಮ ವೈಫಲ್ಯ, ಪ್ರತಿಷ್ಠೆಗಾಗಿ ರೌಡಿಗಳ ನಡುವೆ ಕಾಳಗ, ಸಾಲ ಮರು ಪಾವತಿ ಮಾಡದ ವಿಚಾರ, ಎರಡು ಗುಂಪುಗಳ ನಡುವೆ ಘರ್ಷಣೆ, ಚಿನ್ನಾಭರಣ ಹಾಗೂ ಇತರೆ ಕಾರಣಗಳಿಗೆ ರಾಜ್ಯದಲ್ಲಿ ಕೊಲೆಗಳು ನಡೆದಿರು ವುದು ಪೊಲೀಸ್ ತನಿಖೆಯಿಂದ ಪತ್ತೆಯಾಗಿದೆ.

‘2019ರಲ್ಲಿ 2,197 ಪೋಕ್ಸೊ (ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ) ಪ್ರಕರಣಗಳು ದಾಖಲಾಗಿದ್ದವು. ಅದೇ 2024ರಲ್ಲಿ 4,061 ಹಾಗೂ 2025ರಲ್ಲಿ 4,096 ಪೋಕ್ಸೊ ಪ್ರಕರಣಗಳು ದಾಖಲಾಗಿವೆ. ವರ್ಷದಿಂದ ವರ್ಷಕ್ಕೆ ಪೋಕ್ಸೊ ಪ್ರಕರಣಗಳು ಹೆಚ್ಚುತ್ತಿವೆ. ಪೋಕ್ಸೊ ಪ್ರಕರಣಗಳಲ್ಲಿ ಸಮರ್ಪಕ ಸಾಕ್ಷ್ಯಾಧಾರಗಳನ್ನು ಕಲೆಹಾಕಿ ತನಿಖೆ ನಡೆಸಬೇಕು. ಆರೋಪಿಗಳಿಗೆ ಶಿಕ್ಷೆ ಆಗುವಂತೆ ಕ್ರಮ ತೆಗೆದುಕೊಳ್ಳ-ಬೇಕೆಂದು ಎಲ್ಲಾ ತನಿಖಾಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ಅಧಿಕಾರಿ ಯೊಬ್ಬರು ಹೇಳಿದರು.

ಪೊಲೀಸ್ ಇಲಾಖೆಯು 2025ರ ಜುಲೈನಲ್ಲಿ ‘ಮನೆ ಮನೆಗೆ ಪೊಲೀಸ್’ ಎಂಬ ನೂತನ ಕಾರ್ಯಕ್ರಮ ಜಾರಿಗೆ ತಂದಿತ್ತು. ಅದರ ಪರಿಣಾಮ ಜನರಲ್ಲಿ ಜಾಗೃತಿ ಮೂಡಿದ್ದು, ಎಲ್ಲೇ ಅಪರಾಧ ಕೃತ್ಯಗಳು ನಡೆದರೂ ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡುತ್ತಿದ್ದಾರೆ. ಈ ಕಾರ್ಯಕ್ರಮ ಜಾರಿಯಾದ ಮೇಲೆ ಪೊಲೀಸ್ ಗಸ್ತು ವ್ಯವಸ್ಥೆ ಹೆಚ್ಚಿಸಲಾ-ಗಿದ್ದು, ಮನೆಗಳ್ಳತನ, ದರೋಡೆ, ಡಕಾಯಿತಿ ಸೇರಿದಂತೆ ಕೆಲವು ಅಪರಾಧ ಪ್ರಕರಣಗಳು ಸ್ವಲ್ಪ ಕಡಿಮೆ ಆಗಿವೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಹೆಸರು ಗೋಪ್ಯ: ‘ಮನೆ ಮನೆಗೆ ಪೊಲೀಸ್’ ಈ ಕಾರ್ಯಕ್ರಮ ಆರಂಭವಾದ ಮೇಲೆ ಕೆಲವು ಅಪರಾಧ ಪ್ರಕರಣಗಳು ಕಡಿಮೆ ಆಗಿವೆ. ಮಾಹಿತಿ ನೀಡಿದವರ ಹೆಸರನ್ನು ಗೋಪ್ಯವಾಗಿ ಇಡಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

‘ಈ ಕಾರ್ಯಕ್ರಮ ಜಾರಿಗೂ ಮುನ್ನ ಪೊಲೀಸರು ಬಡಾವಣೆಗಳಲ್ಲಿ, ಸೂಕ್ಷ್ಮ ಪ್ರದೇಶಗಳಲ್ಲಿ ಗಸ್ತು ನಡೆಸುತ್ತಿ-ದ್ದರು. ಇದೀಗ ಯಾವ ಮನೆಗೆ ಯಾರು ಬಂದಿದ್ದಾರೆ? ಮನೆಯವರು ಏನು ಕೆಲಸ ಮಾಡುತ್ತಿದ್ದಾರೆ? ಯಾವ ಸಮಸ್ಯೆಗಳಿವೆ ಎಂಬ ಮಾಹಿತಿಯನ್ನೂ ಪಡೆದು ಕೊಳ್ಳುತ್ತಿದ್ದಾರೆ. ಈ ಎಲ್ಲಾ ದತ್ತಾಂಶವು ಪೊಲೀಸ್ ಇಲಾಖೆಯಲ್ಲಿ ಇರಲಿದೆ’ ಎಂದು ತಿಳಿಸಿದರು.

ಪೆಡ್ಲರ್‌ಗಳು ಈಗ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸುಲಭವಾಗಿ ಡ್ರಗ್ಸ್ ಸಾಗಿಸುತ್ತಿದ್ದಾರೆ. ಪೊಲೀಸರು ಇನ್ನಷ್ಟು ಚುರುಕಿನಿಂದ ಕೆಲಸ ಮಾಡಿದರೆ, ನಿಯಂತ್ರಣ ಸಾಧ್ಯ
ಎಸ್.ಕೆ.ಉಮೇಶ್
ನಿವೃತ್ತ ಪೊಲೀಸ್ ಅಧಿಕಾರಿ

ಕಳೆದ ಐದು ವರ್ಷಗಳಲ್ಲಿ ನಡೆದ ಅಪರಾಧ ಪ್ರಕರಣಗಳ ಮಾಹಿತಿ

ಪ್ರಕರಣಗಳು	2021	2022	2023	2024	2025
ಕೊಲೆ	1,340	1,365	1,293	1,208	1,131
ಪೋಕ್ಸೊ	2,884	3,209	3,900	4,061	4,096
ಅತ್ಯಾಚಾರ	556	537	600	632	517
ಎಸ್‌ಸಿ/ಎಸ್‌ಟಿ	1,751	2,140	2,157	2,115	2,277
ಹಲ್ಲೆ	2,440	2,828	2,777	2,774	3,005
ಎನ್‌ಡಿಪಿಎಸ್	5,789	6,406	6,768	4,168	5,930
ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ	4,915	5,856	6,489	6,334	5,324
ವಂಚನೆ	5,427	6,411	6,928	6,568	5,201
ದರೋಡೆ	978	1,066	1,236	988	569
ಡಕಾಯಿತಿ	179	216	177	152	129
ಗಲಭೆ	3,978	3,929	3,907	3,462	3,094
ಕಳ್ಳತನ	17,232	21,222	25,174	22,834	18,765
ಇಸ್ಪೀಟ್	13,589	12,301	13,105	12,524	13,104
ಸೈಬರ್ ಅಪರಾಧ	8,396	12,920	22,255	22,479	13,599
ಅಬಕಾರಿ	7,523	8,865	9,332	8,285	9,242

ಪ್ರಜಾವಾಣಿ
ಫೋನ್–ಇನ್ ಕಾರ್ಯಕ್ರಮ
ಪ್ರಶ್ನೆ ಕೇಳಿ, ಸಮಸ್ಯೆ ಬಗೆಹರಿಸಿಕೊಳ್ಳಿ

ಎಸ್‌ಎಸ್‌ಎಲ್‌ಸಿ, ಪಿಯು ಪರೀಕ್ಷೆ ನಿರ್ಭೀತಿಯಿಂದ ಎದುರಿಸುವುದು ಹೇಗೆ?
- ಸುಗಮ ಪರೀಕ್ಷೆಗೆ ಏನೆಲ್ಲ ವ್ಯವಸ್ಥೆ ಕೈಗೊಳ್ಳಲಾಗಿದೆ?
- ವಿದ್ಯಾರ್ಥಿಗಳು ನಿರಾತಂಕವಾಗಿ ಪರೀಕ್ಷೆ ಎದುರಿಸಲು ಏನು ಮಾಡಬೇಕು?
- ವೆಬ್‌ಕಾಸ್ಟಿಂಗ್ ಆತಂಕ ನಿವಾರಿಸಲು ಪ್ರಯತ್ನಗಳೇನು?
- ಪರೀಕ್ಷೆ–1 ಎಲ್ಲರೂ ಬರೆಯುವುದು ಕಡ್ಡಾಯವೇ?
- ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಏನೆಲ್ಲ ತರಬಹುದು

ಪಾಲ್ಗೊಳ್ಳುವವರು

ಪ್ರಕಾಶ್ ನಿಟ್ಟಾಲಿ
ಅಧ್ಯಕ್ಷ, ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ

ಎಚ್.ಎನ್. ಗೋಪಾಲಕೃಷ್ಣ
ನಿರ್ದೇಶಕ, ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ

ದಿನಾಂಕ 21.02.2026 ಶನಿವಾರ
ಸಮಯ: ಮಧ್ಯಾಹ್ನ 12.30 ರಿಂದ 1.30 ಗಂಟೆಯವರೆಗೆ
ಕರೆ ಮಾಡಿ
ದೂರವಾಣಿ: 080 45557230

ಲಿಂಗತ್ವ ಅಲ್ಪಸಂಖ್ಯಾತರ ವಿವಿಧ ಸಮುದಾಯಗಳ ಸಾಂಸ್ಕೃತಿಕ ಉತ್ಸವ

ಇಂದಿನಿಂದ ‘ಒಂದೆಡೆ ರಂಗೋತ್ಸವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರ್‌ಲಿಂಗಿಗಳು, ಲಿಂಗ ಪರಿವರ್ತಿತರು, ಲಿಂಗತ್ವಾತೀತರು, ಕೋಥಿಯರು, ಲೈಂಗಿಕ ಕಾರ್ಯಕರ್ತೆ-ಯರು ಸೇರಿದಂತೆ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಕಲೆ, ಸಂಸ್ಕೃತಿ, ಬದುಕು–ಬವಣೆಯನ್ನು ಅನಾವರಣ-ಗೊಳಿಸುವ ‘ಒಂದೆಡೆ ರಂಗೋತ್ಸವ’ಕ್ಕೆ ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್‌ನ ವೇದಿಕೆ ಸಿದ್ಧವಾಗಿದೆ.

ದೇಶದಲ್ಲೇ ಮೊದಲ ಬಾರಿಗೆ ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯ ಈ ಕಾರ್ಯಕ್ರಮವನ್ನು ಫೆ.21 ಮತ್ತು 22ರಂದು ಹಮ್ಮಿಕೊಂಡಿದೆ. ಪ್ರವಾಸೋದ್ಯಮ ಸಚಿವಾಲಯ, ಭಾರತೀಯ ಸಾಮಾಜಿಕ ಸಂಸ್ಥೆ, ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ನಾಟಕ ಅಕಾಡೆಮಿ ಮತ್ತು ‘ಒಂದೆಡೆ’ ಸಂಸ್ಥೆಗಳ ಸಹ ಯೋಗದಲ್ಲಿ ಈ ಉತ್ಸವ ನಡೆಯಲಿದೆ.

ಸಲಿಂಗ, ದ್ವಿಲಿಂಗ ಲೈಂಗಿಕ ಪ್ರವೃತ್ತಿ ಯವರು ಸೇರಿದಂತೆ ಎಲ್ಲರನ್ನೂ ಸೇರಿಸಿ ‘ಸೆಕ್ಸ್ ಮೈನಾರಿಟಿ’ (ಲೈಂಗಿಕ ಅಲ್ಪಸಂಖ್ಯಾತರು) ಎಂಬ ಛತ್ರಿಯಡಿ ಸೇರಿಸಿ ಈ ಕಾರ್ಯಕ್ರಮ ನಡೆಸಲಾಗು ತ್ತದೆ. ಇದರಲ್ಲಿ ಲಿಂಗ ಪರಿವರ್ತನೆ ಮಾಡಿಕೊಂಡ ಲಿಂಗತ್ವ ಅಲ್ಪ ಸಂಖ್ಯಾತರೂ ಇದ್ದಾರೆ. ಯಾವುದೇ ಲಿಂಗದಲ್ಲಿ ಗುರುತಿಸಿಕೊಳ್ಳಲು ಇಷ್ಟಪಡದ ಲಿಂಗತ್ವಾತೀತರೂ ಇದ್ದಾರೆ. ಗಂಡಾಗಿ ಹುಟ್ಟಿ ಹೆಣ್ಣಿನ ಮನಸ್ಸನ್ನು ಹೊಂದಿದ್ದರೂ ಹೆಣ್ಣಾಗಿ ಪರಿವರ್ತನೆ-ಗೊಳ್ಳದ ಕೋಥಿ ಸಮುದಾಯ ದವರೂ ಸೇರಿ ದ್ದಾರೆ. ಹೀಗೆ ವೈವಿಧ್ಯ ಸಮುದಾಯ ಗಳಿದ್ದು, ಅವರಲ್ಲಿ ಅವರದ್ದೇ ಆದ ಅಸ್ಮಿತೆ, ಸಂಸ್ಕೃತಿ ಇದೆ. ಇಲ್ಲೂ ಪ್ರತಿಭಾವಂತರು ಇದ್ದಾರೆ.

ಕರಗಾಟ

ಜಾತಿ, ಲಿಂಗ, ಧರ್ಮ, ಭೇದಗಳಿಲ್ಲದೇ ಎಲ್ಲರೂ ಒಂದು ಸಮುದಾಯವಾಗಿ ಒಟ್ಟು ಸೇರಿ ಸಂಭ್ರಮಿಸುವ ಲೈಂಗಿಕ ಅಲ್ಪಸಂಖ್ಯಾತರ ಉತ್ಸವ ಇದು
ಅಕ್ಕೈ ಪದ್ಮಶಾಲಿ, ‘ಒಂದೆಡೆ’ ಸಂಸ್ಥಾಪಕಿ

ಒಳಗೊಳ್ಳುವಿಕೆಯು ಕೆಲವರಿಗಷ್ಟೇ ಸಂಬಂಧಿಸಿದ್ದಲ್ಲ. ಲಿಂಗತ್ವ ಅಲ್ಪಸಂಖ್ಯಾತರ ಸಹಿತ ಎಲ್ಲರೂ ಭಾಗಿಯಾಗಬೇಕು ಎಂಬ ಕಾರಣಕ್ಕೆ ರಂಗೋತ್ಸವ ಆಯೋಜಿಸಲಾಗಿದೆ
ಪ್ರಿಯಾಂಕ ಮೇರಿ ಫ್ರಾನ್ಸಿಸ್, ನಿರ್ದೇಶಕಿ, ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್

ಎಲ್ಲರ ಪ್ರತಿಭೆಗಳನ್ನು ಅನಾವರಣ ಮಾಡಲು ‘ಒಂದೆಡೆ ರಂಗೋತ್ಸವವು’ ವೇದಿಕೆಯಾಗಲಿದೆ ಎಂದು ‘ಒಂದೆಡೆ’ ಸಂಸ್ಥಾಪಕಿ, ಕಾರ್ಯಕ್ರಮದ ರೂವಾರಿ ಅಕ್ಕೈ ಪದ್ಮಶಾಲಿ ‘ಪ್ರಜಾವಾಣಿ’ಗೆ ತಿಳಿಸಿದರು.

ಅಕ್ಕೈ ಅವರ ಬದುಕಿನ ಪಯಣವನ್ನು ಬಿಂಬಿಸುವ ‘ಅಕ್ಕೈ: ಕರುಣೆಗೊಂದು ಸವಾಲು’ ರಂಗ ಪ್ರದರ್ಶನವನ್ನು ಫೆ.21ರಂದು ಬೆಳಿಗ್ಗೆ 11.45ಕ್ಕೆ ನಯನಾ ಸೂದ್, ರಾಜಗುರು ಮತ್ತು ತಂಡದವರು ಪ್ರದರ್ಶಿಸುವ ಮೂಲಕ ಕಾರ್ಯಕ್ರಮ ಆರಂಭಗೊಳ್ಳಲಿದೆ. ಮಧ್ಯಾಹ್ನ 12.45ಕ್ಕೆ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ.

ಮಧ್ಯಾಹ್ನ 2ರಿಂದ ವೈಷ್ಣವಿ ನಾಟ್ಯಶಾಲಾ ತಂಡದವರು ಭರತನಾಟ್ಯ ಪ್ರದರ್ಶಿಸಲಿದ್ದಾರೆ. ಮಧ್ಯಾಹ್ನ 3ಕ್ಕೆ ಈ ಸಮುದಾಯದವರಿಂದ ಕವಿಗೋಷ್ಠಿ ನಡೆಯಲಿದೆ. ಸಂಜೆ 4ಕ್ಕೆ ಸಾಧನಾ ಮಹಿಳಾ ಸಂಘವು ‘ಹಸಿವು ಕನಸು’ ರಂಗ ಪ್ರದರ್ಶನ ನೀಡಲಿದೆ. ನಿಂಬೆಹಣ್ಣು ಮಾರುವ ಕಾಯಕದ ಚಂದ್ರಿಕಾ ಅವರು ತನ್ನ ತಂಡದೊಂದಿಗೆ ಕರಗಾಟ ಪ್ರದರ್ಶನ ನೀಡಲಿದ್ದಾರೆ. ಲೈಂಗಿಕ ಕಾರ್ಯಕರ್ತೆ-ಯರೂ ಸೇರಿದಂತೆ ಎಲ್ಲರೂ ಹಾಡು, ನೃತ್ಯಗಳನ್ನು ಪ್ರದರ್ಶಿಸಲಿದ್ದಾರೆ ಎಂದು ಅಕ್ಕೈ ವಿವರಿಸಿದರು.

ರೆಡ್ಡಮ್ಮನ ನೇತೃತ್ವದಲ್ಲಿ ಜೋಗಪ್ಪ ಸಂಘದವರು ಯಲ್ಲಮ್ಮ-ನನ್ನು ಮುಂದಿಟ್ಟುಕೊಂಡು ಚೌಡಕಿ ಸ್ತುತಿ ಮಾಡುವ ಮೂಲಕ ಫೆ.22ರ ಕಾರ್ಯಕ್ರಮ ಆರಂಭಗೊಳ್ಳಲಿದೆ. ಹೆಣ್ಣಾಗಿ ಹುಟ್ಟಿ ಗಂಡಾಗಿ ಪರಿವರ್ತನೆ-ಯಾದಾಗ ಉಂಟಾದ ಯಾತನೆಗಳನ್ನು ಬಿಂಬಿಸುವ ‘ಜರ್ನಿ ಎ ಟು ಇ’ ಏಕ ಪಾತ್ರಾಭಿನಯವನ್ನು ರೂಮಿ ಹರೀಶ್ ನಡೆಸಿಕೊಡಲಿದ್ದಾರೆ. ಲಿಂಗತ್ವ ಅಲ್ಪ ಸಂಖ್ಯಾತರೇ ನಟಿಸಿರುವ ಸಮುದಾಯದ್ದೇ ಕಥೆಯಾಗಿರುವ ‘ತಲ್ಕಿ’ ನಾಟಕ ಮಧ್ಯಾಹ್ನ 2.30ರಿಂದ ಪ್ರದರ್ಶಿಸ ಲಿದ್ದಾರೆ. ಒಂದೆಡೆ ತಂಡದ ಸದಸ್ಯರಿಂದ ಸಾಂಸ್ಕೃತಿಕ ಗಾಯನದೊಂದಿಗೆ ಕಾರ್ಯಕ್ರಮ ಮುಕ್ತಾಯಗೊಳ್ಳಲಿದೆ ಎಂದು ತಿಳಿಸಿದರು.

ಮಾ.12–13ಕ್ಕೆ ಕನ್ನಡ ಸಾಹಿತ್ಯ–ಬೇಸಾಯದ ಬದುಕು ಶಿಬಿರ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯು ಮಾರ್ಚ್ 12 ಮತ್ತು 13ರಂದು ರಾಮನಗರದ ಕೆರೆಮೇಗಳ-ದೊಡ್ಡಿಯ ಮುದ್ದುಶ್ರೀ ದಿಬ್ಬದಲ್ಲಿ ‘ಕನ್ನಡ ಸಾಹಿತ್ಯ ಮತ್ತು ಬೇಸಾಯದ ಬದುಕು’ ಶೀರ್ಷಿಕೆಯಡಿ ಎರಡು ದಿನಗಳ ಶಿಬಿರ ಹಮ್ಮಿಕೊಂಡಿದೆ.

ಕೃಷ್ಣಾಪುರದೊಡ್ಡಿಯ ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್ ಸಹಯೋಗದಲ್ಲಿ ಈ ಶಿಬಿರ ಹಮ್ಮಿಕೊಂಡಿದೆ. 18 ವರ್ಷಗಳು ಮೇಲ್ಪಟ್ಟ ಸಾಹಿತ್ಯಾಸಕ್ತರು ಈ ಶಿಬಿರದಲ್ಲಿ ಪಾಲ್ಗೊಳ್ಳಬಹುದಾಗಿದೆ. 50 ಶಿಬಿರಾರ್ಥಿಗಳಿಗೆ ಭಾಗವಹಿಸಲು ಅವಕಾಶ ನೀಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಆಸಕ್ತರು ಮಾರ್ಚ್ 1ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿ ಕೊಳ್ಳಬೇಕು.

ವಿವರಕ್ಕೆ ಮೊಬೈಲ್ ಸಂಖ್ಯೆ 8496849992, 9740370473 ಸಂಪರ್ಕಿಸಬಹುದು.

ಬಣ್ಣ ಬಣ್ಣದ ಲೋಕ...

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಕಲಬುರಗಿ ನಾಟಕೋತ್ಸವ–2026ರ ಅಂಗವಾಗಿ ಕಲಬುರಗಿಯ ಜಿಲ್ಲಾಧಿಕಾರಿ ಕಚೇರಿಯ ಆವರಣದಲ್ಲಿ ಶುಕ್ರವಾರ ವಿವಿಧ ವೇಷ ಭೂಷಣ ಧರಿಸಿದ್ದ ಮಕ್ಕಳು ಸಂಭ್ರಮದಿಂದ ಜಾಥಾದಲ್ಲಿ ಪಾಲ್ಗೊಂಡಿದ್ದರು

ರೈಲ್ವೆ: ಸ್ವಾಧೀನವಾಗದ 3,357 ಹೆಕ್ಟೇರ್

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ರಾಜ್ಯದಲ್ಲಿ ರೈಲ್ವೆ ಯೋಜನೆಗಳಿಗೆ 3,357 ಹೆಕ್ಟೇರ್ ಜಮೀನು ಇನ್ನೂ ಸ್ವಾಧೀನ ಗೊಂಡಿಲ್ಲ. ಇದರಿಂದಾಗಿ ಪ್ರಮುಖ ರೈಲು ಯೋಜನೆಗಳು ಅನುಷ್ಠಾನಗೊಳ್ಳಲು ಅಡ್ಡಿ ಉಂಟಾಗಿದೆ.

96 ಕಿ.ಮೀ ಉದ್ದದ ಶಿವಮೊಗ್ಗ–ರಾಣೆಬೆನ್ನೂರು ಹೊಸ ರೈಲು ಮಾರ್ಗಕ್ಕೆ 559 ಹೆಕ್ಟೇರ್ ಭೂಮಿ ಅಗತ್ಯವಿದ್ದು, ಅದರಲ್ಲಿ 333 ಹೆಕ್ಟೇರ್ ಸ್ವಾಧೀನ ವಾಗಿಲ್ಲ. ಬೆಳಗಾವಿ–ಧಾರವಾಡ 73 ಕಿ.ಮೀ. ಹೊಸ ಮಾರ್ಗಕ್ಕೆ 581 ಹೆಕ್ಟೇರ್, ಶಿವಮೊಗ್ಗ–ಹರಿಹರ 79 ಕಿ.ಮೀ. ಉದ್ದದ ಹೊಸ ಮಾರ್ಗಕ್ಕೆ 488 ಹೆಕ್ಟೇರ್, ವೈಟ್‌ಫೀಲ್ಡ್–ಕೋಲಾರ 53 ಕಿ.ಮೀ ಉದ್ದದ ಹೊಸ ಮಾರ್ಗಕ್ಕೆ 337 ಹೆಕ್ಟೇರ್ ಮತ್ತು ಹಾಸನ–ಬೇಲೂರು 32 ಕಿ.ಮೀ. ಉದ್ದದ ಹೊಸ ಮಾರ್ಗಕ್ಕೆ 206 ಹೆಕ್ಟೇರ್ ಜಮೀನು ಅಗತ್ಯವಿದೆ. ಈ ಯೋಜನೆಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ.

9,064 ಹೆಕ್ಟೇರ್
ರಾಜ್ಯದಲ್ಲಿ ರೈಲ್ವೆ ಯೋಜನೆಗೆ ಮಂಜೂರಾದ ಜಮೀನು

5,707 ಹೆಕ್ಟೇರ್
ಇಲ್ಲಿವರೆಗೆ ಸ್ವಾಧೀನಪಡಿಸಿಕೊಂಡಿರುವ ಜಮೀನು

‘ರಾಜ್ಯವು ರೈಲ್ವೆ ಮೂಲಸೌಕರ್ಯ ವಿಸ್ತರಣೆ-ಯಲ್ಲಿ ಮಹತ್ವದ ಘಟ್ಟವನ್ನು ತಲುಪಿದೆ. ಹಲವು ಪರಿವರ್ತನಾತ್ಮಕ ರೈಲು ಯೋಜನೆಗಳು ಪ್ರಗತಿ-ಯಲ್ಲಿವೆ. ಹಣಕಾಸು ಹಂಚಿಕೆ ಮತ್ತು ಆಡಳಿತಾತ್ಮಕ ಅನುಮೋದನೆಗಳು ಈಗಾಗಲೇ ಲಭಿಸಿವೆ. ಆದರೆ ಈ ಯೋಜನೆಗಳ ಅನು ಷ್ಠಾನದ ವೇಗವು ಕುಂಠಿತವಾಗಿದೆ. ಅದಕ್ಕೆ ಸಕಾಲಿಕವಾಗಿ ಭೂಸ್ವಾಧೀನದಗದೇ ಇರುವುದೇ ಕಾರಣವಾಗಿದೆ’ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ನೈರುತ್ಯ ರೈಲ್ವೆ ವ್ಯಾಪ್ತಿಯ ವಿವಿಧ ಯೋಜನೆಗಳಿಗೆ ಕೇಂದ್ರ ಸರ್ಕಾರ ಅನುದಾನವನ್ನು ಬಿಡುಗಡೆ ಮಾಡಿದ್ದರೂ ಕೆಲವು ಯೋಜನೆಗಳಲ್ಲಿ ಭೂಮಿ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಳ್ಳದ ಕಾರಣ ಪ್ರಗತಿ ನಿಧಾನಗೊಂಡಿದೆ. ಜೊತೆಗೆ, ರಾಜ್ಯ ಸರ್ಕಾರ ತನ್ನ ಪಾಲಿನ ಅನುದಾನವನ್ನು ಕೂಡ ಸರಿಯಾದ ಸಮಯಕ್ಕೆ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಶೇ 95ರಷ್ಟು ಸ್ವಾಧೀನ ಆದರಷ್ಟೇ ಟೆಂಡರ್

ಯಾವುದೇ ಯೋಜನೆಗೆ ಸಂಬಂಧಿಸಿದಂತೆ ಶೇ 95ರಷ್ಟು ಜಮೀನು ಸ್ವಾಧೀನವಾಗದೇ, ಸ್ವಾಧೀನ ಮಾಡಿದ ಜಮೀನನ್ನು ರೈಲ್ವೆಗೆ ಹಸ್ತಾಂತರಿಸದೇ ಟೆಂಡರ್ ಕರೆಯಲು ಸಾಧ್ಯವಿಲ್ಲ. ಟೆಂಡರ್ ಕರೆಯದೇ ಅಭಿವೃದ್ಧಿ ಕಾಮಗಾರಿಗಳು ನಡೆಯುವುದಿಲ್ಲ ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಮಂಜುನಾಥ ಕನಮಡಿ ತಿಳಿಸಿದ್ದಾರೆ.

ಸ್ಕ್ಯಾನಿಂಗ್ ಸ್ಥಗಿತ: ರೋಗಿಗಳ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದಿಂದ ಬಾಕಿ ಹಣ ಪಾವತಿಸದ ಕಾರಣ ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗಳ ಸ್ಕ್ಯಾನಿಂಗ್ ಕೇಂದ್ರದ ನಿರ್ವಹಣೆಯ ಗುತ್ತಿಗೆ ಪಡೆದಿರುವ ‘ಕ್ರಿಷ್ಣ (ಕೆಆರ್‌ಎಸ್‌ಎಚ್ ಎನ್‌ಎ) ಡಯಾಗ್ನೊಸ್ಟಿಕ್ ಲಿಮಿಟೆಡ್ ಕಂಪನಿಯವರು ಮೂರು ದಿನಗಳಿಂದ ಸ್ಕ್ಯಾನಿಂಗ್ ಸೇವೆಯನ್ನು ಸ್ಥಗಿತ ಗೊಳಿಸಿದ್ದಾರೆ.

ಪರಿಣಾಮವಾಗಿ 8 ಜಿಲ್ಲೆಗಳ ಆಸ್ಪತ್ರೆ ಗಳಲ್ಲಿ ಎರಡು–ಮೂರು ದಿನಗಳಿಂದ ರೋಗಿಗಳು ಪರದಾಡುವಂತಾಗಿದೆ.

ತುಮಕೂರು ವರದಿ: ಕಳೆದ ಮೂರು ದಿನಗಳಿಂದ ನಗರದ ಜಿಲ್ಲಾ ಆಸ್ಪತ್ರೆಯಲ್ಲಿ ಸಿ.ಟಿ.–ಎಂಐಆರ್ ಸ್ಕ್ಯಾನಿಂಗ್ ಸೇವೆ ಸ್ಥಗಿತಗೊಂಡಿದ್ದು, ರೋಗಿಗಳು ಖಾಸಗಿ ಆಸ್ಪತ್ರೆ ಅವಲಂಬಿಸಿದ್ದಾರೆ.

ಯಾದಗಿರಿಯ ‘ಯಿಮ್ಸ್’ನ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ (ಎಂಸಿಎಚ್) ಎರಡು ದಿನಗಳಿಂದ ಸಿ.ಟಿ. ಸ್ಕ್ಯಾನಿಂಗ್ ಸೇವೆ ಸ್ಥಗಿತವಾಗಿದ್ದು, ರೋಗಿಗಳು ಪರದಾಡುವಂತಾಗಿದೆ.

‘ಎಂಸಿಎಚ್‌ನಲ್ಲಿ ಮಕ್ಕಳು ಮತ್ತು ಗರ್ಭಿಣಿಯರಿಗೆ ಚಿಕಿತ್ಸೆ ಕೊಡಲಾಗು ತ್ತಿದ್ದು, ಸಿ.ಟಿ. ಸ್ಕ್ಯಾನಿಂಗ್ ಬಳಕೆ ಕಡಿಮೆ ಇದೆ. ಸೇವೆ ಸ್ಥಗಿತ ಆಗಿದ್ದರಿಂದ ‘ಯಿಮ್ಸ್’ ಆಸ್ಪತ್ರೆಯಲ್ಲಿನ ಸಿ.ಟಿ. ಸ್ಕ್ಯಾನಿಂಗ್‌ಗೆ ಶಿಫಾರಸು ಮಾಡಲಾಗುತ್ತಿದೆ’ ಎಂದು ಜಿಲ್ಲಾ ಸರ್ಜನ್ ಡಾ.ಅಫ್ರಿನ್ ರಿಜ್ವಾನ್ ತಿಳಿಸಿದರು.

ದಾವಣಗೆರೆ ವರದಿ: ಜಿಲ್ಲಾ ಆಸ್ಪತ್ರೆಯಲ್ಲಿ ಗುರುವಾರದಿಂದ ಸಿ.ಟಿ. ಸ್ಕ್ಯಾನ್ ಸೇವೆ ಸ್ಥಗಿತಗೊಂಡಿದ್ದು, ರೋಗಿಗಳು ಪರದಾಡುವಂತಾಗಿದೆ. ಸಮಸ್ಯೆಯನ್ನು ಪರಿಹರಿಸಲು ಮುಂದಾಗಿರುವ ಆರೋಗ್ಯ ಇಲಾಖೆ, ಇಲ್ಲಿನ ಎಸ್.ಎಸ್. ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಪರ್ಯಾಯ ವ್ಯವಸ್ಥೆ ಕಲ್ಪಿಸಿದೆ.

ಚಿತ್ರದುರ್ಗ ವರದಿ: ಇಲ್ಲಿನ ಜಿಲ್ಲಾ ಆಸ್ಪತ್ರೆ ಆವರಣದಲ್ಲಿರುವ ಎಂಆರ್‌ಐ ಸ್ಕ್ಯಾನಿಂಗ್ ಕೇಂದ್ರ ಎರಡು ದಿನ ಗಳಿಂದ ಬಂದ್ ಆಗಿದ್ದು, ರೋಗಿ ಗಳು ಪರದಾಡುವಂತಾಗಿದೆ. ತುರ್ತು ಚಿಕಿತ್ಸೆ ಬೇಕಿರುವ ರೋಗಿಗಳು ಅನಿವಾರ್ಯ ವಾಗಿ ಹೆಚ್ಚು ಹಣ ನೀಡಬೇಕಾಗಿದೆ.

ಹುಬ್ಬಳ್ಳಿ ವರದಿ: ಧಾರವಾಡ, ಹಾವೇರಿ, ವಿಜಯನಗರ, ಉತ್ತರ ಕನ್ನಡ ಸೇರಿ 13 ಜಿಲ್ಲಾ ಆಸ್ಪತ್ರೆಗಳಲ್ಲಿ ಎಂಆರ್‌ಐ ಸ್ಕ್ಯಾನ್, ಸಿ.ಟಿ. ಸ್ಕ್ಯಾನ್ ಸೇವೆಯಲ್ಲಿ ಬುಧವಾರದಿಂದ (ಫೆ.18) ವ್ಯತ್ಯಯ ಉಂಟಾಗಿದೆ. ಕೆಲ ಕಡೆ ತುರ್ತು ಸೇವೆ ಮಾತ್ರ ಲಭ್ಯವಿದೆ. ಇದರಿಂದ ರೋಗಿಗಳು ಪರದಾಡುವಂತಾಗಿದೆ.

‘ಶುಕ್ರವಾರ ತುರ್ತು ಇದ್ದ ಇಬ್ಬರಿಗೆ ಮಾತ್ರ ಸ್ಕ್ಯಾನ್ ಮಾಡಿದೆವು. ಎಂಆರ್‌ಐ ಸ್ಕ್ಯಾನ್ ವ್ಯವಸ್ಥೆ ಇಲ್ಲ. ಒಂದು ವೇಳೆ ಇಲ್ಲಿ ಸ್ಕ್ಯಾನ್ ಆಗದಿದ್ದರೆ, ಡಿಮಾನ್ಸ್ ಮತ್ತು ಹುಬ್ಬಳ್ಳಿಯ ಕೆಎಂಸಿ–ಆರ್‌ಐ ಆಸ್ಪತ್ರೆಗೆ ಕಳಿಸುತ್ತೇವೆ’ ಎಂದು ಧಾರವಾಡ ಜಿಲ್ಲಾ ಶಸ್ತ್ರಚಿಕಿತ್ಸಕ ಸಂಗಪ್ಪ ಗಾಬಿ ತಿಳಿಸಿದರು.

‘ಹೊಸಪೇಟೆಯಲ್ಲಿರುವ ಜಿಲ್ಲಾಸ್ಪತ್ರೆ ಸಹಿತ ಜಿಲ್ಲೆಯ ಯಾವ ತಾಲ್ಲೂಕು ಆಸ್ಪತ್ರೆ ಗಳಲ್ಲೂ ಎಂಆರ್‌ಐ, ಸಿ.ಟಿ. ಸ್ಕ್ಯಾನ್ ಸೌಲಭ್ಯ ಇಲ್ಲ’ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ (ಡಿಎಚ್‌ಒ) ಡಾ.ಎಲ್.ಆರ್.ಶಂಕರ್ ನಾಯ್ಕ್ ತಿಳಿಸಿದರು.

ಕಾರವಾರ ಕ್ರಿಮ್ಸ್‌ನಲ್ಲಿ ಎಂಆರ್‌ಐ ಸ್ಕ್ಯಾನಿಂಗ್ ಸೌಲಭ್ಯವಿಲ್ಲ. ಮೂರು ದಿನಗಳಿಂದ ಸಿ.ಟಿ. ಸ್ಕ್ಯಾನ್ ಸೇವೆ ಸ್ಥಗಿತವಾಗಿದೆ. ಪರ್ಯಾಯವಾಗಿ ಹೊನ್ನಾವರದ ಖಾಸಗಿ ಸ್ಕ್ಯಾನಿಂಗ್ ಸೆಂಟರ್‌ನಲ್ಲಿ ಸೌಲಭ್ಯ ಕಲ್ಪಿಸಲು ಸರ್ಕಾರದಿಂದ ಸೂಚನೆ ಬಂದಿದೆ’ ಎಂದು ಕ್ರಿಮ್ಸ್ ನಿರ್ದೇಶಕಿ ಡಾ. ಪೂರ್ಣಿಮಾ ಆರ್.ಟಿ ತಿಳಿಸಿದರು.‘

ಹಾವೇರಿ ಜಿಲ್ಲಾ ಆಸ್ಪತ್ರೆ ಅಧೀನದ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿರುವ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಕೇಂದ್ರದ ಎದುರು ಜನರು ಶುಕ್ರವಾರ ಕಾದು ನಿಂತಿದ್ದರು

ಮೈಸೂರು: ಕೆಎಸ್‌ಒಯು ಕ್ಯಾಂಪಸ್‌ನಲ್ಲಿ ಆಯೋಜನೆ

27ರಿಂದ ಕಿಸಾನ್ ಸ್ವರಾಜ್ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಫೆ.27ರಿಂದ ಮಾರ್ಚ್ 1ರವರೆಗೆ ‘6ನೇ ಕಿಸಾನ್ ಸ್ವರಾಜ್ ಸಮ್ಮೇಳನ’ ಆಯೋಜಿಸಲಾಗಿದ್ದು, ದೇಶದ ವಿವಿಧ 11 ರಾಜ್ಯಗಳ ಒಂದು ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗ ವಹಿಸಲಿದ್ದಾರೆ.

‘ಸುಸ್ಥಿರ ಮತ್ತು ಕೃಷಿ ಮೈತ್ರಿಕೂಟ (ಆಶಾ)–ಕಿಸಾನ್ ಸ್ವರಾಜ್ ಹಾಗೂ ಕೆಎಸ್‌ಒಯು ಪ್ರಸಾರಾಂಗದ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದೆ. ಸಮಾನಾಂತರ ವೇದಿಕೆಗಳಲ್ಲಿ ಕನ್ನಡ, ತಮಿಳು, ತೆಲುಗು ಮೊದಲಾದ ಭಾಷೆಗಳಲ್ಲಿ ಅಧಿವೇಶನ ನಡೆಯಲಿದೆ’ ಎಂದು ಕೆಎಸ್‌ಒಯು ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಮುಖ್ಯಾಂಶಗಳು
- ವಿವಿಧ ಭಾಷೆಗಳಲ್ಲಿ ವಿಚಾರ ಮಂಡನೆ
- 30 ದೇಸಿ ಬೀಜ ಸಂರಕ್ಷಕರಿಂದ ತಳಿಗಳ ಪ್ರದರ್ಶನ
- ಗೆಡ್ಡೆ–ಗೆಣಸು, ಅಪರೂಪದ ತರಕಾರಿಗಳ ಪ್ರದರ್ಶನ

‘ಪದ್ಮಶ್ರೀ ಪುರಸ್ಕೃತ ಸುಭಾಷ್ ಶರ್ಮಾ ಅವರಂತಹ ನೈಸರ್ಗಿಕ ಕೃಷಿಕರು ಹಾಗೂ ಹಲವು ಮಂದಿ ತಳಿ ಸಂರಕ್ಷಕ ರೈತರು ಪಾಲ್ಗೊಳ್ಳ-ಲಿದ್ದಾರೆ. ಆಂಧ್ರಪ್ರದೇಶ ನೈಸರ್ಗಿಕ ಕೃಷಿ ವಿಭಾಗದ ವಿಶೇಷ ಮುಖ್ಯ ಕಾರ್ಯದರ್ಶಿ ಟಿ.ವಿಜಯ್ ಕುಮಾರ್ ಮತ್ತು ಛತ್ತೀಸಗಢದ ದಂತೇವಾಡವನ್ನು ಸಂಪೂರ್ಣ ಸಾವಯವ ಕೃಷಿ ಜಿಲ್ಲೆಯನ್ನಾಗಿ ಪರಿವರ್ತಿಸಲು ಅಡಿಪಾಯ ಹಾಕಿದ ಅಧಿಕಾರಿ ದೈವಸೇನಾಪತಿ ಅವರಂತಹ ನೀತಿ–ನಿರೂಪಕರು ಭಾಗವಹಿಸಲಿ ದ್ದಾರೆ’ ಎಂದು ತಿಳಿಸಿದರು.

ಕೃಷಿಯಲ್ಲಿ ವನ್ಯಜೀವಿ ಸಂಘರ್ಷ ತಗ್ಗಿಸುವ, ಕಳೆನಾಶಕ ಸಹಿಷ್ಣು ಬೆಳೆಗಳು ಹಾಗೂ ಕೃಷಿಕರ ಕೈಯಲ್ಲೇ ಬೀಜ ಸಾರ್ವಭೌಮತ್ವ ಇರಬೇಕು ಎಂಬ ಕುರಿತು ಚರ್ಚೆಯಾಗಲಿದೆ
ಕವಿತಾ ಕುರುಗಂಟಿ
ಸಹ ಸಂಚಾಲಕಿ, ‘ಆಶಾ’ ಸಂಘಟನೆ

‘ಆಂಧ್ರಪ್ರದೇಶದ ಪೊಂಡೂರಿನ ಮಹಿಳೆಯರು ‘ಪಟ್ನುಲು’ ನೂಲು ತೆಗೆಯುವ ಪ್ರಾತ್ಯಕ್ಷಿಕೆ ನೀಡುವರು. ಎಣ್ಣೆಗಾಣದ ಪ್ರಾತ್ಯಕ್ಷಿಕೆ, 30 ಬೀಜ ಸಂರಕ್ಷಕ ರೈತರಿಂದ ಸಾವಿರಕ್ಕೂ ಹೆಚ್ಚು ಸಾಂಪ್ರದಾಯಿಕ ಬೀಜಗಳ ತಳಿಗಳು, ವಿವಿಧ ಬಗೆಯ ಗೆಡ್ಡೆ–ಗೆಣಸು, ಅಪರೂಪದ ತರಕಾರಿಗಳ ಪ್ರದರ್ಶನ ಇರಲಿದೆ’ ಎಂದು ಹೇಳಿದರು.

‘28ರಂದು ಬೆಳಿಗ್ಗೆ 10.45ಕ್ಕೆ ಗುಜರಾತ್‌ನ ‘ಗೋಕೃಪಾಮೃತ’ದ ಮೂಲ ಅನುಶೋಧಕ ಗೋಪಾಲ್‌ಭಾಯ್ ಸುತಾರಿಯಾ, ಹೈದರಾಬಾದ್‌ನ ಕೃಷಿ ವಿಜ್ಞಾನಿ ಜಿ.ವಿ. ರಾಮಾಂಜನೇಯುಲು ವಿಷಯ ಮಂಡಿಸುವರು. ರೈತರು ಅನುಭವ ಹಂಚಿಕೊಳ್ಳುವರು’ ಎಂದು ತಿಳಿಸಿದರು.

‘ರಣರಂಗ ಬಿಟ್ಟು ಓಡುವ ಹೇಡಿಯಲ್ಲ’

ಜಾಲತಾಣದಲ್ಲಿ ಸರಣಿ ‘ಪೋಸ್ಟ್’ ಹಂಚಿಕೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉಸಿರು ಇರುವವರೆಗೆ ರಾಜಕೀಯ ಷಡ್ಯಂತ್ರ, ದ್ವೇಷ–ಅಸೂಯೆಯ ರಾಜಕಾರಣದ ವಿರುದ್ಧ ಹೋರಾಡುತ್ತೇನೆ. ಇದು ಸತ್ಯ, ನ್ಯಾಯ ಮತ್ತು ಧರ್ಮಕ್ಕಾಗಿ ನಡೆಯುತ್ತಿರುವ ಹೋರಾಟ. ನಿಮ್ಮೆಲ್ಲರ ಬೆಂಬಲದೊಂದಿಗೆ ಈ ಹೋರಾಟವನ್ನು ನನ್ನ ಉಸಿರು ಇರುವವರೆಗೆ ನಡೆಸುತ್ತೇನೆ, ರಣರಂಗವನ್ನು ಬಿಟ್ಟು ಓಡಿ ಹೋಗುವ ಹೇಡಿ ಆಗಲಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ತಮ್ಮ ಸಾಮಾಜಿಕ ಜಾಲತಾಣದ ಖಾತೆಗಳಲ್ಲಿ ಸರಣಿ ‘ಪೋಸ್ಟ್’ಗಳನ್ನು ಶುಕ್ರವಾರ ಅವರು ಹಂಚಿಕೊಂಡಿದ್ದಾರೆ.

‘ಇದು ನನ್ನ ವಿರುದ್ಧ ನಡೆಯುತ್ತಿರುವ ಷಡ್ಯಂತ್ರ-ಗಳಲ್ಲ, ನನ್ನನ್ನು ನಂಬಿರುವ, ಪ್ರೀತಿಸುತ್ತಿರುವ, ನನಗೆ ನಿರಂತರವಾಗಿ ಆಶೀರ್ವಾದ ನೀಡಿ ಬೆಂಬಲಿಸುತ್ತಿರುವ ನಿಮ್ಮ ವಿರುದ್ಧ ನಡೆಯುತ್ತಿರುವ ಷಡ್ಯಂತ್ರ ಎನ್ನುವುದು ನನಗೆ ಚೆನ್ನಾಗಿ ಗೊತ್ತು’ ಎಂದಿದ್ದಾರೆ.

‘ಸಾಮಾಜಿಕ ಬದಲಾವಣೆಗೆ ಕೈ ಹಾಕಿದವರ ವಿರುದ್ಧ ಇಂತಹ ಷಡ್ಯಂತ್ರಗಳು ನಡೆದಿರುವುದನ್ನು ಇತಿಹಾಸದ ಪುಟದಲ್ಲಿ ಕಾಣಬಹುದು. ಯಾವಾಗ ರಾಹುಲ್ ಗಾಂಧಿ ಅವರು ಜಾತಿ, ಮತ, ಪಂಥ, ವರ್ಗವನ್ನು ಮೀರಿ ಎಲ್ಲ ಭಾರತೀಯರನ್ನು ಜೋಡಿಸುವ, ಸಾಮಾಜಿಕ ನ್ಯಾಯ, ಜಾತಿಗಣತಿ ಬಗ್ಗೆ, ಮೀಸಲಾತಿ ಹೆಚ್ಚಳದ ಬಗ್ಗೆ ಧ್ವನಿ ಎತ್ತಲು ಪ್ರಾರಂಭಿಸಿದರೋ ಅಂದಿನಿಂದ ಅವರನ್ನು ಹಣಿಯುವ ಕೆಲಸ ಜೋರಾಗಿ ನಡೆಯುತ್ತಿದೆ’ ಎಂದು ಹೇಳಿದ್ದಾರೆ.

‘ಕೋಮುವಾದವು ಸಾಮಾಜಿಕ ಅನ್ಯಾಯದ ರಾಜಕೀಯ ಮಾದರಿ. ಜನರಿಗೆ ತಲ್ವಾರ್-ಕತ್ತಿ-ತ್ರಿಶೂಲ ಹಂಚುವುದು, ದೇವಸ್ಥಾನ, ಮಸೀದಿ, ಚರ್ಚ್‌ಗಳ ಮೇಲೆ ದಾಳಿ ಮಾಡುವುದು, ಪ್ರಜೆಗಳ ಊಟದ ತಟ್ಟೆಯಲ್ಲಿ, ಮನೆಯ ಫ್ರಿಜ್‌ಗಳಲ್ಲಿ ಆಹಾರ ಏನಿದೆ ಎಂದು ಇಣುಕಿ ನೋಡಿ ಹಲ್ಲೆ ನಡೆಸುವುದು, ಜಾತಿ-ಧರ್ಮದ ಹೆಸರಲ್ಲಿ ದ್ವೇಷ, ಅಸೂಯೆ, ಹಿಂಸೆಯನ್ನು ಹರಡುವುದು ಸಂವಿಧಾನ ವಿರೋಧಿ, ಕಾನೂನು ವಿರೋಧಿ ಮತ್ತು ಜನವಿರೋಧಿಯಾದುದು. ಇದು ‘ಸಾಮಾಜಿಕ ಅನ್ಯಾಯ’ದ ರಾಜಕೀಯ ಮಾದರಿ. ವಿಪರ್ಯಾಸದ ಸಂಗತಿಯೆಂದರೆ ಈ ರೀತಿ ದ್ವೇಷ ಹಂಚುವುದರಲ್ಲಿ ನಿರತರಾಗಿರುವ ಮತ್ತು ಜಾತಿ ಧರ್ಮಗಳ ನಡುವೆ ಕಲಹ ಹುಟ್ಟಿಸುತ್ತಿರುವ ಪಕ್ಷ–ಸಂಘಟನೆಗಳೆಲ್ಲ ಇಂದು ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುತ್ತಿವೆ’ ಎಂದು ಕುಟುಕಿದ್ದಾರೆ.

‘ನನ್ನ ಮುಗಿಸಲು ಕುಟಿಲ ಕಾರಸ್ತಾನ’

‘ಸಾಮಾಜಿಕ ನ್ಯಾಯಕ್ಕಾಗಿ ಉಸಿರಿರುವವರೆಗೂ ಹೋರಾಡುತ್ತೇನೆ. ನಾಲ್ಕು ದಶಕಗಳ ರಾಜಕೀಯ ಜೀವನ ಎಂದಿಗೂ ಹೂವಿನ ಹಾಸಿಗೆ ಆಗಿರಲಿಲ್ಲ. ನನ್ನನ್ನು ರಾಜಕೀಯವಾಗಿ ಮುಗಿಸಲು ದೊಡ್ಡ ದೊಡ್ಡ ನಾಯಕರು ಹಲವು ಬಗೆಯ ಕುಟಿಲ ಕಾರಸ್ತಾನಗಳನ್ನು ಮಾಡಿದ್ದಾರೆ’ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

‘ಕುರಿ ಕಾಯುವವನು ಮುಖ್ಯಮಂತ್ರಿ ಆಗಿರುವುದೇ ಹಲವರ ಕಣ್ಣು ಕೆಂಪಾಗಲು ಕಾರಣ. ಇವನೊಬ್ಬನನ್ನು ರಾಜಕೀಯವಾಗಿ ಮುಗಿಸಿಬಿಟ್ಟರೆ ತಮ್ಮ ಹಾದಿ ಸುಲಭವಾಗುತ್ತದೆ ಎನ್ನುವ ರಾಜಕೀಯ ದುರುದ್ದೇಶದ ಲೆಕ್ಕಾಚಾರ ಅವರಲ್ಲಿದೆ’ ಎಂದಿದ್ದಾರೆ.

f prajavani.net prajavani
ಶನಿವಾರ, ಫೆಬ್ರುವರಿ 21, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 52 | ಪುಟ 22
● www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 82,814 | ನಿಫ್ಟಿ 25,571 | $/₹ 90.94

ಆಚರಣೆ

ಕೋಲ್ಕತ್ತದಲ್ಲಿ ರಂಜಾನ್ ಪ್ರಾರ್ಥನೆಯ ಸಲುವಾಗಿ ಮಸೀದಿಗೆ ತೆರಳುವ ಮುನ್ನ ವ್ಯಕ್ತಿಯೊಬ್ಬರು ಕಣ್ಣಿಗೆ ಸುರ್ಮಾ ಹಚ್ಚಿಸಿಕೊಂಡರು

ಟ್ರಂಪ್ ಸುಂಕಕ್ಕೆ 'ಸುಪ್ರೀಂ' ಗುದ್ದು

ವಿವಿಧ ದೇಶಗಳ ಮೇಲೆ ಹೆಚ್ಚುವರಿ ಸುಂಕ ವಿಧಿಸಿದ್ದು ಸರಿಯಲ್ಲ ಎಂದು ರದ್ದುಪಡಿಸಿದ ಕೋರ್ಟ್

ವಾಷಿಂಗ್ಟನ್ (ಎಪಿ/ ಪಿಟಿಐ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವಿವಿಧ ದೇಶಗಳ ಮೇಲೆ ಹೇರಿರುವ ಹೆಚ್ಚುವರಿ ಪ್ರತಿಸುಂಕವನ್ನು ಅಮೆರಿಕದ ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ. ಈ ತೀರ್ಪು ಟ್ರಂಪ್ ಆಡಳಿತಕ್ಕೆ ಬಲುದೊಡ್ಡ ಹಿನ್ನಡೆ ಎಂದು ವಿಶ್ಲೇಷಿಸಲಾಗಿದೆ.

ಟ್ರಂಪ್ ಅವರು ಹೇರಿರುವ ಹೆಚ್ಚುವರಿ ಸುಂಕದ ಕಾನೂನುಬದ್ಧತೆಯನ್ನು ಪ್ರಶ್ನಿಸಿರುವ ಪ್ರಕರಣದ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ 6:3 ಬಹುಮತದ ತೀರ್ಪು ನೀಡಿತು.

'ಸುಂಕಗಳನ್ನು ಒಳಗೊಂಡಂತೆ ಎಲ್ಲ ರೀತಿಯ ತೆರಿಗೆಗಳನ್ನು ವಿಧಿಸುವ ಅಧಿಕಾರವು ಕಾಂಗ್ರೆಸ್‌ಗೆ (ಸಂಸತ್ತು) ಮಾತ್ರ ಇದೆ ಎಂಬುದನ್ನು ಸಂವಿಧಾನದಲ್ಲಿ 'ಬಹಳ ಸ್ಪಷ್ಟವಾಗಿ' ಹೇಳಲಾಗಿದೆ' ಎಂದು ಮುಖ್ಯ ನ್ಯಾಯಮೂರ್ತಿ ಜಾನ್ ರಾಬರ್ಟ್ಸ್ ಅವರು ತೀರ್ಪಿನಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಬಳಸುವ 1977ರ ತುರ್ತು ಆರ್ಥಿಕ ಅಧಿಕಾರಗಳ ಕಾಯ್ದೆ ಮೂಲಕ



ಡೊನಾಲ್ಡ್ ಟ್ರಂಪ್

ಟ್ರಂಪ್ ಅವರು ಅಧ್ಯಕ್ಷರ ಅಧಿಕಾರದ ವ್ಯಾಪ್ತಿಯನ್ನು ಮೀರಿದ್ದಾರೆ ಎಂಬ ಫೆಡರಲ್ ನ್ಯಾಯಾಲಯದ ತೀರ್ಪನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳು ಬಹುಮತದಿಂದ ಎತ್ತಿಹಿಡಿದರು.

'ಅಂತರರಾಷ್ಟ್ರೀಯ ತುರ್ತು ಆರ್ಥಿಕ ಅಧಿಕಾರಗಳ ಕಾಯ್ದೆ ಅಡಿ (ಐಇಇಪಿಎ) ಸುಂಕ ವಿಧಿಸುವ ಅಧಿಕಾರವು ಅಧ್ಯಕ್ಷರಿಗೆ ಇದೆ ಎಂಬ ಟ್ರಂಪ್ ಆಡಳಿತದ ವ್ಯಾಖ್ಯಾನವು ಕಾಂಗ್ರೆಸ್‌ನ ಅಧಿಕಾರದಲ್ಲಿ ಹಸ್ತಕ್ಷೇಪ ನಡೆಸಿದಂತೆ' ಎಂದು ಹೇಳಿತು. 'ಆದರೆ ಇತರ ಕಾನೂನುಗಳಡಿ ತೆರಿಗೆ ವಿಧಿಸುವ ಅಧ್ಯಕ್ಷರ ಅಧಿಕಾರಕ್ಕೆ ಯಾವುದೇ ತಡೆ ವಿಧಿಸುವುದಿಲ್ಲ' ಎಂದು ತೀರ್ಪಿನಲ್ಲಿ ಸ್ಪಷ್ಟಪಡಿಸಲಾಗಿದೆ.

ನ್ಯಾಯಮೂರ್ತಿಗಳಾದ ಸ್ಯಾಮ್ಯುಯೆಲ್ ಅಲಿಟೊ, ಕ್ಲಾರೆನ್ಸ್ ಥಾಮಸ್ ಮತ್ತು ಬ್ರೆಟ್ ಕ್ಯಾವನಾ ಅವರು ತೀರ್ಪಿಗೆ ಅಸಮ್ಮತಿ ಸೂಚಿಸಿದರು. 'ಸುಂಕ ಹೇರಿಕೆಯು ವಿವೇಕದ ನೀತಿ ಆಗಿರಬಹುದು ಅಥವಾ ಇಲ್ಲದಿರಬಹುದು. ಆದರೆ ಇತಿಹಾಸ ಮತ್ತು ಪೂರ್ವನಿದರ್ಶನಗಳನ್ನು ನೋಡಿದರೆ ಅಧ್ಯಕ್ಷರು ತೆಗೆದುಕೊಂಡ ನಿರ್ಧಾರವು ಕಾನೂನುಬದ್ಧವಾಗಿಯೇ ಇದೆ' ಎಂದು ಕ್ಯಾವನಾ ಅವರು ಭಿನ್ನ ತೀರ್ಪಿನಲ್ಲಿ ತಿಳಿಸಿದ್ದಾರೆ.

'ರಷ್ಯಾದಿಂದ ತೈಲ ಖರೀದಿಸಿದ್ದಕ್ಕೆ ಭಾರತದ ಮೇಲೆ ಹೆಚ್ಚುವರಿ ಸುಂಕ ವಿಧಿಸಲಾಗಿದೆ' ಎಂಬುದನ್ನೂ ಅವರು ಉಲ್ಲೇಖಿಸಿದ್ದಾರೆ.

ಸುಂಕ ಹೇರಿಕೆ ವಿಚಾರದಲ್ಲಿ ಟ್ರಂಪ್ ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿದ್ದಾರೆ ಎಂದು ಅಮೆರಿಕದ ಕೆಳ ನ್ಯಾಯಾಲಯಗಳು ಈ ಹಿಂದೆಯೇ ತೀರ್ಪು ನೀಡಿದ್ದವು.

▶10

₹15.89 ಲಕ್ಷ ಕೋಟಿ ಸಂಗ್ರಹ?

ಟ್ರಂಪ್ ಆಡಳಿತವು ಕಳೆದ ಡಿಸೆಂಬರ್ 14ರಿಂದ ಸಂಗ್ರಹಿಸಿದ ಸುಂಕದ ಮಾಹಿತಿಯನ್ನು ಒದಗಿಸಿಲ್ಲ. ಆದರೆ 'ಪೆನ್ ವಾರ್ಟನ್ ಬಜೆಟ್ ಮಾಡೆಲ್' ಅರ್ಥಶಾಸ್ತ್ರಜ್ಞರು ಅಂದಾಜಿಸಿದ ಪ್ರಕಾರ ಈ ಅವಧಿಯಲ್ಲಿ 175 ಬಿಲಿಯನ್ ಡಾಲರ್ (ಅಂದಾಜು ₹15.89 ಲಕ್ಷ ಕೋಟಿ) ಸುಂಕ ಸಂಗ್ರಹಿಸಿದೆ. ಇದೀಗ, ಐಇಇಪಿಎ ಆಧಾರಿತ ಸುಂಕ ಸಂಗ್ರಹದ ವಿರುದ್ಧ ಸುಪ್ರೀಂ ಕೋರ್ಟ್ ತೀರ್ಪು ನೀಡಿರುವುದರಿಂದ ಈ ಮೊತ್ತವನ್ನು ಆಯಾ ದೇಶಗಳಿಗೆ ಮರುಪಾವತಿ ಮಾಡಬೇಕಾಗುತ್ತದೆ.

5 ತಿಂಗಳವರೆಗೆ ಶೇ 10 ಸುಂಕ: ಟ್ರಂಪ್

ವಾಷಿಂಗ್ಟನ್ (ಎಎಫ್‌ಪಿ): ಹೆಚ್ಚುವರಿ ಪ್ರತಿಸುಂಕವನ್ನು ಅಮೆರಿಕದ ಸುಪ್ರೀಂ ಕೋರ್ಟ್ ರದ್ದುಗೊಳಿಸಿದ ಬೆನ್ನಲ್ಲೇ, ಅಮೆರಿಕಕ್ಕೆ ಆಮದಾಗುವ ಎಲ್ಲ ವಸ್ತುಗಳ ಮೇಲೆ ಮುಂದಿನ ಐದು ತಿಂಗಳವರೆಗೆ ಜಾಗತಿಕವಾಗಿ ಶೇ 10ರಷ್ಟು ಸುಂಕ ವಿಧಿಸಲಾಗುವುದು ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಘೋಷಿಸಿದ್ದಾರೆ.

'1974ರ ವ್ಯಾಪಾರ ಕಾಯ್ದೆಯ ಸೆಕ್ಷನ್ 122ರ ಅಡಿಯಲ್ಲಿ ಈ ಆದೇಶ ಹೊರಡಿಸಲಾಗುವುದು' ಎಂದು ಟ್ರಂಪ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

'ಎಲ್ಲ ದೇಶಗಳ ಮೇಲೆ 150 ದಿನಗಳವರೆಗೆ ಶೇ 15ರವರೆಗೆ ಸುಂಕ ವಿಧಿಸಲು ಈ ಕಾಯ್ದೆಯು ಅಧ್ಯಕ್ಷರಿಗೆ ಅವಕಾಶ ನೀಡುತ್ತದೆ. ನಮ್ಮ ಬಳಿ ಅತ್ಯುತ್ತಮ ಪರ್ಯಾಯ ಮಾರ್ಗಗಳಿವೆ. ಇವು ಹೆಚ್ಚಿನ ಹಣವನ್ನು ತರಬಹುದು. ಇದರಿಂದ ನಾವು ಇನ್ನಷ್ಟು ಬಲಿಷ್ಠರಾಗುತ್ತೇವೆ' ಎಂದು ತಿಳಿಸಿದ್ದಾರೆ.

▶10

ಮೇ ಅಂತ್ಯದೊಳಗೆ ಪಾಲಿಕೆ ಚುನಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ನಗರ ಪಾಲಿಕೆಗಳಿಗೆ ಮೇ ತಿಂಗಳೊಳಗೆ ಚುನಾವಣೆ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ನಗರದ ಅಭಿವೃದ್ಧಿಯ ರೂಪುರೇಷೆಗಳನ್ನು ಆಳವಾಗಿ ವಿಶ್ಲೇಷಿಸಲು 'ಪ್ರಜಾವಾಣಿ'ಯ ಸೋದರ ಪತ್ರಿಕೆಯಾದ 'ಡೆಕ್ಕನ್ ಹೆರಾಲ್ಡ್', 'ಗ್ರೇಟರ್ ಬೆಂಗಳೂರಿನ ಸಬಲೀಕರಣ' ಘೋಷಣೆಯೊಂದಿಗೆ ಶುಕ್ರವಾರ ಆಯೋಜಿಸಿದ್ದ 'ಡಿಎಚ್ ಬೆಂಗಳೂರು-2040 ಶೃಂಗ'ದ ಸಂವಾದದಲ್ಲಿ ಮಾತನಾಡಿದರು.

'ಡಿಎಚ್ ಬೆಂಗಳೂರು– 2040 ಶೃಂಗ'

'ಚುನಾವಣೆ ನಡೆಸುವ ಕುರಿತು ಈಗಾಗಲೇ ಸುಪ್ರೀಂ ಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಲಾಗಿದೆ. ಐದು ಪಾಲಿಕೆಗಳ, 369 ವಾರ್ಡ್‌ಗಳಿಗೂ ಸದಸ್ಯರು ಆಯ್ಕೆಯಾಗಬೇಕು. ಈ ಬಗ್ಗೆ ಪಕ್ಷದ ಶಾಸಕರ ಜತೆ ಚರ್ಚಿಸಲಾಗಿದ್ದು, ಜನರ ಸಮಸ್ಯೆಗಳಿಗೆ ಪರಿಹಾರ ದೊರಕುವಂತಾಗಬೇಕು. ಚುನಾವಣೆಗೆ ಸಿದ್ಧವಾಗಿರುವಂತೆ ಪಕ್ಷದ ಕಾರ್ಯಕರ್ತರಿಗೂ ಸೂಚನೆ ನೀಡಲಾಗಿದ್ದು, ಹಲವು

'ಡಿಎಚ್ ಬೆಂಗಳೂರು–2040 ಶೃಂಗ'ದ ಸಂವಾದದಲ್ಲಿ ಡಿ.ಕೆ. ಶಿವಕುಮಾರ್ ಮಾತನಾಡಿದರು

ಸುತ್ತಿನ ಸಭೆ ಸಹ ನಡೆಸಲಾಗಿದೆ' ಎಂದು ತಿಳಿಸಿದರು.

'ಸರ್ಕಾರದ ಒಂದು ಸಾವಿರ ದಿನಗಳ ಆಡಳಿತದಲ್ಲಿ ಸಾಕಷ್ಟು ಜನಪ್ರಿಯ ಕಾರ್ಯಕ್ರಮಗಳು ಹಾಗೂ ಯೋಜನೆ ಗಳನ್ನು ಜಾರಿಗೊಳಿಸಿದೆ. ನಗರದ ಸಂಚಾರ ದಟ್ಟಣೆ ಸಮಸ್ಯೆ ನಿವಾರಣೆಗೆ ಸುರಂಗ ರಸ್ತೆ, ಡಬ್ಬಲ್ ಡೆಕ್ಕರ್, ಬೆಂಗಳೂರು ಬ್ಯುಸಿನೆಸ್ ಕಾರಿಡಾರ್, ಮೆಟ್ರೊ, ಮೇಲ್ಸೇತುವೆಗಳು, ಸಾರ್ವಜನಿಕ ಸಾರಿಗೆ ಪರಿಹಾರವಾಗಿದೆ' ಎಂದು ಡಿ.ಕೆ.ಶಿವಕುಮಾರ್ ಅವರು ಹೇಳಿದರು.

▶2

ವಿದ್ಯುತ್ ದರ: ಯೂನಿಟ್‌ಗೆ 50 ಪೈಸೆ ಹೆಚ್ಚಳ ಖಚಿತ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು (ಕೆಇಆರ್‌ಸಿ) ದರ ಏರಿಕೆಗೆ ಸಿದ್ಧತೆ ನಡೆಸಿದ್ದು, ಬರುವ ಏಪ್ರಿಲ್‌ನಿಂದ ಗೃಹ ಬಳಕೆ ವಿದ್ಯುತ್ ದರ ಯೂನಿಟ್‌ಗೆ ಸುಮಾರು 50 ಪೈಸೆ ಹೆಚ್ಚಳವಾಗುವುದು ಬಹುತೇಕ ಖಚಿತವಾಗಿದೆ.

ಐದು ವಿದ್ಯುತ್ ಸರಬರಾಜು ಕಂಪನಿಗಳು ವಿದ್ಯುತ್ ದರವನ್ನು ಪರಿಷ್ಕರಿಸಿ ಯೂನಿಟ್‌ಗೆ ಸರಾಸರಿ 68 ಪೈಸೆ ಹೆಚ್ಚಳ ಮಾಡುವಂತೆ ಕೋರಿದ್ದು, ಆಯೋಗವು 14ರಿಂದ 18 ಪೈಸೆ ಹೆಚ್ಚಳ ಮಾಡುವ ಉದ್ದೇಶವನ್ನು ಹೊಂದಿದೆ.

ಇದಲ್ಲದೆ ಬಹುವಾರ್ಷಿಕ ದರ ಪದ್ಧತಿಗೆ ಅನುಗುಣವಾಗಿ 2026–27ನೇ ಸಾಲಿನ ದರ ಹೆಚ್ಚಳವನ್ನು ಕಳೆದ ವರ್ಷದ ಮಾರ್ಚ್‌ನಲ್ಲಿ ಪ್ರಕಟಿಸಲಾಗಿದೆ. ಆ ಪ್ರಕಾರ ಬರುವ ಏಪ್ರಿಲ್ ಒಂದರಿಂದ ಅದು ಯೂನಿಟ್‌ಗೆ 35 ಪೈಸೆ ಹೆಚ್ಚಳವಾಗಲಿದೆ. ಈ 35 ಪೈಸೆ ಹಾಗೂ ಈಗ ಪರಿಷ್ಕರಣೆಯಾಗಲಿರುವ ದರ ಎರಡೂ ಸೇರಿ ಯೂನಿಟ್‌ಗೆ 50 ಪೈಸೆ ಹೆಚ್ಚಳ ವಾಗಬಹುದು ಎಂದು ಆಯೋಗದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

▶3B

ಚಿನಕುರುಳಿ ಪ್ರಕಾಶ್ ಶೆಟ್ಟಿ



ಕಲ್ಲು ತೂರಾಟ: 8 ಜನ ಸೆರೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ನಗರದಲ್ಲಿ ಗುರುವಾರ ರಾತ್ರಿ ಶಿವಾಜಿ ಜಯಂತಿ ಮೆರವಣಿಗೆ ವೇಳೆ ನಡೆದ ಕಲ್ಲು ತೂರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು 8 ಮಂದಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಇದೇ 24ರವರೆಗೆ ನಿಷೇಧಾಜ್ಞೆ ಜಾರಿಗೊಳಿಸಿ, ನಗರದ ಎಲ್ಲೆಡೆ ಬಿಗಿ ಬಂದೋಬಸ್ತ್ ಮಾಡಲಾಗಿದೆ.

'ಕಲ್ಲು ತೂರಿದ ಆರೋಪದ ಮೇಲೆ ನವನಗರದ 10ನೇ ಸೆಕ್ಟರ್ ನಿವಾಸಿ ತಂಜೀರ್ (26) ಮತ್ತು ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ಏಳು ಜನರನ್ನು ಬಂಧಿಸಲಾಗಿದೆ. ಘಟನೆಯಲ್ಲಿ ನನಗೂ ಸೇರಿ ಪೊಲೀಸ್ ಸಿಬ್ಬಂದಿ ಮತ್ತು

> ಕಲ್ಲು ತೂರಾಟವು ಸಮಾಜದ ಶಾಂತಿ, ಸೌಹಾರ್ದಕ್ಕೆ ಮಾರಕ. ಇದನ್ನು ಖಂಡಿಸುತ್ತೇನೆ. ದುಷ್ಕೃತ್ಯ ಎಸಗಿದ ಪುಂಡರಿಗೆ ಕಾನೂನಿನ ಮೂಲಕ ತಕ್ಕ ಉತ್ತರ ನೀಡುವಂತೆ ಸೂಚಿಸಿದ್ದೇನೆ
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

ವ್ಯಕ್ತಿಯೊಬ್ಬರಿಗೆ ಗಾಯಗಳಾಗಿವೆ. ಪ್ರಕರಣ ಸಂಬಂಧ ಇನ್ನಷ್ಟು ಮಾಹಿತಿ ಸಂಗ್ರಹಿಸಲಾಗುತ್ತಿದೆ. ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ಶುಕ್ರವಾರ ತಿಳಿಸಿದರು.

▶3B

ಎಸ್‌ಐಆರ್‌ಗೆ ನ್ಯಾಯಾಧೀಶರು

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಆಡಳಿತಾರೂಢ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಹಾಗೂ ಚುನಾವಣಾ ಆಯೋಗದ ನಡುವಿನ ಜಟಾಪಟಿಯಿಂದ ಬೇಸರಗೊಂಡಿರುವ ಸುಪ್ರೀಂ ಕೋರ್ಟ್, ಮತದಾರರ ವಿಶೇಷ ಸಮಗ್ರ ಪರಿಷ್ಕರಣೆಯಲ್ಲಿ (ಎಸ್‌ಐಆರ್) ಚುನಾವಣಾ ಆಯೋಗಕ್ಕೆ ನೆರವಾಗಲು ಹಾಲಿ ಹಾಗೂ ನಿವೃತ್ತ ನ್ಯಾಯಾಧೀಶರನ್ನು ನಿಯೋಜಿಸುವಂತೆ ಅಪರೂಪದ ತೀರ್ಪು ನೀಡಿದೆ.

ಆಯೋಗ ಹಾಗೂ ಸರ್ಕಾರದ ನಡುವಿನ ಆರೋಪ–ಪ್ರತ್ಯಾರೋಪದ ಆಟವು ದುರದೃಷ್ಟಕರ. ಆಯೋಗ ಮತ್ತು ಜನರಿಂದ ಆಯ್ಕೆಯಾದ ಸರ್ಕಾರದ ನಡುವಿನ ವಿಶ್ವಾಸದ ಕೊರತೆಯನ್ನು ಪರಿಗಣಿಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಹಾಗೂ ವಿಪುಲ್ ಎಂ.ಪಂಚೋಲಿ ಅವರ ಪೀಠವು ಎಸ್‌ಐಆರ್ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಹೊಸ ನಿರ್ದೇಶನಗಳನ್ನು ನೀಡಿತು.

ಎಸ್‌ಐಆರ್ ಭಾಗವಾಗಿ ಪ್ರಕಟಿಸಿದ ಮತದಾರರ ಪಟ್ಟಿಗೆ (ಮತದಾರರ ಪಟ್ಟಿಯಲ್ಲಿರುವ ಮಾಹಿತಿಯಲ್ಲಿ ವ್ಯತ್ಯಾಸ) ಸೇರಿಸಿದ ವ್ಯಕ್ತಿಗಳ ಹಕ್ಕುಗಳು ಹಾಗೂ ಆಕ್ಷೇಪಣೆಗಳನ್ನು ಆಲಿಸಿ ತೀರ್ಮಾನ ನೀಡಲು ನ್ಯಾಯಾಂಗ ಅಧಿಕಾರಿಗಳನ್ನು ನಿಯೋಜಿಸಲಾಗುತ್ತದೆ ಎಂದು ಪೀಠವು ತಿಳಿಸಿದೆ.

ಮುಖ್ಯಾಂಶಗಳು

- ಫೆಬ್ರುವರಿ 28ರಂದೇ ಮತದಾರರ ಕರಡು ಪ್ರಕಟಿಸಲು ಅವಕಾಶ
- ಆಕ್ಷೇಪಣೆ ಬಳಿಕ ಪೂರಕ ಪಟ್ಟಿ ಸಲ್ಲಿಸಲು ನ್ಯಾಯಾಲಯ ಸೂಚನೆ

▶11

ಸಿ.ಟಿ ಸ್ಕ್ಯಾನ್: ಪರ್ಯಾಯ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲಾ ಆಸ್ಪತ್ರೆಗಳಲ್ಲಿ ಸಿ.ಟಿ ಸ್ಕ್ಯಾನ್ ಮತ್ತು ಎಂಆರ್‌ಐ ಸೇವೆ ಸ್ಥಗಿತಗೊಂಡಿರುವುದರಿಂದ 13 ಜಿಲ್ಲಾ ಆಸ್ಪತ್ರೆಗಳಲ್ಲಿ ಶನಿವಾರದಿಂದಲೇ ಪರ್ಯಾಯ ವ್ಯವಸ್ಥೆ ಮಾಡಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಕ್ರಸ್ನ ಡಯಾಗ್ನೋಸ್ಟಿಕ್ ಲಿಮಿಟೆಡ್ ತನ್ನ ಸೇವೆ ನಿಲ್ಲಿಸಿರುವುದರಿಂದ 13 ಜಿಲ್ಲಾಸ್ಪತ್ರೆಗಳಲ್ಲಿ ರೋಗಿಗಳಿಗೆ ಸಮಸ್ಯೆ ಆಗಿದೆ. ಆಸ್ಪತ್ರೆಗಳ ಸಮೀಪದ ಎಂಆರ್‌ಐ, ಸಿ.ಟಿ ಸ್ಕ್ಯಾನಿಂಗ್ ಕೇಂದ್ರಗಳಲ್ಲಿ ಸೇವೆ ಪಡೆಯಲು ಅವಕಾಶ ನೀಡಲಾಗುವುದು ಎಂದು ಅವರು ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

'2019 ರಿಂದ ಬಾಕಿ ಇರುವ ₹140 ಕೋಟಿ ಪಾವತಿಸುವಂತೆ ಕ್ರಸ್ನ ಡಯಾಗ್ನೋಸ್ಟಿಕ್ ಒತ್ತಾಯಿಸಿದೆ. ಆದರೆ, ಸಿ.ಟಿ ಸ್ಕ್ಯಾನ್ ಮತ್ತು ಎಂಆರ್‌ಐ ಪರೀಕ್ಷೆಯ ಬಿಲ್‌ನಲ್ಲಿ ಸಾಕಷ್ಟು ವ್ಯತ್ಯಾಸಗಳು ಕಂಡುಬಂದಿವೆ' ಎಂದು ಹೇಳಿದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಗಸ ಇರಲಿದೆ

‘ಖಾಸಗಿ ಮೈದಾನಗಳು ಎಲ್ಲರಿಗೂ ಲಭ್ಯವಾಗಲಿ’

‘ಡಿಎಚ್ ಬೆಂಗಳೂರು– 2040 ಶೃಂಗ’ದಲ್ಲಿ ಕ್ರಿಕೆಟಿಗ ರಾಹುಲ್ ದ್ರಾವಿಡ್ ಆಶಯ

ರಾಹುಲ್ ದ್ರಾವಿಡ್

ಡೆಕ್ಕನ್ ಹೆರಾಲ್ಡ್ ಕಚೇರಿ ಮೆಟ್ಟಿಲು ಹತ್ತುತ್ತಿದ್ದೆ...

‘ನಾನು ಬೆಳೆಯುತ್ತಿದ್ದ ಸಂದರ್ಭದಲ್ಲಿ ನನ್ನ ತಾಯಿ ಕ್ರೀಡೆಗೆ ಸಂಬಂಧಿಸಿದ ಪತ್ರಿಕಾ ಪ್ರಕಟಣೆಗಳನ್ನು ಜಾಗರೂಕತೆಯಿಂದ ಸಂಗ್ರಹಿಸಿಟ್ಟಿದ್ದಾರೆ. ಹಳೆಯ ಆ ಪ್ರಕಟಣೆಗಳನ್ನು ನೋಡಿದಾಗ ಬೆಂಗಳೂರಿನ ನೆನಪುಗಳು ಮರುಕಳಿಸುತ್ತವೆ. ಅದೆನ್ನೆಲ್ಲ ಸೇರಿಸಿಕೊಂಡು ‘ಸ್ಕ್ರ್ಯಾಪ್ ಬುಕ್’ ವಿಡಿಯೊ ಮಾಡಿದ್ದೇನೆ. ಡೆಕ್ಕನ್ ಹೆರಾಲ್ಡ್ ನನ್ನ ಕ್ರೀಡಾ ಜೀವನದ ಅವಿಭಾಜ್ಯ ಅಂಗವಾಗಿದೆ. ನನ್ನ ತಂದೆ ಪತ್ರಿಕೆಯ ಓದುಗರಾಗಿದ್ದರು. ಕ್ಲಬ್ ಪಂದ್ಯಗಳಲ್ಲಿ ರನ್ ಗಳಿಸಿದರೆ ಅದರ ಸ್ಕೋರ್ ಬೋರ್ಡ್ ಅನ್ನು ಪತ್ರಿಕೆ ಕಚೇರಿಗೆ ತಲುಪಿಸಿ, ಮರು ದಿನ ಅದು ಪ್ರಕಟವಾಗಿದೆಯೇ ಎಂಬುದನ್ನು ಕಾತರದಿಂದ ಎದುರು ನೋಡುತ್ತಿದ್ದೆ. ಎಂ.ಜಿ. ರಸ್ತೆಯಲ್ಲಿರುವ ಪತ್ರಿಕೆ ಕಚೇರಿಗೆ ಖುದ್ದಾಗಿ ಹೋಗಿ, ಮೆಟ್ಟಿಲುಗಳನ್ನು ಹತ್ತಿ ಸ್ಕೋರ್ ಕಾರ್ಡ್ ಅನ್ನು ಕ್ರೀಡಾ ಸಂಪಾದಕರಿಗೆ ನೀಡುತ್ತಿದ್ದ ದಿನಗಳನ್ನು ನಾನಾಗಲೀ, ನನ್ನ ಸ್ನೇಹಿತರಾಗಲಿ ಎಂದೂ ಮರೆಯುವುದಿಲ್ಲ, ಆ ದಿನಗಳು ಅತ್ಯಂತ ಸುಂದರವಾಗಿದ್ದವು’ ಎಂದು ರಾಹುಲ್ ದ್ರಾವಿಡ್ ಸ್ಮರಿಸಿಕೊಂಡರು.

‘ಸೇಂಟ್ ಜೋಸೆಫ್ ಬಾಯ್ಸ್ ಹೈಸ್ಕೂಲ್‌ನಲ್ಲಿ ತರಗತಿಯ ಒಳಗಿಗಿಂತ ಹೊರಗೆ ಶ್ರಮಿಸಿದ ದಿನಗಳೇ ಹೆಚ್ಚು. ತಂಡವಾಗಿ ಶಿಸ್ತು ಮತ್ತು ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸುವುದನ್ನು ಕ್ರೀಡೆ ನನಗೆ ಕಲಿಸಿಕೊಟ್ಟಿದೆ. ಅಂದು ಯಾರೂ 'ಪ್ರೊಫೆಷನಲ್ ಕೆರಿಯರ್' ಬಗ್ಗೆ ಮಾತನಾಡುತ್ತಿರಲಿಲ್ಲ. ಓದಿನ ಜೊತೆಗೆ ಕ್ರೀಡೆಯನ್ನು ಸಮತೋಲನ ಮಾಡುವ ಜವಾಬ್ದಾರಿ ಇತ್ತು. ಗೌರವ ಕಳೆದುಕೊಳ್ಳದೆ ಸ್ಪರ್ಧಿಸುವುದು ಹೇಗೆ ಮತ್ತು ಪರಸ್ಪರ ಬೆಂಬಲಿಸುವುದು ಹೇಗೆ ಎಂಬುದನ್ನು ನಾನು ಮೈದಾನದಲ್ಲಿ ಕಲಿತೆ’ ಎಂದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕ್ರೀಡೆ ಕೆಲವರಿಗೆ ಅಷ್ಟೇ ಸೀಮಿತವಾಗಬಾರದು. ಮೈದಾನ ಹಾಗೂ ಮುಕ್ತ ಜಾಗಗಳನ್ನು ಸರ್ಕಾರ ಸಂರಕ್ಷಿಸಬೇಕು. ಶಾಲಾ-ಕಾಲೇಜುಗಳು ತಮ್ಮ ಶೈಕ್ಷಣಿಕ ಅವಧಿಗೆ ಹೊರತಾದ ಸಮಯದಲ್ಲಿ ಆ ಮೈದಾನಗಳನ್ನು ಸಾರ್ವಜನಿಕರಿಗೆ, ಮಕ್ಕಳಿಗೆ ಮುಕ್ತಗೊಳಿಸಬೇಕು. ಕಾರ್ಪೊರೇಟ್ ಸಂಸ್ಥೆಗಳೂ ಈ ನಿಟ್ಟಿನಲ್ಲಿ ಆಸಕ್ತಿ ವಹಿಸಬೇಕು’ ಎಂದು ಕ್ರಿಕೆಟಿಗ ರಾಹುಲ್ ದ್ರಾವಿಡ್ ಅಭಿಪ್ರಾಯಪಟ್ಟರು.

ನಗರದ ಅಭಿವೃದ್ಧಿಯ ರೂಪುರೇಷೆಗಳನ್ನು ಆಳವಾಗಿ ವಿಶ್ಲೇಷಿಸಲು ‘ಪ್ರಜಾವಾಣಿ’ಯ ಸೋದರ ಪತ್ರಿಕೆಯಾದ ‘ಡೆಕ್ಕನ್ ಹೆರಾಲ್ಡ್’, ‘ಗ್ರೇಟರ್ ಬೆಂಗಳೂರಿನ ಸಬಲೀಕರಣ’ ಘೋಷಣೆಯೊಂದಿಗೆ ಶುಕ್ರವಾರ ಆಯೋಜಿಸಿದ್ದ ‘ಡಿಎಚ್ ಬೆಂಗಳೂರು–2040 ಶೃಂಗ’ದಲ್ಲಿ ಅವರು ದಿಕ್ಸೂಚಿ ಭಾಷಣ ಮಾಡಿದರು.

‘ನಗರದ ಕೆಲವು ರಸ್ತೆಗಳನ್ನು ವಾರದಲ್ಲಿ ಕೆಲವು ಗಂಟೆಗಳ ಕಾಲ ವಾಹನ ಸಂಚಾರದಿಂದ ಮುಕ್ತಗೊಳಿಸಿ, ಮಕ್ಕಳಿಗೆ ಆಟವಾಡಲು ಅವಕಾಶ ನೀಡಬೇಕು. ಬೆಂಗಳೂರು ಸಂಪ್ರದಾಯ ಮತ್ತು ಪ್ರಗತಿಯ ಸಮತೋಲನದಲ್ಲಿದೆ. ಹೀಗಾಗಿ, ಪ್ರತಿಯೊಂದು ಮಗುವೂ ತನ್ನದೇ ನೆನಪುಗಳನ್ನು ರೂಪಿಸಿಕೊಳ್ಳುವ ಅವಕಾಶ ನೀಡಬೇಕು. ಮುಂದಿನ ಪೀಳಿಗೆಯ ಎಲ್ಲ ಮಕ್ಕಳಿಗೂ ಆಟವಾಡಲು, ಕಲಿಯಲು ಮತ್ತು ಬೆಳೆಯಲು ಮುಕ್ತ ವಾತಾವರಣವಿರಬೇಕು. ಅವರೂ ಮುಂದೊಂದು ದಿನ ನಾನು ಸೃಷ್ಟಿಸಿರುವ ‘ತಾಯಿಯ ಸ್ಕ್ರ್ಯಾಪ್ ಬುಕ್’ನ ಪುಟಗಳಲ್ಲಿ ತಮ್ಮ ನೆನಪುಗಳನ್ನು ಸೇರಿಸಲಿ’ ಎಂದು ಆಶಯ ವ್ಯಕ್ತಪಡಿಸಿದರು.

‘ಬೆಂಗಳೂರು ‘ಕ್ರೀಡಾ ನಗರಿ’. ತಂತ್ರಜ್ಞಾನ ಮತ್ತು ಐಟಿ ಕ್ಷೇತ್ರಕ್ಕೆ ಹೆಸರಾಗಿರುವ ಈ ನಗರ ಕ್ರೀಡೆಗೂ ಹೆಸರಾಗಿದೆ. ನಗರ ಇಂದು ಸಾಕಷ್ಟು ಬೆಳೆದಿದೆ. ಸುಸಜ್ಜಿತ ಕೋಚಿಂಗ್ ಸೆಂಟರ್‌ಗಳು, ಕ್ರೀಡಾ ವಿಜ್ಞಾನ ಮತ್ತು ಜಾಗತಿಕ ಮಟ್ಟದ ಸೌಲಭ್ಯಗಳಿವೆ. ಆದರೆ ನಗರವು ಬೆಳೆದಂತೆ ಕೆಲವು ಸವಾಲುಗಳೂ ಎದುರಾಗಿವೆ. ಸಂಚಾರ ದಟ್ಟಣೆ ಇಂದಿನ ದೊಡ್ಡ ಸಮಸ್ಯೆ. ಕ್ರೀಡೆಗೆ ಬೇಕಾದ ಸೌಲಭ್ಯ ಇಂದು ಇಲ್ಲದಂತಾಗಿದೆ. ನನ್ನ ಮಗನನ್ನು ನೋಡಿದಾಗ ಇದೆಲ್ಲ ನನಗೆ ಸ್ಪಷ್ಟವಾಗಿ ತಿಳಿಯುತ್ತದೆ. ಎಲ್ಲ ಸೌಲಭ್ಯಗಳಿದ್ದರೂ, ಮುಕ್ತ, ಸುರಕ್ಷಿತವಾಗಿ ಆಟವಾಡಲು, ಸಮಯಕ್ಕೆ ಸರಿಯಾಗಿ ಜಾಗ ಹುಡುಕುವುದೇ ಇಂದು ಕಷ್ಟಕರವಾಗಿದೆ’ ಎಂದರು.

‘ನಗರದಲ್ಲಿ ಪ್ರತಿಯೊಂದು ಮಗುವಿಗೂ ಮುಕ್ತ ವಾತಾವರಣದಲ್ಲಿ ಆಟವಾಡುವ ಅವಕಾಶ ಲಭ್ಯವಾಗಬೇಕು. ಕ್ರೀಡೆಯೊಂದಿಗೆ ಕಲಿತು, ಪ್ರಗತಿ ಹೊಂದಬೇಕು. ಇಂತಹ ಸೌಲಭ್ಯ ಕಲ್ಪಿಸುವುದು ನಮ್ಮ ಜವಾಬ್ದಾರಿಯಾಗಿದೆ’ ಎಂದು ಹೇಳಿದರು.

PURAVANKARA PRESENTS
DH BENGALURU 2040 SUMMIT
SPECIAL PARTNERS
GREATER BENGALURU AUTHORITY And 5 BENGALURU CITY CORPORATIONS

‘ಬೋಧನೆ, ಮೌಲ್ಯಮಾಪನದಲ್ಲಿ ಬದಲಾವಣೆ ಅಗತ್ಯ’

ಶೈಕ್ಷಣಿಕ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ (ಎಐ) ಪ್ರತಿಯೊಂದು ಹಂತದಲ್ಲೂ ವ್ಯಾಪಿಸಿದ್ದು, ಸಾಂಪ್ರದಾಯಿಕ ಶೈಲಿಯ ಬೋಧನೆ, ಮೌಲ್ಯಮಾಪನದಲ್ಲಿ ಆಮೂಲಾಗ್ರ ಬದಲಾವಣೆಯಾಗಬೇಕಿದೆ. ಎಐ ಅಗತ್ಯವಾಗಿರುವ ಕಾಲದಲ್ಲಿ ಅದರ ಬಳಕೆಯ ಸ್ವರೂಪವನ್ನು ನಿರ್ಧರಿಸಬೇಕಾದ ನಿರ್ವಹಣಾ ರೂಪುರೇಷೆಗಳನ್ನು ಪ್ರತಿಯೊಂದು ಶೈಕ್ಷಣಿಕ ಸಂಸ್ಥೆಗಳೂ ಅಳವಡಿಸಿಕೊಳ್ಳಬೇಕು ಎಂದು ಶೈಕ್ಷಣಿಕ ತಜ್ಞರು ಅಭಿಪ್ರಾಯಪಟ್ಟರು.

‘ಉನ್ನತ ಶಿಕ್ಷಣದಲ್ಲಿ ಎಐ’ ವಿಷಯವಾಗಿ ನಡೆದ ಸಂವಾದದಲ್ಲಿ, ‘ಎಐ ಕಾರಿನ ಎಂಜಿನ್ ಇದ್ದಂತೆ, ದತ್ತಾಂಶ ಇಂಧನವಿದ್ದಂತೆ. ದತ್ತಾಂಶ ಹಾಳಾದರೆ ಎಂಜಿನ್ ಸ್ಥಗಿತಗೊಳ್ಳುತ್ತದೆ. ಎಐ ಯಾವ ಪ್ರಶ್ನೆಗೂ ಉತ್ತರ ಇಲ್ಲ ಎಂದು ಹೇಳುವುದಿಲ್ಲ. ಆದರೆ, ಅದು ನೀಡುವ ಉತ್ತರವೆಲ್ಲವೂ ಸ್ಪಷ್ಟವಾಗಿರುತ್ತವೆ ಎಂದೇನು ಅಲ್ಲ. ಹಲವು ದತ್ತಾಂಶಗಳನ್ನು ವಿಮರ್ಶೆ ಮಾಡಿ ಉತ್ತರವನ್ನು ನೀಡುತ್ತದೆ. ಮದುವೆಗೆ ಉತ್ತಮ ಜೋಡಿ ಏಕೆ ಸಿಗುವುದಿಲ್ಲ ಎಂದು ನಾನು ಪ್ರಶ್ನೆ ಮಾಡಿದೆ. ‘ಮದ್ಯಸೇವನೆ ಮಾಡುವುದರಿಂದ ಜೋಡಿ ಸಿಗುವುದಿಲ್ಲ’ ಎಂದು ಎಐ ಉತ್ತರಿಸಿತು. ಇಂತಹ ಉತ್ತರ, ನಾವು ಬಳಸುವ ಎಐ ಪ್ಲ್ಯಾಟ್‌ಫಾರ್ಮ್‌ಗೆ ಅನುಗುಣವಾಗಿ ಬದಲಾಗುತ್ತದೆ’ ಎಂದು ಐಐಎಂಬಿಯ ನಿರ್ದೇಶಕ ಯು. ದಿನೇಶ್ ಕುಮಾರ್ ಹೇಳಿದರು.

‘ಎಐ ಬಳಕೆ ಶೈಕ್ಷಣಿಕ ಕ್ಷೇತ್ರದ ಎಲ್ಲ ಪ್ರಾಜೆಕ್ಟ್‌ಗಳಲ್ಲೂ ಇದ್ದು, ಎಐ ಬಳಕೆಯಲ್ಲಿ ನೈತಿಕತೆ ಇರಬೇಕು. ಬೋಧನೆಯಲ್ಲಿ ಎಐ ಬಳಕೆ ಹೆಚ್ಚಿಸುವ ಮೂಲಕ ಗ್ರಾಮೀಣ ಭಾಗದಲ್ಲಿ ಶಿಕ್ಷಕರ ಕಲಿಕಾ ಮಟ್ಟವನ್ನು ವೃದ್ಧಿಸಬಹುದು. ಇದರಿಂದ ಮಕ್ಕಳಿಗೆ ಸಮಸ್ಯೆಗಳ ಪರಿಹಾರಗಳು ಬೇಗ ಸಿಗುತ್ತವೆ’ ಎಂದು ಎಂ.ಎಸ್. ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯದ ನಿರ್ದೇಶಕ ಗುರುಚರಣ್ ಅಭಿಪ್ರಾಯಪಟ್ಟರು.

‘ಪಿಎಚ್.ಡಿಗಾಗಿ ಮಂಡಿಸುವ ಪ್ರಬಂಧಗಳು ಶೇ 90ರಷ್ಟು ಎಐನಿಂದ ಸೃಷ್ಟಿಯಾಗಿರುತ್ತವೆ. ಎಐ ಬಳಕೆಗಿಂತ ದುರ್ಬಳಕೆಯೇ ಹೆಚ್ಚಾಗಿದೆ. ಎಐನಿಂದ ಪ್ರಬಂಧ ಮಂಡಿಸಿ ಪಡೆಯುವ ಪಿಎಚ್.ಡಿಯಿಂದ ಏನು ಪ್ರಯೋಜನ? ಎಐ ಅನ್ನು ನಿರ್ಬಂಧಿಸಲು ಸಾಧ್ಯವಿಲ್ಲವಾಗಿರುವುದರಿಂದ, ಶೇ 20ರಷ್ಟು ಮಾತ್ರ ಬಳಸಬೇಕೆಂಬ ನಿಯಮ ತರಲಾಗಿದೆ. ಶಾಲೆಗಳಲ್ಲಿ ಪ್ರಥಮ ಸೆಮಿಸ್ಟರ್‌ನಿಂದಲೇ ಎಐ ಇದ್ದು, ಪ್ರಾಜೆಕ್ಟ್‌ಗಳನ್ನು ಎಐಯಲ್ಲೇ ಮಾಡಲಾಗುತ್ತಿದೆ. ಪ್ರಾಜೆಕ್ಟ್ ಮಾಡುವುದಕ್ಕಿಂತ ಅದಕ್ಕಾಗಿರುವ ಆಲೋಚನಾ ಕ್ರಮ, ಕ್ರಿಯಾಶೀಲತೆಗೆ ವಿಶ್ವವಿದ್ಯಾಲಯದಲ್ಲಿ ಹೆಚ್ಚಿನ ಗಮನಹರಿಸಲಾಗುತ್ತಿದೆ’ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್. ವಿದ್ಯಾಶಂಕರ್ ಹೇಳಿದರು.

‘ಎಐ ಬಗ್ಗೆ ನಾವು ಹೆದರುವ ಅಗತ್ಯವಿಲ್ಲ. ಅದನ್ನು ನಮ್ಮ ಬೋಧನೆಯಲ್ಲಿ ಸಮಗ್ರ ಭಾಗವಾಗಿಸಿಕೊಂಡು ಕ್ರಿಯಾತ್ಮಕ ಕಲಿಕೆಯತ್ತ ಆಲೋಚಿಸಬೇಕು’ ಎಂದು ರೇವಾ ವಿಶ್ವವಿದ್ಯಾಲಯದ ಅಡಾಪ್ಟ್ ಟೆಕ್ನಾಲಜೀಸ್‌ನ ಪ್ರೊ. ಜೆ.ಬಿ. ಸಿಂಹ ಅಭಿಪ್ರಾಯಪಟ್ಟರು.

ಪತ್ರಕರ್ತ ಗೌತಮ್ ಮಾಚಯ್ಯ ಅವರು ಸಂವಾದ ನಿರ್ವಹಣೆ ಮಾಡಿದರು.

ದಿ ಪ್ರಿಂಟರ್ಸ್ (ಮೈಸೂರು) ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್‌ಕುಮಾರ್ ಅವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸ್ಮರಣಿಕೆ ನೀಡಿದರು

ಕೆಲಸಗಳು ನೆನಪಿನಲ್ಲಿ ಉಳಿಯುತ್ತವೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರ ಒಂದು ಸಾವಿರ ದಿನಗಳ ಆಡಳಿತ ಪೂರೈಸಿದ್ದು, ನಾವು ನೀಡಿದ್ದ ಭರವಸೆಯನ್ನು ಈಡೇರಿಸಿದ್ದೇವೆ. ದೊರೆತ ಅಧಿಕಾರವನ್ನು ಸದುಪಯೋಗ ಪಡಿಸಿಕೊಂಡು ಉತ್ತಮ ಕೆಲಸಗಳನ್ನು ಮಾಡಿದ್ದೇನೆ. ನಮ್ಮ ಕೆಲಸಗಳು ನೆನಪಿನಲ್ಲಿ ಉಳಿಯುವಂತಿವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ನಗರದ ಸಂಚಾರ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸಿದ ಅವರು, ಇತರೆ ನಗರಗಳ ಪರಿಸ್ಥಿತಿ ಇನ್ನೂ ಕೆಟ್ಟದಾಗಿದೆ. ನಗರದ ಜನಸಂಖ್ಯೆ 1 ಕೋಟಿ 40 ಲಕ್ಷ. ಪ್ರತಿ ತಿಂಗಳು ಮೂರು ಲಕ್ಷ ವಾಹನಗಳು ನೋಂದಣಿ ಆಗುತ್ತಿವೆ. ಹೊರಗಿನಿಂದಲೇ ನಿತ್ಯ ಲಕ್ಷಾಂತರ ಜನರು ಬಂದು ಹೋಗುತ್ತಾರೆ. ವಾಹನಗಳ ಸುಗಮ ಸಂಚಾರಕ್ಕೆ ಮಾಸ್ಟರ್ ಪ್ಲಾನ್ ರೂಪಿಸಿದ್ದು, ₹27 ಸಾವಿರ ಕೋಟಿ ವೆಚ್ಚದಲ್ಲಿ ಬಿಬಿಸಿ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಇದರಿಂದ ಸಂಚಾರ ದಟ್ಟಣೆ ಕಡಿಮೆ ಆಗಲಿದೆ ಎಂದು ಅಭಿಪ್ರಾಯಪಟ್ಟರು.

‘ಈಗ ಉಪ ಮುಖ್ಯಮಂತ್ರಿಯಾಗಿ ಸಾವಿರ ದಿನ ಪೂರೈಸಿದ್ದೀರಿ. ಮುಂದಿನ ಸಾವಿರ ದಿನಗಳ ತಮ್ಮ ರಾಜಕೀಯ ಸ್ಥಾನಮಾನ ಏನು’ ಎಂಬ ಪ್ರಶ್ನೆಗೆ ಉತ್ತರಿಸಿದ ಶಿವಕುಮಾರ್, ‘ಮುಂದೆ ರಾಜಕೀಯ ಸ್ಥಾನಮಾನ ಏನು ಎಂಬುದನ್ನು ಕಾಲವೇ ಎಲ್ಲವನ್ನೂ ನಿರ್ಧರಿಸುತ್ತದೆ. ಈ ಬಗ್ಗೆ ಏನು ಹೇಳುವುದಿಲ್ಲ’ ಎಂದು ತಿಳಿಸಿದರು.

ಕೇಂದ್ರ ಸರ್ಕಾರವು ರಾಜ್ಯದ ಯಾವುದೇ ಯೋಜನೆಗಳಿಗೆ ನೆರವು ನೀಡುತ್ತಿಲ್ಲ. ಸಣ್ಣತಪ್ಪುಗಳಿಗೂ ರಾಜ್ಯ ಸರ್ಕಾರವನ್ನು ಟೀಕಿಸುವುದೇ ಕೆಲಸವಾಗಿದೆ. ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳನ್ನು ರಾಜ್ಯ ಸಂಪುಟ ಸಭೆಯಲ್ಲಿ ಚರ್ಚಿಸಿ, ಕಾರ್ಯಗತಗೊಳಿಸಲಾಗುತ್ತಿದೆ ಎಂದರು.

ಅಧ್ಯಯನ ಪ್ರಕಾರ ಇತರೆ ನಗರಗಳಿಗೆ ಹೋಲಿಸಿದರೆ ಬೆಂಗಳೂರು ನಗರ ಸುರಕ್ಷಿತವಾಗಿದೆ. ಇಲ್ಲಿನ ವಾತಾವರಣ, ಸಂಸ್ಕೃತಿ, ಶಿಕ್ಷಣ, ಆಹಾರ ಎಲ್ಲರಿಗೂ ಇಷ್ಟ. ಜಾಗತಿಕ ನಗರವಾಗಿ ಬೆಂಗಳೂರು ಗುರುತಿಸಿಕೊಂಡಿದ್ದು, ವಿಶ್ವದ ನಾಯಕರು ಮೊದಲು ಬೆಂಗಳೂರಿಗೆ ಭೇಟಿ ನೀಡಿ, ನಂತರ ಇತರೆ ನಗರಗಳಿಗೆ ಭೇಟಿ ನೀಡುತ್ತಿದ್ದಾರೆ ಎಂದು ತಿಳಿಸಿದರು.

‘ರಿಯಲ್ ಎಸ್ಟೇಟ್: ದತ್ತಾಂಶ ಕೇಂದ್ರಗಳಾಗಲಿ’

‘ಅಪಾರ್ಟ್‌ಮೆಂಟ್, ಬಡಾವಣೆಗಳನ್ನು ನಿರ್ಮಿಸುವವರು ಕೇವಲ ಗೋಡೆಗಳನ್ನು ಕಟ್ಟಬಾರದು. ಅವರು ನಗರದ ದತ್ತಾಂಶ ಸಂಗ್ರಹದ ಕೇಂದ್ರಗಳಾಗಬೇಕು. ಅಪಾರ್ಟ್‌ಮೆಂಟ್‌ಗಳಲ್ಲಿನ ನೀರು, ಇಂಧನದ ಬಳಕೆ ಮತ್ತು ಕಸ ವಿಲೇವಾರಿಯ ದತ್ತಾಂಶವನ್ನು ನಗರದ ಆಡಳಿತ ವ್ಯವಸ್ಥೆಯೊಂದಿಗೆ ಹಂಚಿಕೊಂಡಾಗ, ಸಂಪನ್ಮೂಲಗಳನ್ನು ಸರಿಯಾಗಿ ಹಂಚಿಕೆ ಮಾಡಲು ಸಾಧ್ಯವಾಗುತ್ತದೆ. ಇದು ರಿಯಲ್ ಎಸ್ಟೇಟ್‌ನ ಜವಾಬ್ದಾರಿಯಾಗಲಿ’ ಎಂದು ಪುರವಂಕರ ಸಂಸ್ಥೆಯ ನಿರ್ದೇಶಕಿ ಅಮಾಂಡ ಜಾಯ್ ಹೇಳಿದರು.

‘ನಾವು ಇಂದು ‘ಬೆಂಗಳೂರು–2040' ಬಗ್ಗೆ ಮಾತನಾಡುತ್ತಿದ್ದೇವೆ. ಅಂದರೆ ಭವಿಷ್ಯದ ನಗರದ ಮರುಕಲ್ಪನೆ. ನಾವು ಅಂದು ಇರುತ್ತೇವೆಯೇ ಎಂಬುದು ಪ್ರಶ್ನೆಯಲ್ಲ. ಬದಲಿಗೆ ಆಗ ನಗರ ಹೇಗಿರಬೇಕು ಎಂಬುದು ಪರಿಕಲ್ಪನೆಯಾಗಬೇಕು. ವಿವೇಚನೆಯಿಲ್ಲದ ನಗರದ ಬೆಳವಣಿಗೆ ಒತ್ತಡ ತರುತ್ತದೆ. ದೂರದೃಷ್ಟಿ ಇಲ್ಲದ ವೇಗವು ಅಸಮಾನತೆ ಸೃಷ್ಟಿಸುತ್ತದೆ. ನಗರದ ಅಭಿವೃದ್ಧಿ ಎಂದರೆ, ಇಟ್ಟಿಗೆ, ಗಾರೆ– ಸಿಮೆಂಟ್‌ನ ಕಟ್ಟಡಗಳಲ್ಲ. ಭವಿಷ್ಯದ ಬೆಂಗಳೂರನ್ನು ಎತ್ತರದ ಕಟ್ಟಡದಿಂದ ನೋಡಲಾಗುವುದಿಲ್ಲ. ಯುವ ಶಕ್ತಿ ಮತ್ತು ವೈವಿಧ್ಯ ಜನಸಮೂಹದ ಪಾತ್ರವನ್ನು ನಿರೀಕ್ಷಿಸಲಾಗುತ್ತಿದೆ. ರಾಷ್ಟ್ರೀಯ ಸರಾಸರಿಗಿಂತ ನಮ್ಮ ನಗರದಲ್ಲಿ ಯುವಕರು ಹೆಚ್ಚಿದ್ದಾರೆ. ಈ ನಗರವನ್ನು ಹಳೆಯ ಮೂಲಸೌಕರ್ಯ, ಹಳೆಯ ಆಲೋಚನೆಯಿಂದ ನಡೆಸಲು ಸಾಧ್ಯವಿಲ್ಲ. ‘ಉದ್ದೇಶಪೂರ್ವಕ ವಿನ್ಯಾಸ’, ಮಾನವ, ಕೃತಕ ಬುದ್ಧಿಮತ್ತೆ (ಎಐ) ಒಟ್ಟಾಗಿ ಆಡಳಿತ ವ್ಯವಸ್ಥೆ ರೂಪುಗೊಳ್ಳಬೇಕು’ ಎಂದು ಅಭಿಪ್ರಾಯಪಟ್ಟರು.

‘ತಂತ್ರಜ್ಞಾನ ಮಾನವೀಯತೆಗಿಂತ ದೊಡ್ಡದಲ್ಲ. ಎಐ ಒಂದು ಸಾಧನವಾಗಿರಬೇಕೇ ಹೊರತು ಹೊಣೆಗಾರಿಕೆಯನ್ನು ಮೀರಬಾರದು. ನಾವು ಜನರ ಖಾಸಗಿತನವನ್ನು ಗೌರವಿಸುವ ಮತ್ತು ಪಾರದರ್ಶಕ ವ್ಯವಸ್ಥೆಯನ್ನು ನಿರ್ಮಿಸಬೇಕು. ನಾಗರಿಕರು ನಂಬುವಂತಹ ವ್ಯವಸ್ಥೆಯನ್ನು ನಾವು ನಿರ್ಮಿಸದಿದ್ದರೆ, ನಾವು ಹೆಮ್ಮೆಪಡುವ ನಗರವನ್ನು ಕಟ್ಟಲು ಸಾಧ್ಯವಿಲ್ಲ’ ಎಂದರು.

ಅಮಂಡ ಜಾಯ್



ಅಶ್ವಿನ್ ಮಹೇಶ್, ಮಹೇಶ್ವರ್ ರಾವ್, ಮಲ್ಲಣ್ಣ ಸಾಸಲು ಅವರು ಸಂವಾದದಲ್ಲಿ ಭಾಗಿಯಾಗಿದ್ದರು

‘ಖಾಸಗಿ ಸಹಭಾಗಿತ್ವದಿಂದ ಮೂಲಸೌಕರ್ಯ ದುಬಾರಿ’

‘ಖಾಸಗಿ ಸಹಭಾಗಿತ್ವದಲ್ಲಿ ಅನುಷ್ಠಾನವಾಗುವ ಮೂಲ ಸೌಕರ್ಯಗಳು ನಾಗರಿಕರಿಗೆ ದುಬಾರಿಯಾಗುತ್ತದೆ. ಉದಾಹರಣೆಗೆ, ನೈಸ್ ರಸ್ತೆಯಲ್ಲಿ ನೀಡುವ ಶುಲ್ಕದಲ್ಲಿ ಬೆಳಗಾವಿಗೆ ತಲುಪಬಹುದು. ಅಂದರೆ, ಸರ್ಕಾರ ನಿರ್ಮಿಸಿರುವ ರಸ್ತೆಗಳಲ್ಲಿ ಶುಲ್ಕ ಕಡಿಮೆ ಇರುತ್ತದೆ. ಉದ್ಯಮಿಗಳು ಯಾವಾಗಲೂ ಲಾಭವನ್ನೇ ನೋಡುತ್ತಾರೆ. ಆದರೆ, ಸರ್ಕಾರಕ್ಕೆ ನಾಗರಿಕ ಸೌಲಭ್ಯದ ಜವಾಬ್ದಾರಿ ಇರುತ್ತದೆ. ಅದಕ್ಕೇ, ನಮ್ಮ ಮೆಟ್ರೊ ಇಂದಿಗೂ ಲಾಭ ಕಂಡಿಲ್ಲ. ಆದರೆ, ದೀರ್ಘಕಾಲದಲ್ಲಿ ಎಲ್ಲರಿಗೂ ಲಾಭದಾಯಕ. ಚೀನಾದ ಹೈ–ಸ್ಪೀಡ್ ರೈಲು ಸಂಪರ್ಕ ಜಾಲ ದಶಕಕ್ಕೂ ಹೆಚ್ಚು ಕಾಲ ನಿರ್ಮಾಣದ ಹಾದಿಯಲ್ಲಿದ್ದರೂ ದೇಶ ಆರ್ಥಿಕ ಪ್ರಗತಿ ಕಂಡಿದೆ. ಸಾರ್ವಜನಿಕ ಮೂಲಸೌಲಕರ್ಯಗಳನ್ನು ಲಾಭದ ದೃಷ್ಟಿಯಲ್ಲಿ ಅಳೆಯಬಾರದು. ಸರ್ಕಾರವೇ ಮೂಲಸೌಕರ್ಯಗಳನ್ನು ಅನುಷ್ಠಾನಗೊಳಿಸಬೇಕು’ ಎಂದು ಪುರವಂಕರ ಸಂಸ್ಥೆ ದಕ್ಷಿಣ ವಲಯದ ಸಿಇಒ ಮಲ್ಲಣ್ಣ ಸಾಸಲು ಅಭಿಪ್ರಾಯಪಟ್ಟರು.

‘ಬೆಂಗಳೂರು ನಿರ್ಮಾಣದ ರೂಪುರೇಷೆ’ ವಿಷಯವಾಗಿ ನಡೆದ ಸಂವಾದದಲ್ಲಿ ಅವರು ಮಾತನಾಡಿದರು.

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಮಾತನಾಡಿ, ‘ನಗರವು ಮೂಲಸೌಕರ್ಯದ ಬೆನ್ನಟ್ಟುವ ಸ್ಥಿತಿಯಲ್ಲಿದೆ. ನಗರದ ರಸ್ತೆ ವಿಸ್ತೀರ್ಣವು ಒಟ್ಟು ಭೂಪ್ರದೇಶದ ಶೇ 9ರಷ್ಟಿದೆ. ಆದರೆ ರಾಷ್ಟ್ರೀಯ ಸರಾಸರಿ ಶೇ 15ರಷ್ಟಿದೆ. ಮುಂದಿನ ದಶಕದಲ್ಲಿ ನಗರದಲ್ಲಿ ಐದು ದಶಲಕ್ಷ ಜನಸಂಖ್ಯೆ ಹೆಚ್ಚಾಗುವ ನಿರೀಕ್ಷೆಯಿದ್ದು, ರಸ್ತೆ ಜಾಲ ಮತ್ತು ಸಮೂಹ ಸಾರಿಗೆಯಲ್ಲಿ ಈಗ ಹೂಡಿಕೆ ಮಾಡುವುದು ಅನಿವಾರ್ಯವಾಗಿದೆ’ ಎಂದರು.

ನಗರ ಯೋಜನೆ ತಜ್ಞ ಅಶ್ವಿನ್ ಮಹೇಶ್ ಮಾತನಾಡಿ, ‘ಬೆಂಗಳೂರಿನಲ್ಲಿ ನೆಲೆಸಿರುವ ಮಧ್ಯಮ ವರ್ಗದ ಕುಟುಂಬಕ್ಕೆ ಕೈಗೆಟಕುವ ದರದಲ್ಲಿ ಮನೆಗಳನ್ನು ಒದಗಿಸದೆ, ನಗರದ ಅಭಿವೃದ್ಧಿ ಎಷ್ಟು ಮಾಡಿದರೂ ಏನು ಪ್ರಯೋಜನ? ನಗರದ ಅಭಿವೃದ್ಧಿಗೆ ಯಾವುದು ಒಳ್ಳೆಯದು ಎಂಬುದು ನಮಗೆ ತಿಳಿದಿದೆ. ಆದರೆ ಅದಕ್ಕೆ ನಾವು ವೇಗ ನೀಡುವುದಿಲ್ಲ. ಟೆಂಡರ್‌ಶ್ಯೂರ್ ರಸ್ತೆ ದಶಕದ ಹಿಂದೆ ನಿರ್ಮಾಣವಾಗಿ, ಅವು ಚೆನ್ನಾಗಿವೆ ಎಂಬುದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಅದರೆ, ಅಂತಹ ಯೋಜನೆಯತ್ತ ನಾವು ನಿಧಾನಗತಿಯಲ್ಲಿದ್ದೇವೆ’ ಎಂದು ಬೇಸರಿಸಿದರು.

ಜಾಗತಿಕ ಸಾಂಸ್ಕೃತಿಕ ರಾಜಧಾನಿ

ಅಂತರರಾಷ್ಟ್ರೀಯ ಮಟ್ಟದಲ್ಲಿ ನೆಲದ ಸಂಸ್ಕೃತಿಯನ್ನು ಕೊಂಡೊಯ್ದು, ಜಾಗತಿಕ ಸಾಂಸ್ಕೃತಿಕ ರಾಜಧಾನಿಯಾಗುವ ಎಲ್ಲ ಸಾಮರ್ಥ್ಯವೂ ಬೆಂಗಳೂರಿಗಿದೆ ಎಂದು ತಜ್ಞರು ಅಭಿಪ್ರಾಯಪಟ್ಟರು.

‘ಜಾಗತಿಕ ಸಾಂಸ್ಕೃತಿಕ ರಾಜಧಾನಿಯಾಗಿ ಬೆಂಗಳೂರಿನ ನಿರ್ಮಾಣ’ ವಿಷಯದ ಸಂವಾದದಲ್ಲಿ, ‘ನಗರದಲ್ಲಿ ಕಲಾ ಪ್ರದರ್ಶನ ಕೇಂದ್ರೀಕೃತವಾಗದೆ ವಿಕೇಂದ್ರೀಕೃತವಾಗಬೇಕು. ಅಪಾರ್ಟ್‌ಮೆಂಟ್, ವಿಮಾನ ನಿಲ್ದಾಣ, ಕಾಂಪ್ಲೆಕ್ಸ್‌ಗಳಲ್ಲಿ ಆಡಿಟೋರಿಯಂ, ಸಂಗೀತ ಶಾಲೆಯಂತಹ ಸೌಲಭ್ಯಗಳು ನಿರ್ಮಾಣವಾಗಬೇಕು. ಎಲ್ಲ ಭಾಗಗಳಲ್ಲೂ ಕಲಾ ಪ್ರದರ್ಶನಗಳು ಸತತವಾಗಿ ನಡೆಯಬೇಕು. ಪ್ರತಿ ದಿನವೂ ಕಲಾಪ್ರದರ್ಶನದ ಹಬ್ಬವಾಗಬೇಕು’ ಎಂದು ತಜ್ಞರು ಸಲಹೆ ನೀಡಿದರು. ಕಲಾ ಸಲಹೆಗಾರರಾದ ನಳಿನಿ ಮಾಳವಿಯ ಅವರು ಸಂವಾದ ನಿರ್ವಹಿಸಿದರು.

‘ತಂತ್ರಜ್ಞಾನ– ಸುಸ್ಥಿರತೆಯಲ್ಲಿ ಸಮತೋಲನ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು 2040ರ ವೇಳೆಗೆ ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡಬೇಕಾದರೆ, ತಂತ್ರಜ್ಞಾನ ಹಾಗೂ ಸುಸ್ಥಿರತೆಯಲ್ಲಿ ಸಮತೋಲನ ಕಾಪಾಡಿಕೊಂಡು ಸಾಗಬೇಕು’ ಎಂದು ಸರ್ಕಾರ ಮುಖ್ಯ ಕಾರ್ಯದರ್ಶಿ ಶಾಲಿನಿ ರಾಜನೀಶ್ ಅಭಿಪ್ರಾಯಪಟ್ಟರು.

‘ಡಿಎಚ್ ಬೆಂಗಳೂರು 2040 ಶೃಂಗ’ದ ಸಮಾರೋಪದಲ್ಲಿ ಮಾತನಾಡಿದ ಅವರು, ‘2040ರತ್ತ ಗಮನ ಹರಿಸಿದಾಗ, ಕೇವಲ ತಂತ್ರಜ್ಞಾನ ಮತ್ತು ನಾವೀನ್ಯತೆಯ ರಾಜಧಾನಿಯಾಗಿರದೆ ಸುಸ್ಥಿರತೆಯ ರಾಜಧಾನಿಯೂ ಆಗಿರಬೇಕು. ವಿಶ್ವಕ್ಕೆ ಪ್ರೇರಣೆಯಾಗುವಂತೆ ಹಸಿರು, ಸೌಂದರ್ಯ ಆಕರ್ಷಕ ನಗರವಾಗಿ ರೂಪಿಗೊಳಿಸಬೇಕಿದೆ’ ಎಂದು ಹೇಳಿದರು.

‘ಬಹುರಾಷ್ಟ್ರೀಯ ಕಂಪನಿಗಳು ಬೆಂಗಳೂರನ್ನು ಆವಿಷ್ಕಾರ, ಕ್ರಿಯಾಶೀಲತೆ, ಪ್ರತಿಭೆಗಳ ಕೇಂದ್ರವನ್ನಾಗಿ ಪರಿಗಣಿಸಿವೆ. ಕೌಶಲಯುತ ವೃತ್ತಿಪರರು, ಅತ್ಯುನ್ನತ ಮೂಲಸೌಕರ್ಯ, ಪ್ರಗತಿಪರ ನೀತಿಗಳೊಂದಿಗೆ ನಗರ, ಜಾಗತಿಕ ಕಾರ್ಯಾಚರಣೆಗೆ ಪ್ರಮುಖ ತಾಣವಾಗಿ ಪರಿವರ್ತನೆಯಾಗಿದೆ’ ಎಂದು ಹೇಳಿದರು.

ಶಾಲಿನಿ ರಜನೀಶ್

‘ಅಂಕಿ ಅಂಶದ ಪ್ರಕಾರ, ರಾಜ್ಯದ ಒಟ್ಟು ಆಂತರಿಕ ಒಟ್ಟು ಉತ್ಪಾದನೆಯಲ್ಲಿ (ಜಿಎಸ್‌ಡಿಪಿ) ಬೆಂಗಳೂರಿನ ಪಾಲು ಶೇಕಡ 40ರಷ್ಟು ಇದೆ. 2040ರ ವೇಳೆಗೆ ಶೇಕಡ 50ರಷ್ಟು ಹೆಚ್ಚಳ ಆಗುವ ನಿರೀಕ್ಷೆ ಇದೆ. ಬೆಂಗಳೂರು ಕೇವಲ ದೇಶದ ಸಿಲಿಕಾನ್ ವ್ಯಾಲಿ ಮಾತ್ರವಲ್ಲ, ವಿಶ್ವದ ಡೀಪ್‌ಟೆಕ್ ರಾಜಧಾನಿಯಾಗಿಯೂ ಬೆಳೆಯುತ್ತಿದೆ’ ಎಂದು ಹೇಳಿದರು.

‘ಭಾರತಕ್ಕೆ ನಿಯೋಜನೆಗೊಂಡಿರುವ ಅಮೆರಿಕ ರಾಯಭಾರಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಬೆಂಗಳೂರು ನಗರವನ್ನು ಶ್ಲಾಘಿಸಿದರು. ಇದು ಒಳ್ಳೆಯ ಬೆಳವಣಿಗೆ’ ಎಂದು ಶಾಲಿನಿ ಹೇಳಿದರು.

ಮೇ ಅಂತ್ಯದೊಳಗೆ ಪಾಲಿಕೆ ಚುನಾವಣೆ

ಒಂದನೇ ಪುಟದಿಂದ...

‘ಸುರಂಗ ರಸ್ತೆ ಪರಿಕಲ್ಪನೆ ಬಹಳದ ಹಿಂದಿನಿಂದಲೂ ಇದೆ. ಇದರ ಬಗ್ಗೆ ತಿಳಿಯದವರು ಟೀಕೆ ಮಾಡುತ್ತಿದ್ದಾರಷ್ಟೇ. ನಗರದಲ್ಲಿ ಕೈಗೊಳ್ಳುತ್ತಿರುವ ಸುರಂಗ ರಸ್ತೆ ನಿರ್ಮಾಣಕ್ಕೆ 20 ಮಂದಿ ಬಿಡ್ ಸಲ್ಲಿಸಿದ್ದು, ಇದಕ್ಕೆ ₹20 ಸಾವಿರ ಕೋಟಿ ಬಂಡವಾಳ ಹೂಡಬೇಕಾಗಿದೆ. ಸುರಂಗ ರಸ್ತೆ ಸಮಿತಿ ಈ ಬಗ್ಗೆ ಮಾತುಕತೆ ನಡೆಸುತ್ತಿದೆ’ ಎಂದು ಡಿ.ಕೆ.ಶಿವಕುಮಾರ್ ವಿವರಿಸಿದರು.

ನಗರದಾದ್ಯಂತ ಇದುವರೆಗೂ 25 ಲಕ್ಷ ಆಸ್ತಿಗಳನ್ನು ಡಿಜಿಟಲೀಕರಣ ಮಾಡಲಾಗಿದೆ. ಇನ್ನೂ 14 ಲಕ್ಷ ಆಸ್ತಿ ಬಾಕಿ ಇದೆ. 9 ಲಕ್ಷ ಇ–ಖಾತಾಗಳನ್ನು ಜನರಿಗೆ ಹಂಚಿಕೆ ಮಾಡಲಾಗಿದೆ. ಉಚಿತವಾಗಿ, ಇ–ಖಾತಾ ಅಭಿಯಾನ ಪ್ರಾರಂಭ ಮಾಡಲು ಸೂಚನೆ ನೀಡಲಾಗಿದೆ. ಪ್ರಸ್ತುತ ₹6 ಸಾವಿರ ಕೋಟಿ ತೆರಿಗೆ ಸಂಗ್ರಹಿಸಲಾಗಿದ್ದು, ₹10 ಸಾವಿರ ಕೋಟಿ ಸಂಗ್ರಹಿಸುವ ಗುರಿ ಇದೆ ಎಂದರು.

ಈ ಹಿಂದೆ ಕೃಷಿ ಭೂಮಿ ಡಿಜಿಟಲೀಕರಣಕ್ಕೆ ಭೂಮಿ ಯೋಜನೆ ತರಲಾಗಿತ್ತು. ನಮ್ಮ ಬೆಂಗಳೂರಿನ ಎಲ್ಲಾ ಆಸ್ತಿ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಇ–ಖಾತೆ ವ್ಯವಸ್ಥೆ ತರಲು ಉದ್ದೇಶಿಸಿದ್ದೇವೆ. ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಕಾವೇರಿ ಸಾಫ್ಟ್‌ವೇರ್‌ನಲ್ಲಿ ದಾಖಲೆಗಳು ಆಧಾರ್ ಜೊತೆ ಲಿಂಕ್ ಮಾಡುವ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಸರ್ಕಾರಕ್ಕೆ ಅಧಿಕಾರಕ್ಕೆ ಬಂದಾಗಿನಿಂದ ಕೈಗೊಂಡಿರುವ ಕಾರ್ಯಕ್ರಮಗಳು, ಯೋಜನೆಗಳು ಹಾಗೂ ಭವಿಷ್ಯದ ಕಾರ್ಯಕ್ರಮಗಳ ಬಗ್ಗೆ ವಿವರವಾಗಿ ಮಾತನಾಡಿದರು.

‘ಡೆಕ್ಕನ್ ಹೆರಾಲ್ಡ್’ನ ಪೊಲಿಟಿಕಲ್ ಬ್ಯುರೋ ಮುಖ್ಯಸ್ಥ ಭರತ್ ಜೋಷಿ ಸಂವಾದ ನಡೆಸಿಕೊಟ್ಟರು. ದಿ ಪ್ರಿಂಟರ್ಸ್ (ಮೈಸೂರು) ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್‌ಕುಮಾರ್, ನಿರ್ದೇಶಕ ಕೆ.ಎನ್. ಶಾಂತಕುಮಾರ್, ನಿರ್ದೇಶಕಿ ಕೆ.ಟಿ. ಸೌಭಾಗ್ಯಲಕ್ಷ್ಮಿ, ಮುಖ್ಯ ಕಾರ್ಯಾಚರಣೆ ಅಧಿಕಾರಿ ಕಿರಣ್ ಸುಂದರ್‌ರಾಜನ್, ‘ಡೆಕ್ಕನ್ ಹೆರಾಲ್ಡ್’ ಕಾರ್ಯನಿರ್ವಾಹಕ ಸಂಪಾದಕ ಕೆ.ವಿ. ಸುಬ್ರಹ್ಮಣ್ಯ, ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಉಪಸ್ಥಿತರಿದ್ದರು.

ಯಾರು ಏನೆಂದರು?

ಆನ್‌ಲೈನ್ ವರ್ಚ್ಯುಯಲ್ ಗ್ಯಾಲರಿ ಮೂಲಕ ಅಂತರರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಕಲಾವಿದರ ಕಲಾಪ್ರದರ್ಶನವಾಗುತ್ತಿದೆ. ಮುಂದಿನ 20 ವರ್ಷವನ್ನು ದೃಷ್ಟಿಯಲ್ಲಿಟ್ಟುಕೊಂಡು ‘ನಮ್ಮ ಕಲಾ ಉತ್ಸವ’ವನ್ನು ಉನ್ನತಮಟ್ಟಕ್ಕೆ ಕೊಂಡೊಯ್ಯಲಾಗುತ್ತಿದೆ

ಬಿ.ಎಲ್. ಶಂಕರ್, ಚಿತ್ರಕಲಾ ಪರಿಷತ್

ನಮ್ಮ ಯುವ ಕಲಾವಿದರತ್ತ ಹೆಚ್ಚು ಗಮನ ಕೇಂದ್ರೀಕೃತವಾಗಬೇಕು. ನಮ್ಮಲ್ಲಿ ಸಮೃದ್ಧಿ ಕಲಾ ಮಾದರಿಗಳಿವೆ. ಮೂಲಸೌಕರ್ಯವೂ ಉತ್ತಮಗೊಳ್ಳುತ್ತಿದೆ. ಚರ್ಚ್ ಸ್ಟ್ರೀಟ್‌ನಂತೆ, ಸಂಚಾರಕ್ಕೆ ಅಡ್ಡಿಯಾಗದಂತೆ ಪ್ರತಿ ರಸ್ತೆಯಲ್ಲೂ ಕಲಾ ಪ್ರದರ್ಶನವಾಗಬೇಕು. ಕ್ರಿಯಾಶೀಲ ನಾಗರಿಕರು ಸರ್ಕಾರದಿಂದ ಕೆಲಸ ತೆಗೆದುಕೊಳ್ಳುತ್ತಾರೆ

ಉಮಾ ಮಹದೇವನ್, ಅಭಿವೃದ್ಧಿ ಆಯುಕ್ತೆ

ನಗರ ಸಾಂಸ್ಕೃತಿಕ ತಾಣವಾಗಲು, ನಾಗರಿಕರಲ್ಲಿ ಹವ್ಯಾಸವನ್ನು ಸೃಷ್ಟಿಸಬೇಕು. ಸುಗಮವಾಗಿ ತಲುಪಬಹುದಾದ ಪ್ರದರ್ಶನ ತಾಣಗಳು ನಿರ್ಮಾಣವಾಗಬೇಕು. ವಿಮಾನ ನಿಲ್ದಾಣ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಕಲಾ ಪ್ರದರ್ಶನವಾಗಬೇಕು

ಅಭಿಷೇಕ್ ಪೊದ್ದಾರ್,
ಸಂಸ್ಥಾಪಕ, ಮ್ಯೂಸಿಯಂ ಆಫ್ ಆರ್ಟ್ ಆ್ಯಂಡ್ ಫೋಟೊಗ್ರಫಿ

‘ಪತ್ರಿಕೆ ಜತೆ ಭಾವನಾತ್ಮಕ ಸಂಬಂಧ’

‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಕೇವಲ ಪತ್ರಿಕೆ ಮಾತ್ರವಲ್ಲ. ಅವುಗಳ ಜತೆ ಭಾವನಾತ್ಮಕ ಸಂಬಂಧ ಹೊಂದಿದ್ದೇನೆ. ನಿತ್ಯ ನನ್ನ ಮನೆಗೆ ಹದಿನೈದು ಪತ್ರಿಕೆಗಳು ಬರುತ್ತವೆ. ಎಲ್ಲವನ್ನೂ ಒಮ್ಮೆ ಕಣ್ಣಾಡಿಸಿ ಪಕ್ಕಕ್ಕಿಟ್ಟು, ನಿಮ್ಮ ಸಮೂಹದ ಪತ್ರಿಕೆಗಳ ಸಂಪಾದಕೀಯವನ್ನು ತಪ್ಪದೇ ಓದುತ್ತೇನೆ’ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

‘ಟೀಕೆಗಳು ರಚನಾತ್ಮಕವಾಗಿರಬೇಕು, ರಾಜಕೀಯ ಕಾರಣಕ್ಕೆ ಟೀಕೆ ಸಲ್ಲದು. ಟೀಕೆಗಳು ಮತ್ತು ಶತ್ರುಗಳು ಇದ್ದರೆ ಉತ್ತಮ ಕೆಲಸ ಮಾಡಲು ಸಾಧ್ಯ. ಮಾಧ್ಯಮಗಳು ತಪ್ಪುಗಳನ್ನು ಗುರುತಿಸಿ ಹೇಳಿದರೆ ತಿದ್ದಿಕೊಳ್ಳುತ್ತೇವೆ ಮತ್ತು ಸಕಾರಾತ್ಮಕವಾಗಿ ಸ್ವೀಕರಿಸುತ್ತೇನೆ. ಟೀಕೆಗಳು ಮತ್ತು ಶತ್ರುಗಳು ಇರದಿದ್ದರೆ ಯಾವುದೇ ಕೆಲಸ ಆಗುವುದಿಲ್ಲ. ರಾಜ್ಯದ ಮಾಧ್ಯಮಗಳಿಗೆ ಮುಕ್ತ ಸ್ವಾತಂತ್ರ್ಯ ನೀಡಲಾಗಿದೆ’ ಎಂದರು.

Khadi India
ರಾಷ್ಟ್ರೀಯ ಮಟ್ಟದ ಖಾದಿ ಪ್ರದರ್ಶನ ಮತ್ತು ಮಾರಾಟ
KHADI MAHOTSAV 2026
5% ಗಳ ವಿಶೇಷ ರಿಯಾಯತಿಯನ್ನು ನೀಡಲಾಗುತ್ತಿದೆ
ಖಾದಿ ಉತ್ಪನ್ನಗಳನ್ನು ಖರೀದಿಸಿ ಹಾಗೂ ನೇಕಾರರನ್ನು ಪ್ರೋತ್ಸಾಹಿಸಿ
NATIONAL LEVEL KHADI EXHIBITION
ಸ್ಥಳ : ಎಚ್.ಎಂ.ಟಿ. ಮೈದಾನ, ಎಚ್.ಎಂ.ಟಿ. ಸಿನಿಮಾಸ್ ಎದುರು, ಎಚ್.ಎಂ.ಟಿ. ಟೌನ್‌ಶಿಪ್, ಜಾಲಹಳ್ಳಿ, ಬೆಂಗಳೂರು - 560 013
HMT Ground, Opp. HMT Cinemas, HMT Township, Jalahalli, Bengaluru - 560 013
(22/01/2026 to 22/02/2026)
ಸಮಯ: ಬೆಳಿಗ್ಗೆ 10.00 ರಿಂದ ರಾತ್ರಿ 9.00ರವರೆಗೆ
Avail Special discount upto 35% on Cotton Khadi, Woolen Khadi & Polyvastra and upto 20 % on Silk Khadi
ರಾಜ್ಯದ ಎಲ್ಲಾ ಸರ್ಕಾರಿ ನೌಕರರು ರಾಷ್ಟ್ರೀಯ ಮಟ್ಟದ ಖಾದಿ ವಸ್ತು ಪ್ರದರ್ಶನ ಮಾರಾಟ ಮೇಳಕ್ಕೆ ಭೇಟಿ ನೀಡಿ, ಸರ್ಕಾರದ ಆದೇಶದಂತೆ ಖಾದಿ ಉತ್ಪನ್ನಗಳನ್ನು ಖರೀದಿಸಲು ಸುವರ್ಣಾವಕಾಶ
ಉಚಿತ ಪ್ರವೇಶ
VOCAL FOR LOCAL
For more info. scan here
ಕಲಾ ಪ್ರವಾಹ ಅಕಾಡೆಮಿ ಆಫ್ ಫೈನ್ ಆರ್ಟ್ ಸಂಸ್ಥೆಯ ಶ್ರೀಮತಿ ಸ್ಮಿತ ರಘುನಾಥ್ ಮತ್ತು ತಂಡದವರಿಂದ ದಿನಾಂಕ: 21.02.2026ರ ಶನಿವಾರ ಸಂಜೆ 7ಕ್ಕೆ ಭರತನಾಟ್ಯ ಪ್ರದರ್ಶನ ಏರ್ಪಡಿಸಲಾಗಿದೆ.
ಕಡೆಯ ಎರಡು ದಿನಗಳು ಮಾತ್ರ | Last Two Days only

‘ವಸತಿ ಶಿಕ್ಷಣ ಸಂಸ್ಥೆ ಸಂಘದಲ್ಲಿ ಅಕ್ರಮ’

ಕೆಆರ್‌ಎಸ್ ಪಕ್ಷ ಆರೋಪ • ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ

ಪ್ರಮುಖ ಅಂಶಗಳು

- ‘ಭ್ರಷ್ಟರ ಪಾಲಿನ ಕಲ್ಪವೃಕ್ಷವಾಗಿ ಮಾರ್ಪಟ್ಟ ಇಲಾಖೆ’
- ‘ಸಾವಿರಾರು ಕೋಟಿ ರೂಪಾಯಿ ಭ್ರಷ್ಟರ ಪಾಲು’
- ತನಿಖೆ ನಡೆಸಿ ಕಠಿಣ ಕ್ರಮ ಕೈಗೊಳ್ಳಲು ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆ ಅಧೀನದಲ್ಲಿ ಬರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ (ಕೆಆರ್‌ಇಐಎಸ್) ಭ್ರಷ್ಟಾಚಾರ ನಡೆಯುತ್ತಿದೆ ಎಂದು ಆರೋಪಿಸಿ, ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

‘ಅತಿಹೆಚ್ಚು ಅನುದಾನ ಬಿಡುಗಡೆ ಆಗುತ್ತಿರುವ ಇಲಾಖೆಗಳ ಪೈಕಿ ಸಮಾಜ ಕಲ್ಯಾಣ ಇಲಾಖೆಯೂ ಒಂದು. ಅದು ಭ್ರಷ್ಟರ ಪಾಲಿನ ಕಲ್ಪವೃಕ್ಷವಾಗಿ ಮಾರ್ಪಟ್ಟಿದೆ. ಹಿಂದುಳಿದ ವರ್ಗಗಳ ಉದ್ಧಾರಕ್ಕಾಗಿ ಇರುವ ಇಲಾಖೆಯೇ ಸಂಪೂರ್ಣವಾಗಿ ಭ್ರಷ್ಟಾಚಾರದಲ್ಲಿ ಮುಳುಗಿರುವ ಪರಿಣಾಮ ಪ್ರತಿ ವರ್ಷ ಸಾವಿರಾರು ಕೋಟಿ ರೂಪಾಯಿ ಭ್ರಷ್ಟರ ಪಾಲಾಗುತ್ತಿದೆ’ ಎಂದು ಪಕ್ಷದ ರಾಜ್ಯ ಜಂಟಿ ಕಾರ್ಯದರ್ಶಿ ಎಲ್‌. ಜೀವನ್ ಆರೋಪಿಸಿದರು.

ಪಕ್ಷದ ಕಾರ್ಯಾಧ್ಯಕ್ಷ ರಘು ಜಾಣಗೆರೆ ಮಾತನಾಡಿ, ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಭ್ರಷ್ಟಾಚಾರ ನಡೆಯುತ್ತಿದ್ದು, ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

‘ಹಿಂದುಳಿದ ವರ್ಗಗಳ ಬಡ ಮಕ್ಕಳಿಗೆ ಅನ್ನ, ಶಿಕ್ಷಣ ನೀಡುವ ಉದ್ದೇಶದಿಂದ ಸ್ಥಾಪಿತವಾದ ಕೆಆರ್‌ಇಐಎಸ್ ಸಂಸ್ಥೆಯಲ್ಲಿನ ಕೆಲವು ಅಧಿಕಾರಿಗಳು ಲೂಟಿಗೆ ಇಳಿದಿದ್ದಾರೆ. ಶಾಲೆಗಳಿಗೆ ಸರಬರಾಜು ಮಾಡುತ್ತಿರುವ ಸಾಮಗ್ರಿಗಳ ಖರೀದಿಯಲ್ಲಿ ಅವ್ಯವಹಾರ ನಡೆಯುತ್ತಿದ್ದು, ₹20 ಸಾವಿರ ಬೆಲೆಯ ಅಡುಗೆ ಪಾತ್ರೆಗೆ ₹2 ಲಕ್ಷ, ₹1.5 ಲಕ್ಷ ಮೌಲ್ಯದ ಸ್ಮಾರ್ಟ್ ಬೋರ್ಡ್‌ಗೆ ₹5 ಲಕ್ಷ, ವಿಳಾಸವಿಲ್ಲದ ಪತ್ರಿಕೆಗೆ ಲಕ್ಷಾಂತರ ರೂಪಾಯಿ ವ್ಯಯಿಸಲಾಗಿದೆ. ₹1 ಸಾವಿರ ಮೌಲ್ಯದ ಪ್ರಥಮ ಚಿಕಿತ್ಸಾ ಪೆಟ್ಟಿಗೆಗೆ ₹10 ಸಾವಿರ ಬಿಡುಗಡೆ ಮಾಡಲಾಗಿದೆ. ದಿನಸಿ ವಸ್ತುಗಳನ್ನು ಮಾರುಕಟ್ಟೆ ಬೆಲೆಗೆ ಮೀರಿ ಖರೀದಿಸಲಾಗುತ್ತಿದೆ. ಬಡ ಮಕ್ಕಳ ಊಟದ ತಟ್ಟೆಯಲ್ಲಿ ಭ್ರಷ್ಟರು ಕೈ ಹಾಕಿರುವುದು ಅಮಾನುಷವಾದ ಕೃತ್ಯ’ ಎಂದರು.

ಪ್ರತಿಭಟನೆಯಲ್ಲಿ ರಾಜ್ಯ ಉಪಾಧ್ಯಕ್ಷ ಮಂಜುನಾಥ ಎಸ್., ರಾಜ್ಯ ಪ್ರಧಾನ ಕಾರ್ಯದರ್ಶಿ ರಘುಪತಿ ಭಟ್, ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ರಘುನಂದನ, ರಮೇಶ್ ಗೌಡ, ಸೋಣಪ್ಪ ಗೌಡ, ಆನಂದ್, ಹಬೀಬ್, ಎಸ್‌ಸಿ-ಎಸ್‌ಟಿ ಘಟಕದ ಅಧ್ಯಕ್ಷ ಪಿ.ವೈ. ಗಣೇಶ್, ಯುವ ಘಟಕದ ಅಧ್ಯಕ್ಷ ನಿಖಿಲ್, ಪದಾಧಿಕಾರಿಗಳಾದ ಅಮಿತ್, ಅವಿನಾಶ್, ಧನಂಜಯ, ದೇವರಾಜ್, ಶ್ರೀನಿವಾಸನ್, ರೇಖಾ ಭಾಗವಹಿಸಿದ್ದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು

ಎಂ.ಎಸ್‌.ರಾಮಯ್ಯ ಆಸ್ಪತ್ರೆ ಅಸ್ಥಿಮಜ್ಜೆ ಕಸಿಗೆ ಅವಕಾಶ

ಬೆಂಗಳೂರು: ಎಂ.ಎಸ್‌.ಆರ್ ನಗರದಲ್ಲಿರುವ ಎಂ.ಎಸ್‌. ರಾಮಯ್ಯ ಸ್ಮಾರಕ ಆಸ್ಪತ್ರೆಗೆ ಅಸ್ಥಿಮಜ್ಜೆ ಕಸಿಗೆ ಅವಕಾಶ ನೀಡಿ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಮಾನವ ಅಂಗಾಂಗ ದಾನ ಕಸಿ ಕಾಯ್ದೆ 1994ರ ಅಡಿ ಐದು ವರ್ಷಗಳ ಅವಧಿಗೆ ಇಲಾಖೆ ಅನುಮತಿ ನೀಡಿದೆ. ರಾಜ್ಯ ಮಟ್ಟದಲ್ಲಿ ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆಯ (ಸೊಟ್ಟೊ) ಉಪ ನಿರ್ದೇಶಕ ಡಾ. ಅರುಣ್ ಕುಮಾರ್ ಡಿ.ಪಿ., ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಕ್ಲಿನಿಕಲ್ ಹೆಮಾಟಲಜಿ ವಿಭಾಗದ ಮುಖ್ಯಸ್ಥೆ ಮೀರಾ ವಿ. ಮತ್ತು ವಿಧಿವಿಜ್ಞಾನ ಔಷಧ ವಿಭಾಗದ ಮುಖ್ಯಸ್ಥ ಡಾ. ವೆಂಕಟ ರಾಘವ್ ಅವರನ್ನು ಒಳಗೊಂಡ ತಂಡ ಜ.24ರಂದು ಆಸ್ಪತ್ರೆಗೆ ಭೇಟಿ ನೀಡಿತ್ತು.

ಆಸ್ಪತ್ರೆಯ ಮೂಲಸೌಕರ್ಯ, ಶಸ್ತ್ರಚಿಕಿತ್ಸಾ ಕೊಠಡಿ, ವೈದ್ಯಕೀಯ ಉಪಕರಣ, ಪ್ರಯೋಗಾಲಯ, ತೀವ್ರ ನಿಗಾ ಘಟಕ ಸೇರಿ ವಿವಿಧ ವ್ಯವಸ್ಥೆಯನ್ನು ಪರಿಶೀಲಿಸಿ, ಅಸ್ಥಿಮಜ್ಜೆ ಕಸಿಗೆ ಅವಕಾಶ ನೀಡಲು ಶಿಫಾರಸು ಮಾಡಿತ್ತು. ಈ ನಿಟ್ಟಿನಲ್ಲಿ ಅವಕಾಶ ನೀಡಲಾಗಿದೆ ಎಂದು ಆದೇಶದಲ್ಲಿ ಹೇಳಲಾಗಿದೆ.

₹66 ಲಕ್ಷ ಮೌಲ್ಯದ ಗಾಂಜಾ ಜಪ್ತಿ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬ್ಯಾಂಕಾಕ್‌ನಿಂದ ಬಂದ ಇಬ್ಬರು ಪ್ರಯಾಣಿಕರಿಂದ ₹66.5 ಲಕ್ಷ ಮೌಲ್ಯದ ಹೈಡ್ರೊಪೋನಿಕ್ ಗಾಂಜಾವನ್ನು ಬೆಂಗಳೂರು ಕಸ್ಟಮ್ಸ್ ಅಧಿಕಾರಿಗಳು ಗುರುವಾರ ರಾತ್ರಿ ಜಪ್ತಿ ಮಾಡಿದ್ದಾರೆ.

ಇಬ್ಬರು ಪ್ರಯಾಣಿಕರನ್ನು ಬಂಧಿಸಲಾಗಿದೆ. ಅವರ ವಿರುದ್ಧ ಮಾದಕ ವಸ್ತುಗಳ ನಿಯಂತ್ರಣ ಕಾಯ್ದೆಯಡಿ (ಎನ್‌ಡಿಪಿಎಸ್) ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

DH DECCAN HERALD ಪ್ರಜಾವಾಣಿ

ಉಪಯೋಗಿಸಿದ ಕಾರುಗಳು ಮಾರಾಟಕ್ಕಿವೆ

ನಮ್ಮ ಕಂಪನಿಯ ಕೆಳಕಂಡ ವಾಹನಗಳು
“ಎಲ್ಲಿ ಹೇಗಿವೆಯೋ ಹಾಗಿನ ಸ್ಥಿತಿಯಲ್ಲಿ” ಮಾರಾಟಕ್ಕಿವೆ.

Vehicle Name:	Seater	Vehicle Number	Year of Model
VOLKSWAGEN VENTO 1.2 TSI	05	KA 03 MX 5611	2016
SKODA SUPERB L&K 1.8 TSI	05	KA 03 NC 4772	2018
SWIFT DZIRE VDI	05	KA 03 MV 5642	2015
HONDA CITY 1.5 V MT	05	KA 03 MQ 1109	2012

ಮೇಲ್ಕಂಡ ವಾಹನವನ್ನು ನಂ. 75, ಎಂ.ಜಿ.ರಸ್ತೆ, ಬೆಂಗಳೂರು-1, ಇಲ್ಲಿ ಕೆಲಸದ ಯಾವುದೇ ದಿನದಂದು ಬೆಳಿಗ್ಗೆ 10.00 ರಿಂದ ಸಂಜೆ 4.00 ಗಂಟೆವರೆಗೆ ಪರಿಶೀಲಿಸಬಹುದು. ಮೊಹರಾದ ಲಕೋಟೆಯಲ್ಲಿ ಆಫರುಗಳ ಜೊತೆಗೆ ರೂ. 5,000/-ಗಳನ್ನು ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಇವರ ಹೆಸರಿನಲ್ಲಿ ಪಡೆದ ಡಿ.ಡಿ. ರೂಪದಲ್ಲಿ ಸಲ್ಲಿಸಬೇಕು. ದಿನಾಂಕ: 27.02.2026 ರಂದು ಅಥವಾ ಇದಕ್ಕಿಂತ ಮುಂಚಿತವಾಗಿ ಕೆಳಗೆ ತಿಳಿಸುವವರಿಗೆ ಸಲ್ಲಿಸತಕ್ಕದ್ದು.

ಯಾವುದೇ ಕಾರಣ ನೀಡದೇ ಆಫರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಂಪನಿ ಕಾಯ್ದಿರಿಸಿಕೊಂಡಿದೆ.

ಸಂಪರ್ಕಿಸ ಬೇಕಾದ ವ್ಯಕ್ತಿ: ದಿನೇಶ್ ಕುಮಾರ್.ಡಿ. – ಮೊಬೈಲ್: +91 7411127118

The Printers (Mysore) Pvt. Ltd.,
#75, M.G. Road, Bangalore -560001. Ph: +91 8045557342

ನಗರದ ಚಾಮರಾಜಪೇಟೆ ಕೋಟೆ ಪ್ರೌಢಶಾಲೆ ಮೈದಾನದಲ್ಲಿ ಶ್ರೀರಾಮ ಸೇವಾ ಮಂಡಳಿಯ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ವತಿಯಿಂದ '88ನೇ ಶ್ರೀರಾಮನವಮಿ ಸಂಗೀತೋತ್ಸವ'ದ ಪೆಂಡಾಲ್ ನಿರ್ಮಾಣದ ಭೂಮಿ ಪೂಜೆಯಲ್ಲಿ ಸುಬ್ಬನರಸಿಂಹ, ಶಿವಶೈಲಂ, ಗೋಪಾಲ್ ಹೊಸೂರು, ಸಿ.ಎಸ್ ಕೇದಾರ್, ಎಸ್.ಎನ್ ವರದರಾಜ್ ಮತ್ತು ಎಸ್.ವಿ. ಅಭಿಜಿತ್ ಇದ್ದರು ಪ್ರಜಾವಾಣಿ ಚಿತ್ರ

ಸಂಚಾರ: ನೆದರ್ಲೆಂಡ್ಸ್ ಪ್ರಧಾನಿಗೆ ಮಾಹಿತಿ

ಸಂಚಾರ ಪೊಲೀಸ್ ವಸ್ತು ಸಂಗ್ರಹಾಲಯ, ಅನುಭವ ಕೇಂದ್ರಕ್ಕೆ ಡಿಕ್ ಶೂಫ್ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್‌ಫೆಂಟ್ರಿ ರಸ್ತೆಯ ಸಂಚಾರ ನಿರ್ವಹಣೆ ಕೇಂದ್ರದ ಮೊದಲ ಮಹಡಿಯಲ್ಲಿ ಸ್ಥಾಪಿಸಲಾಗಿರುವ 'ಸಂಚಾರ ಪೊಲೀಸ್ ವಸ್ತು ಸಂಗ್ರಹಾಲಯ ಹಾಗೂ ಅನುಭವ ಕೇಂದ್ರಕ್ಕೆ' ನೆದರ್ಲೆಂಡ್ಸ್ ಪ್ರಧಾನಿ ಡಿಕ್ ಶೂಫ್ ಅವರು ಶುಕ್ರವಾರ ಭೇಟಿ ನೀಡಿ ವೀಕ್ಷಿಸಿದರು.

ಇದಕ್ಕೂ ಮುನ್ನ ಬೆಂಗಳೂರು ಸಂಚಾರ ನಿರ್ವಹಣೆ ವ್ಯವಸ್ಥೆಯ ಬಗ್ಗೆ ರಾಜ್ಯ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ, ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಹಾಗೂ ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್ ರೆಡ್ಡಿ ಅವರು ಡಿಕ್ ಶೂಫ್ ಅವರನ್ನು ಸ್ವಾಗತಿಸಿ, ಬೆಂಗಳೂರಿನಲ್ಲಿ ಸಂಚಾರ ನಿರ್ವಹಣೆಗೆ ಇಲಾಖೆ ಕೈಗೊಂಡಿರುವ ಕ್ರಮಗಳ ಕುರಿತು ಮಾಹಿತಿ ನೀಡಿದರು.

ಸಂಚಾರ ದಟ್ಟಣೆ ನಿಯಂತ್ರಣ, ವಾಹನಗಳ ಸುಗಮ ಸಂಚಾರ ವ್ಯವಸ್ಥೆಗೆ ಕೈಗೊಂಡಿರುವ ಕ್ರಮಗಳು, ರಸ್ತೆ ಸುರಕ್ಷತೆ, ತಂತ್ರಜ್ಞಾನ ಆಧಾರಿತ ವ್ಯವಸ್ಥೆ, ಸಿಗ್ನಲ್‌ಗಳಲ್ಲಿ ಅಳವಡಿಸಿರುವ ಕೃತಕ ಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನ, ಎ.ಐ ಆಧಾರಿತ ನಿಗಾ ವ್ಯವಸ್ಥೆ, 'ಏಕೀಕೃತ ಕಮಾಂಡ್ ಹಾಗೂ ಕಂಟ್ರೋಲ್' ಕಾರ್ಯಾಚರಣೆಯ ಕುರಿತು ಪ್ರಧಾನಿ ಅವರಿಗೆ ಮಾಹಿತಿ ನೀಡಲಾಯಿತು ಎಂದು ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್‌ರೆಡ್ಡಿ ಮಾಹಿತಿ ನೀಡಿದರು.

ಬೆಂಗಳೂರಿನ ಸಂಚಾರ ಪೊಲೀಸ್ ವ್ಯವಸ್ಥೆ ರೂಪುಗೊಂಡಿದ್ದು ಹೇಗೆ? ಆರಂಭಿಕ ದಿನಗಳಲ್ಲಿ ಸಂಚಾರ ಪೊಲೀಸರು ಹೇಗೆ ಕಾರ್ಯ ನಿರ್ವಹಿಸುತ್ತಿದ್ದರು? ಪೊಲೀಸ್ ಸಮವಸ್ತ್ರ ಹೇಗಿತ್ತು? ಹಿಂದೆ ಜಂಕ್ಷನ್‌ಗಳು, ಟ್ರಾಫಿಕ್ ಸಿಗ್ನಲ್‌ಗಳು ಹೇಗೆ ಕಾರ್ಯ ನಿರ್ವಹಣೆ ಮಾಡುತ್ತಿದ್ದವು ಎಂಬ ಛಾಯಾಚಿತ್ರಗಳು ವಸ್ತು ಸಂಗ್ರಹಾಲಯ ಹಾಗೂ ಅನುಭವ ಕೇಂದ್ರದಲ್ಲಿದ್ದು ಅವುಗಳನ್ನು ಡಿಕ್ ಶೂಫ್ ಅವರು ವೀಕ್ಷಿಸಿದರು.

ಜಂಕ್ಷನ್‌ಗಳಲ್ಲಿ ಪೊಲೀಸರು ತಮ್ಮ ಕೈಗಳನ್ನು ಬಳಸಿ ವಾಹನ ದಟ್ಟಣೆ ನಿಯಂತ್ರಣ ಮಾಡುತ್ತಿದ್ದ ಛಾಯಾಚಿತ್ರಗಳಿಂದ ಹಿಡಿದು ಈವರೆಗಿನ ಕೃತಕ ಬುದ್ಧಿಮತ್ತೆ(ಎ.ಐ) ಕ್ಯಾಮೆರಾಗಳವರೆಗಿನ ಚಿತ್ರಗಳು ಸಂಗ್ರಹಾಲಯದಲ್ಲಿ ಇವೆ. ಪ್ರಾರಂಭದ ದಿನಗಳಲ್ಲಿ ಸಂಚಾರ ಪೊಲೀಸರು, ನಗರದ ಪ್ರಮುಖ ಜಂಕ್ಷನ್‌ಗಳಲ್ಲಿ ಎಂದು ಅಡಿ ಎತ್ತರದ ಪೀಠದ ಮೇಲೆ ನಿಂತು ಸಂಚಾರ ನಿಯಂತ್ರಿಸುತ್ತಿದ್ದರು. 1970ರಲ್ಲಿ ಸಂಚಾರ ಕಿಯೋಸ್ಕ್‌ಗಳನ್ನು ಅಳವಡಿಸಲಾಗಿತ್ತು. 1976ರಲ್ಲಿ ಸಂಚಾರ ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರು ನೃಪತುಂಗ ರಸ್ತೆಯ ಜಂಕ್ಷನ್‌ನಲ್ಲಿ ವಾಹನ ದಟ್ಟಣೆ ನಿಯಂತ್ರಣ ಮಾಡುತ್ತಿದ್ದ ಚಿತ್ರಗಳೂ ಸಂಗ್ರಹಾಲಯದಲ್ಲಿದ್ದು, ಆ ಎಲ್ಲ ಚಿತ್ರಗಳನ್ನು ನೆದರ್ಲೆಂಡ್ಸ್ ಪ್ರಧಾನಿ ವೀಕ್ಷಿಸಿದರು.

ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಯಶಸ್ವಿ ಬಳಕೆ

'ಬೆಂಗಳೂರಿನಲ್ಲಿ ವಾಹನ ದಟ್ಟಣೆ ಸಮಸ್ಯೆಯಿದೆ. ಕೃತಕ ಬುದ್ಧಿಮತ್ತೆ (ಎ.ಐ) ಬಳಸಿಕೊಂಡು ವಾಹನ ದಟ್ಟಣೆ ನಿಯಂತ್ರಣ, ಸುಗಮ ಸಂಚಾರ ವ್ಯವಸ್ಥೆಯನ್ನು ಪೊಲೀಸರು ಯಶಸ್ವಿಯಾಗಿ ನಿಭಾಯಿಸುತ್ತಿದ್ದಾರೆ' ಎಂದು ನೆದರ್ಲೆಂಡ್ಸ್ ಪ್ರಧಾನಿ ಡಿಕ್ ಶೂಫ್ ಹೇಳಿದರು.

'ನಗರದಲ್ಲಿ ಹಸಿರು ವಾತಾವರಣ ಇದೆ. ಗಾಳಿಯ ಗುಣಮಟ್ಟವು ಚೆನ್ನಾಗಿದೆ. ಸಾಫ್ಟ್‌ವೇರ್ ಕಂಪನಿಗಳು ಹೆಚ್ಚಿವೆ. ಅತ್ಯಾಧುನಿಕ ತಂತ್ರಜ್ಞಾನ ಬಳಕೆಮಾಡಿಕೊಂಡು, ಬೆಂಗಳೂರಿನಲ್ಲಿ ವಾಹನ ಸಂಚಾರ ವ್ಯವಸ್ಥೆಯನ್ನು ಸುಗಮ ಮಾಡಲಾಗಿದೆ' ಎಂದು ಹೇಳಿದರು.

'ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಲ್ಲಿ ಇನ್ನಷ್ಟು ಸಂಶೋಧನೆಗಳು ಹಾಗೂ ಪ್ರಯತ್ನಗಳು ನಡೆಯಬೇಕಿದೆ. ಭಾರತದಲ್ಲಿ ಪ್ರಬಲ ಯುವಪಡೆಯೇ ಇದೆ. ಭಾರತದಲ್ಲಿ ಎ.ಐ ಕ್ಷೇತ್ರದಲ್ಲಿ ಹಲವು ಮಂದಿ ಕೆಲಸ ಮಾಡುತ್ತಿದ್ದು, ನಾವು ಅವರೊಂದಿಗೆ ಕೈಜೋಡಿಸುತ್ತೇವೆ' ಎಂದರು.

ನೆದರ್ಲೆಂಡ್ಸ್ ಪ್ರಧಾನಿ ಡಿಕ್ ಶೂಫ್ ಅವರಿಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರು ಸ್ಮರಣಿಕೆ ನೀಡಿ ಗೌರವಿಸಿದರು

ಕೆನರಾ ಉತ್ಸವ ನಾಳೆಯಿಂದ

ಬೆಂಗಳೂರು: ಮಹಿಳಾ ಸಬಲೀಕರಣ ಹಾಗೂ ಸ್ಥಳೀಯ ಕುಶಲಕರ್ಮಿಗಳಿಗೆ ನೆರವು ಒದಗಿಸುವ ಉದ್ದೇಶದ ಎರಡು ದಿನಗಳ 'ಕೆನರಾ ಉತ್ಸವ–2026'ಅನ್ನು ಕೆನರಾ ಬ್ಯಾಂಕ್ ನಗರದಲ್ಲಿ ಆಯೋಜಿಸಿದೆ.

ಇದು ಜಯಮಹಲ್ ರಸ್ತೆಯಲ್ಲಿನ ಜಯಮಹಲ್ ಸಭಾಂಗಣದಲ್ಲಿ ಭಾನುವಾರ ಮತ್ತು ಸೋಮವಾರ ಬೆಳಿಗ್ಗೆ 10 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ನಡೆಯಲಿದೆ.

ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಹಾಗೂ ಸಮುದಾಯ ಅಭಿವೃದ್ಧಿಯ ಭಾಗವಾಗಿ ಮಹಿಳಾ ಉದ್ಯಮಿಗಳು ಮತ್ತು ಕುಶಲಕರ್ಮಿಗಳಿಗೆ ನೆರವು ಒದಗಿಸುವ ಕೆಲಸವನ್ನು ಕೆನರಾ ಬ್ಯಾಂಕ್ ಮಾಡುತ್ತಿದೆ, ಅವರ ಉತ್ಪನ್ನಗಳಿಗೆ ಈ ಮೂಲಕ ವೇದಿಕೆ ಒದಗಿಸುತ್ತಿದೆ ಎಂದು ಪ್ರಕಟಣೆ ಹೇಳಿದೆ.

ಸಾವಯವ ಆಹಾರ, ಮಡಿಕೆ, ಸಿಹಿ ತಿನಿಸುಗಳು, ಕರಕುಶಲ ಆಭರಣ, ಮೇಣದ ಬತ್ತಿಗಳು ಮತ್ತಿತರ ಉತ್ಪನ್ನಗಳು ಮೇಳದಲ್ಲಿ ಪ್ರದರ್ಶನಕ್ಕೆ ಇರಲಿವೆ.

ಪುರಸಭಾ ಕಾರ್ಯಾಲಯ, ದೇವನಹಳ್ಳಿ

ದೇವನಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110, ದೂ: 080–27682221,
E-Mail: itstaff_ulb_devanahalli@yahoo.co.in Web:- www.devanahallitown.mrc.gov.in

ನಂ.ದೇಪು/ತಾ.ಶಾ/ಟೆ.ಪ್ರ/ಸಿಆರ್/01/2025–26 ದಿನಾಂಕ: 20.02.2026

ಟೆಂಡರ್ ಪ್ರಕಟಣೆ

(ಇ–ಪ್ರಕ್ಯೂಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಾಲ್) ಮೂಲಕ ಮಾತ್ರ)
(ಸ್ಟಾಂಡರ್ಡ್‌ಡಾಕ್ಯುಮೆಂಟ್ KW 1&2 ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಮೇಲ್ಕಂಡ ವಿಷಯ ಸಂಬಂಧಿಸಿದಂತೆ, ದೇವನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿ 2025–26 ನೇ ಸಾಲಿನ ಪುರಸಭಾ ಅನುದಾನದಡಿ ಪೈಪ್‌ಲೈನ್ ಕಾಮಗಾರಿ, ಪೇವರ್ ರಸ್ತೆ, ಡಾಂಬರ್ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿ, ಶೆಡ್ ನಿರ್ಮಾಣ ಕಾಮಗಾರಿ, ಕರ್ಬ್ ಸ್ಟೋನ್ ಕಾಮಗಾರಿ, ಸಿ.ಸಿ. ಟಿ.ವಿ ಕ್ಯಾಮರಾ ಅಳವಡಿಸುವುದು, ಕೊಳವೆ ಬಾವಿಗಳಿಗೆ ಪಂಪು ಮೋಟಾರ್ ಮತ್ತು ಅವಶ್ಯಕ ಸಾಮಾಗ್ರಿಗಳನ್ನು ಅಳವಡಿಸುವ ಕಾಮಗಾರಿ, ಬಾಡಿಗೆ ಆಧಾರದ ಮೇಲೆ ವಾಹನ ಸರಬರಾಜು ಮಾಡುವುದು ಮತ್ತು ಇತ್ಯಾದಿ ಕಾಮಗಾರಿಗಳ ಒಟ್ಟು ಮೊತ್ತ ರೂ : 279.31 ಲಕ್ಷಗಳ ಒಟ್ಟು 24 ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಇ–ಪ್ರಕ್ಯೂರ್‌ಮೆಂಟ್‌ನ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಏಕ ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್: **www.kppp.karnataka.gov.in** ಮೂಲಕ ಟೆಂಡರ್ ಸಲ್ಲಿಸುವುದು.

ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: (As per KPPP Portal ಘಂಟೆಯವರೆಗೆ) ಟೆಂಡರ್ ತೆರೆಯುವ ದಿನಾಂಕ: (As per KPPP Portal) ಹೆಚ್ಚಿನ ವಿವರಗಳಿಗಾಗಿ ಪುರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/–
ಆಡಳಿತಾಧಿಕಾರಿಗಳು
ಪುರಸಭೆ, ದೇವನಹಳ್ಳಿ

ವಾಸಾಸಂಇ/ವಾ.ಪ್ರ/5785/ಎಸ್‌ಎಸ್‌ಸಿ/2025–26

ಸಹಿ/–
ಮುಖ್ಯಾಧಿಕಾರಿ
ಪುರಸಭೆ, ದೇವನಹಳ್ಳಿ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

General

CHANGE OF NAME
I, **CHANDRA BHUSHAN** S/o. Late Punya Dev Choudhary R/a Flat #B-404, Concorde Southscape, Andapura, near Gold Coins Club, Electronic City Phase-2, Bangalore, have changed my Name to **CHANDRA BHUSHAN CHOUDHARY** vide affidavit date: 16.02.2026 before Notary B.M. Chandrashekar, Bangalore.

ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್
NABARD
ಗುತ್ತಿಗೆ ಆಧಾರದ ಮೇಲೆ ಬ್ಯಾಂಕಿನ ವೈದ್ಯಕೀಯ ಅಧಿಕಾರಿ (BMO) ನೇಮಕಾತಿ

ಭಾರತ ಸರ್ಕಾರದ ಸಂಪೂರ್ಣ ಸ್ವಾಮ್ಯದ ಅಖಿಲ ಭಾರತ ಉನ್ನತ ಸಂಸ್ಥೆಯಾದ ನಬಾರ್ಡ್, ಅಗತ್ಯ ಅರ್ಹತೆ ಹೊಂದಿರುವ ಭಾರತೀಯ ನಾಗರಿಕರಿಂದ ನಬಾರ್ಡ್‌ನಲ್ಲಿ ಈ ಕೆಳಗಿನ ಹುದ್ದೆಗೆ ನೇಮಕಾತಿಗಾಗಿಅರ್ಜಿಗಳನ್ನು ಆಹ್ವಾನಿಸುತ್ತದೆ:
1) ನಬಾರ್ಡ್ ಕರ್ನಾಟಕ ಪ್ರಾದೇಶಿಕ ಕಚೇರಿ, 46, ಕೆಂಪೇಗೌಡ ರಸ್ತೆ, ಬೆಂಗಳೂರು – 560009
2) ನಬಾರ್ಡ್ ಅಧಿಕಾರಿಗಳ ವಸತಿಗೃಹಗಳು, ರಹೇಜಾ ಪಾರ್ಕ್ ಅಪಾರ್ಟ್‌ಮೆಂಟ್ಸ್, ಮಾಗಡಿ ಮುಖ್ಯ ರಸ್ತೆ, ಅಗ್ರಹಾರ ದಾಸರಹಳ್ಳಿ, ವಿಜಯನಗರ ಬೆಂಗಳೂರು – 560079
3) ನಬಾರ್ಡ್ ಅಧಿಕಾರಿಗಳ ವಸತಿಗೃಹಗಳು, ನಂದಿನಿ ಲೇಔಟ್, ಬೆಂಗಳೂರು – 560096

ಕ್ರ. ಸಂ.	ಹುದ್ದೆ	ಸಂಖ್ಯೆ	ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ
1	ಬ್ಯಾಂಕಿನ ವೈದ್ಯಕೀಯ ಅಧಿಕಾರಿ–(ಗುತ್ತಿಗೆ ಆಧಾರದ ಮೇಲೆ), ಕೆಳಗಿನ ಸ್ಥಳದಲ್ಲಿ: ನಬಾರ್ಡ್ ಕರ್ನಾಟಕ ಪ್ರಾದೇಶಿಕ ಕಚೇರಿ, 46, ಕೆಂಪೇಗೌಡ ರಸ್ತೆ, ಬೆಂಗಳೂರು– 560009	01	15 ಮಾರ್ಚ್ 2026
2	ಬ್ಯಾಂಕಿನ ವೈದ್ಯಕೀಯ ಅಧಿಕಾರಿ – (ಗುತ್ತಿಗೆ ಆಧಾರದ ಮೇಲೆ), ಕೆಳಗಿನ ಸ್ಥಳದಲ್ಲಿ: ನಬಾರ್ಡ್ ಅಧಿಕಾರಿಗಳ ವಸತಿಗೃಹಗಳು ರಹೇಜಾ ಪಾರ್ಕ್ ಅಪಾರ್ಟ್ಮೆಂಟ್ಸ್ ಮಾಗಡಿ ಮುಖ್ಯ ರಸ್ತೆ, ಅಗ್ರಹಾರ ದಾಸರಹಳ್ಳಿ ವಿಜಯನಗರ, ಬೆಂಗಳೂರು–560079 ಮತ್ತು ನಬಾರ್ಡ್ ಅಧಿಕಾರಿಗಳ ವಸತಿಗೃಹಗಳು ನಂದಿನಿ ಲೇಔಟ್, ಬೆಂಗಳೂರು–560096	01	15 ಮಾರ್ಚ್ 2026
	ಒಟ್ಟು	02	

ಶೈಕ್ಷಣಿಕ ಅರ್ಹತೆ, ವಯಸ್ಸು, ಕನಿಷ್ಠ ಅರ್ಹತಾ ಅನುಭವ, ಆಯ್ಕೆ ವಿಧಾನ, ಇತ್ಯಾದಿಗಳಿಗೆ ಸಂಬಂಧಿಸಿದ ಎಲ್ಲಾ ವಿವರಗಳಿಗಾಗಿ ದಯವಿಟ್ಟು **www.nabard.org**ಗೆ ಭೇಟಿ ನೀಡಿ.

(ಡಾ. ಸುರೇಂದ್ರ ಬಾಬು)
ಮುಖ್ಯ ಮಹಾ ವ್ಯವಸ್ಥಾಪಕರು
ಕರ್ನಾಟಕ ಕ್ಷೇತ್ರೀಯ ಕಾರ್ಯಾಲಯ, ಬೆಂಗಳೂರು

Teachers/ Professors

TEACHERS WANTED SFS SCHOOL (CBSE), MALUR (Near Hosakote, Bengaluru; run by MSFS Fathers) We are seeking qualified TGTs and PRTs for English, Mathematics, Science, Hindi, Computer Science, and Social Science across secondary, upper primary, and lower primary levels. Montessori-trained/ NTTC teachers for kindergarten, as well as PT, music, work experience,dance, and art teachers, are also required.Fluency in English is mandatory for all positions.Free boarding and lodging OR complimentary transport from Electronic City is available, along with an attractive salary. Please apply with your biodata and a photograph within seven days to: sfsschoolmalur24@gmail.com

Multiple Vacancy

WANTED 1. ETP Operator 2. Accountant Both With Experience. Contact Number: 9916503814

PERSONAL

Change of Name

CHANGE OF NAME
I,**Prathika Naveen Cariappa** R/at No.33/4,Thyagaraja Layout, Jai Bharath Nagar, Maruthi Sevanagar, Bengaluru-560033, declare that my name is wrongly mentioned in some documents as **Prathika Naveen.** I state that my correct name is **PRATHIKA NAVEEN CARIAPPA** vide affidavit dated 20-02-2026 before notary Y.R. Chandrasekar, Bengaluru.

WE, R.RISHAB and PAVITHRA.R.A. R/o.Flat#401 Parasmani Blossom 3rd Main,3rd`Cross Chamarajpet Bengaluru 560018 have`changed our Minor Daughter's Name from RUTHVEE JAIN to RIYA JAIIN DOB:21.11.2014 vide`affidavit dated:19.2.2026 before`Notary Mamatha.N.K. Bangalore.

WE, R.RISHAB and PAVITHRA.R.A. R/o.Flat#401 Parasmani Blossom, 3rd Main,3rd Cross Chamarajpet Bengaluru 560018 have`changed our Minor Daughter's Name`from MISHRI JAIN to MISSHRE JAIIN DOB:21.05.2021 vide`affidavit dated:19.2.2026 before`Notary Mamatha.N.K. Bangalore.

ಮಕ್ಕಳ ಆರೋಗ್ಯದ ಕಾಳಜಿಯಿಂದ ಹೋರಾಟ: ವೈದ್ಯೆ ಹೇಳಿಕೆ

ಅಪಪ್ರಚಾರ: ವೈದ್ಯೆ ವಿಚಾರಣೆಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಳದ(ಕೆಎಂಎಫ್) ಉತ್ಪನ್ನಗಳ ಕುರಿತು ಅಪಪ್ರಚಾರ ನಡೆಸಿದ ಆರೋಪದ ಮೇಲೆ ಮಲ್ಲೇಶ್ವರದ ಮಣಿಪಾಲ್ ಆಸ್ಪತ್ರೆಯ ಚರ್ಮರೋಗ ತಜ್ಞೆ ಶರಣ್ಯಾ ಪದ್ಮಾ ಅವರ ವಿರುದ್ಧ ಪ್ರಕರಣ ದಾಖಲಾಗಿದ್ದು, ವಿಚಾರಣೆಗೆ ಬರುವಂತೆ ವೈದ್ಯೆಗೆ ಮಲ್ಲೇಶ್ವರ ಠಾಣೆಯ ಪೊಲೀಸರು ಸೂಚಿಸಿದ್ದಾರೆ.

'ವೈದ್ಯೆ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 353(1)(ಬಿ) ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆ 66(ಡಿ) ಅಡಿ ಪ್ರಕರಣ ದಾಖಲಾಗಿದೆ. ವೈದ್ಯೆಯ ವಿಚಾರಣೆ ನಡೆಸಿ ಹೇಳಿಕೆ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಪೊಲೀಸರು ಹೇಳಿದರು.

ಪ್ರಕರಣ ದಾಖಲಾದ ಮೇಲೆ ಶರಣ್ಯಾ ಪದ್ಮಾ ಅವರು ಮತ್ತೊಂದು ವಿಡಿಯೊ ಹೇಳಿಕೆಯನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟಿದ್ದಾರೆ.

'ಮಕ್ಕಳ ಆರೋಗ್ಯದ ಕಾಳಜಿಯಿಂದ ನಾನು ಹೋರಾಟ ನಡೆಸುತ್ತಿದ್ದೇನೆ. ನನ್ನ ವೈಯಕ್ತಿಕ ಹಿತಾಸಕ್ತಿ ಇಲ್ಲ. ಕಳೆದ ಎರಡು ವರ್ಷಗಳಲ್ಲಿ ನಾನು ನನ್ನ ಮಗನಿಗೆ ಯಾವುದೇ ಔಷಧ ಕೊಟ್ಟಿಲ್ಲ, ಮಕ್ಕಳನ್ನು ನಾವು ಕೊಡುವ ಆಹಾರ ಪದ್ಧತಿ, ಜೀವನಶೈಲಿಯಿಂದ ಆರೋಗ್ಯವಾಗಿ ಸಾಕಬಹುದು. ಔಷಧಗಳನ್ನು ಹೆಚ್ಚೆಚ್ಚು ನೀಡಿದಷ್ಟು ಕರುಳಿನ ಆರೋಗ್ಯ ಹಾಳಾಗುತ್ತದೆ, ಆರೋಗ್ಯಕ್ಕೆ ಆಧಾರಸ್ತಂಭ ಆಹಾರ' ಎಂದು ವಿಡಿಯೊದಲ್ಲಿ ವಿವರಿಸಿದ್ದಾರೆ.

ಶರಣ್ಯಾ ಪದ್ಮಾ

'ಭಾರತೀಯ ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಪ್ರಾಧಿಕಾರದಿಂದ (ಎಫ್‌ಎಸ್‌ಎಸ್‌ಎಐ) ಹೇಗೆ ಅನುಮೋದನೆ ಸಿಕ್ಕಿದೆ ಎಂಬುದು ಗೊತ್ತಿಲ್ಲ. ಎಫ್‌ಎಸ್‌ಎಸ್‌ಎಐ ಅನುಮೋದನೆ ಆಗಿದೆ ಅಂದರೆ, ಉತ್ತಮ ಆಹಾರ ಎಂದು ಭಾವಿಸಿಕೊಳ್ಳುತ್ತಾರೆ. ಈ ರೀತಿಯ ಉತ್ಪನ್ನಗಳಿಗೆ ಅನುಮೋದನೆ ನೀಡುವವರ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ಆ ವಿಡಿಯೊದಲ್ಲಿ ವೈದ್ಯೆ ಒತ್ತಾಯಿಸಿದ್ದಾರೆ.

'ಒಂದು ಸಂಸ್ಥೆಯ ವಿರುದ್ಧ ಆರೋಪ ಮಾಡಿದಾಗ ಸಾಮಾಜಿಕ ಜಾಲತಾಣಗಳಲ್ಲಿ ಆ ವಿಡಿಯೊ ಹರಿದಾಡುತ್ತದೆ, ಪೊಲೀಸರಿಗೆ ದೂರು ನೀಡಲಾಗುತ್ತದೆ ಎಂಬ ಅರಿವು ಇತ್ತು. ಮಲ್ಲೇಶ್ವರ ಠಾಣೆ ಪೊಲೀಸರಿಂದ ಫೋನ್ ಕರೆ ಬಂದಿತ್ತು. ನನ್ನ ವಿರುದ್ಧ ದೂರು ಹೋಗಿರುವುದು ನಿಜ. ಒಂದು ವೇಳೆ ಎಫ್‌ಐಆರ್ ಆಗಿದ್ದರೂ ನಾನು ಹೆದರುವುದಿಲ್ಲ' ಎಂದು ವೈದ್ಯೆ ಹೇಳಿದ್ದಾರೆ.

ಕೆಎಂಎಫ್ ಉತ್ಪನ್ನಗಳ ಬಗ್ಗೆ 'ರೀಲ್ಸ್'

'ಫೆ.8ರಂದು ನಂದಿನಿ ಉತ್ಪನ್ನಗಳ ಬಗ್ಗೆ ಶರಣ್ಯಾ ಅವರು 'ರೀಲ್ಸ್' ಮಾಡಿ ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ್ದರು. ಆ 'ರೀಲ್ಸ್'ನಲ್ಲಿ, ನಂದಿನಿ ಉತ್ಪನ್ನಗಳಾದ ಕ್ರೀಮ್ ಬನ್, ಸ್ಟ್ರಾಬೆರಿ ಫ್ಲೇವರ್ಡ್ ಮಿಲ್ಕ್ ಹಾಗೂ ತಂಪು ಪಾನೀಯದಂಥ ಉತ್ಪನ್ನಗಳ ದಿನನಿತ್ಯ ಸೇವಿಸುವುದರಿಂದ ಅನಾರೋಗ್ಯಕ್ಕೆ ತುತ್ತಾಗುವ ಸಾಧ್ಯತೆ ಇರುತ್ತದೆ. ಸ್ಟಿರಾಯ್ಡ್‌ನಂತಹ ಔಷಧ ನೀಡಬೇಕಾಗುತ್ತದೆ. ದೀರ್ಘಾವಧಿಯಲ್ಲಿ ಕ್ಯಾನ್ಸರ್ ಬರುತ್ತದೆ. ಸ್ಟ್ರಾಬೆರಿ ಫ್ಲೇವರ್ಡ್ ಮಿಲ್ಕ್‌ನಲ್ಲಿ ನೈಸರ್ಗಿಕ ಸ್ಟ್ರಾಬೆರಿ ಇರುವುದಿಲ್ಲ. ಬದಲಾಗಿ ಕೃತಕ ಬಣ್ಣ ಹಾಕಿ ತಯಾರು ಮಾಡಲಾಗಿರುತ್ತದೆ. ಈ ರೀತಿಯ ಉತ್ಪನ್ನಗಳಿಗೆ ಭಾರತೀಯ ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಹೇಗೆ ಅನುಮತಿ ನೀಡಿದೆ' ಎಂಬುದಾಗಿ 'ರೀಲ್ಸ್'ನಲ್ಲಿ ವೈದ್ಯೆ ಪ್ರಶ್ನಿಸಿದ್ದರು' ಎಂದು ಮೂಲಗಳು ಹೇಳಿವೆ.

ಪೊಲೀಸರ ಮೇಲೆ ಹಲ್ಲೆ: ಏಳು ವರ್ಷ ಶಿಕ್ಷೆ

ಬೆಂಗಳೂರು: ಪೊಲೀಸರ ಮೇಲೆ ಹಲ್ಲೆ ನಡೆಸಿ, ಕೊಲೆಗೆ ಯತ್ನಿಸಿದ್ದ ಅಪರಾಧಿಗೆ ನ್ಯಾಯಾಲಯವು ಏಳು ವರ್ಷ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿ ಆದೇಶಿಸಿದೆ.

ಮೊಹಮ್ಮದ್ ಸಲೀಂ ಶಿಕ್ಷೆಗೆ ಒಳಗಾದ ಅಪರಾಧಿ.

ಮೊಹಮ್ಮದ್ ಸಲೀಂ ವಿರುದ್ಧ ಪ್ರಕರಣವೊಂದು ದಾಖಲಾಗಿತ್ತು. ಠಾಣಾ ವ್ಯಾಪ್ತಿಯ ಹೊರ ವರ್ತುಲ ರಸ್ತೆಯ ಮೂಲಕ ಹೆಣ್ಣೂರು ಜಂಕ್ಷನ್ ಕಡೆಗೆ ಆರೋಪಿ ಕಾರಿನಲ್ಲಿ ತೆರಳುತ್ತಿರುವ ಮಾಹಿತಿ ಪೊಲೀಸರಿಗೆ ಸಿಕ್ಕಿತ್ತು. ಆ ಮಾಹಿತಿ ಆಧರಿಸಿ ಆರೋಪಿಯ ಬಂಧನಕ್ಕೆ ಕಾರ್ಯಾಚರಣೆ ನಡೆಸಲಾಗುತ್ತಿತ್ತು. ಎಚ್‌ಬಿಆರ್ ಲೇಔಟ್‌ನ ಅರಣ್ಯ ಇಲಾಖೆ ಕಚೇರಿ ಬಳಿ ಆರೋಪಿ ಕಾರನ್ನು ಪೊಲೀಸರು ಅಡ್ಡಗಟ್ಟಿದ್ದರು. ಕೆಳಕ್ಕೆ ಇಳಿದಿದ್ದ ಅಪರಾಧಿ, ಪೊಲೀಸರ ಮೇಲೆ ಹಲ್ಲೆ ನಡೆಸಿ ಕೊಲೆಗೆ ಯತ್ನಿಸಿದ್ದ.

2021ರ ಜೂನ್ 24ರಂದು ಗೋವಿಂದಪುರ ಠಾಣೆಯಲ್ಲಿ ಈ ಸಂಬಂಧ ಅಪರಾಧಿ ಮೊಹಮ್ಮದ್ ಸಲೀಂ ವಿರುದ್ಧ ಪ್ರಕರಣ ದಾಖಲಾಗಿತ್ತು.

ಪೂರ್ವ ವಿಭಾಗದ ಅಂದಿನ ಡಿಸಿಪಿ ಎಸ್.ಡಿ.ಶರಣಪ್ಪ ಅವರ ಆದೇಶದ ಮೇರೆಗೆ ಡಿ.ಜೆ.ಹಳ್ಳಿ ಪೊಲೀಸ್ ಠಾಣೆಯ ಅಂದಿನ ಇನ್‌ಸ್ಪೆಕ್ಟರ್ ಕಿರಣ್‌ಕುಮಾರ್ ಬಿ. ನಾಯ್ಕ್ ಅವರು ಪ್ರಕರಣದ ತನಿಖೆ ನಡೆಸಿ, ಸಾಕ್ಷ್ಯಾಧಾರ ಸಂಗ್ರಹಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ನ್ಯಾಯಾಲಯವು ಆರೋಪಿಯನ್ನು ದೋಷಿ ಎಂದು ಘೋಷಿಸಿ, ಏಳು ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ₹25 ಸಾವಿರ ದಂಡ ವಿಧಿಸಿ ಆದೇಶಿಸಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ಸಂಖ್ಯೆ:ಬೆಂಅಪ್ರಾ/ಆ/ಉಕಾ–1/ಆ/ಸಿ.ವಿ/1260/2025–26 ದಿನಾಂಕ:20.02.2026

ಪ್ರಕಟಣೆ

ವಿಷಯ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಪ್ರಥಮ ದರ್ಜೆ ಸಹಾಯಕ ಹುದ್ದೆಯನ್ನು ನೇರ ನೇಮಕಾತಿಯಿಂದ ಭರ್ತಿ ಮಾಡುವ ಬಗ್ಗೆ.

ಉಲ್ಲೇಖ: 1. ಪ್ರಾಧಿಕಾರದ ಪತ್ರ ಸಂಖ್ಯೆ:ಬೆಂ.ಅ.ಪ್ರಾ/ಆ/ಉಕಾ–1/ಸಿವಿ/ 740/2025–26 ದಿನಾಂಕ:25–09–2025.
2. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಪತ್ರ ಸಂಖ್ಯೆ:ಇ.ಡಿ/ಕೆ.ಇ.ಎ/ ಆಡಳಿತ/ಸಿ.ಆರ್–5/2024–25 ದಿನಾಂಕ:29–01–2026.
3. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಪತ್ರ ಸಂಖ್ಯೆ:ಇ.ಡಿ/ಕೆ.ಇ.ಎ/ ಆಡಳಿತ/ಸಿ.ಆರ್–5/2024–25 ದಿನಾಂಕ:28–01–2026.
4. ಮಾನ್ಯ ಆಯುಕ್ತರ ಆದೇಶ ದಿನಾಂಕ:18–02–2026.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಖಾಲಿ ಇರುವ ಕಲ್ಯಾಣ ಕರ್ನಾಟಕ ಪ್ರದೇಶದವರಿಗೆ ಮೀಸಲಿರಿಸಿರುವ 01 ಪ್ರಥಮ ದರ್ಜೆ ಸಹಾಯಕ ಮತ್ತು 06 ದ್ವಿತೀಯ ದರ್ಜೆ ಸಹಾಯಕ ಹಾಗೂ ಮಿಕ್ಕುಳಿದ ವೃಂದದಲ್ಲಿ ಖಾಲಿ ಇರುವ 04 ಪ್ರಥಮ ದರ್ಜೆ ಸಹಾಯಕ ಮತ್ತು 14 ದ್ವಿತೀಯ ದರ್ಜೆ ಸಹಾಯಕ ಹುದ್ದೆಯನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಉಲ್ಲೇಖ (1) ರ ಪತ್ರದನ್ವಯ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿಕೊಡುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದವರನ್ನು ಕೋರಲಾಗಿತ್ತು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದವರು ಕಲ್ಯಾಣ ಕರ್ನಾಟಕ ಪ್ರದೇಶದವರಿಗೆ ಮೀಸಲಿರಿಸಿರುವ 01 ಪ್ರಥಮ ದರ್ಜೆ ಸಹಾಯಕ ಹಾಗೂ ಮಿಕ್ಕುಳಿದ ವೃಂದದಲ್ಲಿ ಖಾಲಿ ಇರುವ 04 ಪ್ರಥಮ ದರ್ಜೆ ಸಹಾಯಕ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಿ ಅರ್ಹರಿರುವ ಅಭ್ಯರ್ಥಿಗಳ ಪಟ್ಟಿಯನ್ನು ಉಲ್ಲೇಖ (2) ಮತ್ತು (3) ರನ್ವಯ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದವರು ಸಲ್ಲಿಸಿರುವ ಪಟ್ಟಿಯನ್ವಯ ಕರ್ನಾಟಕ ರಾಜ್ಯ ಪತ್ರ ಸಂಖ್ಯೆ:ಸಂವ್ಯಶಾಇ 30 ಶಾಸನ 2018, ಬೆಂಗಳೂರು ದಿನಾಂಕ: 04.01.2019 ರ ರಾಜ್ಯದ ಸಿವಿಲ್ ಸೇವೆಗಳ ಅಡಿಯಲ್ಲಿನ ಯಾವುದೇ ಸೇವೆಗೆ ಅಥವಾ ಹುದ್ದೆಗೆ ಅಭ್ಯರ್ಥಿಗಳ ನೇಮಕಾತಿಗಾಗಿ ಆಯ್ಕೆಯ ಕಾರ್ಯವಿಧಾನಕ್ಕೆ ಉಪಬಂಧ ಕಲ್ಪಿಸಿರುವ ಅಧಿನಿಯಮದಡಿ ಮೊದಲನೇ ಯಾದಿ, ಎರಡನೇ ಯಾದಿ ಮತ್ತು ಮೂರನೇ ಯಾದಿಯನ್ನಾಗಿ ಪಟ್ಟಿಯನ್ನು ತಯಾರಿಸಿದ್ದು, ರೋಸ್ಟರ್ ಬಿಂದುವಿನನ್ವಯ ಈ ಕೆಳಕಂಡ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ನಿಯಮಗಳ ಪ್ರಕಾರ 1:4 ರಂತೆ ತಾತ್ಕಾಲಿಕ ಮುಖ್ಯ ಆಯ್ಕೆ ಪಟ್ಟಿ ಹಾಗೂ ತಾತ್ಕಾಲಿಕ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಈ ಕೆಳಕಂಡಂತೆ ಸಿದ್ದಪಡಿಸಿದ್ದು, ಉಲ್ಲೇಖ (4) ರನ್ವಯ ಮಾನ್ಯ ಆಯುಕ್ತರು ಅನುಮೋದನೆಯನ್ನು ನೀಡಿದ್ದು, ಈ ಕೆಳಕಂಡಂತೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ.

ತತ್ಸಂಬಂಧ ತಾತ್ಕಾಲಿಕ ಆಯ್ಕೆ ಪಟ್ಟಿಯ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ ಆಯ್ಕೆ ಪಟ್ಟಿ ಪ್ರಕಟಿಸಿದ ದಿನಾಂಕದಿಂದ 15 ದಿನಗಳ ಒಳಗಾಗಿ ಆಕ್ಷೇಪಣೆಯನ್ನು ಲಿಖಿತ ಮೂಲಕ ಸಲ್ಲಿಸಬಹುದಾಗಿದೆ.

371 (ಜೆ) ರಡಿಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದವರಿಗೆ ಮೀಸಲಿರಿಸಿರುವ ಪ್ರಥಮ ದರ್ಜೆ ಸಹಾಯಕರ ಮುಖ್ಯ ಆಯ್ಕೆಪಟ್ಟಿ (ತಾತ್ಕಾಲಿಕ)

ಕ್ರ.ಸಂ.	ಅಭ್ಯರ್ಥಿಯ ಹೆಸರು	ಜನ್ಮ ದಿನಾಂಕ	ಪ್ರವರ್ಗ	ಪೇಪರ್–1 ಅಂಕ	ಪೇಪರ್–2 ಅಂಕ	ಒಟ್ಟು ಅಂಕ
1	ಸುನೀಲ	01.06.1996	ಪ.ಜಾ./ ಪ್ರವರ್ಗ–ಎ	51.25	62	113.25

371 (ಜೆ) ರಡಿಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದವರಿಗೆ ಮೀಸಲಿರಿಸಿರುವ ಪ್ರಥಮ ದರ್ಜೆ ಸಹಾಯಕರ ಹೆಚ್ಚುವರಿ ಆಯ್ಕೆ ಪಟ್ಟಿ (ತಾತ್ಕಾಲಿಕ)

ಕ್ರ.ಸಂ.	ಅಭ್ಯರ್ಥಿಯ ಹೆಸರು	ಜನ್ಮ ದಿನಾಂಕ	ಪ್ರವರ್ಗ	ಪೇಪರ್ –1 ಅಂಕ	ಪೇಪರ್–2 ಅಂಕ	ಒಟ್ಟು ಅಂಕ
1	ದಿನೇಶ್	16.06.2002	ಪ.ಜಾ. / ಪ್ರವರ್ಗ–ಎ	60	51.5	111.5
2	ಲೋಕೇಶ್.ಎಂ	10.02.1995	ಪ.ಜಾ. / ಪ್ರವರ್ಗ–ಎ	48.5	60.75	109.25
3	ಎನ್.ಜೆ.ನಂದೀಶ್ ಕುಮಾರ್	19.11.1996	ಪ.ಜಾ./ ಪ್ರವರ್ಗ–ಎ	53	56	109
4	ಡಿಡ್ ಗಿ ಪ್ರದೀಪ್ ಕುಮಾರ	02.06.1999	ಪ.ಜಾ. / ಪ್ರವರ್ಗ–ಎ	45.75	62	107.75

ಮಿಕ್ಕುಳಿದ ವೃಂದದವರಿಗೆ ಮೀಸಲಿರಿಸಿರುವ ಪ್ರಥಮ ದರ್ಜೆ ಸಹಾಯಕರ ಮುಖ್ಯ ಆಯ್ಕೆಪಟ್ಟಿ (ತಾತ್ಕಾಲಿಕ)

ಕ್ರ.ಸಂ	ಅಭ್ಯರ್ಥಿಯ ಹೆಸರು	ಜನ್ಮ ದಿನಾಂಕ	ಪ್ರವರ್ಗ	ಪೇಪರ್ –1 ಅಂಕ	ಪೇಪರ್–2 ಅಂಕ	ಒಟ್ಟು ಅಂಕ
1	ಸಂದೇಶ್ ರಾಜೇಂದ್ರ ಇಂಗಾಲಗೊನ್	01.07.2002	ಪ.ಜಾ. / ಪ್ರವರ್ಗ–ಎ	52.25	60	112.25
2	ನಂದೀಶ.ಟಿ.ಇ	11.03.1996	ಸಾಮಾನ್ಯ	73.25	67.5	140.75
3	ಶಿವಪುತ್ರ ಪ್ರಕಾಶ್ ನಾಯ್ಕ್	17.01.2000	ಪ.ಪಂ	62.5	57.75	120.25
4	ಅಮೃತ.ಆರ್.ಚಣ್ಣಗೌದರ್	26.07.1996	ಸಾಮಾನ್ಯ ಮಹಿಳಾ ಅಭ್ಯರ್ಥಿ	63	76.75	139.75

ಮಿಕ್ಕುಳಿದ ವೃಂದದವರಿಗೆ ಮೀಸಲಿರಿಸಿರುವ ಪ್ರಥಮ ದರ್ಜೆ ಸಹಾಯಕರ ಹೆಚ್ಚುವರಿ ಆಯ್ಕೆ ಪಟ್ಟಿ (ತಾತ್ಕಾಲಿಕ)

ಕ್ರ.ಸಂ	ಅಭ್ಯರ್ಥಿಯ ಹೆಸರು	ಜನ್ಮ ದಿನಾಂಕ	ಪ್ರವರ್ಗ	ಪೇಪರ್ –1 ಅಂಕ	ಪೇಪರ್–2 ಅಂಕ	ಒಟ್ಟು ಅಂಕ
1	ಭಗತ್ ಚಂದನ್.ಆರ್	13.04.2003	ಪ.ಜಾ. / ಪ್ರವರ್ಗ–ಎ	67.75	44.5	112.25
2	ನರಸಪ್ಪ ಅಲಬಾನೂರು	06.10.1992	ಪ.ಜಾ. / ಪ್ರವರ್ಗ–ಎ	48.75	62.5	111.25
3	ಚೇತನ್ ಶಾಂತಪ್ಪ ಬಗಲಿ	31.07.1994	ಪ.ಜಾ. / ಪ್ರವರ್ಗ–ಎ	52.5	53.5	106
4	ಶ್ರೀನಿವಾಸ್ ಜಿ ಹರಿಜನ್	27.07.1998	ಪ.ಜಾ. / ಪ್ರವರ್ಗ–ಎ	44.25	64	105.25
5	ಚೇತನ್ ಕೃಷ್ಣಪ್ಪ ಅಸರಡಿ	07.08.1996	ಸಾಮಾನ್ಯ	70.75	68.5	139.25
6	ಮಹೇಶ್ ಇರಪ್ಪ ರಾಮದುರ್ಗ್	01.03.2002	ಸಾಮಾನ್ಯ	68.25	71	139.25
7	ಸಿದ್ರಾಮ್ ವಿಜಯ್ ಸಪ್ತಸಾಗರೆ	01.06.1998	ಸಾಮಾನ್ಯ	71	65.50	136.50
8	ಅಭಿಷೇಕ್.ಎಸ್.ಹಿರೇಮಠ್	30.07.1998	ಸಾಮಾನ್ಯ	70.25	64.25	134.50
9	ಪ್ರದೀಪ್ ಕುಮಾರ್	17.05.1996	ಪ.ಪಂ	57	61.75	118.75
10	ಎನ್ ರಾಮಕೃಷ್ಣ	25.06.1997	ಪ.ಪಂ	57.75	54.75	112.5
11	ಚಂದು ಎಮ್	03.04.2002	ಪ.ಪಂ	60.25	52	112.25
12	ಶ್ರೀನಿವಾಸ್ ಪಿ	01.06.1998	ಪ.ಪಂ	58.75	53.25	112
13	ಪೂಜಾ ಗುಲ್ನವಾರ್	05.05.1999	ಸಾಮಾನ್ಯ ಮಹಿಳಾ ಅಭ್ಯರ್ಥಿ	62.25	63.75	126
14	ಸಿಂದು.ಎಂ.ಜಿ	16.04.2001	ಸಾಮಾನ್ಯ ಮಹಿಳಾ ಅಭ್ಯರ್ಥಿ	51.75	70.50	122.25
15	ಕಾವ್ಯಶ್ರೀ.ಹೆಚ್.ವಿ	03.07.1997	ಸಾಮಾನ್ಯ ಮಹಿಳಾ ಅಭ್ಯರ್ಥಿ	59.75	62	121.75
16	ಸ್ಫೂರ್ತಿ ಪಾಟೀಲ್	12.07.2001	ಸಾಮಾನ್ಯ ಮಹಿಳಾ ಅಭ್ಯರ್ಥಿ	64.50	55.50	120

ತಾತ್ಕಾಲಿಕ ಮುಖ್ಯ ಆಯ್ಕೆ ಪಟ್ಟಿ ಹಾಗೂ ತಾತ್ಕಾಲಿಕ ಹೆಚ್ಚುವರಿ ಆಯ್ಕೆ ಪಟ್ಟಿ ಮತ್ತು ನೇಮಕಾತಿಯ ಮುಂದಿನ ಪ್ರಕ್ರಿಯೆಯನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ಬಾಕಿಯಿರುವ ಮೇಲ್ಮನವಿ ಸಂಖ್ಯೆ:200448/2025 ರಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ಆದೇಶದ ಷರತ್ತಿಗೊಳ್ಳಪಟ್ಟಿರುತ್ತದೆ.

(ಕ.ಟಿ.ಅ.ಮೇ) **ಸಹಿ/– ಉಪಕಾರ್ಯದರ್ಶಿ–1 (ಪ್ರ), ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು**

ನಗರದಲ್ಲಿ ಇಂದು

ರಾಷ್ಟ್ರೀಯ ರಿಯಲ್ ಎಸ್ಟೇಟ್ ಸಮಾವೇಶ: ಉದ್ಘಾಟನೆ: ವಿ. ಸೋಮಣ್ಣ, 'ಉದ್ಯಮ ರತ್ನ ಪ್ರಶಸ್ತಿ' ಪ್ರದಾನ: ಬಸವರಾಜ ಬೊಮ್ಮಾಯಿ, ಪ್ರಶಸ್ತಿ ಪುರಸ್ಕೃತರು: ಎಸ್. ಷಡಕ್ಷರಿ, ಅಧ್ಯಕ್ಷತೆ: ಸುಭಾಷ್ ಬಿ. ಅಡಿ, ಅತಿಥಿಗಳು: ಶಿವಕುಮಾರ ಉದಾಸಿ, ಬಿ.ಬಿ. ಪಾಟೀಲ, ಬಿ.ಎಂ. ಜಯಶಂಕರ, ಎಸ್.ಪಿ. ದಯಾನಂದ, ಜ್ಯೋತಿ ಪ್ರಕಾಶ್ ಮಿರ್ಜಿ, ಉಪಸ್ಥಿತಿ: ಪ್ರದೀಪ್ ಕಂಕಣವಾಡಿ, ಆಯೋಜನೆ: ವೀರಶೈವ ಲಿಂಗಾಯತ ರಿಯಲ್ ಎಸ್ಟೇಟ್ ನೆಟ್ವರ್ಕ್, ಸ್ಥಳ: ರಾಯಲ್ ಆರ್ಚಿಡ್ ರೆಸಾರ್ಟ್, ಯಲಹಂಕ, ಬೆಳಿಗ್ಗೆ 9

'ಥ್ರೆಡ್ಸ್ ಆಫ್ ಥಾಟ್ಸ್' ಕಲಾ ಪ್ರದರ್ಶನ: ವೇಣುಗೋಪಾಲ್ ವಿ.ಜಿ., ಜೆ. ಸೆಂಥಿಲ್ ಕುಮಾರ್, ನಿಂಗನಗೌಡ ಸಿ. ಪಾಟೀಲ, ಆಯೋಜನೆ ಹಾಗೂ ಸ್ಥಳ: ಆರ್ಟ್ ಹೌಸ್, #63, ಅರಮನೆ ರಸ್ತೆ, ವಸಂತನಗರ, ಬೆಳಿಗ್ಗೆ 10ರಿಂದ ಸಂಜೆ 6

ದೊಡ್ಡಬಸಮ್ಮ ಅವರ 'ಅಂದದ ನಿನ್ನ ಅಂಕಿತ ಅಜರಾಮರವಾಗಲಿ' ಕವನ ಸಂಕಲನ ಬಿಡುಗಡೆ: ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಕೃತಿ ಪರಿಚಯ: ಎಲ್.ಜಿ. ಮೀರಾ, ಉಪಸ್ಥಿತಿ: ಡಿ.ಎನ್. ಶೇಖರರೆಡ್ಡಿ, ಆಯೋಜನೆ: ಸನ್‌ಸ್ಟಾರ್ ಪಬ್ಲಿಷರ್ ಆ್ಯಂಡ್ ಪ್ರಿಂಟರ್ಸ್, ಸ್ಥಳ: ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಜೈನ್ ಹೆರಿಟೇಜ್ ಕ್ರೀಡಾ ಶಾಲೆ ಉದ್ಘಾಟನೆ: ಅತಿಥಿಗಳು: ವೆಂಕಟೇಶ್ ಪ್ರಸಾದ್, ಚೆನ್ರಾಜ್ ರಾಯ್ಚಂದ್, ಸ್ಥಳ: ಜೈನ್ ಹೆರಿಟೇಜ್ ಸ್ಕೂಲ್, ಹೆಬ್ಬಾಳ, ಬೆಳಿಗ್ಗೆ 10.30

ಖಗೋಳ ಉತ್ಸವ: 'ಭೂಮಿಯಿಂದ ಮಂಗಳನತ್ತ...' ವಿಷಯದ ಬಗ್ಗೆ ಉಪನ್ಯಾಸ: ಪವನ್ ಗ್ರಾಮಪುರೋಹಿತ್, ವಿಜ್ಞಾನ ಹಾಸ್ಯ ನಾಟಕ: ಜಗಲಿ ಕಟ್ಟೆ ಖಗೋಳ, 'ಮರ್ಜಿಂಗ್ ಸ್ಟಾರ್ಸ್' ವಿಷಯದ ಬಗ್ಗೆ ಉಪನ್ಯಾಸ: ಅನ್ನಪೂರ್ಣಿ ಸುಬ್ರಮಣಿಯಂ, ಆಯೋಜನೆ ಹಾಗೂ ಸ್ಥಳ: ಭಾರತೀಯ ಖಗೋಳ ಭೌತವಿಜ್ಞಾನ ಸಂಸ್ಥೆ, ಕೋರಮಂಗಲ, ಬೆಳಿಗ್ಗೆ 11

ಐಟಿ ಕನ್ನಡ ಕಾರ್ಯಾಗಾರ: ಉದ್ಘಾಟನೆ: ವಿ.ಎಸ್. ಆರಾಧ್ಯ, ಅಧ್ಯಕ್ಷತೆ: ಸಿ.ಎನ್. ಅಶ್ವತ್ಥನಾರಾಯಣ, ಉಪಸ್ಥಿತಿ: ಸಂತೋಷ್ ಹಾನಗಲ್, ಆರ್.ಎ. ಪ್ರಸಾದ್, ಆಯೋಜನೆ ಹಾಗೂ ಸ್ಥಳ: ಕನ್ನಡ ಗಣಕ ಉಚಿತ ತರಬೇತಿ ಕೇಂದ್ರ, 6ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 11.45

ಸಂತ ನಿಳೋಬ ಮಹಾರಾಜ ಅವರ ಸಪ್ತಾಹ ಮಹೋತ್ಸವ: ಹರಿಪಾಠ ಭಜನೆ, ಪ್ರವಚನ, ಆಯೋಜನೆ ಹಾಗೂ ಸ್ಥಳ: ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್, ಸುಭೇದಾರ್ ಛತ್ರಂ ರಸ್ತೆ ಕ್ರಾಸ್, ಗಾಂಧಿನಗರ, ಸಂಜೆ 4

ಶಾಸ್ತ್ರೀಯ ಸಂಗೀತ: ಪ್ರಬೋಧ್ ಮತ್ತು ಸಂಗಡಿಗರು, ಉಪಸ್ಥಿತಿ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ. ಶ್ರೀ. ಕಲಾಭವನ, ಎನ್.ಆರ್.ಕಾಲೊನಿ, ಸಂಜೆ 5

ಮನೆಯಂಗಳದಲ್ಲಿ ಮಾತುಕತೆ: ತಿಂಗಳ ಅತಿಥಿ: ದು.ಸರಸ್ವತಿ, ಉಪಸ್ಥಿತಿ: ಕೆ.ಎಂ. ಗಾಯಿತ್ರಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಮಧ್ಯಾಹ್ನ 3

ದು. ಸರಸ್ವತಿ

'ಗೌಡೀಯ ವೈಷ್ಣವ ಪಂಥ: ಆಕ್ರಮಣಕಾರರ ವಿರುದ್ಧ ಹೋರಾಡುವಲ್ಲಿ ಹಾಗೂ ಬಂಗಾಳದ ಸನಾತನ ಮನೋಭಾವ ಉಳಿಸಿಕೊಳ್ಳುವಲ್ಲಿ ಅದರ ಪಾತ್ರ' ವಿಷಯದ ಬಗ್ಗೆ ಉಪನ್ಯಾಸ: ಹ್ಯಾಲಿ ಗೋಸ್ವಾಮಿ, ಆಯೋಜನೆ ಹಾಗೂ ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಸಂಜೆ 5.30

26ನೇ ವಾರ್ಷಿಕೋತ್ಸವ: ತ್ಯಾಗರಾಜರ ಆರಾಧನಾ ಪುಣ್ಯ ಮಹೋತ್ಸವ, ಅತಿಥಿಗಳು: ಆರ್.ಕೆ. ಪದ್ಮನಾಭ, ಆರ್. ವಸಂತಕುಮಾರ ಶಾಸ್ತ್ರಿ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಎಸ್. ಐಶ್ವರ್ಯ, ಎಸ್. ಸೌಂದರ್ಯ, ಅದಿತಿ ಕೃಷ್ಣ ಪ್ರಕಾಶ್, ನಿಕ್ಷಿತ್ ಪುತ್ತೂರು, ಆರ್. ಕಾರ್ತಿಕ್, ಆಯೋಜನೆ: ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನ, ಸ್ಥಳ: ವೆಂಕೋಬಾಚಾರ್ಯ ಸ್ಮೃತಿ ಸಾಂಸ್ಕೃತಿಕ ಮಂಟಪ, ದೇವಗಿರಿ ವೆಂಕಟೇಶ್ವರ ದೇವಸ್ಥಾನ, ಬನಶಂಕರಿ 2ನೇ ಹಂತ, ಸಂಜೆ 5

'ಗಿರಿಧಾರಿ' ಭರತನಾಟ್ಯ ನೃತ್ಯ–ನಾಟಕ: ಸಂಯೋಜನೆ: ವರ್ಷಾ ರವಿಪ್ರಕಾಶ್, ಆಯೋಜನೆ: ಸ್ವರವಿ ಆರ್ಟ್ ಫೌಂಡೇಷನ್, ಸ್ಥಳ: ದಯಾನಂದ ಸಾಗರ ವಿಶ್ವವಿದ್ಯಾಲಯ, ಸಂಜೆ 6

ಉಡುಪ ಸಂಗೀತೋತ್ಸವ: ತಾಳವಾದ್ಯ ಕಛೇರಿ: ತಿರುವಾಯೂರು ಭಕ್ತವತ್ಸಲಂ, ನವೀನ್ ಶರ್ಮಾ, ವಿಜಯ ಶ್ಯಾಮರಾವ್ ಚವ್ಹಾಣ್, ಕರ್ನಾಟಕ ಶಾಸ್ತ್ರೀಯ ಸಂಗೀತ: ರಂಜನಿ, ಗಾಯತ್ರಿ, ಆಯೋಜನೆ: ಉಡುಪ ಪ್ರತಿಷ್ಠಾನ, ಸ್ಥಳ: ಚೌಡಯ್ಯ ಸ್ಮಾರಕ ಭವನ, ವೈಯಾಲಿಕಾವಲ್, ಸಂಜೆ 6

ಎಚ್.ಬಿ. ಚಂದ್ರಶೇಖರ್ ಅವರ 'ಶಿಕ್ಷಣ ಸಂಗತ' ಮತ್ತು ಎಚ್.ಎನ್. ಮುರಳೀಧರ ಅವರ 'ಜೋಗುಳದ ಹರಕೆ' ಪುಸ್ತಕ ಬಿಡುಗಡೆ: ಜಿ.ಎಸ್. ಜಯದೇವ, ಕೃತಿ ಪರಿಚಯ: ಎಸ್.ವಿ. ಮಂಜುನಾಥ್, ಕೆ.ಸತ್ಯನಾರಾಯಣ, ಉಪಸ್ಥಿತಿ: ಸುಧೀಶ್ ವೆಂಕಟೇಶ್, ಆಯೋಜನೆ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಸ್ಥಳ: ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಸಂಜೆ 6

'ಬಾಯ್ಬಡ್ಕಿ' ಹಾಸ್ಯ ನಾಟಕ ಪ್ರದರ್ಶನ: ನಿರ್ದೇಶನ: ಭೀಷ್ಮ ರಾಮಯ್ಯ, ಆಯೋಜನೆ: ಅಂತರಂಗ ಬಹಿರಂಗ, ಸ್ಥಳ: ನಾಣಿ ಅಂಗಳ, ಸುಚಿತ್ರ ಫಿಲ್ಮ್ ಸೊಸೈಟಿ, ಬನಶಂಕರಿ, ಸಂಜೆ 4 ಹಾಗೂ ಸಂಜೆ 7

ತಿಂಗಳ ನಾಟಕ ಸಂಭ್ರಮ: ತಿಂಗಳ ಅತಿಥಿ: ಬಲವಂತರಾವ್ ಪಾಟೀಲ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಹಾಸನದ ಜಂಬೂರಿನ ಕೋಟೆಮಾರಮ್ಮ ಮಹಿಳಾ ಕಲಾ ತಂಡದಿಂದ 'ಕುರುಕ್ಷೇತ್ರ' ಪೌರಾಣಿಕ ನಾಟಕ ಪ್ರದರ್ಶನ, ನಿರ್ದೇಶನ: ರಂಗಸ್ವಾಮಿ ಶೆಟ್ಟಿ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಸಮುಚ್ಚಯ ಭವನ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

'ನಸುಕಿನ ನೊಗ' ನಾಟಕ ಪ್ರದರ್ಶನ: ಉದ್ಘಾಟನೆ: ಕೆ.ವಿ. ಪ್ರಭಾಕರ್, ಅಧ್ಯಕ್ಷತೆ: ಎಚ್.ಎಸ್. ನಾರಾಯಣಸ್ವಾಮಿ, ಆಯೋಜನೆ: ವಿಶ್ವಂ ಟಿ.ವಿ., ಯೋಗಕ್ಷೇಮ ಮೀಡಿಯಾ, ಸ್ಥಳ: ಪ್ರೆಸ್‌ಕ್ಲಬ್, ಸಂಜೆ 6.30

ಹೊನ್ನಾರು ರಂಗೋತ್ಸವ ಉದ್ಘಾಟನಾ ಸಮಾರಂಭ: ಉದ್ಘಾಟನೆ: ಸಿದ್ದರಾಮಯ್ಯ, ಸ್ಮರಣ ಸಂಚಿಕೆ ಬಿಡುಗಡೆ: ಡಿ.ಕೆ. ಶಿವಕುಮಾರ್, ಅತಿಥಿಗಳು: ಪ್ರಕಾಶ್ ರಾಜ್, ಎಚ್.ಜಿ. ದತ್ತಾತ್ರೇಯ (ದತ್ತಣ್ಣ), ಉಪಸ್ಥಿತಿ: ಜೆ. ಲೋಕೇಶ್, ಗುಂಡಣ್ಣ ಚಿಕ್ಕಮಗಳೂರು, ಗಿರಿಜಾ ಲೋಕೇಶ್, 'ಮುಖ್ಯಮಂತ್ರಿ' ಚಂದ್ರು, ಟಿ.ಎಸ್. ನಾಗಾಭರಣ, ರಂಗಗೌರವ: ವಿ.ಎಂ. ನಾಗೇಶ್, ನಾಟಕ ಪ್ರದರ್ಶನ: ಶರ್ಮಿಷ್ಠೆ, ತಂಡ: ರಂಗಸಂಪದ, ನಿರ್ದೇಶನ: ಚಿದಂಬರರಾವ್ ಜಂಬೆ, ಆಯೋಜನೆ: 50 ವರ್ಷಗಳು ತುಂಬಿದ ರಂಗತಂಡಗಳು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 6.30



ಶರ್ಮಿಷ್ಠೆ ನಾಟಕದ ದೃಶ್ಯ

'ಮಾವ.. ಮಾವ..! ಕಥೆ ಕೇಳು.!!' ನಾಟಕ ಪ್ರದರ್ಶನ: ನಿರ್ದೇಶನ: ವಿಜಯ್ ಕಶ್ಯಪ್ ಕೆ.ಎಸ್., ಆಯೋಜನೆ: ಕಲಾ ಪ್ರೇಮಿ ಫೌಂಡೇಷನ್, ಅನನ್ಯ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 7

‘ಎಸ್‌ಒಪಿ: ನಿಲುವು ತಿಳಿಸಿ’

ಚಿನ್ನಸ್ವಾಮಿ ಕ್ರೀಡಾಂಗಣ ಕಾಲ್ತುಳಿತ ದುರ್ಘಟನೆ ಪಿಐಎಲ್ : ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜನಸಂದಣಿ ನಿಯಂತ್ರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಪ್ರಮಾಣಿತ ಕಾರ್ಯಾಚರಣೆ ವಿಧಾನದ (ಎಸ್‌ಒಪಿ) ಪ್ರಮುಖ ಅಂಶಗಳನ್ನು ಕರ್ನಾಟಕ ಜನಸಂದಣಿ ನಿಯಂತ್ರಣ ಮಸೂದೆಯಲ್ಲಿ ಸೇರ್ಪಡೆ ಮಾಡುವ ಸಲಹೆ ಕುರಿತಂತೆ ನಿಮ್ಮ ನಿಲುವು ಏನೆಂಬುದನ್ನು ತಿಳಿಸಿ’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಕರಣದ ಅಮಿಕಸ್ ಕ್ಯೂರಿಯಾಗಿರುವ ಪದಾಂಕಿತ ಹಿರಿಯ ವಕೀಲೆ ಎಸ್. ಸುಶೀಲಾ, ‘ಸರ್ಕಾರ 2025ರ ಸೆಪ್ಟೆಂಬರ್ 1ರಂದು ಎಸ್‌ಒಪಿ ರೂಪಿಸಿದೆ. ಈ ನಿಟ್ಟಿನಲ್ಲಿ ಸಲಹೆ ನೀಡುವಂತೆ ನಮಗೆ ಕೋರಲಾಗಿತ್ತು. ನಾವು ನಮ್ಮ ಸಲಹೆಗಳನ್ನು ನೀಡಿದ್ದೇವೆ. ಅವುಗಳನ್ನು ಅಡಕಗೊಳಿಸಿ ಸರ್ಕಾರ ಕಳೆದ ತಿಂಗಳ 13ರಂದು ಪರಿಷ್ಕೃತ ಎಸ್‌ಒಪಿ ರೂಪಿಸಿದೆ. ಏತನ್ಮಧ್ಯೆ, 2025ರ ಆಗಸ್ಟ್ 20ರಂದು ಜನಸಂದಣಿ ನಿಯಂತ್ರಣಕ್ಕೆ ರಾಜ್ಯ ಸರ್ಕಾರ ಮಸೂದೆಯೊಂದನ್ನು ರೂಪಿಸಿದೆ. ಇದು ಸದನ ಸಮಿತಿಯ ಪರಿಗಣನೆಯಲ್ಲಿದೆ. ಮಸೂದೆಗೆ ಹೋಲಿಕೆ ಮಾಡಿದರೆ ಎಸ್‌ಒಪಿ ಅತ್ಯಂತ ಪರಿಣಾಮಕಾರಿಯಾಗಿದೆ. ಹಾಗಾಗಿ, ಇದರಲ್ಲಿನ ಅಂಶಗಳನ್ನು ಅಲ್ಲಿ ಅಡಕಗೊಳಿಸಿದರೆ ಒಳ್ಳೆಯದು. ಅಂತೆಯೇ, ಆರ್‌ಸಿಬಿ ತನ್ನ ಮುಂದಿನ ಐಪಿಎಲ್ ಟೂರ್ನಿ ಪಂದ್ಯಗಳನ್ನು ಇದೇ ಕ್ರೀಡಾಂಗಣದಲ್ಲಿ ನಡೆಸಲು ಬಯಸಿದೆ ಎನ್ನಲಾಗಿದೆ. ಅದಕ್ಕೂ ಮುನ್ನ ಎಸ್‌ಒಪಿ ಜಾರಿಗೊಳಿಸಲು ನಿರ್ದೇಶಿಸಬೇಕು’ ಎಂದು ಕೋರಿದರು. ವಿಚಾರಣೆಯನ್ನು ಇದೇ 23ಕ್ಕೆ ಮುಂದೂಡಲಾಗಿದೆ.

ವಜಾ: ‘ಕಾಲ್ತುಳಿತ ಪ್ರಕರಣದಲ್ಲಿ ಸಾವನ್ನಪ್ಪಿದ ಸಂತ್ರಸ್ತರ ಕುಟುಂಬದ ಸದಸ್ಯರಿಗೆ ಪರಿಹಾರ ಹಂಚಿಕೆಯಲ್ಲಿ ತಾರತಮ್ಯ ಎಸಗಲಾಗಿದೆ. ಇದನ್ನು ಸರಿಪಡಿಸುವ ಸಂಬಂಧ ಮಧ್ಯಂತರ ಅರ್ಜಿ ಸಲ್ಲಿಸಲಾಗಿದ್ದು ಪರಿಗಣಿಸಬೇಕು’ ಎಂದು ಕೋರಿ ವಕೀಲ ರಮೇಶ್ ನಾಯ್ಕ್ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ನ್ಯಾಯಪೀಠ ಇದೇ ವೇಳೆ ವಜಾಗೊಳಿಸಿತು.

ವಿದ್ಯುತ್: ಯೂನಿಟ್‌ಗೆ 50 ಪೈಸೆ ಹೆಚ್ಚಳ ಖಚಿತ

ಒಂದನೇ ಪುಟದಿಂದ...

ಇದಲ್ಲದೆ ಕೈಗಾರಿಕೆ ಮತ್ತು ವಾಣಿಜ್ಯ ಬಳಕೆಯ ವಿದ್ಯುತ್ ದರ ಯೂನಿಟ್‌ಗೆ 99 ಪೈಸೆ ಹೆಚ್ಚಳವಾಗುವ ಸಾಧ್ಯತೆ ಇದೆ. ಐದು ವಿದ್ಯುತ್ ಸರಬರಾಜು ಕಂಪನಿಗಳು(ಎಸ್ಕಾಂ) 2024–25ನೇ ಸಾಲಿನ ವಾರ್ಷಿಕ ಕಾರ್ಯಕ್ಷಮತೆ ವರದಿಯನ್ನು ಆಯೋಗಕ್ಕೆ ಸಲ್ಲಿಸಿದ್ದು ಆದಾಯದಲ್ಲಿ ಸುಮಾರು ₹4,900 ಕೋಟಿ ಖೋತಾ ಆಗಿರುವುದನ್ನು ಪ್ರಸ್ತಾಪಿಸಲಾಗಿದೆ.

ಆದಾಯದಲ್ಲಿ ಖೋತಾ ಆಗಿರುವುದರಿಂದ, ಇದನ್ನು ಸರಿದೂಗಿಸಿಕೊಡಬೇಕು ಎಂದು ಎಸ್ಕಾಂಗಳು ಆಯೋಗದ ಮೊರೆ ಹೋಗಿದ್ದು, ಆಯೋಗವು ಅಹವಾಲು ಆಲಿಸುವ ಪ್ರಕ್ರಿಯೆ ಪ್ರಾರಂಭಿಸಿದೆ. ಬೆಸ್ಕಾಂ ಮತ್ತು ಕೆಪಿಟಿಸಿಎಲ್ ಸಲ್ಲಿಸಿರುವ ವಾರ್ಷಿಕ ಕಾರ್ಯಕ್ಷಮತೆ ವರದಿಯ ಆಧಾರದ ಮೇಲೆ ಆಯೋಗ ಶುಕ್ರವಾರ ಅಹವಾಲು ಆಲಿಸಿತು.

ಐದು ಕಂಪನಿಗಳ ಅಹವಾಲುಗಳ ಸಭೆ ಮುಗಿದ ನಂತರ ಆಯೋಗ ಮಾರ್ಚ್ ಮಧ್ಯ ಭಾಗದಲ್ಲಿ ದರ ಹೆಚ್ಚಳ ಮಾಡಲಿದೆ. ಪರಿಷ್ಕೃತ ದರ ಏಪ್ರಿಲ್ ಒಂದರಿಂದ ಜಾರಿಗೆ ಬರಲಿದೆ ಎಂದು ಮೂಲಗಳು ತಿಳಿಸಿವೆ.

ಆಯೋಗಕ್ಕೆ ಸಲ್ಲಿಸಿರುವ ಮಾಹಿತಿ ಪ್ರಕಾರ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ (ಬೆಸ್ಕಾಂ) ಅತಿ ಹೆಚ್ಚು, ಅಂದರೆ 2,802.82 ಕೋಟಿ ಖೋತಾ ಆಗಿದೆ. ಉಳಿದೆಲ್ಲ ಎಸ್ಕಾಂಗಳ ಆದಾಯದಲ್ಲೂ ಎರಡು ಸಾವಿರ ಕೋಟಿಗೂ ಅಧಿಕ ಖೋತಾ ಆಗಿದೆ. ದರ ಪರಿಷ್ಕರಣೆ ಮಾಡದಿದ್ದರೆ ಕಂಪನಿಗಳ ನಿರ್ವಹಣೆ ಕಷ್ಟವಾಗಲಿದೆ. ಆರ್ಥಿಕವಾಗಿ ಸಂಕಷ್ಟ ಎದುರಿಸಬೇಕಾಗುತ್ತದೆ ಎಂದು ವಿವರಿಸಲಾಗಿದೆ.

ಕೃಷಿಗೆ ಕಡಿಮೆ: ಈ ಮಧ್ಯೆ ಕೃಷಿ ಪಂಪ್‌ಸೆಟ್‌ಗಳಿಗೆ ನಿಗದಿ ಮಾಡಿರುವ ವಿದ್ಯುತ್ ದರವನ್ನು ಕಡಿಮೆ ಮಾಡಿ, ವಾಣಿಜ್ಯ ಸಂಸ್ಥೆಗಳು ಮತ್ತು ಕೈಗಾರಿಕೆಗಳಿಗೆ ನಿಗದಿ ಮಾಡಿರುವ ದರವನ್ನು ಜಾಸ್ತಿ ಮಾಡುವಂತೆ ಎಸ್ಕಾಂಗಳು ಪ್ರತ್ಯೇಕ ಅರ್ಜಿ ಸಲ್ಲಿಸಿದ್ದು, ಈ ತಿಂಗಳ 25ರಂದು ಆ ಅರ್ಜಿಗಳ ವಿಚಾರಣೆಯನ್ನು ಆಯೋಗ ನಡೆಸಲಿದೆ.

ಕೃಷಿ ಪಂಪ್‌ಸೆಟ್‌ಗಳಿಗೆ ಪೂರೈಸುವ ಪ್ರತಿ ಯೂನಿಟ್ ವಿದ್ಯುತ್‌ಗೆ ₹6.80 ಇದ್ದ ದರವನ್ನು ಆಯೋಗವು ₹8.25ಕ್ಕೆ ಹೆಚ್ಚಿಸಿತ್ತು. ಪಂಪ್‌ಸೆಟ್‌ಗಳಿಗೆ ಉಚಿತವಾಗಿ ವಿದ್ಯುತ್ ನೀಡುವ ಕಾರಣ, ಇದರ ವೆಚ್ಚವನ್ನು ಸಹಾಯಧನದ ರೂಪದಲ್ಲಿ ಸರ್ಕಾರ ಎಸ್ಕಾಂಗಳಿಗೆ ತುಂಬಿಕೊಡಬೇಕು.

ಕಳೆದ ವರ್ಷ ದರ ಪರಿಷ್ಕರಣೆ ಆಗುವ ಮುನ್ನ ಸರ್ಕಾರ ಸುಮಾರು ₹18 ಸಾವಿರ ಕೋಟಿ ಸಹಾಯಧನವನ್ನು ನೀಡುತ್ತಿತ್ತು. ಪರಿಷ್ಕರಣೆ ನಂತರ ಇದು ಸುಮಾರು ₹21 ಸಾವಿರ ಕೋಟಿಗೆ ಹೆಚ್ಚಾಗಿದೆ. ಇಷ್ಟೊಂದು ಹಣವನ್ನು ಸಹಾಯಧನ ರೂಪದಲ್ಲಿ ನೀಡುವುದು ಕಷ್ಟ ಎಂಬ ಕಾರಣಕ್ಕಾಗಿ ಸರ್ಕಾರದ ಸೂಚನೆಯಂತೆ ಎಸ್ಕಾಂಗಳು ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಿವೆ ಎಂದು ಮೂಲಗಳು ತಿಳಿಸಿವೆ.

ಕಳೆದ ವರ್ಷ ಪ್ರಕಟಿಸಿದ್ದ ಬಹುವಾರ್ಷಿಕ ದರ ಪಟ್ಟಿ

ವರ್ಷ	ಹೆಚ್ಚಳ(ಯೂನಿಟ್‌ಗೆ)
2025-26	36 ಪೈಸೆ
2026-27	35 ಪೈಸೆ
2027-28	34 ಪೈಸೆ

‘ಸ್ಮಾರ್ಟ್ ಕಾರ್ಡ್ ಯೋಜನೆ ಕೈ ಬಿಡಿ’

ಬೆಂಗಳೂರು: ‘ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ನೀಡುವ ಶಕ್ತಿ ಯೋಜನೆಯನ್ನು ಸ್ಮಾರ್ಟ್ ಕಾರ್ಡ್ ಹೆಸರಿನಲ್ಲಿ ದುರ್ಬಲಗೊಳಿಸುವ ಪ್ರಯತ್ನ ಕೈಬಿಡಿ’ ಎಂದು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ರಾಜ್ಯ ಸಮಿತಿ ಆಗ್ರಹಿಸಿದೆ.

‘ರಾಜ್ಯ ಸರ್ಕಾರ ತರಲು ಹೊರಟಿರುವ ಸ್ಮಾರ್ಟ್ ಕಾರ್ಡ್ ಮೂಲಕ ಪ್ರಯಾಣಿಸುವವರ ಸಮುದಾಯಗಳ ವಿವರ ಪಡೆಯುವ ಪ್ರಯತ್ನ ಒಳ್ಳೆಯದಲ್ಲ. ಈಗ ಇರುವಂತೆ ಆಧಾರ್ ಇದ್ದರೆ ಸಾಕು’ ಎಂದು ಸಮಿತಿಯ ರಾಜ್ಯ ಕಾರ್ಯದರ್ಶಿ ಎಸ್. ಶೋಭಾ ತಿಳಿಸಿದ್ದಾರೆ.

‘ಒತ್ತುವರಿ ತೆರವು: ಸಮಿತಿ ರಚಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೆ.ಪಿ.ನಗರದ ಪುಟ್ಟೇನಹಳ್ಳಿ ಬಳಿಯ ಸಾರಕ್ಕಿ ಕೆರೆ ಬಫರ್ ವಲಯದ ಒತ್ತುವರಿ ಮತ್ತು ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಲು ಸಮಿತಿ ರಚನೆ ಮಾಡಿ’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

‘ಸಾರಕ್ಕಿ ಕೆರೆ ಬಫರ್ ವಲಯದಲ್ಲಿನ ಒತ್ತುವರಿ ತೆರವುಗೊಳಿಸಲು ಸರ್ಕಾರ ಮತ್ತು ಸಂಬಂಧಿಸಿದ ಇಲಾಖೆಗೆ ಆದೇಶಿಸಬೇಕು’ ಎಂದು ಕೋರಿ ‘ಸಾರಕ್ಕಿ ಕೆರೆ ಪ್ರದೇಶ ಅಭಿವೃದ್ಧಿ ಟ್ರಸ್ಟ್’ ಅಧ್ಯಕ್ಷ ಕೆ.ಎಸ್.ಭಟ್ (84) ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

‘ಕೆರೆ ಪ್ರದೇಶ ಒತ್ತುವರಿ ತೆರವಿಗೆ ಅಗತ್ಯ ಕ್ರಮ ಕೈಗೊಳ್ಳಲು ಬೆಂಗಳೂರು ನಗರ ಜಿಲ್ಲಾಧಿಕಾರಿ, ಜಿಬಿಎ ಮತ್ತು ಕೆರೆ ಅಭಿವೃದ್ಧಿ ಪ್ರಾಧಿಕಾರದ ಪ್ರತಿನಿಧಿಗಳೂ ಸೇರಿದಂತೆ ಸಂಬಂಧಪಟ್ಟಂತೆ ಅಗತ್ಯ ಎನಿಸುವ ಉಳಿದ ಪಾಲುದಾರರನ್ನು ಒಳಗೊಂಡ ಸಮಿತಿ ರಚಿಸಬೇಕು. ಮೂರು ವಾರದೊಳಗೆ ಈ ಸಮಿತಿ ರಚಿಸಿ ಆದೇಶ ಹೊರಡಿಸಬೇಕು’ ಎಂದು ನ್ಯಾಯಪೀಠ ಆದೇಶಿಸಿದೆ.

‘ಆದೇಶದ ಅನುಪಾಲನಾ ವರದಿ ಸಲ್ಲಿಕೆಗಾಗಿ ಜೂನ್ 30ಕ್ಕೆ ಅರ್ಜಿಯನ್ನು ನ್ಯಾಯಪೀಠದ ಮುಂದೆ ಪಟ್ಟಿ ಮಾಡಬೇಕು’ ಎಂದು ರಿಜಿಸ್ಟ್ರಿಗೆ ನಿರ್ದೇಶಿಸಿರುವ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿದೆ.

ಜಿಬಿಎ ಪುನರ್ ರಚನೆ: 86 ಸದಸ್ಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರವನ್ನು (ಜಿಬಿಎ) ಪುನರ್ ರಚಿಸಿ, ಹೆಚ್ಚಿನ ಸದಸ್ಯರನ್ನು ಸೇರಿಸಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

2025ರ ಸೆಪ್ಟೆಂಬರ್ 2ರಿಂದ ಜಾರಿಗೆ ಬಂದಿದ್ದ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ 71 ಸದಸ್ಯರನ್ನು ನೇಮಿಸಿ, 2025ರ ಆಗಸ್ಟ್ 25ರಂದು ಅಧಿಸೂಚನೆ ಹೊರಡಿಸಲಾಗಿತ್ತು. ಈ ಅಧಿಸೂಚನೆಯನ್ನು ಪರಿಷ್ಕರಿಸಿ, 86 ಸದಸ್ಯರನ್ನು ನೇಮಿಸಿ ಫೆ.20ರಂದು ಪರಿಷ್ಕೃತ ಅಧಿಸೂಚನೆ ಹೊರಡಿಸಲಾಗಿದೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಸೇರಿದಂತೆ ಹಲವು ಅಧಿಕಾರಿಗಳನ್ನು ಜಿಬಿಎ ಸದಸ್ಯರನ್ನಾಗಿ ನೇಮಿಸಿಕೊಳ್ಳಲು ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಗೆ (ಜಿಬಿಜಿಎ) ತಿದ್ದುಪಡಿ ತರಲಾಗಿತ್ತು. ಅದರಂತೆ, ಜಿಬಿಎ ವ್ಯಾಪ್ತಿಯ ಎಲ್ಲ ಶಾಸಕರು, ವಿಧಾನ ಪರಿಷತ್ ಸದಸ್ಯರನ್ನೂ ಜಿಬಿಎ ಸದಸ್ಯರನ್ನಾಗಿ ನೇಮಿಸಲಾಗಿದೆ.

ಇಂದಿನಿಂದ ಆಸ್ತಿ ಹರಾಜು

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಏಳು ಸಾವಿರಕ್ಕೂ ಹೆಚ್ಚು ಆಸ್ತಿಗಳಿಂದ ₹437 ಕೋಟಿ ತೆರಿಗೆ ಬಾಕಿ ವಸೂಲಿ ಮಾಡಲು ನಗರ ಪಾಲಿಕೆಗಳು ಹರಾಜು ಪ್ರಕ್ರಿಯೆಯನ್ನು ಫೆ.21ರಿಂದ ಆರಂಭಿಸಲಿವೆ.

ನಗರ ಪಾಲಿಕೆಗಳ ಜಂಟಿ ಆಯುಕ್ತರು ಈ ಬಗ್ಗೆ ನೋಟಿಸ್‌ಗಳನ್ನು ಜಾರಿ ಮಾಡಿದ್ದು, ಆಯಾ ಜಂಟಿ ಆಯುಕ್ತರ ಕಚೇರಿಯಲ್ಲಿ ಶನಿವಾರ ಬೆಳಿಗ್ಗೆ 11 ಗಂಟೆಯಿಂದ ಹರಾಜು ಪ್ರಕ್ರಿಯೆ ಆರಂಭವಾಗಲಿದೆ.

ಯಾವ ಪಾಲಿಕೆಯಲ್ಲಿ ಎಷ್ಟು ಆಸ್ತಿ ತೆರಿಗೆ ಬಾಕಿ?

ನಗರ ಪಾಲಿಕೆ	ಆಸ್ತಿಗಳು	ಒಟ್ಟು ಬಾಕಿ (ಕೋಟಿಗಳಲ್ಲಿ)
ಪೂರ್ವ	1,615	₹119.90
ಪಶ್ಚಿಮ	1,504	₹84.23
ಕೇಂದ್ರ	1,398	₹81.26
ಉತ್ತರ	1,156	₹79.83
ದಕ್ಷಿಣ	1,347	₹72.30
ಒಟ್ಟು	7,020	₹437.55

ಬಾಗಲಕೋಟೆ ತರಕಾರಿ ಮಾರುಕಟ್ಟೆ ಬಳಿ ಶುಕ್ರವಾರ ಕಲ್ಲು ತೂರಾಟ ನಡೆದ ಕಾರಣ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿ ಯುವಕರನ್ನು ಚದುರಿಸಿದರು

ಕಲ್ಲು ತೂರಾಟ: 8 ಮಂದಿ ಸೆರೆ

ಒಂದನೇ ಪುಟದಿಂದ...

‘ಸಂಜೆ 5 ಗಂಟೆಗೆ ಆರಂಭವಾದ ಮೆರವಣಿಗೆಯು ರಾತ್ರಿ 10 ಗಂಟೆಗೆ ಮಸೀದಿ ಸಮೀಪಿಸುತ್ತಿದ್ದಂತೆಯೇ, ಅಲ್ಲಿದ್ದ ತಂಜೀರ್ ಎಂಬವರು ಎರಡು ಸಣ್ಣ ಕಲ್ಲುಗಳನ್ನು ತೆಗೆದುಕೊಂಡು ಎಸೆದಿದ್ದಾರೆ. ಅದು ಪೊಲೀಸ್ ಸಿಬ್ಬಂದಿ ಮತ್ತು ವ್ಯಕ್ತಿಯೊಬ್ಬರ ಮೇಲೆ ಬಿತ್ತು. ಯಾರಿಗೂ ಗಂಭೀರ ಗಾಯಗಳು ಆಗಲಿಲ್ಲ. ಬೇರೆ ಯಾವುದೇ ಕಲ್ಲು ತೂರಾಟ ಆಗಿಲ್ಲ ಎಂದು ಲಭ್ಯವಾದ ವಿಡಿಯೊ ದೃಶ್ಯಾವಳಿಗಳಿಂದ ಗೊತ್ತಾಗಿದೆ’ ಎಂದು ವಿವರಿಸಿದರು.

‘ಪರಿಸ್ಥಿತಿ ಉದ್ವಿಗ್ನಗೊಂಡ ತಕ್ಷಣವೇ ಕ್ರಮ ಕೈಗೊಂಡೆವು. ಹಿಂದೂ ಮತ್ತು ಮುಸ್ಲಿಂ ಮುಖಂಡರನ್ನು ವಿಶ್ವಾಸಕ್ಕೆ ಪಡೆದು, ಪರಿಸ್ಥಿತಿ ನಿಭಾಯಿಸಿದೆವು. ನಂತರ ಮೆರವಣಿಗೆಯು ಮಸೀದಿ ಎದುರಿನಿಂದ ಶಾಂತಿಯುತವಾಗಿ ಸಾಗಿತು. ಮಸೀದಿಯಲ್ಲಿ ಪ್ರಾರ್ಥನೆ ನಿರಾತಂಕವಾಗಿ ನೆರವೇರಿತು’ ಎಂದು ತಿಳಿಸಿದರು.

ಮತ್ತೊಮ್ಮೆ ಕಲ್ಲು ತೂರಾಟ: ನಗರದ ತರಕಾರಿ ಮಾರುಕಟ್ಟೆ ಬಳಿ ಶುಕ್ರವಾರ ಕಲ್ಲು ತೂರಾಟ ನಡೆದಿದ್ದು, ಯುವಕರ ಗುಂಪನ್ನು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದರು.

ನಗರದ ಬಹುತೇಕ ಅಂಗಡಿಗಳು ಮುಚ್ಚಿದ್ದವು. ರಸ್ತೆಗಳು ಬಿಕೋ ಎನ್ನುತ್ತಿದ್ದವು. ವಾತಾವರಣ ಬಿಗುವಿನಿಂದ ಕೂಡಿದೆ. ಬೆಳಗಾವಿ ಉತ್ತರ ವಲಯದ ಐಜಿಪಿ ಚೇತನ್ ಸಿಂಗ್ ರಾಥೋಡ್ ಘಟನಾ ಸ್ಥಳಗಳಿಗೆ ಭೇಟಿ ನೀಡಿ, ಪರಿಸ್ಥಿತಿ ಅವಲೋಕಿಸಿದರು.

ನಿಧನ ವಾರ್ತೆ

ಕೆ.ಬಾಲಕೃಷ್ಣಚಾರಿ



ಕೆ.ಬಾಲ ಕೃಷ್ಣಚಾರಿ

ರಾಮನಗರ: ಕಳೆದ 40 ವರ್ಷಗಳಿಂದ ‘ಪ್ರಜಾವಾಣಿ’ ದಿನಪತ್ರಿಕೆ ಏಜೆಂಟರಾಗಿ ಕೆಲಸ ಮಾಡುತ್ತಿದ್ದ ಬೆಂಗಳೂರು ದಕ್ಷಿಣ ತಾಲ್ಲೂಕಿನ ಸೋಮನಹಳ್ಳಿ ನಿವಾಸಿ ಕೆ.ಬಾಲಕೃಷ್ಣಚಾರಿ (63) ಅನಾರೋಗ್ಯದಿಂದಾಗಿ ಗುರುವಾರ ನಿಧನ ಹೊಂದಿದರು.

ಲೋಕೋಪಯೋಗಿ ಇಲಾಖೆ ನಿವೃತ್ತ ಉದ್ಯೋಗಿಯಾಗಿದ್ದ ಬಾಲಕೃಷ್ಣಚಾರಿ ಅವರಿಗೆ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರಿದ್ದಾರೆ. ಸುದೀರ್ಘ ಅವಧಿವರೆಗೆ ಏಜೆಂಟರಾಗಿ ಕೆಲಸ ಮಾಡುತ್ತಿದ್ದ ಅವರು, ‘ಪ್ರಜಾವಾಣಿ’ ಬಾಲಕೃಷ್ಣಚಾರಿ ಎಂದೇ ಜನಪ್ರಿಯರಾಗಿದ್ದರು. ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದವರು ತಿಳಿಸಿದರು.

ಓ ಗೆಳತಿ ಇರಲಿ

ಸೆಲ್ಫ್ ಲವ್



ಹೆಣ್ಣುಮಕ್ಕಳೇ, ನಿಮ್ಮನ್ನು ನೀವು ಪ್ರೀತಿಸಿಕೊಳ್ಳುವುದರಿಂದ ನಿಮಗಷ್ಟೇ ಅಲ್ಲ, ನಿಮ್ಮ ಆಪ್ತೇಷ್ಟರಿಗೂ ಲಾಭ ಇದೆ ಎಂಬುದು ನಿಮಗೆ ಗೊತ್ತೇ?

• ಸುಧಾ ಶರ್ಮಾ ಚವತ್ತಿ

‘ಸೆಲ್ಫ್ ಲವ್ ಅಥವಾ ಸ್ವಯಂ ಪ್ರೀತಿ ಬಹಳ ಮುಖ್ಯ’ ಎಂದು ಯಾರಾದರೂ ಹೇಳಿದರೆ, ‘ಹಾಗಿದ್ದರೆ ಅದು ಸ್ವಾರ್ಥ ಅಲ್ಲವೇ?’ ಎಂಬ ಪ್ರಶ್ನೆ ಮರುಕ್ಷಣವೇ ಎದುರಾಗುತ್ತದೆ. ಹೌದು, ಅವರು ಹೀಗೆ ಕೇಳುವುದಕ್ಕೂ ಕಾರಣ ಇದೆ. ಏಕೆಂದರೆ ನಾವು ಹೆಣ್ಣುಮಕ್ಕಳು ಬೆಳೆದುಬಂದಿರುವುದೇ ಹಾಗೆ. ಒಂದು ಹೆಣ್ಣು ಬೇರೆಯವರ ಮನೆಗೆ ಮದುವೆಯಾಗಿ ಹೋಗಿ, ಅತ್ತೆ, ಮಾವ, ಅತ್ತಿಗೆ, ನಾದಿನಿ, ಮೈದುನ... ಹೀಗೆ ಅಲ್ಲಿರುವ ಎಲ್ಲರನ್ನೂ ತನ್ನವರೆಂದು ತಿಳಿದು ಪ್ರೀತಿಸಬೇಕು. ಅಂದರೆ, ಇಲ್ಲಿ ಅವಳಿಗೇ ಅರಿವಿಲ್ಲದಂತೆ ಅವಳಲ್ಲಿ ಮಾತೃತ್ವದ ಭಾವನೆಯನ್ನು ತುಂಬಲಾಗಿರುತ್ತದೆ. ಇದು ಖಂಡಿತ ತಪ್ಪಲ್ಲ. ಆದರೆ ಅವಳು ತನ್ನನ್ನೂ ಪ್ರೀತಿಸಿಕೊಳ್ಳಬೇಕಾದುದು ಅಷ್ಟೇ ಮುಖ್ಯ. ತನ್ನೊಳಗೆ ಏನಿದೆಯೊ ಅದನ್ನೇ ಅವಳು ಹೊರಗಿನವರಿಗೂ ಕೊಡುತ್ತಾಳೆ; ಹಾಗಾಗಿ, ತನ್ನೊಳಗೆ ಪ್ರೀತಿಯನ್ನು ತುಂಬಿಕೊಳ್ಳಲು ಮತ್ತು ಆ ಮೂಲಕ ಇತರರನ್ನು ಇನ್ನಷ್ಟು ಚೆನ್ನಾಗಿ ಪ್ರೀತಿಸಲು ಅವಳಿಗೆ ಸೆಲ್ಫ್ ಲವ್‌ನ ಅಗತ್ಯ ಇರುತ್ತದೆ.

ಸೆಲ್ಫ್ ಲವ್ ಅಂದರೆ ನಮ್ಮ ಬೇಕು–ಬೇಡಗಳ ಬಗ್ಗೆ ನಮಗೆ ಗೊತ್ತಾಗುವುದು, ನಮ್ಮನ್ನು ನಾವು ಸಮರ್ಥಿಸಿಕೊಳ್ಳುವುದು ಎಂದೆಲ್ಲ ಬಹುತೇಕರು ಭಾವಿಸಿರುತ್ತಾರೆ. ಆದರೆ ಸ್ವಯಂ ಪ್ರೀತಿ ಇವೆಲ್ಲವನ್ನೂ ಮೀರಿದ್ದು. ವಾಸ್ತವದಲ್ಲಿ ಅದು ನಮ್ಮ ಅಸ್ಮಿತೆಯೇ ಆಗಿರುತ್ತದೆ. ಅದಿಲ್ಲದೇ ಇದ್ದಾಗ ನಾವು ಹೇಗೆ ವರ್ತಿಸುತ್ತೇವೆ ಎನ್ನುವುದನ್ನು ತಿಳಿದುಕೊಂಡರೆ, ಈ ಪರಿಕಲ್ಪನೆ ಇನ್ನಷ್ಟು ಸರಿಯಾಗಿ ಅರ್ಥವಾಗುತ್ತದೆ.

ನಾವು ಸ್ವಯಂ ಪ್ರೀತಿಯನ್ನು ಹೊಂದಿದ್ದಾಗ ನಮ್ಮೊಳಗೆ ಅಭದ್ರತೆಯ ಭಾವನೆ ಇರುವುದಿಲ್ಲ. ಅದೇ ಸ್ವಯಂ ಪ್ರೀತಿಯ ಕೊರತೆ ಇದ್ದಾಗ ಅಭದ್ರತೆಯ ಭಾವನೆ ನಮ್ಮನ್ನು ಕಾಡುತ್ತದೆ. ಆಗ ನಾವು ಯಾವಾಗಲೂ ಇತರರ ಮೆಚ್ಚುಗೆಯನ್ನು ಬಯಸುತ್ತೇವೆ. ಇತರರ ದೃಷ್ಟಿಕೋನದಿಂದ ನಮ್ಮನ್ನು ನೋಡತೊಡಗುತ್ತೇವೆ. ಬೇರೆಯವರ ಎದುರು ನಾನು ಚೆನ್ನಾಗಿ ಕಾಣಬೇಕು, ಸುಖವಾಗಿ ಇದ್ದೇನೆಂದು ತೋರಿಸಿಕೊಳ್ಳಬೇಕು ಎಂದೆಲ್ಲ. ಅಂದರೆ, ನಮಗೆ ನಮಗಿಂತ ಬೇರೆಯವರ ಅಭಿಪ್ರಾಯವೇ ಮುಖ್ಯವಾಗಿ ಬಿಡುತ್ತದೆ.

ಇತರರು ನಮ್ಮನ್ನು ಪ್ರೀತಿಸಬೇಕು, ಗೌರವಿಸಬೇಕು, ನಮ್ಮ ಭಾವನೆಗಳಿಗೆ ಬೆಲೆ ಕೊಡಬೇಕು ಎಂಬ ಒತ್ತಾಸೆಗಳೆಲ್ಲ ಹುಟ್ಟಿಕೊಳ್ಳುತ್ತವೆ. ಹೀಗೆ ನಮ್ಮ ಸಂತೋಷ, ನೆಮ್ಮದಿ ಇತರರ ಮೇಲೆ ಅವಲಂಬಿತವಾಗಿರುತ್ತದೆ. ಆಗ ಅನ್ಯರೊಂದಿಗೆ ನಮ್ಮನ್ನು ನಾವು ಹೋಲಿಸಿಕೊಂಡು ಕುಗ್ಗುತ್ತೇವೆ. ಮುಖ್ಯವಾದ ವಿಷಯಗಳಲ್ಲಿ ಸರಿಯಾದ ನಿರ್ಧಾರ ತೆಗೆದುಕೊಳ್ಳುವುದಿಲ್ಲ. ನಮ್ಮಲ್ಲಿ ಆತ್ಮವಿಶ್ವಾಸದ ಕೊರತೆ ಎದ್ದು ಕಾಣುತ್ತದೆ. ಎಲ್ಲದಕ್ಕೂ ಹಿಂಜರಿಯುತ್ತೇವೆ. ಸಂಕಷ್ಟದ ಸಮಯದಲ್ಲಿ ಅಧೀರರಾಗುತ್ತೇವೆ. ಯಾವುದೇ ಸವಾಲಿನ ಸನ್ನಿವೇಶವನ್ನು ಎದುರಿಸಲಾರದವರಾಗುತ್ತೇವೆ.

ಮುಖ್ಯವಾಗಿ, ನಮ್ಮ ಬಗೆಗೆ ನಾವು ನಕಾರಾತ್ಮಕವಾದ ಮಾತುಗಳನ್ನು ಹೇಳಿಕೊಳ್ಳುತ್ತೇವೆ. ನನ್ನ ಹಣೆಬರಹವೇ ಇಷ್ಟು, ನಾನು ಯಾವುದಕ್ಕೂ ಪ್ರಯೋಜನ ಇಲ್ಲ, ನಾನು ಪಡೆದುಕೊಂಡು ಬಂದಿರುವ ಪ್ರಾರಬ್ಧಕರ್ಮ ಇದು, ನನ್ನ ಯೋಗ್ಯತೆಗೆ ಇದೇ ಹೆಚ್ಚು, ನನ್ನಿಂದ ಇದು ಸಾಧ್ಯ ಇಲ್ಲ, ಎಲ್ಲರೂ ನನ್ನನ್ನು ಬಳಸಿಕೊಳ್ಳುತ್ತಾರೆ... ಹೀಗೆ ನಮಗೆ ನಾವೇ ಹೇಳಿಕೊಳ್ಳುವ ನಕಾರಾತ್ಮಕವಾದ ಮಾತುಗಳಿಂದ ಅಥವಾ ಸೆಲ್ಫ್ ಟಾಕ್ ಮೂಲಕ ನಮಗೇ ಗೊತ್ತಿಲ್ಲದಂತೆ ನಮ್ಮನ್ನು ನಾವು ಮಿತಿಗೆ ಒಳಪಡಿಸಿಕೊಳ್ಳುತ್ತೇವೆ.

ಆಗ ನಮ್ಮ ಆದ್ಯತೆಗಳು ನಮ್ಮ ಅರಿವಿಗೇ ಬರುವುದಿಲ್ಲ. ಉದಾಹರಣೆಗೆ, ಒಬ್ಬ ಗೃಹಿಣಿಯು ಮನೆಯಲ್ಲಿ ಗಂಡ, ಮಕ್ಕಳು, ವಯಸ್ಸಾದವರು ಸೇರಿದಂತೆ ಎಲ್ಲರ ಆದ್ಯತೆಗಳಿಗೂ ಗಮನ ಕೊಡುತ್ತಾಳೆ. ಆದರೆ ಆಕೆಗೆ ತನ್ನ ಅಗತ್ಯಗಳೇ ಅರ್ಥವಾಗುವುದಿಲ್ಲ. ಸರಿಯಾದ ಸಮಯಕ್ಕೆ ಊಟ ಮಾಡುವುದು, ತನಗಾಗಿ ಸಮಯ ಕೊಟ್ಟುಕೊಳ್ಳುವುದು, ತನ್ನನ್ನು ತಾನು ಉಲ್ಲಾಸದಿಂದ ಇಟ್ಟುಕೊಳ್ಳಲು ಪ್ರಯತ್ನಿಸುವುದು ಇವೆಲ್ಲವೂ ತನಗೆ ಮುಖ್ಯ ಎಂದು ಆಕೆ ಪರಿಗಣಿಸುವುದೇ ಇಲ್ಲ. ಇಂತಹ ಸ್ಥಿತಿಯಲ್ಲಿ ನಮ್ಮ ಬೇಕು–ಬೇಡಗಳ ಕುರಿತು ನಮಗೆ ಖಚಿತವಾದ ನಿಲುವು ಅಥವಾ ಸ್ಪಷ್ಟತೆ ಇರುವುದಿಲ್ಲ. ‘ಎಸ್’ ಎನ್ನುವ ಕಡೆ ‘ನೋ’ ಎನ್ನುತ್ತೇವೆ, ‘ನೋ’ ಎನ್ನಬೇಕಾದಾಗ ‘ಎಸ್’ ಎಂದಿರುತ್ತೇವೆ. ಹೀಗಿದ್ದಾಗ ನಾವು ಎಲ್ಲದಕ್ಕೂ ಬೇರೆಯವರನ್ನು ಹೊಣೆ ಮಾಡತೊಡಗುತ್ತೇವೆ.

ನಮಗೆ ನಾವೇ ವಿಧಿಸಿಕೊಳ್ಳಬೇಕಾದ ಚೌಕಟ್ಟು ಮುಖ್ಯವಾದಾಗ ಇತರರ ಚೌಕಟ್ಟನ್ನೂ ನಾವು ಗೌರವಿಸುತ್ತೇವೆ. ಮನೆಯಲ್ಲಿ ಗಂಡ, ಮಕ್ಕಳು, ಜೊತೆಗಿರುವವರ ಬಗೆಗೆ ನಮ್ಮ ನಿಲುವಿನಲ್ಲಿ ಬದ್ಧತೆ ಇರುತ್ತದೆ. ಯಾರ ಜೊತೆಗೆ ಹೇಗೆ ವರ್ತಿಸಬೇಕು ಎನ್ನುವುದರ ಅರಿವಿರುತ್ತದೆ. ಅಭದ್ರತೆಯ ಭಾವನೆ ಇದ್ದಾಗ ನಮ್ಮದೇ ಆದ ಮೌಲ್ಯದ ಕೊರತೆಯೂ ನಮ್ಮನ್ನು ಕಾಡುತ್ತದೆ. ಅಂದರೆ ಅದೊಂದು ಬದ್ಧತೆಯ ಕೊರತೆಯೂ ಹೌದು. ಇಲ್ಲಿ ಮೌಲ್ಯ ಎಂದರೆ ನೈತಿಕ ನೆಲೆ ಮಾತ್ರವಲ್ಲ, ವ್ಯಕ್ತಿತ್ವದ ನೆಲೆಯೂ ಅನ್ವಯವಾಗುತ್ತದೆ. ಉದಾಹರಣೆಗೆ, ನಾನು ಯಾರನ್ನೂ ಕಾಯಿಸುವುದಿಲ್ಲ, ಸರಿಯಾದ ಸಮಯಕ್ಕೇ ಹೋಗುತ್ತೇನೆ, ಮನೆಗೆ ಬಂದವರು ಯಾರೇ ಆಗಿರಲಿ ಅವರನ್ನು ಉಪಚರಿಸದೇ ಇರುವುದಿಲ್ಲ, ಬೇರೆಯವರ ವಿಚಾರದಲ್ಲಿ ಅನಗತ್ಯವಾಗಿ ಮೂಗು ತೂರಿಸುವುದಿಲ್ಲ ಎನ್ನುವಂತಹ ಮೌಲ್ಯಗಳ ಬಗ್ಗೆ ನಾವು ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ.

ಅದೇ ಸ್ವಯಂ ಪ್ರೀತಿ ಇರುವವರ ವ್ಯಕ್ತಿತ್ವದಲ್ಲಿ ಅವರದೇ ಆದ ಮೌಲ್ಯಗಳು ನಿಚ್ಚಳವಾಗಿರುತ್ತವೆ. ಹಾಗಾಗಿಯೇ ಅವರು ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತಾರೆ. ಅದು ಬೇರೆಯವರಿಗೆ ಕೊಟ್ಟ ಮಾತಲ್ಲ, ತಮಗೆ ತಾವೇ ಕೊಟ್ಟುಕೊಳ್ಳುವ ಮಾತು. ಅಂದರೆ, ನಾನು ಡಯಟ್ ಮಾಡಬೇಕು, ತೂಕ ಇಳಿಸಬೇಕು, ಬೇಗ ಏಳಬೇಕು, ಉತ್ತಮ ದಿನಚರಿ ಹೊಂದಬೇಕು ಎಂಬಂತಹ ಯಾವುದೇ ಬದ್ಧತೆ ಆಗಿರಬಹುದು.

ಸ್ವಯಂ ಪ್ರೀತಿ ಇಲ್ಲದೇ ಇರುವವರು ತಮ್ಮನ್ನೇ ತಾವು ನಂಬುವುದಿಲ್ಲ. ಆಗ ಯಾವುದಾದರೂ ಒಂದು ಕಾರ್ಯವನ್ನು ‘ನಾನು ಮಾಡುತ್ತೇನೆ’ ಎಂದು ಬಾಯಿಯಲ್ಲಿ ಹೇಳುತ್ತಿದ್ದರೂ ಮನಸ್ಸು ಮಾತ್ರ ‘ಇದು ನಿನ್ನಿಂದ ಸಾಧ್ಯವಿಲ್ಲ ಬಿಡು’ ಎನ್ನುತ್ತಿರುತ್ತದೆ. ಇದಕ್ಕೆ ಅತ್ಯಂತ ಸರಳ ಉದಾಹರಣೆಯೆಂದರೆ, ಬೆಳಿಗ್ಗೆ ಬೇಗ ಏಳಬೇಕು ಎಂದು ನಿರ್ಧರಿಸುತ್ತೇವೆ. ಆದರೆ ಅದನ್ನು ಕೃತಿಗೆ ಇಳಿಸುವುದಿಲ್ಲ. ಏಕೆಂದರೆ ಹೀಗೆ ಹೇಳುತ್ತಿರುವಾಗಲೇ ‘ಇದು ಎಷ್ಟನೇ ಸಲ ನೀನು ಹೀಗೆ ಹೇಳುತ್ತಿರುವುದು?’ ಎಂದು ಮನಸ್ಸು ಲೆಕ್ಕ ಹಾಕಿರುತ್ತದೆ. ಸ್ವಯಂ ಪ್ರೀತಿ ಇದ್ದಾಗ, ನಮಗಾಗಿ ನಾವು ಏನನ್ನು ಬೇಕಾದರೂ ಮಾಡಬಲ್ಲೆವು ಎನ್ನುವಂತಹ ಆತ್ಮವಿಶ್ವಾಸ ಇರುತ್ತದೆ. ಆಗ ನಾವು ನಮಗಾಗಿ ಕೊಟ್ಟುಕೊಂಡ ಮಾತನ್ನು ಉಳಿಸಿಕೊಂಡೇ ತೀರುತ್ತೇವೆ.

ಹಾಗಿದ್ದರೆ ಸ್ವಯಂ ಪ್ರೀತಿ ಹೊಂದುವುದಾದರೂ ಹೇಗೆ? ಮೊದಲಿಗೆ, ಸ್ವಯಂ ಅರಿವು ಹೆಚ್ಚಾಗಬೇಕು. ಅಂದರೆ ನಮ್ಮನ್ನು ನಾವು ಅವಲೋಕಿಸಿಕೊಳ್ಳಬೇಕು. ಈ ಮೂಲಕ, ನಮ್ಮ ಶಕ್ತಿ, ದೌರ್ಬಲ್ಯ ಎರಡನ್ನೂ ಅರಿಯಬೇಕು. ನಮ್ಮ ಬಗೆಗೆ ನಾವೇ ನಕಾರಾತ್ಮಕವಾಗಿ ಮಾತನಾಡುವುದನ್ನು ನಿಲ್ಲಿಸಿ, ಸಕಾರಾತ್ಮಕವಾಗಿ ಯೋಚಿಸುವುದು, ಮಾತನಾಡುವುದನ್ನು ರೂಢಿಸಿಕೊಳ್ಳಬೇಕು. ನಮ್ಮ ಬಗ್ಗೆ ನಮಗೆ ಮೆಚ್ಚುಗೆ ಇರಬೇಕು. ನಾವು ಕುಳ್ಳಗೆ, ದಪ್ಪಗೆ ಹೇಗೇ ಇದ್ದರೂ ನಮ್ಮನ್ನು ನಾವು ಮೆಚ್ಚಿಕೊಳ್ಳಬೇಕು. ಅಂದರೆ, ನಮಗೆ ನಮ್ಮ ಮಿತಿಯೂ ಗೊತ್ತಿರಬೇಕು, ಶಕ್ತಿಯೂ ಗೊತ್ತಿರಬೇಕು.

ನಾವು ಹೊಂದಿರುವ ಎಲ್ಲದರ ಬಗೆಗೂ ನಮ್ಮಲ್ಲಿ ಕೃತಜ್ಞತೆಯ ಭಾವನೆ ಇರಲೇಬೇಕು. ಆಗ, ಇಷ್ಟೆಲ್ಲ ಹೊಂದಿದ್ದೇವೆ ಎನ್ನುವ ಧನ್ಯತೆಯ ಭಾವನೆ ನಮ್ಮಲ್ಲಿ ಮೂಡುತ್ತದೆ. ‘ಇಲ್ಲ’ ಎನ್ನುವುದರ ಬದಲು ‘ಇಷ್ಟೆಲ್ಲ ಇದೆ’ ಎನ್ನುವುದು ಎದ್ದು ಕಾಣತೊಡಗುತ್ತದೆ. ❖

ಸ್ವಯಂ ಪ್ರೀತಿ ಅಂದರೆ ಅಹಂಕಾರ ಅಲ್ಲ; ಎರಡಕ್ಕೂ ವ್ಯತ್ಯಾಸ ಇದೆ

ಸೆಲ್ಫ್ ಲವ್ ಆತ್ಮವಿಶ್ವಾಸವನ್ನು ವೃದ್ಧಿಸುತ್ತದೆ, ಸಕಾರಾತ್ಮಕ ಮನೋಭಾವವನ್ನು ಉದ್ದೀಪಿಸುತ್ತದೆ

ವ್ಯತ್ಯಾಸ ತಿಳಿದಿರಲಿ

1. ಸ್ವಯಂ ಪ್ರೀತಿಗೂ ಅಹಂಕಾರಕ್ಕೂ ಕೂದಲೆಳೆಯಷ್ಟು ಅಂತರವಿದೆ. ನಮ್ಮ ಬಗೆಗೆ ನಾವು ಹೊಂದಿರುವ ಅಭಿಮಾನ, ಪ್ರೀತಿ ಬೇರೆಯವರಿಗೆ ಅಹಂಕಾರದಂತೆ ಕಾಣಬಹುದು. ಆದರೆ ನಮಗೆ ಮಾತ್ರ ಅಹಂಕಾರಕ್ಕೂ ಸ್ವಯಂ ಪ್ರೀತಿಗೂ ನಡುವಿನ ವ್ಯತ್ಯಾಸ ಗೊತ್ತಿರಬೇಕು.
2. ಯಾವಾಗಲೂ ನಮ್ಮನ್ನು ನಾವು ಸಮರ್ಥಿಸಿಕೊಳ್ಳುವುದು ಸ್ವಯಂ ಪ್ರೀತಿ ಅಲ್ಲ. ಸ್ವಯಂ ಪ್ರೀತಿ ಹೆಚ್ಚಾದಷ್ಟೂ ನಾವು ತಪ್ಪುಗಳಿಂದ ಕಲಿಯುತ್ತೇವೆ.
3. ಸ್ವಯಂ ಪ್ರೀತಿ ಇದ್ದಾಗ ನಾವು ಇತರರನ್ನು ಪ್ರೀತಿಸಲು ಸಾಧ್ಯವಾಗುತ್ತದೆ. ಪರಸ್ಪರ ನಮ್ಮ ಸಂಬಂಧಗಳು ಉತ್ತಮವಾಗಿರುತ್ತವೆ. ನಮ್ಮ ಒಳಗೆ ಇರುವ ಒಳ್ಳೆಯ ಭಾವನೆ ಹೊರಗೂ ವ್ಯಕ್ತವಾಗುತ್ತದೆ.
4. ಅಹಂಕಾರವು ಹಟಕ್ಕೆ ಕಾರಣ ಆಗಬಹುದು. ಅದೇ ಸ್ವಯಂ ಪ್ರೀತಿ ನಮ್ಮನ್ನು ಹೆಚ್ಚು ಮೃದುವಾಗಿಸುತ್ತದೆ.
5. ಅಹಂಕಾರ ಇದ್ದಾಗ ಇತರರೊಂದಿಗೆ ನಮ್ಮ ಸಂವಹನ ಉತ್ತಮವಾಗಿ ಇರುವುದಿಲ್ಲ. ಸ್ವಯಂ ಪ್ರೀತಿಯು ನಮ್ಮ ಸಂವಹನವನ್ನು, ಆಲೋಚನೆಗಳನ್ನು ಸ್ಪಷ್ಟಗೊಳಿಸುತ್ತದೆ.

ನಮ್ಮನ್ನು ನಾವು ಪ್ರೀತಿಸುವಾಗ...

1. ಬೇರೆಯವರು ನಮ್ಮ ಬಗ್ಗೆ ಅನಗತ್ಯವಾಗಿ ಏನು ಹೇಳಿದರೂ ನಾವು ಅದರತ್ತ ಜಾಸ್ತಿ ಗಮನ ಕೊಡುವುದಿಲ್ಲ.
2. ನಿಂದನೆಗಳು ನಮಗೆ ನೋವು ಕೊಡುವುದಿಲ್ಲ. ನಾವು ಏನು ಎನ್ನುವುದು ನಮಗೆ ಚೆನ್ನಾಗಿ ಗೊತ್ತಿರುತ್ತದೆ.
3. ನಮ್ಮ ಸಂತೋಷ, ನೆಮ್ಮದಿ ನಮ್ಮ ಕೈಯಲ್ಲಿದೆ ಎನ್ನುವುದು ತಿಳಿಯುತ್ತದೆ. ಆಗ ಬೇರೆಯವರ ಜೊತೆ ನಮ್ಮನ್ನು ಹೋಲಿಸಿಕೊಂಡು ಕೊರಗುವುದು ನಿಲ್ಲುತ್ತದೆ. ನಮ್ಮನ್ನು ನಾವು ಸುಧಾರಿಸಿಕೊಳ್ಳುವುದರತ್ತ, ಬದಲಾಗುವುದರತ್ತ ಗಮನ ಕೇಂದ್ರೀಕರಿಸುತ್ತೇವೆ.

ಅಮೃತಾ ನಾಯ್ಡು, ಕಿರುತೆರೆ ನಟಿ

ಏನಿವರ ಬ್ಯೂಟಿ ಸೀಕ್ರೆಟ್?

ಯಾವುದೇ ಬಗೆಯ ಚರ್ಮವಿರಲಿ, ಅದಕ್ಕೆ ಹೊಂದುವ ಸನ್‌ಸ್ಕ್ರೀನ್ ಹಾಗೂ ಮಾಯಿಶ್ಚರೈಸರ್ ಬಳಸುವುದು ಬಹಳ ಮುಖ್ಯ. ಅದು ಬೇಸಿಗೆ ಇರಲಿ, ಮಳೆಗಾಲ, ಚಳಿಗಾಲವೇ ಇರಲಿ, ತ್ವಚೆ ಆರೋಗ್ಯಕರವಾಗಿ ಇರಲು ಇವೆರಡರ ಬಳಕೆ ಅತ್ಯಗತ್ಯ. ಶೂಟಿಂಗ್ ಇರುವಾಗ ಕೃತಕ ಬೆಳಕಿಗೆ ಚರ್ಮವನ್ನು ಹೆಚ್ಚು ಒಡ್ಡಿಕೊಳ್ಳುವ ಅಗತ್ಯ ಇರುತ್ತದೆ. ಅದಕ್ಕೆಂದೇ ಚರ್ಮತಜ್ಞರು ರಾತ್ರಿ ವೇಳೆ ಹಚ್ಚಲೆಂದು ನನಗೆ ಕ್ರೀಂ ಹಾಗೂ ಸೀರಮ್‌ಗಳನ್ನು ನೀಡಿದ್ದಾರೆ. ಅವನ್ನು ವಾರದಲ್ಲಿ ಒಂದು ಬಾರಿ ಮಲಗುವ ವೇಳೆ ಹಚ್ಚುತ್ತೇನೆ.

ಅದು ಬಿಟ್ಟರೆ ದೇಹದಲ್ಲಿ ಆದಷ್ಟೂ ನೀರಿನಂಶ ಇರುವಂತೆ ನೋಡಿಕೊಳ್ಳುತ್ತೇನೆ. ದೇಹ ಒಳಗಿನಿಂದ ಆರೋಗ್ಯವಾಗಿದ್ದಾಗ ಅದು ಚರ್ಮದ ಮೇಲೆ ಪ್ರತಿಫಲಿಸುತ್ತದೆ. ಹಾಗಾಗಿ, ನಿತ್ಯ ಆ್ಯಪಲ್, ಬೀಟ್ರೂಟ್ ಮತ್ತು ಕ್ಯಾರೆಟ್ ಹಾಕಿ ಮಾಡಿದ ಎಬಿಸಿ ಜ್ಯೂಸ್ ಅನ್ನು ಕುಡಿಯುತ್ತೇನೆ. ಇದರ ಜತೆಗೆ ಕುಂಬಳಕಾಯಿ ಮತ್ತು ಸೋರೆಕಾಯಿ ಜ್ಯೂಸ್ ಕುಡಿಯುತ್ತೇನೆ. ಯಾವುದೇ ಜ್ಯೂಸ್ ಇರಲಿ ಅದನ್ನು ಸಿದ್ಧಪಡಿಸುವಾಗ ಶುಂಠಿ, ಆಮ್ಲವನ್ನು ಬೆರೆಸಿಯೇ ಮಾಡುತ್ತೇನೆ. ನನ್ನದು ಶೀತಪ್ರಕೃತಿ. ಕೆಲವೊಮ್ಮೆ ಬೇಗ ಶೀತ ಆಗಿಬಿಡುತ್ತದೆ. ಅಂಥ ಸಂದರ್ಭದಲ್ಲಿ ಮಾತ್ರ ವಾರಗಳ ಮಟ್ಟಿಗೆ ಈ ಜ್ಯೂಸ್ ಕುಡಿಯುವುದನ್ನು ನಿಲ್ಲಿಸುತ್ತೇನೆ.

ಇನ್ನು ಫೇಸ್‌ಪ್ಯಾಕ್, ಹೇರ್‌ಪ್ಯಾಕ್ ಮಾಡಿಕೊಳ್ಳುವಷ್ಟು ಸಮಯ ಇಲ್ಲ. ಹಾಗಾಗಿ, ಕೂದಲ ಆರೈಕೆಗೆ ಗಾಣದಿಂದ ತೆಗೆದ ನೈಸರ್ಗಿಕ ಕೊಬ್ಬರಿ ಎಣ್ಣೆಯನ್ನು ಹಚ್ಚುತ್ತೇನೆ. ಅದು ಬಿಟ್ಟರೆ ಬೇರೆ ಏನೂ ಮಾಡುವುದಿಲ್ಲ.

ನನ್ನ ಪ್ರಕಾರ, ಅಂತರ್ಯದ ಸೌಂದರ್ಯವೇ ನಮ್ಮನ್ನು ಹೆಚ್ಚು ಆಕರ್ಷಕ ವ್ಯಕ್ತಿಯನ್ನಾಗಿ ಮಾಡುತ್ತದೆ. ಆದಷ್ಟೂ ಮಾನವೀಯತೆಯನ್ನು ಮೈಗೂಡಿಸಿಕೊಂಡಾಗ ನಮ್ಮ ಸುತ್ತಲೂ ಇರುವವರ ಬಗ್ಗೆ ಅಂತಃಕರಣ ಉಕ್ಕುತ್ತದೆ. ಅದು ನಮ್ಮೊಳಗಿನ ಸಕಾರಾತ್ಮಕ ಶಕ್ತಿಯನ್ನು ಹೆಚ್ಚಿಸುತ್ತದೆ. ನಮ್ಮವರು, ತಮ್ಮವರಿಗೆ ಒಳ್ಳೆಯದು ಬಯಸುವುದೆಂದರೆ ನಮಗೆ ನಾವೇ ಒಳ್ಳೆಯದು ಬಯಸಿಕೊಂಡಂತೆ. ನಮ್ಮೊಳಗೆ ಸಕಾರಾತ್ಮಕ ಶಕ್ತಿ ಹೆಚ್ಚಿದರೆ ದೇಹ ಹೊಳಪಿನಿಂದ ಕೂಡಿರುತ್ತದೆ. ಹೀಗೆ ಹೊಳೆಯುವಂತೆ ಮಾಡಲು, ಮಾನವೀಯ ಗುಣಗಳನ್ನು ಮೈಗೂಡಿಸಿಕೊಂಡರೆ ಸಾಕು. ಉಳಿದಂತೆ ಯಾವ ಸಿದ್ಧತೆಯೂ ಬೇಡ. ❖

ಫೈಬ್ರಾಯ್ಡ್ ಇದೆಯೇ? ಆತಂಕ ಬೇಡ

ಸ್ಪಂದನ

ಡಾ. ವೀಣಾ ಎಸ್. ಭಟ್

• ನನಗೆ 47 ವರ್ಷ. ಉದ್ಯೋಗಸ್ಥೆ. ಮದುವೆಯಾಗಿ 22 ವರ್ಷಗಳಾಗಿದ್ದು, ಇಬ್ಬರು ಮಕ್ಕಳಿದ್ದಾರೆ. ಇತ್ತೀಚೆಗೆ ವಾರ್ಷಿಕ ಬಾಡಿ ಚೆಕಪ್ ಪ್ರಯುಕ್ತ ಸ್ಕ್ಯಾನಿಂಗ್ ಮಾಡಿಸಿದಾಗ, ಗರ್ಭಕೋಶದಲ್ಲಿ 14 ಮಿ.ಮೀ ಗಾತ್ರದ ಎರಡು– ಮೂರು ಸಣ್ಣ ಫೈಬ್ರಾಯ್ಡ್‌ಗಳಿರುವುದು (ನಾರುಗಡ್ಡೆ) ತಿಳಿಯಿತು. ನನಗೆ ಈಗ ಎರಡರಿಂದ ಮೂರು ತಿಂಗಳಿಗೆ ಮುಟ್ಟಾಗುತ್ತಿದೆ. ಹೊಟ್ಟೆ ನೋವಾಗಲೀ ಹೆಚ್ಚು ರಕ್ತಸ್ರಾವವಾಗಲೀ ಇಲ್ಲ. ನಾನು ತೋರಿಸಿದ ವೈದ್ಯರು ಫೈಬ್ರಾಯ್ಡ್‌ಗಳಿಂದ ಯಾವುದೇ ತೊಂದರೆ ಇಲ್ಲ ಅಂದಿದ್ದಾರೆ. ನಮ್ಮ ಮನೆಯಲ್ಲಿ ಯಾರಿಗೂ ಇಂತಹ ಸಮಸ್ಯೆ ಇರಲಿಲ್ಲ. ಆದರೂ ನನಗೇನೋ ಆತಂಕ. ಏನು ಮಾಡಲಿ?

• ಉಷಾ, ಮಾಲೂರು

ಉಷಾ ಅವರೆ, ನಿಮಗಿರುವುದು ಕೇವಲ ಫೈಬ್ರಾಯ್ಡ್, ಅಂದರೆ ಗರ್ಭಕೋಶದ ನಾರುಗಡ್ಡೆ. ಈ ಗಡ್ಡೆಗಳು ಗರ್ಭಕೋಶದಲ್ಲಿ ಆಗಬಹುದಾದ ಅತಿ ಸಾಮಾನ್ಯ ಮತ್ತು ಕ್ಯಾನ್ಸರ್ ಅಲ್ಲದ ಗಡ್ಡೆಗಳು.

ಇವು ಕ್ಯಾನ್ಸರ್ ಆಗಿ ಮಾರ್ಪಡುವುದು ಅತಿ ವಿರಳ. ಈ ಗಡ್ಡೆಗಳಾಗುವಲ್ಲಿ ಆನುವಂಶೀಯ ಹಿನ್ನೆಲೆ ಸ್ವಲ್ಪಮಟ್ಟಿಗೆ ಮಾತ್ರ ಕಾರಣವಾಗಿದ್ದರೂ ಇದು ಈಸ್ಟ್ರೋಜನ್ ಹಾಗೂ ಪ್ರೊಜೆಸ್ಟಿರಾನ್ ಹಾರ್ಮೋನ್ ಸಂಬಂಧಿತ ಗಡ್ಡೆ ಆಗಿರುತ್ತದೆ. ಅತಿಯಾದ ತೂಕ, ಜಂಕ್‌ಫುಡ್ ಸೇವನೆ, ಹೆಚ್ಚು ಕೆಂಪುಮಾಂಸ ಸೇವನೆಯಂತಹ ಕಾರಣಗಳು ಈ ಗಡ್ಡೆಗಳಾಗಲು ಪ್ರಚೋದಿಸಬಹುದು.

ಗರ್ಭಕೋಶದ ಹೊರಭಾಗ, ಸ್ನಾಯು, ಗರ್ಭಕೋಶದ ಒಳಾವರಣ ಹೀಗೆ ಬೇರೆ ಬೇರೆ ಕಡೆ ಈ ಗಡ್ಡೆಗಳು ಕಾಣಿಸಿಕೊಳ್ಳಬಹುದು. ಒಳಾವರಣದಲ್ಲಿ ಕಾಣಿಸಿಕೊಂಡಾಗ ರಕ್ತಸ್ರಾವ ಹೆಚ್ಚಾಗಿ ಆಗಬಹುದು. ಸ್ನಾಯುಗಳ ಒಳಗೆ ಅಥವಾ ಹೊರಭಾಗದಲ್ಲಿ ಇದ್ದಾಗ ಸಣ್ಣಪುಟ್ಟ ಗಡ್ಡೆಗಳಿಂದ ಏನೂ ಸಮಸ್ಯೆ ಆಗುವುದಿಲ್ಲ. ಹಾಗಾಗಿ, ನಿಮಗೆ ಈ ಬಗ್ಗೆ ಯಾವುದೇ ಆತಂಕ ಬೇಡ.

ಈಸ್ಟ್ರೋಜನ್ ಹಾರ್ಮೋನ್ ಹೆಚ್ಚಳ ಮತ್ತು ಈಸ್ಟ್ರೋಜನ್, ಪ್ರೊಜೆಸ್ಟಿರಾನ್ ಹಾರ್ಮೋನ್‌ಗಳ ಅಸಮತೋಲನದಿಂದ ಹೆಚ್ಚಿನ ಸಂದರ್ಭಗಳಲ್ಲಿ ಇವು ಉಂಟಾಗುತ್ತವೆ. ಹಾಗಾಗಿ, ಮುಟ್ಟು ನಿಂತಾಗ ಈ ಹಾರ್ಮೋನ್‌ಗಳ ಪ್ರಮಾಣ ಕಡಿಮೆಯಾಗುತ್ತಾ ಹೋಗುವುದರಿಂದ ಈ ಗಡ್ಡೆಗಳು ಸಹಜವಾಗಿಯೇ ಸಣ್ಣದಾಗುತ್ತಾ ಹೋಗುತ್ತವೆ. ನಿಮಗೂ ಮುಟ್ಟು ನಿಲ್ಲುವ ಹಂತ ಆಗಿರುವುದರಿಂದ, ಮುಟ್ಟು ನಿಂತಾಗ ಸಹಜವಾಗಿಯೇ ಈ ಗಡ್ಡೆಗಳು ತಾನೇ ತಾನಾಗಿ ಕಡಿಮೆಯಾಗಬಹುದು.

ನೀವೇ ಅನುಸರಿಸಬಹುದಾದ ಜೀವನಶೈಲಿ ಬದಲಾವಣೆಗಳೆಂದರೆ, ನಿಮಗೆ ಬೊಜ್ಜಿದ್ದರೆ ಅದನ್ನು ನಿಯಂತ್ರಿಸಿ ಸಮತೂಕ ಹೊಂದಲು ಪ್ರಯತ್ನಿಸಿ. ಹಾಲು ಮತ್ತು ಹಾಲಿನ ಉತ್ಪನ್ನ ಸೇವಿಸುವುದನ್ನು ನಿಲ್ಲಿಸಿ. ಅತಿಯಾದ ಕೊಬ್ಬುಳ್ಳ ಮಾಂಸಾಹಾರ ಸೇವನೆ ಬೇಡ. ಹೀಗೆ ಮಾಡುವುದರಿಂದ ಅನಗತ್ಯವಾಗಿ ಈಸ್ಟ್ರೋಜನ್ ಹೆಚ್ಚಳವಾಗುವುದು ತಪ್ಪುತ್ತದೆ. ಯಾವುದಕ್ಕೂ ನೀವು ವೈದ್ಯರನ್ನು ಸಂಪರ್ಕಿಸಿ ಅವರ ಮೇಲ್ವಿಚಾರಣೆಯಲ್ಲಿ ಇರಿ.

ಕನಿಷ್ಠ ಒಂದು ವರ್ಷಕ್ಕಾದರೂ ಒಮ್ಮೆ ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಮಾಡಿಸಿ. ದೈಹಿಕ ಚಟುವಟಿಕೆ, ಯೋಗಾಸನ, ಏರೋಬಿಕ್ಸ್‌ನಂತಹ ವ್ಯಾಯಾಮಗಳನ್ನು ದಿನವೂ ನಿಯಮಿತವಾಗಿ ಕನಿಷ್ಠ ಒಂದು ಗಂಟೆಯಾದರೂ ಮಾಡಿ ಒತ್ತಡ ನಿರ್ವಹಣೆ ಮಾಡಿಕೊಂಡರೆ, ಫೈಬ್ರಾಯ್ಡ್ ಗಾತ್ರ ಹೆಚ್ಚುವುದಿಲ್ಲ. ಮೊದಲಾದರೆ ನಾರುಗಡ್ಡೆಗೆ ಎಲ್ಲರೂ ಹೆದರಿ ಒಮ್ಮೆಲೇ ಶಸ್ತ್ರಚಿಕಿತ್ಸೆಯನ್ನು ಮಾಡಿಸುತ್ತಿದ್ದರು. ಆದರೆ ಈಗ ಅದಕ್ಕೆ ಪರ್ಯಾಯವಾಗಿ ಮಾತ್ರೆಗಳು ಲಭ್ಯವಿವೆ. ವೈದ್ಯರ ಮೇಲ್ವಿಚಾರಣೆಯಲ್ಲಿ ಅವುಗಳನ್ನು ತೆಗೆದುಕೊಳ್ಳಬೇಕು.

ಗರ್ಭಕೋಶದಲ್ಲಿ ಅಳವಡಿಸುವ LNG IUD ಎಂಬ ‘ಕಾಪರ್ ಟಿ’ಯಂತಹ ಉಪಕರಣವನ್ನೂ ಕೆಲವೊಮ್ಮೆ ವೈದ್ಯರು ಅಳವಡಿಸುತ್ತಾರೆ. ಆದ್ದರಿಂದ ಫೈಬ್ರಾಯ್ಡ್ ಇದೆ ಎಂದು ನೀವೇನೂ ಭಯಪಡುವುದು ಬೇಡ. ‘ಹೈಫು’ ಅಂದರೆ ಹೈ ಇಂಟೆನ್ಸಿಟಿ ಫೋಕಸ್ಡ್ ಅಲ್ಟ್ರಾ ಸೌಂಡ್ ಚಿಕಿತ್ಸೆಯಿಂದ ಕೂಡ ಈ ಗಡ್ಡೆಗಳನ್ನು ಕರಗಿಸಬಹುದು. ಆದರೆ ಈ ಸೌಲಭ್ಯ ಎಲ್ಲೆಡೆ ಲಭ್ಯವಿಲ್ಲ. ❖

ದ್ವೇಷ ಕರಗಿತು ಒಲವು ಬೆಸೆಯಿತು

ಭಾವಯಾನ

• ಎನ್.ಎಸ್. ಅಶ್ವಿನಿ ನೊಣವಿನಕೆರೆ

ದಿನಂಪ್ರತಿ ಎಷ್ಟೋ ಹೃದಯಗಳಲ್ಲಿ ಪ್ರೀತಿ ಹುಟ್ಟುತ್ತಲೇ ಇರುತ್ತದೆ; ಮಳೆಗಾಲದಲ್ಲಿ ಹುಟ್ಟುವ ಅಣಬೆಗಳಂತೆ ದಿನ, ವಾರಗಳಲ್ಲೆ ನಶಿಸಿಯೂ ಹೋಗುತ್ತದೆ. ಆದರೆ ಕೆಲವು ಹೃದಯಗಳ ನಡುವಿನ ಪ್ರೀತಿಯು ವರ್ಷಗಟ್ಟಲೆ ಅಗೋಚರವಾಗಿ ಇದ್ದರೂ, ಮಾಸದೆ ಅಚಲವಾಗಿ ಉಳಿದಿರುತ್ತದೆ. ಇಂದಿನ ದಿನಮಾನಗಳಲ್ಲಿ ಇಂತಹ ಶಾಶ್ವತ ಪ್ರೀತಿ ಸಿಗುವುದು ಕಷ್ಟವೇ ಸರಿ.

ಪ್ರೀತಿಯ ಬಲೆಗೆ ಬಿದ್ದವರ ಕುಟುಂಬಗಳ ನಡುವೆ ನಡೆಯುವ ಜಗಳ, ಸಂಘರ್ಷಗಳನ್ನು ನೋಡಿದಾಗಲೆಲ್ಲ, 14-15 ವರ್ಷಗಳ ಹಿಂದೆ ನಡೆದ ಪ್ರಕರಣವೊಂದು ನನಗೆ ನೆನಪಾಗುತ್ತದೆ. ನನ್ನ ಮದುವೆಯ ಸಮಯದಲ್ಲಿಯೇ ನನ್ನ ಪತಿಯ ಆತ್ಮೀಯ ಗೆಳೆಯರೊಬ್ಬರ ಮದುವೆಯೂ ನಿಶ್ಚಯವಾಗಿತ್ತು. ಮನೆಯವರೇ ಹೆಣ್ಣನ್ನು ನೋಡಿ ನಿಶ್ಚಿತಾರ್ಥ ಮಾಡಿದ್ದರು. ಕೆಲ ತಿಂಗಳುಗಳಲ್ಲಿಯೇ ಮದುವೆ ನಡೆಯುವುದರಲ್ಲಿ ಇತ್ತು. ಹುಡುಗ- ಹುಡುಗಿ ಅದಾಗಲೆ ಪ್ರತಿದಿನ ಮಾತನಾಡಲು, ಭಾವನೆಗಳನ್ನು ಪರಸ್ಪರ ಅರ್ಥ ಮಾಡಿಕೊಳ್ಳಲು ಶುರು ಮಾಡಿಕೊಂಡಿದ್ದರು.

ದಿನೇದಿನೇ ಮೊಬೈಲ್ ಯುಗ ಕಾಲಿಡುತ್ತಿತ್ತು. ಆದರೆ ಇನ್‌ಸ್ಟಾಗ್ರಾಂ, ಫೇಸ್‌ಬುಕ್, ವಾಟ್ಸ್‌ಆ್ಯಪ್‌ನಂತಹ ಸಾಮಾಜಿಕ ಮಾಧ್ಯಮಗಳ ಗೊಡವೆ ಇರಲಿಲ್ಲ. ಎಂಗೇಜ್‌ಮೆಂಟ್ ಆದ ಕೆಲವು ವಾರಗಳಲ್ಲಿಯೇ ಎರಡೂ ಕಡೆಯ ಹಿರಿಯರ ನಡುವೆ ತೀರಾ ಸಣ್ಣ ವಿಚಾರಕ್ಕೆ ಮನಸ್ತಾಪವುಂಟಾಯಿತು. ಬಳಿಕ ಅದು ಪ್ರತಿಷ್ಠೆಯ ಪ್ರಶ್ನೆಯಾಗಿ, ವಿಚಾರಗಳಲ್ಲಿ ಭಿನ್ನತೆ ಬಂದು, ಜಗಳ ತಾರಕಕ್ಕೇರಿತು. ಕೊನೆಗೆ ಮದುವೆಯೇ ಮುರಿದುಬಿತ್ತು. ಆದರೆ ಹುಡುಗ, ಹುಡುಗಿ ಗಾಢವಾಗಿ ಪ್ರೀತಿಸುತ್ತಿದ್ದರು. ಒಬ್ಬರನ್ನು ಬಿಟ್ಟು ಮತ್ತೊಬ್ಬರು ಇರಲು ಸಾಧ್ಯವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಅವರ ನಡುವೆ ಬಾಂಧವ್ಯ ಬೆಳೆದುಬಿಟ್ಟಿತ್ತು.

ಮನೆಯವರು ಎಷ್ಟೇ ಒತ್ತಾಯ ಮಾಡಿದರೂ ಇಬ್ಬರೂ ಮದುವೆಯ ನಿರ್ಧಾರದಿಂದ ಹಿಂದೆ ಸರಿಯಲಿಲ್ಲ. ಬೇರೆಯವರನ್ನು ಮದುವೆ ಮಾಡಿಕೊಳ್ಳಲು ಸುತರಾಂ ಒಪ್ಪಲಿಲ್ಲ. ನಿತ್ಯ ಇಬ್ಬರ ಮನೆಗಳಲ್ಲೂ ಜಗಳ, ಅಳು, ಬೇಜಾರು ಎಲ್ಲವೂ ನಡೆದೇ ಇತ್ತು. ಇವರೇ ಹಿರಿಯ ಮಕ್ಕಳಾಗಿದ್ದು, ಇಬ್ಬರಿಗೂ ತಮ್ಮ, ತಂಗಿ ಇದ್ದರು.

ಇಬ್ಬರೂ ಒಳ್ಳೆಯ ಸಂಬಳ ಬರುವ ಉತ್ತಮ ನೌಕರಿಯಲ್ಲಿದ್ದರು. ವರ್ಷಗಳು ಉರುಳಿದರೂ ಮನೆಯವರ ಹಟ ಮಾತ್ರ ಕರಗಲೇ ಇಲ್ಲ. ಆದರೂ ಹುಡುಗ, ಹುಡುಗಿ ಓಡಿ ಹೋಗಲಿಲ್ಲ, ರಿಜಿಸ್ಟರ್ ಮದುವೆ ಆಗಲಿಲ್ಲ. ಮನೆಯವರನ್ನೆಲ್ಲಾ ಒಪ್ಪಿಸಿಯೇ ಮದುವೆ ಆಗುತ್ತೇವೆ ಎಂಬ ದೃಢಸಂಕಲ್ಪದಲ್ಲಿಯೇ ಇದ್ದರು. ಏನೇ ಮಾಡಿದರೂ ಇಬ್ಬರೂ ರಾಜಿ ಆಗದೇ ಇದ್ದಾಗ ಮನೆಯವರು ಕಿರಿಯ ಮಕ್ಕಳ ಮದುವೆಗಳನ್ನು ಮಾಡಿ ಮುಗಿಸಿದರು.

ಈ ನಡುವೆ ಹುಡುಗನಿಗೆ ತೀವ್ರತರದ ಮೂಳೆ ಸಂಬಂಧಿ ಸಮಸ್ಯೆ ಕಾಣಿಸಿಕೊಂಡಿತು. ಆತ ಬದುಕುವುದೇ ಕಷ್ಟ ಎನ್ನುವಂತಾಯಿತು. 3-4 ವರ್ಷಗಳ ಚಿಕಿತ್ಸೆ, ಆರೈಕೆ, ದೇವರ ದಯ, ಹುಡುಗಿಯ ಪ್ರಾರ್ಥನೆ, ಪ್ರೀತಿಯ ಫಲ ಎಲ್ಲವೂ ಕೈಗೂಡಿತೇನೋ ಎಂಬಂತೆ ಹುಡುಗ ಚೇತರಿಸಿಕೊಂಡು ಮತ್ತೆ ಮೊದಲಿನಂತೆ ಆದ. ಆ ಸಂಕಷ್ಟದ ಸಮಯದಲ್ಲಿ ಹುಡುಗಿಯು ಹೆಂಡತಿಯಂತೆಯೇ ಮುಂದಾಗಿ ಹುಡುಗನ ಸೇವೆಗೆ ಟೊಂಕ ಕಟ್ಟಿ ನಿಂತಳು. ಇವರ ವಿಚಾರದಲ್ಲಿ ಎರಡೂ ಮನೆಯವರು ವಿಲನ್‌ಗಳಾಗಿದ್ದರೂ ಹುಡುಗನ ತಾಯಿ ಮಾತ್ರ ಇವರ ಪ್ರೀತಿಗೆ ಬೆಂಗಾವಲಾಗಿ, ಬೆಂಬಲವಾಗಿ ಸದಾ ಕಾಲ ನಿಂತಿದ್ದರು.

ಅಂತೂ ಇಂತೂ ಆಪ್ತೇಷ್ಟರ ಒತ್ತಾಯಕ್ಕೆ ಕಟ್ಟುಬಿದ್ದು, ಇಬ್ಬರ ನಡುವಿನ ಅಗಾಧವಾದ ಪ್ರೀತಿಗೆ ಮನಸೋತು, ಹಿಂದೊಮ್ಮೆ ಹಿರಿಯರು ಒಪ್ಪಿ ನಿಶ್ಚಯಿಸಿದ್ದ ಮದುವೆ 12 ವರ್ಷಗಳ ನಂತರ ನಡೆಯಿತು!

ಕೊನೆಗೂ ಮನೆಯವರ ಹಟ ಸೋತಿತು, ಪ್ರೀತಿ ಗೆದ್ದಿತು. ಪ್ರೀತಿಯು ಜಗತ್ತಿನಲ್ಲಿ ಏನನ್ನು ಬೇಕಾದರೂ ಮಾಡಿಸುತ್ತದೆ ಎಂಬುದಕ್ಕೆ ಈ ಪ್ರಕರಣ ಒಂದು ಅದ್ಭುತವಾದ ನಿದರ್ಶನದಂತಿದೆ. ದಂಪತಿಯು ಇಂದು ಮಕ್ಕಳೊಂದಿಗೆ ಸಂತೋಷವಾಗಿ ಇದ್ದಾರೆ. ಇದು, ‘ಪ್ರೀತಿಯಿಂದ ಜಗತ್ತನ್ನೇ ಗೆಲ್ಲಬಹುದು’ ಎಂಬ ಬುದ್ಧನ ಮಾತನ್ನು ನೆನಪಿಸುತ್ತದೆ. ❖

ಅಮ್ಮ ಹೇಳ್ತಾಳೆ

ಕೆಲವು ಬಾರಿ ಸಮಯದ ಅಭಾವ ಇದ್ದಾಗ ವಾರಕ್ಕೊಮ್ಮೆ ತರಕಾರಿಗಳನ್ನು ಖರೀದಿಸಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ, ಫ್ರಿಜ್‌ನಲ್ಲಿ ಇಟ್ಟರೂ ಸೊಪ್ಪು, ತರಕಾರಿ ಒಣಗಬಹುದು. ಅದಕ್ಕಾಗಿ, ಒದ್ದೆ ಮಾಡಿದ ಪೇಪರ್ ಟವೆಲ್‌ನಲ್ಲಿ ಸೊಪ್ಪು ಮತ್ತು ತರಕಾರಿಗಳನ್ನು ಸುತ್ತಿ, ಜಿಪ್‌ಲಾಕ್ ಕವರ್‌ನಲ್ಲಿ ಇಡಬೇಕು. ಇದು ಹೆಚ್ಚು ಕಾಲ ತಾಜಾ ಆಗಿರುವಂತೆ ಮಾಡುತ್ತದೆ.

ನೀವೂ ಬರೆಯಬಹುದು

ಬಗೆ ಬಗೆ ಅಡುಗೆಗಳ ರೆಸಿಪಿಯನ್ನು ನೀವು ಕಳುಹಿಸಬಹುದು. ಅಷ್ಟೇ ಅಲ್ಲ, ಮಹಿಳೆ, ಮಕ್ಕಳು, ಕುಟುಂಬ, ಸಂಬಂಧ, ಬಾಂಧವ್ಯ, ಭಾವನಾತ್ಮಕ ಬೆಸುಗೆಯಂತಹ ಸಂಗತಿಗಳ ಬಗ್ಗೆಯೂ ಲೇಖನ, ಪುಟ್ಟ ಪುಟ್ಟ ಬರಹಗಳನ್ನು ‘ಭೂಮಿಕಾ’ಗೆ ಕಳುಹಿಸಬಹುದು.

ನಮ್ಮ ಇ–ಮೇಲ್ ಐ.ಡಿ– bhoomika@prajavani.co.in

ಮಜ್ಜಿಗೆ ಪ್ರಯೋಜನ ಬಗೆ ಬಗೆ

ರಸಾಸ್ವಾದ

• ವೇದಾವತಿ ಎಚ್.ಎಸ್.

ಬೇಸಿಗೆ ಬಂತೆಂದರೆ ಹೆಚ್ಚಿನವರ ಮನಸ್ಸು ಬೇಡುವುದು ದೇಹ ತಂಪಾಗಿಸುವ ಮಜ್ಜಿಗೆಯನ್ನು. ಆಯುರ್ವೇದದಲ್ಲಿ ‘ಭೂಮಿಯ ಮೇಲಿನ ಅಮೃತ’ ಎಂದೇ ಕರೆಯಲಾಗುವ ಮಜ್ಜಿಗೆಯನ್ನು ಕುಡಿಯುವುದರಿಂದ ಏನೆಲ್ಲಾ ಪ್ರಯೋಜನಗಳಿವೆ ಎಂಬುದು ನಿಮಗೆ ಗೊತ್ತೇ?

ಮಜ್ಜಿಗೆ ಅದರಲ್ಲೂ ಹಸುವಿನ ಮಜ್ಜಿಗೆ ಆರೋಗ್ಯಕ್ಕೆ ಒಳ್ಳೆಯದು. ಅದು ಹಲವು ಬಗೆಯ ವ್ಯಾಧಿಯನ್ನು ಉಪಶಮನಗೊಳಿಸುತ್ತದೆ. ಪಿತ್ತವಾಂತಿ, ಹೊಟ್ಟೆಯುಬ್ಬರ, ಸ್ಥೂಲಕಾಯದಂತಹ ಸಮಸ್ಯೆಗಳು ಇರುವವರು ಮಜ್ಜಿಗೆ ಸೇವನೆ ಮಾಡುವುದರಿಂದ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ.

ಮಜ್ಜಿಗೆಯನ್ನು ಘೋಲ, ಮಥಿತ, ತಕ್ರ ಹಾಗೂ ಉದಧಿತ ಎಂದು ನಾಲ್ಕು ವಿಧಗಳನ್ನಾಗಿ ವಿಂಗಡಿಸಲಾಗಿದೆ. ವಾತ–ಪಿತ್ತನಾಶಕ, ಪೌಷ್ಟಿಕ ಹಾಗೂ ಶಕ್ತಿವರ್ಧಕವಾದ ಮಜ್ಜಿಗೆಯನ್ನು ‘ಘೋಲ’ ಮಜ್ಜಿಗೆ ಎಂದು ಕರೆಯಲಾಗುತ್ತದೆ. ಈ ಬಗೆಯ ಮಜ್ಜಿಗೆಯನ್ನು ತಯಾರಿಸುವಾಗ ಸ್ವಲ್ಪವೂ ನೀರನ್ನು ಬೆರೆಸದೆ, ಬೆಣ್ಣೆಯನ್ನು ತೆಗೆಯದೆ ಮೊಸರನ್ನು ಕಡೆದು, ದಪ್ಪ ದ್ರವವಾಗಿ ಉಪಯೋಗಿಸಲಾಗುತ್ತದೆ. ಚಿಟಿಕೆ ಇಂಗು ಮತ್ತು ಜೀರಿಗೆ ಸೇರಿಸಿ ಕುಡಿದರೆ ಮೂಲವ್ಯಾಧಿ, ಅತಿಸಾರ, ಕಫ, ವಾತವಿಕಾರ, ಮಲ-ಮೂತ್ರಕ್ಕೆ ಸಂಬಂಧಿಸಿದ ರೋಗಗಳಿಗೆ ಈ ಮಜ್ಜಿಗೆಯು ದಿವ್ಯೌಷಧವಾಗಿದೆ. ಚಳಿಗಾಲದಲ್ಲಿ ಇದು ದೇಹಕ್ಕೆ ಒಳ್ಳೆಯದು. ಇನ್ನು ಮೊಸರಿಗೆ ನೀರನ್ನು ಸೇರಿಸದೇ ಕಡೆದು ಬೆಣ್ಣೆಯನ್ನು ತೆಗೆದು ಉಪಯೋಗಿಸುವುದನ್ನು ‘ಮಥಿತ’ ಎಂದು ಕರೆಯುತ್ತಾರೆ. ಹೀಗೆ ತಯಾರಿಸಿದ ಮಜ್ಜಿಗೆಯನ್ನು ಉಪಯೋಗಿಸುವುದು ಕಫನಾಶಕ ಹಾಗೂ ಕೆಮ್ಮಿನಲ್ಲಿ ಕಫ ಕಟ್ಟುವುದನ್ನು ತಡೆಯುತ್ತದೆ. ಮೊಸರಿನ ಕಾಲು ಭಾಗದಷ್ಟು ನೀರನ್ನು ಸೇರಿಸಿ ಕಡೆದು ಬೆಣ್ಣೆ ತೆಗೆದರೆ ಅದನ್ನು ‘ತಕ್ರ’ ಎಂದು ಕರೆಯುತ್ತಾರೆ. ಹುಳಿ ಮಜ್ಜಿಗೆಗೆ ಉಪ್ಪನ್ನು ಸೇರಿಸಿ ಸೇವಿಸುವುದರಿಂದ ವಾತ ರೋಗ ಕಡಿಮೆಯಾಗುತ್ತದೆ. ಸಿಹಿ ಮಜ್ಜಿಗೆಗೆ ಸಕ್ಕರೆ ಸೇರಿಸಿ ಕುಡಿಯುವುದರಿಂದ ಪಿತ್ತ ಮಾಯವಾಗುತ್ತದೆ.

ಮೊಸರಿನ ಅರ್ಧದಷ್ಟು ನೀರು ಸೇರಿಸಿ, ಕಡೆದು ಬೆಣ್ಣೆ ತೆಗೆದಾಗ ಅದನ್ನು ‘ಉದಧಿತ’ ಎಂದು ಕರೆಯುತ್ತಾರೆ. ಈ ರೀತಿಯಲ್ಲಿ ತಯಾರಿಸಿದ ಮಜ್ಜಿಗೆಯು ಕಣ್ಣುಗಳಿಗೆ ಶಕ್ತಿ ನೀಡುತ್ತದೆ. ಉದಧಿತ ಮಜ್ಜಿಗೆಗೆ ಶುಂಠಿ, ಕಾಳುಮೆಣಸಿನ ಪುಡಿ, ಉಪ್ಪನ್ನು ಬೆರೆಸಿ ಸೇವಿಸುವುದರಿಂದ ಕಫ ಕಡಿಮೆಯಾಗುತ್ತದೆ.

ಸಿಹಿ ಮಜ್ಜಿಗೆಯನ್ನು ಎಲ್ಲಾ ಬಗೆಯ ರೋಗಿಗಳು ದಿನವೂ ಉಪಯೋಗಿಸಬಹುದು. ಹೆಚ್ಚು ಖರ್ಚಿಲ್ಲದ, ಪ್ರತಿಯೊಬ್ಬರ ಮನೆಯಲ್ಲೂ ಉಪಯೋಗಿಸಬಹುದಾದ ಮಜ್ಜಿಗೆಯನ್ನು, ಅದರಿಂದಾಗುವ ಪ್ರಯೋಜನಗಳ ದೃಷ್ಟಿಯಿಂದ ನಿಜಕ್ಕೂ ಭೂಮಿಯ ಮೇಲಿನ ಅಮೃತ ಎಂದೇ ಹೇಳಬಹುದು. ❖

ಪ್ರಾಣೇಶ್‌ಗೆ 'ಸುಪ್ರೀಂ' ಎಚ್ಚರಿಕೆ

ಅರ್ಜಿದಾರರ ಸವಲತ್ತುಗಳನ್ನು ತಡೆಹಿಡಿಯುವುದಾಗಿ ಹೇಳಿದ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಕರಣದ ವಿಚಾರಣೆ ಮುಂದೂಡಬೇಕು ಎಂದು ಮನವಿ ಮಾಡಿದ ವಿಧಾನ ಪರಿಷತ್ ಉಪಸಭಾಪತಿ ಎಂ.ಕೆ. ಪ್ರಾಣೇಶ್ ಅವರನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

'ನಗರ ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ವಿಧಾನಪರಿಷತ್ತಿಗೆ ನಡೆಯುವ ಚುನಾವಣೆಯಲ್ಲಿ ಸ್ಥಳೀಯ ಸಂಸ್ಥೆಗಳ ನಾಮನಿರ್ದೇಶಿತ ಸದಸ್ಯರಿಗೆ ಮತದಾನದ ಹಕ್ಕು ಇಲ್ಲ' ಎಂದು ಹೈಕೋರ್ಟ್ 2022ರಲ್ಲಿ ತೀರ್ಪು ನೀಡಿತ್ತು. ಇದನ್ನು ಪ್ರಶ್ನಿಸಿ ಪ್ರಾಣೇಶ್ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಲ್ಯ ಬಾಗ್ಚಿ ಹಾಗೂ ವಿಪುಲ್ ಪಂಚೋಲಿ ಅವರ ಪೀಠವು, ಅರ್ಜಿದಾರರ ಸವಲತ್ತುಗಳನ್ನು ತಡೆ ಹಿಡಿಯುವುದಾಗಿ ಎಚ್ಚರಿಕೆ ನೀಡಿತು.

ಪ್ರಕರಣದ ವಿಚಾರಣೆ ಮುಂದೂಡಬೇಕು ಎಂದು ಪ್ರಾಣೇಶ್ ಪರ ವಕೀಲರು ಮನವಿ ಮಾಡಿದರು. ಇದರಿಂದ ಕುಪಿತಗೊಂಡ ಸಿಜೆಐ ಪೀಠ, 'ವಿಚಾರಣೆ ಮುಂದೂಡುವಂತೆ ಅರ್ಜಿದಾರರು ಪದೇ ಪದೇ ಮನವಿ ಮಾಡುತ್ತಿದ್ದಾರೆ. ಇದು ಕಡೆಯ ಎಚ್ಚರಿಕೆ. ವಿಚಾರಣೆ ಮುಂದೂಡುವಂತೆ ಇನ್ನು ಮುಂದೆ ಮನವಿ ಮಾಡಿದರೆ ಉಪಸಭಾಪತಿಯ ವೇತನ, ಇತರ ಸವಲತ್ತುಗಳನ್ನು ತಡೆ ಹಿಡಿಯಲಾಗುವುದು. ಅಲ್ಲದೇ, ಪರಿಷತ್‌ನ ಕಲಾಪಗಳಲ್ಲಿ ಮತದಾನದ ಹಕ್ಕಿಗೂ ತಡೆ ಒಡ್ಡಲಾಗುವುದು' ಎಂದು ಎಚ್ಚರಿಸಿತು. ಬಳಿಕ ಇದೇ 24ಕ್ಕೆ ವಿಚಾರಣೆ ಮುಂದೂಡಿತು.

ಚಿಕ್ಕಮಗಳೂರು ಕ್ಷೇತ್ರದಿಂದ ವಿಧಾನಪರಿಷತ್ ಸ್ಥಾನಕ್ಕೆ ನಡೆದ ಚುನಾವಣೆಯ ಮತ ಎಣಿಕೆ 2021ರ ಡಿಸೆಂಬರ್ 14ರಂದು ನಡೆದಿತ್ತು. ಚಲಾವಣೆಯಾಗಿದ್ದ 2,410 ಮತಗಳ ಪೈಕಿ 39 ಮತಗಳು ಅಸಿಂಧುವಾಗಿದ್ದವು. ಬಾಕಿ 2,371 ಮತಗಳು ಸಿಂಧುವಾಗಿದ್ದವು. ಅವುಗಳ ಪೈಕಿ ಬಿಜೆಪಿಯ ಎಂ.ಕೆ. ಪ್ರಾಣೇಶ್ 1,188 ಮತಗಳನ್ನು ಪಡೆದಿದ್ದರು. ಕಾಂಗ್ರೆಸ್‌ನ ಎ.ವಿ. ಗಾಯತ್ರಿ ಶಾಂತೇಗೌಡ ಅವರು 1,182 ಮತಗಳನ್ನ ಗಳಿಸಿದ್ದರು. ಪ್ರಾಣೇಶ್ ಆರು ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ ಎಂದು ಅಂದಿನ ಚುನಾವಣಾಧಿಕಾರಿ ಘೋಷಣೆ ಮಾಡಿದ್ದರು.

'ಶೃಂಗೇರಿ, ಕೊಪ್ಪ, ಎನ್.ಆರ್.ಪುರ, ಮೂಡಿಗೆರೆ ಪಟ್ಟಣ ಪಂಚಾಯಿತಿಗಳ ಒಟ್ಟು 12 ನಾಮನಿರ್ದೇಶಿತ ಸದಸ್ಯರು ಮತದಾನ ಮಾಡಿದ್ದರು. ಅವರಿಗೆ ಮತದಾನ ಮಾಡಲು ಅವಕಾಶ ಇಲ್ಲ' ಎಂದು ಗಾಯತ್ರಿ ಶಾಂತೇಗೌಡ ನ್ಯಾಯಾಲಯದ ಮೆಟ್ಟಿಲೇರಿದ್ದರು. ನಾಮನಿರ್ದೇಶಿತ ಸದಸ್ಯರಿಗೆ ಮತದಾನದ ಹಕ್ಕು ಇಲ್ಲ ಎಂದು ಹೈಕೋರ್ಟ್ ತೀರ್ಪು ನೀಡಿತ್ತು. ಪ್ರಾಣೇಶ್ ಮೇಲ್ಮನವಿಯ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, 12 ಮತಗಳನ್ನು ಪ್ರತ್ಯೇಕವಾಗಿ ಇರಿಸಿ ಮರು ಎಣಿಕೆ ಮಾಡಿ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗೆ ನಿರ್ದೇಶನ ನೀಡಿತ್ತು. ಮರು ಮತ ಎಣಿಕೆಯ ವರದಿಯನ್ನು ಜಿಲ್ಲಾಧಿಕಾರಿಯವರು 2025ರ ಮಾರ್ಚ್‌ನಲ್ಲಿ ಸಲ್ಲಿಸಿದ್ದರು.

ಕಾರವಾರದಲ್ಲಿ ಹಸಿರು ಕಡಲಾಮೆಗೆ ಗೋವಾದ ವೈದ್ಯ ಮನೋಹರ ನಗ್ರೆ ಚಿಕಿತ್ಸೆ ನೀಡಿದರು

ಹಸಿರು ಕಡಲಾಮೆಗೆ ತಜ್ಞರಿಂದ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಕಾರವಾರ: ಇಲ್ಲಿನ ಕಾಳಿ ನದಿ ಅಳಿವೆ ಪ್ರದೇಶದಿಂದ ಗುರುವಾರ ರಕ್ಷಿಸಲಾದ ಹಸಿರು ಕಡಲಾಮೆಗೆ (ಗ್ರೀನ್ ಸೀ ಟರ್ಟಲ್) ಶುಕ್ರವಾರ ದಿನವಿಡೀ ಚಿಕಿತ್ಸೆ ನೀಡಿ, ಆರೈಕೆ ಮಾಡಲಾಯಿತು.

ಇಲ್ಲಿನ ಅರಣ್ಯ ಇಲಾಖೆಯ ಕೋಸ್ಟಲ್ ಮೆರೈನ್ ವಿಭಾಗದ ಕಚೇರಿ ಬಳಿ ನೀರಿನ ತೊಟ್ಟಿಯಲ್ಲಿ ಕಡಲಾಮೆ ಇರಿಸಲಾಗಿದೆ. ಗೋವಾದ ರೀಫ್ ವಾಚ್ ಸಾಗರಜೀವಿ ಸಂರಕ್ಷಣಾ ಸಂಸ್ಥೆಯ ವೈದ್ಯ ಮನೋಹರ ನಗ್ರೆ ನೇತೃತ್ವದ ತಂಡದ ಸದಸ್ಯರು ಗುರುವಾರ ತಡರಾತ್ರಿಯಿಂದ ಚಿಕಿತ್ಸೆ ನೀಡುತ್ತಿದ್ದಾರೆ.

'ಕಡಲಾಮೆ ಅಸ್ವಸ್ಥಗೊಂಡಿದೆ. ಅದಕ್ಕೆ ಗಾಯಗಳಾಗಿಲ್ಲ. ವಯಸ್ಸು ಸುಮಾರು 70 ವರ್ಷ ಇರಬಹುದು. 3-4 ದಿನಗಳಿಂದ ಆಹಾರ ಸೇವಿಸಿಲ್ಲ. ಹೀಗಾಗಿ, ಲವಣಯುಕ್ತ ದ್ರಾವಣ ಒದಗಿಸಲಾಗಿದೆ' ಎಂದು ಮನೋಹರ ತಿಳಿಸಿದರು.

'ಕಡಲಾಮೆ ಆರೋಗ್ಯ ಸ್ಥಿತಿ ಮೇಲೆ ನಿಗಾ ಇರಿಸಿದ್ದೇವೆ. ಚೇತರಿಸಿಕೊಂಡ ಬಳಿಕ ಸಮುದ್ರಕ್ಕೆ ಬಿಡಲಾಗುವುದು' ಎಂದು ಕೋಸ್ಟಲ್ ಮೆರೈನ್ ವಿಭಾಗದ ಆರ್‌ಎಫ್‌ಒ ಕಿರಣ್ ಮನವಾಚಾರಿ ತಿಳಿಸಿದರು.

ಮುಖ್ಯಮಂತ್ರಿಗಳು ಚರ್ಚಿಸಿ ತೀರ್ಮಾನಿಸಲಿ: ಜಾರಕಿಹೊಳಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಉಚಿತ ಕೊಡುಗೆಗಳನ್ನು ಕರ್ನಾಟಕದಲ್ಲಿ ಮಾತ್ರ ನೀಡುತ್ತಿಲ್ಲ. ಈ ಯೋಜನೆಗಳನ್ನು ಮರು ಪರಿಶೀಲಿಸುವ ಬಗ್ಗೆ ಸುಪ್ರೀಂ ಕೋರ್ಟ್ ನೀಡಿರುವ ಸಲಹೆ ಬಗ್ಗೆ ಎಲ್ಲರೂ ಸೇರಿ ನಿರ್ಧಾರ ತೆಗೆದುಕೊಳ್ಳಬೇಕು. ಮುಖ್ಯಮಂತ್ರಿಗಳ ಜತೆಗೂ ಚರ್ಚೆ ನಡೆಸಬೇಕು' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಮ್ಮ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಇದೆ ಎಂದು ಹೇಳಿದ್ದೇನೆ. ಸರ್ಕಾರ ಬದಲಾದರೂ ಭ್ರಷ್ಟಾಚಾರ ಹಾಗೆಯೇ ಇರುತ್ತದೆ. ಗುತ್ತಿಗೆದಾರರ ವಿಚಾರಕ್ಕೆ ಆ ಹೇಳಿಕೆ ನೀಡಿದ್ದೆ. ಯಾವುದೇ ನಿರ್ದಿಷ್ಟ ವಿಚಾರಕ್ಕೆ ಈ ಹೇಳಿಕೆ ನೀಡಿಲ್ಲ' ಎಂದು ಸ್ಪಷ್ಟಪಡಿಸಿದರು.

'ಸುಪ್ರೀಂ ಕೋರ್ಟ್ ಮತ್ತು ದೆಹಲಿ ಹೈಕೋರ್ಟ್‌ನಲ್ಲಿ ವಕೀಲರಿಗೆ ಮೂಲಸೌಕರ್ಯಗಳನ್ನು ಕಲ್ಪಿಸಿರುವ ಬಗ್ಗೆ ಅಧ್ಯಯನ ಮಾಡಲು ನಿಯೋಗ ಬಂದಿದ್ದೇವೆ. ಇಲ್ಲಿನ ವ್ಯವಸ್ಥೆ ಪರಿಶೀಲಿಸಿ, ವಕೀಲರ ಸಲಹೆ ಪಡೆದು ರಾಜ್ಯದಲ್ಲಿ ವಕೀಲರಿಗೆ ವ್ಯವಸ್ಥೆ ಮಾಡಲಾಗುವುದು. ಎಲ್ಲ ಕಡೆಗೂ ಮಾದರಿಯಾಗುವಂತೆ ಚೇಂಬರ್ ವ್ಯವಸ್ಥೆ ಮಾಡಲಾಗುವುದು' ಎಂದರು.

'ಹೈಕಮಾಂಡ್ ನಾಯಕರನ್ನು ಭೇಟಿ ಮಾಡುವುದಿಲ್ಲ. ಇಲಾಖಾ ಕೆಲಸದ ಸಂಬಂಧ ಕೇಂದ್ರ ಸಚಿವರನ್ನು ಭೇಟಿ ಮಾಡುತ್ತೇನೆ' ಎಂದರು.

ಶಾಲಾ ಬಾಲಕಿಯರಿಗೆ ಉಚಿತ ಬೈಸಿಕಲ್ ಯೋಜನೆ ಮರುಜಾರಿಗೆ ರಾಜ್ಯ ಸರ್ಕಾರಕ್ಕೆ ಯೋಜನಾ ಆಯೋಗ ಶಿಫಾರಸು

• ಸರಿ • ತಪ್ಪು • ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಪಂಜಾಬ್‌ನಲ್ಲಿ 'ಕೈ' ರ‍್ಯಾಲಿ 28ಕ್ಕೆ

ಚಂಡೀಗಢ (ಪಿಟಿಐ): ಪಂಜಾಬ್‌ನ ಬರ್ನಾಲದಲ್ಲಿ ಕಾಂಗ್ರೆಸ್‌ನ ಸಾರ್ವಜನಿಕ ರ‍್ಯಾಲಿ ಫೆ.28ರಂದು ನಡೆಯಲಿದೆ. ರ‍್ಯಾಲಿಯಲ್ಲಿ ರಾಹುಲ್ ಗಾಂಧಿ ಭಾಗಿಯಾಗಲಿದ್ದಾರೆ.

'ಕೇಂದ್ರವು ನರೇಗಾವನ್ನು ಕೊನೆಗೊಳಿಸುತ್ತಿರುವುದನ್ನು, ಅಮೆರಿಕದ ಜೊತೆ ವ್ಯಾಪಾರ ಒಪ್ಪಂದಕ್ಕೆ ಸಹಿ ಮಾಡಿರುವುದನ್ನು ವಿರೋಧಿಸಿ ಈ ರ‍್ಯಾಲಿ ನಡೆಯಲಿದೆ' ಎಂದು ಕಾಂಗ್ರೆಸ್ ತಿಳಿಸಿದೆ.

83 ಸಿವಿಲ್ ನ್ಯಾಯಾಧೀಶರ ಆಯ್ಕೆ

ಬೆಂಗಳೂರು: ಸಿವಿಲ್ ನ್ಯಾಯಾಧೀಶರ ಹುದ್ದೆಗೆ ಸೂಕ್ತವೆಂದು ಆಯ್ಕೆಯಾದ 83 ಅಭ್ಯರ್ಥಿಗಳ ಪಟ್ಟಿಯನ್ನು ಹೈಕೋರ್ಟ್ ಇತ್ತೀಚೆಗೆ ಬಿಡುಗಡೆ ಮಾಡಿದ್ದು, ರಿಜಿಸ್ಟ್ರಾರ್ ಜನರಲ್ ಕೆ.ಎಸ್.ಭರತ್ ಕುಮಾರ್ ಅವರು ಈ ಕುರಿತಂತೆ ಅಧಿಸೂಚನೆ ಹೊರಡಿಸಿದ್ದಾರೆ.

'ಮಹಿಳೆಯರು, ಮಾಜಿ ಸೈನಿಕರು ಮತ್ತು ಲಿಂಗತ್ವ ಅಲ್ಪಸಂಖ್ಯಾತರ ಕೋಟಾದಡಿಯಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದ ಕಾರಣ ಅವುಗಳನ್ನು ಮುಂದಿನ ಗುಣೋತ್ಕೃಷ್ಟ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗಿದೆ' ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

'2025ರ ಡಿಸೆಂಬರ್‌ನಲ್ಲಿ ನಡೆದ ಸ್ಪರ್ಧಾತ್ಮಕ ಲಿಖಿತ ಮತ್ತು 2026ರ ಜನವರಿಯಲ್ಲಿ ನಡೆದ ಮೌಖಿಕ (ವೈವಾ-ವೋಸ್) ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದಡಿ ಅರ್ಹತೆಯ ಕ್ರಮಕ್ಕೆ ಅನುಗುಣವಾಗಿ ಈ ಆಯ್ಕೆ ನಡೆದಿದೆ' ಎಂದು ಅಧಿಸೂಚನೆಯಲ್ಲಿ ವಿವರಿಸಲಾಗಿದೆ.

ತಾಯಂದಿರ ಮರಣ ತಗ್ಗಿಸಲು ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ತಾಯಂದಿರ ಮರಣ ಪ್ರಮಾಣವನ್ನು ಶೂನ್ಯಕ್ಕೆ ಇಳಿಸುವ ಅಭಿಯಾನವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಆರೋಗ್ಯ ಇಲಾಖೆಯು ಉನ್ನತ ಮಟ್ಟದ ಸಮಿತಿ ರಚಿಸಿ ಆದೇಶ ಹೊರಡಿಸಿದೆ.

ಈ ಅಭಿಯಾನವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ (ಕೆಟಿಪಿಪಿ) ಮತ್ತು ನಿಯಮಗಳನ್ನು ಅನುಸರಿಸಿ ಅನುಷ್ಠಾನಗೊಳಿಸಲು, ₹139.53 ಕೋಟಿಯ ಸಮಗ್ರ ಕ್ರಿಯಾ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಸಂಬಂಧ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಹತ್ತು ಮಂದಿಯನ್ನು ಒಳಗೊಂಡ ಸಮಿತಿ ರಚಿಸಲಾಗಿದೆ.

ರಾಜ್ಯದಲ್ಲಿ ತಾಯಂದಿರ ಮರಣಕ್ಕೆ ಕಾರಣಗಳನ್ನು ಪರಿಶೀಲಿಸಿ, ತಡೆಗಟ್ಟುವ ಕ್ರಮಗಳನ್ನು ಸಮಿತಿ ಕೈಗೊಳ್ಳಲಿದೆ. ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸುವುದು, ಎಲ್ಲ ಗರ್ಭಿಣಿಯರಿಗೆ ಮತ್ತು ಬಾಣಂತಿಯರಿಗೆ ಆರೋಗ್ಯ ಸೇವೆಗಳ ಸಾರ್ವತ್ರಿಕ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದು, ವೈದ್ಯಕೀಯ ಸಂಸ್ಥೆಗಳಲ್ಲಿ ತಾಯಂದಿರ ಆರೋಗ್ಯ ಆರೈಕೆಯ ಅಸಮಾನತೆಗಳನ್ನು ಪರಿಹರಿಸುವುದು, ತೃತೀಯ ಹಂತದ ಆರೋಗ್ಯ ಸೇವೆಗಳನ್ನು ಬಲಪಡಿಸುವುದು ಸೇರಿ ವಿವಿಧ ಕಾರ್ಯಗಳನ್ನು ಕೈಗೊಳ್ಳುವಂತೆ ಸಮಿತಿಗೆ ಸೂಚಿಸಲಾಗಿದೆ.

ಕರ್ನಾಟಕ ಸರ್ಕಾರ
ಸಾರ್ವಜನಿಕ ಆಸ್ಪತ್ರೆ ಶಿಕಾರಿಪುರ, ಶಿವಮೊಗ್ಗ ಜಿಲ್ಲೆ
E-mail: amoghshikaripura@gmail.com Ph: 08187-222412
ಸಂಖ್ಯೆ:ಸಾಆಶಿ/ಅಭಿವೃದ್ಧಿ(2)/ವಿವ/02/2025-26 ದಿ: 16.02.2026

ಇ-ಟೆಂಡರ್ ಪ್ರಕಟಣೆ

ಸಾರ್ವಜನಿಕ ಅಸ್ಪತ್ರೆ ಶಿಕಾರಿಪುರ ಶಿವಮೊಗ್ಗ ಜಿಲ್ಲೆ ಇಲ್ಲಿಗೆ 2026-27 ನೇ ಸಾಲಿಗೆ ಹೊರ ಸಂಪನ್ಮೂಲ ಸಂಸ್ಥೆಯ ಮೂಲಕ ಗ್ರೂಪ್-ಡಿ, ನಾನ್ ಕ್ಲಿನಿಕಲ್ ಸ್ವಚ್ಛತಾ ಸಿಬ್ಬಂದಿ, ಎಲೇಕ್ಟ್ರೀಷಿಯನ್, ಪ್ಲಂಬರ್ ಹಾಗೂ ಲಾಂಡ್ರಿ ಸಿಬ್ಬಂದಿಗಳ ಸೇವೆಯನ್ನು ಒದಗಿಸುವ ಕುರಿತು ಕರ್ನಾಟಕ ಪಾರದರ್ಶಕ ಅಧಿನಿಯಮ (KTPP) 1999 ರ ನಿಯಮಗಳು ಹಾಗೂ 2000 ರ ಪ್ರಕಾರ ದ್ವಿ-ದಾಖಲಾತಿ ಸಲ್ಲಿಕೆ ಪದ್ಧತಿಯಲ್ಲಿ ಇ-ಟೆಂಡರ್‌ಪ್ರಕಟಣೆ ನೀಡುತ್ತಿದ್ದು, ಆಸಕ್ತ ಟೆಂಡರ್‌ದಾರರು ಭಾಗವಹಿಸಲು ಕೋರಿದೆ.
ಕ್ರ.ಸಂ. 01. ಟೆಂಡರ್ ಪ್ರಕಟಣೆ ಸಂಖ್ಯೆ: ಸಂಖ್ಯೆ:ಸಾಅಶಿ/ಅಭಿವೃದ್ಧಿ(2)/ವಿವ/02/2025-26 ದಿನಾಂಕ 06.02.2026 **ಟೆಂಡರ್ ವಿವರ:** ಸಾರ್ವಜನಿಕ ಅಸ್ಪತ್ರೆ ಶಿಕಾರಿಪುರ ಶಿವಮೊಗ್ಗ ಜಿಲ್ಲೆ ಇಲ್ಲಿಗೆ 2026-27 ನೇ ಸಾಲಿಗೆ ಹೊರ ಸಂಪನ್ಮೂಲ ಸಂಸ್ಥೆಯ ಮೂಲಕ ಗ್ರೂಪ್-ಡಿ, ನಾನ್ ಕ್ಲಿನಿಕಲ್ ಸ್ವಚ್ಛತಾ ಸಿಬ್ಬಂದಿ, ಎಲೇಕ್ಟ್ರೀಷಿಯನ್ , ಪ್ಲಂಬರ್ ಹಾಗೂ ಲಾಂಡ್ರಿ ಸಿಬ್ಬಂದಿಗಳ ಸೇವೆಯನ್ನು ಒದಗಿಸುವ ಕುರಿತು **ಟೆಂಡರ್ ದಾಖಲಿಸಲು ನೀಡಲಾದ ಅವಧಿ:** ದಿ:18.02.2026 ರಿಂದ ದಿ:08.03.2026 ಸಂಜೆ 5-00 ಗಂಟೆಯುವರೆಗೆ **ಟೆಂಡರ್ ಅಂದಾಜು ಮೊತ್ತ:** ರೂ.1.45 ಕೋಟಿ **ಇ.ಎಂ.ಡಿ ವಿವರ:** ಇ.ಎಂ.ಡಿ ಮೊತ್ತ ರೂ2,18,000/- ಇ-ಪ್ರಕ್ಯೂರ್‌ಮೆಂಟ್ ನಲ್ಲಿ ಸಲ್ಲಿಸುವುದು.
ಹೆಚ್ಚಿನ ವಿವರಗಳಗಾಗಿ ಕಛೇರಿ ವೇಳೆಯಲ್ಲಿ ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ ಇವರನ್ನು ಸಂಪರ್ಕಿಸುವುದು ಅಥವಾ (Website: www.eproc.karnataka.gov.in)ನಲ್ಲಿ ಪಡೆಯಬಹುದಾಗಿದೆ.
ಸಹಿ/-ಆಡಳಿತ ವೈದ್ಯಾಧಿಕಾರಿ, ಸಾರ್ವಜನಿಕ ಆಸ್ಪತ್ರೆ, ಶಿಕಾರಿಪುರ ಶಿವಮೊಗ್ಗ ಜಿಲ್ಲೆ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25-26/102/02/1868

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಅಲ್ಪಾವಧಿ ಟೆಂಡರ್ ಪ್ರಕಟಣೆ
ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ 4701 ಲೆಕ್ಕ ಶೀರ್ಷಿಕೆಯ ಗುಬ್ಬಿ ತಾಲ್ಲೂಕಿನ 01 ಸಂಖ್ಯೆ (2ನೇ ಕರೆ) ರಸ್ತೆ ಅಭಿವೃದ್ಧಿ ಕಾಮಗಾರಿ ಮತ್ತು ತಿಪಟೂರು ತಾಲ್ಲೂಕಿನ 01 ಸಂಖ್ಯೆ (2ನೇ ಕರೆ) ರಸ್ತೆ ಅಭಿವೃದ್ಧಿ ಕಾಮಗಾರಿಯ ಟೆಂಡರ್ ಗಿಟ್ಟ ಮೊತ್ತ ರೂ.172.79 ಲಕ್ಷಗಳ ಹಾಗೂ ರೂ.398.24 ಲಕ್ಷಗಳ ಕಾಮಗಾರಿಗಳಿಗೆ "ಶೇಕಡಾವಾರು ದರಗಳಲ್ಲಿ" ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ, ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನ್ನು ಇ-ಪೋರ್ಟಲ್‌ನಲ್ಲಿ ದಿ: 21-02-2026 ರಿಂದ ವೀಕ್ಷಿಸಬಹುದಾಗಿದೆ. ಟೆಂಡರ್‌ನ ಅಂದಾಜು ಮೊತ್ತ/ ಇ.ಎಂ.ಡಿ/ಟೆಂಡರ್ ಪ್ರೋಸೆಸಿಂಗ್ ಶುಲ್ಕ/ವೇಳಾ ಪಟ್ಟಿ/ಪ್ರೀಬಿಡ್ಡ್ ಸಭೆ/ಗುತ್ತಿಗೆದಾರರ ವರ್ಗ/ ಟೆಂಡರ್ ನಿಯಮ/ಟೆಂಡರ್ ಪ್ರಕಟಣೆ/ ಇತ್ಯಾದಿ ವಿವರಗಳನ್ನು https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ತಿದ್ದುಪಡಿ ಪ್ರಕಟಣೆ ಹೊರಡಿಸಿದಲ್ಲಿ ಇ-ಪೋರ್ಟಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಎತ್ತಿನಹೊಳೆ ಯೋಜನಾ ವಿಭಾಗ ನಂ.2, ತುಮಕೂರು.
ದೂರವಾಣಿ ಸಂಖ್ಯೆ:0816-2201844, ಇಮೇಲ್ ವಿಳಾಸ-
eeypd2tmk@gmail.com

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಆಯುಕ್ತರವರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ ಅರಮನೆ ರಸ್ತೆ, ಬೆಂಗಳೂರು-560001
ಸಂ: DTE-PLANOBLD/1/2026 ದಿನಾಂಕ: 18-02-2026

ಇ- ಟೆಂಡರ್ ಅಧಿಸೂಚನೆ

ಆಯುಕ್ತರು ಕಾಲೇಜು ಮತ್ತು ಶಿಕ್ಷಣ ಇಲಾಖೆ ಬೆಂಗಳೂರು ಇವರು ಆಯುಕ್ತಾಲಯ, ತಾಂತ್ರಿಕ ಶಿಕ್ಷಣ ಇಲಾಖೆ ಬೆಂಗಳೂರು, ಇಲ್ಲಿನ ಕಟ್ಟಡ ಹಾಗೂ ಆವರಣದಲ್ಲಿನ ಸ್ವಚ್ಛತಾ ನಿರ್ವಹಣಾ ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ಆಸಕ್ತ ಬಿಡ್ ದಾರರಿಂದ ಇ-ಸಂಗ್ರಹಣೆ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಬಿಡ್ ಅನ್ನು ಆಹ್ವಾನಿಸಿರುತ್ತಾರೆ. ಟೆಂಡರ್ ದಸ್ತಾವೇಜು ಮತ್ತು ಇತರೆ ವಿವರಗಳಿಗಾಗಿ **http://kppp.karnataka.gov.in** ಅನ್ನು ಸಂಪರ್ಕಿಸಬಹುದಾಗಿದೆ.

ಟೆಂಡರ್ ಮಾಹಿತಿಯು ಈ ಕೆಳಗಿನಂತಿದೆ

ಟೆಂಡರ್ ಮಾಹಿತಿ	ಕೆಪಿಪಿ ಪೋರ್ಟಲ್‌ನಲ್ಲಿ ದಸ್ತಾವೇಜನ್ನು ಅಪ್ ಲೋಡ್ ಮಾಡುವ ದಿನಾಂಕ	ಪ್ರೀ ಬಿಡ್ ಸಭೆಯ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
ಟೆಂಡರ್ ಸಂಖ್ಯೆ: DTE/2025-26/SE0004 ಸ್ವಚ್ಛತಾ ಕಾರ್ಯ ಹಾಗೂ ನಿರ್ವಹಣಾ ಸೇವೆ (ಸ್ವಚ್ಛತಾ ಸಾಮಗ್ರಿಗಳೊಂದಿಗೆ)	**18.02.2026**	**23.02.2026 at 12:00 Noon**	**05.03.2026 at 5:29 p.m.**

The Department reserves the right to cancel or reject the tenders without any notification. Details in this regard may be obtained in the website **https://kppp.karnataka.gov.in.**

ಸಹಿ/- ಅಪರ ನಿರ್ದೇಶಕರು
(ಪಾಲಿಟೆಕ್ನಿಕ್) ತಾಂತ್ರಿಕ ಶಿಕ್ಷಣ ಇಲಾಖೆ
DIPR/CP/RO5775/AAPL/2025-26

ಸಾರಿಗೆ ಇಲಾಖೆ
ಸಾರಿಗೆ ಆಯುಕ್ತರ ಕಛೇರಿ, 1ನೇ ಮಹಡಿ, ಟಿ.ಟಿ.ಎಂ.ಸಿ., ಕಟ್ಟಡ, ಬಿ.ಎಂ.ಟಿ.ಸಿ. ಸಂಕೀರ್ಣ, ಶಾಂತಿನಗರ, ಬೆಂಗಳೂರು,
ಸಂ:ಸಾಆ/ಪೀಕ-3/ಪಿಆರ್-106/2025-26 **ದಿನಾಂಕ: 19.02.2026**

ಇ-ಟೆಂಡರ್ ಪ್ರಕಟಣೆ

ಸಾರಿಗೆ ಇಲಾಖೆಯಲ್ಲಿ Original Equipment Manufacturers for Automatic testing station ಗಳಿಗೆ empanelment ಸಂಬಂಧ Pre Qualified Tender ಅನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ಟೆಂಡರ್‌ನ ವಿವರಗಳನ್ನು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ kppp.karnataka.gov.in ಸಂಪರ್ಕಿಸಿ ಪಡೆಯಬಹುದಾಗಿದೆ. ಸಂಸ್ಥೆಗಳು ಇ-ಪ್ರಕ್ಯೂರ್‌ಮೆಂಟ್ ಸಹಾಯವಾಣಿಯ ದೂರವಾಣಿ ಸಂಖ್ಯೆ: +91-8046010000/+91-8068948777 ಮೂಲಕ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **16.03.2026 ರ ಸಂಜೆ 5.00 ಗಂಟೆ ಆಗಿರುತ್ತದೆ.** ಹೆಚ್ಚಿನ ಮಾಹಿತಿಗಾಗಿ ಈ ದೂರವಾಣಿ ಸಂಖ್ಯೆ: 080-22235176 ಯನ್ನು ಸಂಪರ್ಕಿಸಬಹುದು.

Empanelment No.TD/2025-26/PREQUAL_TENDER_NUMBER_3

ಸಹಿ/-
ಸಾರಿಗೆ ಆಯುಕ್ತರ ಪರವಾಗಿ
ಬೆಂಗಳೂರು.
ವಾಸಾಸಂಇ/ವಾ.ಪ್ರ/5787/ಎಂಎಎ/2025-26

ಕರ್ನಾಟಕ ಸರ್ಕಾರ
ನಗರ ಭೂ ಸಾರಿಗೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆ
ಆಯುಕ್ತರ ಕಾರ್ಯಾಲಯ ನಗರ ಭೂ ಸಾರಿಗೆ
ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560027, ದೂರವಾಣಿ : 080-22226627/6628, ಫ್ಯಾಕ್ಸ್ : 080-22226630
ಇಮೇಲ್ : dultbangalore@gmail.com, dult@karnataka.gov.in ಜಾಲತಾಣ: https://dult.karnataka.gov.in
ಸಂಖ್ಯೆ: DULT-TECH/30/2024 ದಿನಾಂಕ: 20.02.2026

ಮರು ಟೆಂಡರ್ ಪ್ರಕಟಣೆ

ನಗರ ಭೂ ಸಾರಿಗೆ ನಿರ್ದೇಶನಾಲಯ, ಕರ್ನಾಟಕದಲ್ಲಿನ ಬೆಳಗಾವಿ ಹಾಗೂ ಮಂಗಳೂರು ನಗರಗಳ ಸಮಗ್ರ ಮೊಬಿಲಿಟಿ ಯೋಜನೆ (CMP) ತಯಾರಿಕೆಗಾಗಿ ಅರ್ಹವುಳ್ಳ ಸಮಾಲೋಚಕರ ಸೇವೆ ಪೂರೈಸಲು ಪ್ರತ್ಯೇಕ ಟೆಂಡರ್ (ಇ-ಬಿಡ್ Call-2) ಅನ್ನು ಆಹ್ವಾನಿಸಿದ್ದು, ಬಿಡ್ಡುದಾರರು **https://kppp.karnataka.gov.in** ವೆಬ್‌ಸೈಟ್‌ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: **05.03.2026,** ಸಂಜೆ **5.30** ರೊಳಗೆ. ಸದರಿ ಟೆಂಡರ್ ನಂಬರ್‌ಗಳು: ಬೆಳಗಾವಿ: **DULT/2025-26/SE0021/CALL-2,** ಮಂಗಳೂರು: **DULT/2025-26/SE0028/CALL-2.**

ಸಹಿ/- ವಿಶೇಷಾಧಿಕಾರಿ
ನಗರ ಭೂ ಸಾರಿಗೆ ನಿರ್ದೇಶನಾಲಯ
ನಗರಾಭಿವೃದ್ಧಿ ಇಲಾಖೆ
ವಾಸಾಸಂಇ/ವಾಪ್ರ/5771/ಶಿರಡಿ ಸಾಯಿ/2025-26

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಕೃಷಿನಗರ, ಧಾರವಾಡ-580005 (ಕರ್ನಾಟಕ)
ಸಂಖ್ಯೆ:ಆ.ಅ/ಕೃವಿವಿ/ಹೆಚ್ಚುವರಿ ಅನುದಾನ/2025-26 **ದಿನಾಂಕ: 18.02.2026**

ಆಸಕ್ತಿ ಅಭಿವ್ಯಕ್ತ ಪಡಿಸುವುದು (ದ್ವಿತೀಯ ಕರೆ)

ನಿಖರ ಠೇವಣಿಗಾಗಿ ಆಸಕ್ತಿ ಅಭಿವ್ಯಕ್ತ ಪಡಿಸುವುದಕ್ಕಾಗಿ ಕೃಷಿ ವಿಶ್ವವಿದ್ಯಾಲಯ, ಧಾರವಾಡವು ಕೆ.ಸಿ-1 ಪ್ರಕಾರ ಇ-ಟೆಂಡರ್ ಮೂಲಕ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಶಾಖೆಯನ್ನು ಹೊಂದಿರಬಹುದಾದ ಸಾರ್ವಜನಿಕ ವಲಯದ ಬ್ಯಾಂಕುಗಳು/ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಹಾಗೂ ಶೆಡ್ಯೂಲ್ಡ್ ಬ್ಯಾಂಕುಗಳಿಂದ ಸ್ಪರ್ಧಾತ್ಮಕ ಬಡ್ಡಿ ದರವನ್ನು ಮರು ಕೋರಲಾಗಿದೆ. ಜನರಲ್ ಫಂಡ್ ಮತ್ತು ಕೃಷಿ ಮೇಳಾ ಆವರ್ತ ನಿಧಿಯ ಮೊತ್ತ **ರೂ.5,50,00,000.00** ಅಲ್ಪಾವಧಿ ಠೇವಣಿಗಾಗಿ ಲಭ್ಯವಿರುವುದು. ವಿವರವಾದ ಅಧಿಸೂಚನೆ ಮತ್ತು ಅರ್ಹತೆಗಳನ್ನು ತಿಳಿದುಕೊಳ್ಳಲು ವೆಬ್‌ಸೈಟ್ https://kppp.karnataka.gov.in. ನ್ನು ನೋಡುವುದು.

ಟೆಂಡರ್ ವೇಳಾಪಟ್ಟಿ

1	ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ	: 26.02.2026 ಸಾಯಂಕಾಲ 4.00 ಗಂಟೆ
2	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	: 27.02.2026 ಸಾಯಂಕಾಲ 4.15 ಗಂಟೆ

ಆಸಕ್ತ ಬ್ಯಾಂಕುಗಳು ಇ-ಟೆಂಡರ್ ಪೋರ್ಟಲ್ ಮೂಲಕ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ **ಸಂಖ್ಯೆ:080-23010900** ಯನ್ನು ಸಂಪರ್ಕಿಸಬಹುದು. ಬ್ಯಾಂಕುಗಳು ಈ ಟೆಂಡರಗೆ ತಿದ್ದುಪಡಿ/ಜೋಡಣೆ ಅಥವಾ ಇನ್ನೇನಾದರು ತಿಳಿದುಕೊಳ್ಳಲು ಸದಾ ವೆಬ್‌ಸೈಟ್ https://kppp.karnataka.gov.in. ನ್ನು ನೋಡುವುದು. ವಿಶ್ವವಿದ್ಯಾಲಯವು ಯಾವುದೇ ಸಮಯದಲ್ಲಿ ಟೆಂಡರ್ ಮುಂದುವರಿಸುವ ಅಥವಾ ರದ್ದು ಪಡಿಸುವ ಕುರಿತು ಅಂತಿಮ ಅಧಿಕಾರವನ್ನು ಹೊಂದಿರುವುದು. ವಿಶ್ವವಿದ್ಯಾಲಯವು ತೆಗೆದುಕೊಳ್ಳುವ ನಿರ್ಣಯವೇ ಅಂತಿಮವಾಗಿರುತ್ತದೆ.

ಸಹಿ/-
ಆಸ್ತಿ ಅಧಿಕಾರಿಗಳು, ಕೃ.ವಿ.ವಿ ಧಾರವಾಡ.
ವಾ.ಸಾ.ಇ./ಧಾರವಾಡ/1262/2025-26/ದೇಶಪಾಂಡೆಪಬ್ಲಿಸಿಟಿ

ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗೋವಿಂದರಾಜನಗರ ವಿಭಾಗ, ವಲಯ-2, 2ನೇ ಮಹಡಿ, ಶಕ್ತಿ ಸೌಧ, 13ನೇ ಅಡ್ಡರಸ್ತೆ, 4ನೇ 'ಬಿ' ಮುಖ್ಯರಸ್ತೆ, ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು - 560040.
ಸಂಖ್ಯೆ:ಬೆಂಪನಪಾ/ಕಾಅ(ಗೋರಾನ)/ಟಿಎನ್/ಜಿಎಲ್/04/2025-26 ದಿನಾಂಕ: 20-02-2026

ಅಲ್ಪಾವಧಿ ಟೆಂಡರ್ ಅಧಿಸೂಚನೆ
(ದ್ವಿ-ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ವಿಭಾಗ, ವಲಯ-2, ಬೆಂಪನಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗೆ ಬೆಂಪನಪಾಲಿಕೆಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿತ ಗುತ್ತಿಗೆದಾರರಿಂದ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
	ದ್ವಿ-ಲಕೋಟೆ ಕಾಮಗಾರಿಗಳು
1	ಗೋವಿಂದರಾಜನಗರ ಮತಕ್ಷೇತ್ರದ ವಾರ್ಡ್ ಸಂಖ್ಯೆ. 141, ನಾಗರಬಾವಿ ಇಲ್ಲಿನ ಸಮುದಾಯ ಭವನಕ್ಕೆ ಹೆಚ್ಚುವರಿ ಕೆಲಸಗಳ ಕಾಮಗಾರಿ ಮತ್ತು ವಾರ್ಡ್ ಸಂಖ್ಯೆ. 139, ಮೂಡಲಪಾಳ್ಯದಲ್ಲಿ ಇತರೆ ಅಭಿವೃದ್ಧಿ ಕೆಲಸಗಳ ಕಾಮಗಾರಿ. **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 234.12, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 3,52,000**
2	ಗೋವಿಂದರಾಜನಗರ ಮತಕ್ಷೇತ್ರದ ವಾರ್ಡ್ ಸಂಖ್ಯೆ. 139, ಮೂಡಲಪಾಳ್ಯ ಇಲ್ಲಿನ ಉದ್ಯಾನವನ ಮತ್ತು ಆಟದ ಮೈದಾನದ ಸುಧಾರಣೆಗಳ ಕಾಮಗಾರಿ ಹಾಗೂ ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿ. **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 253.30, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 3,80,000**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: **27-02-2026 ರಂದು 16.00 ಗಂಟೆವರೆಗೆ.** 3) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: **02-03-2026 ರಂದು 11.30 ಗಂಟೆಯ ನಂತರ.** 4) ಆರ್ಥಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: **ತಾಂತ್ರಿಕ ಪ್ರಸ್ತಾವನೆಗಳ ಅನುಮೋದನೆಯ ನಂತರ ಕೆ.ಪಿ.ಪಿ. ಪೋರ್ಟಲ್ ಮೂಲಕ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಗೋವಿಂದರಾಜನಗರ ವಿಭಾಗ, ವಲಯ-2, ಬೆಂಪನಪಾ.

ಜಿಲ್ಲಾ ಆಸ್ಪತ್ರೆ ಮತ್ತು ಸಾಂಕ್ರಾಮಿಕ ರೋಗಗಳ ಆಸ್ಪತ್ರೆ
ಕೆ.ಆರ್.ಎಸ್.ರಸ್ತೆ, ಮೇಟಗಳ್ಳಿ ಮೈಸೂರು ಜಿಲ್ಲೆ -571311
ಕಛೇರಿ : 0821-2517555, ಇಮೇಲ್: mysoreds@.com
ಸಂ: ಜಿಆ&ಸಾರೋಆಮೈ/ಸರಬ/ರಾಅ/ಟೆಂಡರ್/02/2025-26 **ದಿನಾಂಕ: 18.02.2026**

ಟೆಂಡರ್ ಅಧಿಸೂಚನೆ

ಜಿಲ್ಲಾ ಆಸ್ಪತ್ರೆ ಮತ್ತು ಸಾಂಕ್ರಾಮಿಕ ರೋಗಗಳ ಆಸ್ಪತ್ರೆ, ಮೈಸೂರು ಇಲ್ಲಿಗೆ ಬರುವ ರೋಗಿಗಳ ಹಿತದೃಷ್ಟಿಯಿಂದ **ಸರ್ಜಿಕಲ್/ಸಲಕರಣೆಗಳ ಸರಬರಾಜಿಗಾಗಿ** ಸರಬರಾಜು ಮಾಡಲು ಆಸಕ್ತ ಹಾಗೂ ಅರ್ಹ ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ. ಟೆಂಡರ್ ಅವಧಿಯು ಆದೇಶ ನೀಡುವ ದಿನಾಂಕದಿಂದ **31.03.2026ರವರೆಗೆ ಮಾತ್ರ ಚಾಲ್ತಿಯಲ್ಲಿರುತ್ತದೆ.** ಒಟ್ಟು ಟೆಂಡರ್‌ನ ಅಂದಾಜು ಮೌಲ್ಯ ವರ್ಷಕ್ಕೆ **ರೂ. 30.00 ಲಕ್ಷಗಳು.**

ಟೆಂಡರ್ ಪ್ರಕಟಣೆ ವಿವರಗಳು: 1) ಟೆಂಡರ್ ಪ್ರಕಟಣೆ **ದಿನಾಂಕ 18.02.2026 2)** ಆನ್‌ಲೈನ್‌ನಲ್ಲಿ ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ **ದಿನಾಂಕ: 18.02.2026 3)** ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ **ದಿನಾಂಕ: 04.03.2026 ರ ಸಂಜೆ 4:30 ಗಂಟೆಗೆ 4)** ಸ್ಯಾಂಪಲ್‌ಗಳ ದೃಢೀಕರಣ ಪತ್ರವನ್ನು ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕ: **05.03.2026ರ ಬೆಳಿಗ್ಗೆ 11:00 ಗಂಟೆಯೊಳಗೆ 5)** ತಾಂತ್ರಿಕ ಲಕೋಟೆಯನ್ನು ತೆರೆಯುವ **ದಿನಾಂಕ: 06.03.2026 6)** ಹಣಕಾಸಿನ ಲಕೋಟೆಯನ್ನು ತೆರೆಯುವ **ದಿನಾಂಕ : 09.03.2026 6)** ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ರಜಾ ದಿನಗಳನ್ನು ಹೊರತುಪಡಿಸಿ: **ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ ಮತ್ತು ಸಾಂಕ್ರಾಮಿಕ ರೋಗಗಳ ಆಸ್ಪತ್ರೆ, ಮೈಸೂರು. 8)** ಟೆಂಡರ್ ಮೊತ್ತ **ರೂ. 30.00 ಲಕ್ಷಗಳು 9)** EMD amount 2% of the Tender Amount: **ರೂ. 60,000/-(ಅರವತ್ತು ಸಾವಿರ ಮಾತ್ರ).** ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಿದ ಟೆಂಡರ್‌ದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಟೆಂಡರು ಪ್ರಕ್ರಿಯೆ ದಿನಾಂಕಗಳು ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https//kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು.

ಸಹಿ/- **ಜಿಲ್ಲಾ ಶಸ್ತ್ರಚಿಕಿತ್ಸಕರು**
ಜಿಲ್ಲಾ ಆಸ್ಪತ್ರೆ ಹಾಗೂ ಸಾಂಕ್ರಾಮಿಕ ರೋಗಗಳ ಆಸ್ಪತ್ರೆ
DIPR/MYS/1707/SA/2025-26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಐಬಿಸಿ ವಿಭಾಗ ಸಂಖ್ಯೆ-2
ಆಲಮೇಲ-586202. ದೂರವಾಣಿ ಸಂ:08488-232298. ಇ-ಮೇಲ್:kbjnleealmel@gmail.com
ಸಂ:ಕೃಭಾಜನಿನಿ/ಐಬಿಸಿವಿ-2/ಪಿಬಿ/2025-26/801 ದಿನಾಂಕ:18.02.2026

ಇ- ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರ, ಕೃಭಾಜನಿನಿ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ ಐಬಿಸಿ ವಿಭಾಗ ಸಂಖ್ಯೆ : 2, ಆಲಮೇಲ ಇವರ ಕಚೇರಿಯಿಂದ ಈ ಕೆಳಗೆ ಪಟ್ಟಿಕರಿಸಿರುವ ಕಾಮಗಾರಿಗಳಿಗೆ ಶೇಕಡಾವಾರು ಟೆಂಡರ್ ಆಹ್ವಾಹಿಸಲಾಗಿದೆ.

ಕ್ರ.ಸಂ	ಕಾಮಗಾರಿಗಳ ಹೆಸರು & ವಿವರ	ಟೆಂಡರ್ ಪದ್ಧತಿ	ಅಂದಾಜು ಮೊತ್ತ (ಲಕ್ಷಗಳಲ್ಲಿ)	ಗುತ್ತಿಗೆದಾರರ ಅರ್ಹತೆ	ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೇ
01	Savings grant Closure-period and special repairs works for 2025-26 /Call-02	ಏಕ ಲಕೋಟೆ	*ರೂ.27.67 ಲಕ್ಷಗಳು (02 special repairs ಕಾಮಗಾರಿಗಳು) * ಕಾಮಗಾರಿಗಳ ಮೊತ್ತದ ವಿವರ : ಗರಿಷ್ಠ ಮೊತ್ತ ರೂ: **16.69** ಲಕ್ಷ - ಕನಿಷ್ಠ ಮೊತ್ತ ರೂ: **10.98** ಲಕ್ಷ * ಗರಿಷ್ಠ ಇ.ಎಂ.ಡಿ ರೂ: **27500/-** * ಕನಿಷ್ಠ ಇ.ಎಂ.ಡಿ ರೂ: **20900/-**	ಕೆ.ಪಿ.ಡಬ್ಲ್ಯೂಡಿ ಯಲ್ಲಿ ನೊಂದಾಯಿತಿ 4ನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಗುತ್ತಿಗೆದಾರಿಂದ, (ಎಸ್.ಸಿ./ಎಸ್.ಟಿ/ CAT-II(A)/CAT-I) ಮೀಸಲಿಟ್ಟ ಕಾಮಗಾರಿಗಳಿಗೆ ಮೇಲಿನ ದಾಖಲೆಗಳ ಜೊತೆಗೆ 10 ವರ್ಷ ಮೇಲ್ಪಟ್ಟ ಡೋಮಿಶಿಯಲ್ & ಜಾತಿ ಪ್ರಮಾಣ ಪತ್ರ ಲಗತ್ತಿಸುವುದು ಕಡ್ಡಾಯವಾಗಿರುತ್ತದೆ)	DTS, ನೋಡುವ/ ಸಲ್ಲಿಸುವ ದಿನಾಂಕ: **20.02.2026** ರಿಂದ **27.02.2026** ರ ಸಂಜೆ 4.30 ರ ವರೆಗೆ ಹಾಗೂ ಬಿಡ್ಡನ್ನು ದಿನಾಂಕ : **02.03.2026** ರಂದು 11.00 ಗಂಟೆಗೆ ತೆರೆಯಲಾಗುವುದು

ಗುತ್ತಿಗೆದಾರರು ದಾಖಲೆಗಳನ್ನು ಇ-ಟೆಂಡರಿಂಗ್ ಮೂಲಕ 'http:www.kppp.karnataka.gov.in ಅಂತರ್ಜಾದಲ್ಲಿ "ಶೆಡ್ಯೂಲ್ - ಬಿ" ಮತ್ತು ತಾಂತ್ರಿಕ ವಿವರಗಳನ್ನು ಪಡೆಯಬಹುದಾಗಿದೆ. ಬಿಡ್ಡನ್ನು ತೆರೆಯುವ ಸ್ಥಳ :ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ ಐಬಿಸಿ ವಿಭಾಗ ಸಂಖ್ಯೆ : 2, ಆಲಮೇಲ ಇವರ ಕಚೇರಿಯಲ್ಲಿ ಮತ್ತು ಹೆಚ್ಚಿನ ಮಾಹಿತಿಗಾಗಿ ಈ ಕೆಳ ಸಹಿದಾರರ ಕಾರ್ಯಾಲಯಕ್ಕೆ (08488 - 232298) ಸಂಪರ್ಕಿಸಬಹುದಾಗಿದೆ. ಮತ್ತು ಷರತ್ತು ಬದ್ಧ ಯಾವುದೇ ಕಾಮಗಾರಿ ಟೆಂಡರ್‌ಗಳನ್ನು / ಒಪ್ಪಿಗೆ/ ತಿರಸ್ಕರಿಸುವ, ಅಥವಾ ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಅಧಿಕಾರ ಸಕ್ಷಮ ಪ್ರಾಧಿಕಾರಕ್ಕೆ ಇರುತ್ತದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಐಬಿಸಿ ವಿಭಾಗ-2, ಆಲಮೇಲ.
ವಾಸಾಸಂಇ/ವಿಜಯಪುರ/724/ಕೆಎಸ್‌ಎಂಸಿಎ/2025-26

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001.

ಸ್ಥಿರಾಸ್ತಿಯ ಇ-ಹರಾಜಿಗೆ ಆಹ್ವಾನ /ಸೂಚನೆ

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ, 2004 ರ ಅಡಿಯಲ್ಲಿ ಸರ್ಕಾರವು ಸ್ಥಿರಾಸ್ತಿ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಮಾನ್ಯ ವಿಶೇಷ ನ್ಯಾಯಾಲಯವು ಕೆಪಿಐಡಿಎಫ್‌ಇ ಕಾಯ್ದೆ ಅಡಿಯಲ್ಲಿ ಸ್ಥಿರೀಕರಿಸಿದ ಆದೇಶದ ಅನುಸಾರವಾಗಿ, ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರದ ವತಿಯಿಂದ ಸ್ಥಿರಾಸ್ತಿ ಸ್ವತ್ತುಗಳನ್ನು ಇ-ಹರಾಜಿನ ಮೂಲಕ ವಿಲೇವಾರಿ ಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದೆ. (ಎಲ್ಲಿದೇಯೋ, ಹೇಗಿದೇಯೋ, ಯಾವ ಸ್ಥಿತಿಯಲ್ಲಿದೇಯೋ ಅದೇ ಆಧಾರದ ಮೇಲೆ) **(as is where is and whatever there is basis)** ಆಸಕ್ತ ಬಿಡ್‌ದಾರರು ಅರ್ನೆಸ್ಟ್ ಮನಿ ಡೆಪಾಸಿಟ್ (EMD) ಅನ್ನು ಒದಗಿಸಬೇಕಾಗುತ್ತದೆ (ಸೇವಾ ಪೂರೈಕೆದಾರರು/ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಒದಗಿಸಿದ ಇ-ಪೋರ್ಟಲ್‌ನಲ್ಲಿ ಮಾತ್ರ)

SHORT DESCRIPTION OF THE IMMOVABLE PROPERTY
Properties are free of all encumbrances and are in the name of Competent Authority appointed by Government and confirmed by the Special Court under KPIDFE Act, 2004.

All that piece and parcel of the property bearing Sy. No 33,35/3, 35/4 and 174 of Village and Sy.No.224, 184/5 and 189 of Bidaregere Village, Kasaba Hobli, Anekal Taluk, Bangalore Urban District Together measuring 12-24.08 Acres (Converted by DC Bangalore urban Vide O.M. No. ALN (A&K) sr 118/2010-11 Dt: 23-2-2011, 44/2011-12 Dt:30/9/2011, 47,48/2011-12 dt: 30/9/2011 and O.M 163/2012-13 Dt:27/11/2012 under the Administrative Jurisidiction of Karpoor Grampanchayath, kasaba hobli, Anekal Taluk , Bangalore Rural District bounded on: East by: Sy.No.190 of Bidaregere village & Sy.no.32 of Karpoor village, West by: Road, North by: Sy. No. 28 and 29 of Karpoor village , South by: Sy.no. 183, 184,186,187,188,192 and 193 of bidargere village . **Google Map :** https://maps.app.goo.gl/wcgnQ8KeoaZ3suUS6 Latitude and Longitude: 12.719274, 77.721954 08 flats (GREEN APARTMENTS), which is constructed on above property , for more details regarding Minimum bid Price, EMD and other details please visit Karnataka Public Procurement Portal https://kppp.karnataka.gov.in & https://sploca.org/)

ಸ್ಥಳ ಪರಿಶೀಲನೆ ದಿನಾಂಕ ಮತ್ತು ಸಮಯ	ಪೂರ್ವ ಭಾವಿ ಬಿಡ್ ಸಭೆ ದಿನಾಂಕ ಮತ್ತು ಸಮಯ	ಬಿಡ್ ದಾಖಲೆಗಳು ಮತ್ತು ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ	ಇ-ಹರಾಜಿನ ದಿನಾಂಕ ಮತ್ತು ಸಮಯ
23ನೇ ಫೆಬ್ರವರಿ 2026 ಬೆಳಗ್ಗೆ 10.00 ರಿಂದ ಮಧ್ಯಾಹ್ನ 01.00 ಗಂಟೆಯವರೆಗೆ	23ನೇ ಫೆಬ್ರವರಿ 2026, ಮಧ್ಯಾಹ್ನ 3.00 ರಿಂದ 4.00 ಗಂಟೆ	27ನೇ ಫೆಬ್ರವರಿ 2026 ಸಂಜೆ 5 ಗಂಟೆಯವರೆಗೆ	02ನೇ ಮಾರ್ಚ್ 2026 ಬೆಳಗ್ಗೆ 11.00 ರಿಂದ ಮಧ್ಯಾಹ್ನ 1 ಗಂಟೆಯವರೆಗೆ

ಆಸಕ್ತ ಬಿಡ್‌ದಾರರು ನೋಂದಣಿ ಮತ್ತು ಆನ್‌ಲೈನ್ ಹರಾಜಿಗಾಗಿ **https://kppp.karnataka.gov.in** ಇಲ್ಲಿಗೆ ಲಾಗಿನ್ ಮಾಡಬಹುದು (ಸಹಾಯವಾಣಿ ಸಂಖ್ಯೆ: 080-46010000, 080-68948777) ಮತ್ತು ಇ-ಹರಾಜಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯ ಬಗ್ಗೆ ಸಹಾಯಕ ಆಯುಕ್ತರು, ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಛೇರಿ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು-560001 ಇವರನ್ನು ಸಂಪರ್ಕಿಸಬಹುದು. ಇ-ಮೇಲ್ ಐಡಿ: **splocaeauction@gmail.com** ಅಥವಾ ಮೊಬೈಲ್ ಸಂಖ್ಯೆ 9945515174 ಅನ್ನು ಸಂಪರ್ಕಿಸಬಹುದು.

ಸಹಿ/-
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ
(ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು
ಸ್ಥಳ: ಬೆಂಗಳೂರು
ದಿನಾಂಕ: 19.02.2026
DIPR/CP/5788/ZEN/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 **editpage@prajavani.co.in**

ಸಂಪಾದಕೀಯ

ಕಾಲದ ಅಗ್ನಿಪರೀಕ್ಷೆ ಮೀರಿ ನಿಂತ ಭಾರತ-ಫ್ರಾನ್ಸ್ ಗಾಢ ಸಂಬಂಧ

ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ನಡುವೆ ಮುಂಬೈನಲ್ಲಿ ನಡೆದ ದ್ವಿಪಕ್ಷೀಯ ಮಾತುಕತೆಯ ನಂತರ ಘೋಷಿಸಲಾದ ಹಲವಾರು ಕ್ರಮಗಳು, ಉಭಯ ದೇಶಗಳ ನಡುವಣ ಗಾಢ ಸಂಬಂಧವನ್ನು ಮುಂದುವರಿಸುವ ಹಾಗೂ ಮತ್ತಷ್ಟು ಬಲಪಡಿಸುವ ಪ್ರಯತ್ನದಂತಿವೆ. ಎರಡೂ ದೇಶಗಳು ದೀರ್ಘಕಾಲಿಕ ಸಂಬಂಧ ಹಾಗೂ ರಚನಾತ್ಮಕ ಸಹಭಾಗಿತ್ವವನ್ನು ಹೊಂದಿವೆ; ಅಂತರರಾಷ್ಟ್ರೀಯ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ವಿಭಿನ್ನ ನಿಲುವುಗಳನ್ನು ಹೊಂದಿರುವ ಸಂದರ್ಭದಲ್ಲಿಯೂ, ಆ ನಿಲುವು ಸ್ಥಿರವಾಗಿರುವ ತಮ್ಮ ಸಂಬಂಧದ ಮೇಲೆ ವ್ಯತಿರಿಕ್ತ ಪರಿಣಾಮ ಬೀರದಂತೆ ಎಚ್ಚರ ವಹಿಸಿವೆ. 1998ರಲ್ಲಿ ಭಾರತ ನಡೆಸಿದ ಅಣ್ವಸ್ತ್ರ ಪರೀಕ್ಷೆಯನ್ನು ಟೀಕಿಸಲು ನಿರಾಕರಿಸಿದ ರಷ್ಯಾ ನಂತರದ ಪ್ರಮುಖ ದೇಶ ಫ್ರಾನ್ಸ್ ಆಗಿತ್ತು ಎನ್ನುವುದು ಗಮನಾರ್ಹ. ಉಭಯ ದೇಶಗಳ ಸಂಬಂಧಕ್ಕೆ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಆಯಾಮಗಳೂ ಇವೆ. ಸರ್ಕಾರಗಳ ಬದಲಾವಣೆ ಹಾಗೂ ಜಾಗತಿಕ ರಾಜಕಾರಣದಲ್ಲಿನ ಪಲ್ಲಟಗಳು ತಮ್ಮ ಸಂಬಂಧದ ಮೇಲೆ ಪರಿಣಾಮ ಬೀರದಂತೆ ಎರಡೂ ದೇಶಗಳು ನಿರಂತರವಾಗಿ ಪ್ರಯತ್ನಿಸಿವೆ. ಈ ನಂಬಿಕೆ-ವಿಶ್ವಾಸದ ತಳಹದಿಯ ಮೇಲೆ ರೂಪುಗೊಂಡ ಸಂಬಂಧವನ್ನು ಮೋದಿ ಮತ್ತು ಮ್ಯಾಕ್ರನ್ ಮುಂದುವರಿಸಿದ್ದಾರೆ.



ರಕ್ಷಣೆ, ವ್ಯಾಪಾರ ಹಾಗೂ ವಿವಿಧ ಕ್ಷೇತ್ರಗಳಲ್ಲಿನ ಸಹಕಾರಕ್ಕೆ ಸಂಬಂಧಿಸಿದಂತೆ ಭಾರತ ಮತ್ತು ಫ್ರಾನ್ಸ್ ಮಾಡಿಕೊಂಡಿರುವ ಒಪ್ಪಂದಗಳು ಎರಡೂ ದೇಶಗಳ ಸಂಬಂಧವನ್ನು ಮತ್ತಷ್ಟು ಬಲಪಡಿಸುವ ಪ್ರಯತ್ನಗಳಾಗಿವೆ.

ಫ್ರಾನ್ಸ್ ಅಧ್ಯಕ್ಷರ ಭಾರತ ಭೇಟಿಯ ಸಂದರ್ಭದಲ್ಲಿ, ಕರ್ನಾಟಕದ ಕೋಲಾರ ಜಿಲ್ಲೆಯ ವೇಮಗಲ್‌ನಲ್ಲಿ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ (ಟಿಎಎಸ್‌ಎಲ್) ನಿರ್ಮಿಸಿರುವ 'ಏರ್‌ಬಸ್ ಎಚ್ 125' ಲಘು ಹೆಲಿಕಾಪ್ಟರ್‌ನ ಜೋಡಣಾ ಘಟಕಕ್ಕೆ ಚಾಲನೆ ದೊರೆತಿದೆ. ಇದರ ಜೊತೆಗೆ, ಭಾರತದಲ್ಲಿ 'ಹ್ಯಾಮರ್' ಕ್ಷಿಪಣಿಗಳನ್ನು ತಯಾರಿಸುವ ಮಹತ್ವದ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ರಕ್ಷಣಾ ಸಹಕಾರವು ಮೇಲ್ದರ್ಜೆಗೇರಿದಂತಾಗಿದೆ. ಕಳೆದ ವಾರ ವಷ್ಟೇ ಫ್ರಾನ್ಸ್‌ನಿಂದ 114 ರಫೇಲ್ ಯುದ್ಧ ವಿಮಾನಗಳನ್ನು ಖರೀದಿಸುವ ₹3.25 ಲಕ್ಷ ಕೋಟಿ ಮೊತ್ತದ ಒಪ್ಪಂದಕ್ಕೆ ಭಾರತದ ರಕ್ಷಣಾ ಸಚಿವಾಲಯ ಅನುಮೋದನೆ ನೀಡಿತ್ತು. 2025ರಲ್ಲಿ ಭಾರತೀಯ ನೌಕಾಪಡೆಗೆ 26 ರಫೇಲ್ ಮರೀನ್ ವಿಮಾನಗಳ ಖರೀದಿಸುವ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಉಭಯ ದೇಶಗಳು ಹತ್ತು ವರ್ಷಗಳ ಅವಧಿಯ ರಕ್ಷಣಾ ಸಹಕಾರದ ಒಪ್ಪಂದವನ್ನು ನವೀಕರಿಸಿವೆ. ಫ್ರಾನ್ಸ್ ಈಗ ರಷ್ಯಾ ನಂತರದಲ್ಲಿ ಭಾರತದ ಎರಡನೇ ಅತಿದೊಡ್ಡ ರಕ್ಷಣಾ ಪಾಲುದಾರ ದೇಶವಾಗಿದೆ. ಸಂಕೀರ್ಣ ಹಾಗೂ ವಿರಳ ಲೋಹಗಳ ಅನ್ವೇಷಣೆ ಹಾಗೂ ಜೈವಿಕ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆಯೂ ದ್ವಿಪಕ್ಷೀಯ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ.

ದೆಹಲಿಯಲ್ಲಿ ನಡೆದ 'ಎಐ ಇಂಪ್ಯಾಕ್ಟ್ ಶೃಂಗಸಭೆ'ಯಲ್ಲಿ ಮ್ಯಾಕ್ರನ್ ಭಾಗವಹಿಸಿದ್ದಾರೆ. ಫ್ರಾನ್ಸ್ ಅಧ್ಯಕ್ಷರ ಭಾರತ ಭೇಟಿಯು ಉಭಯ ದೇಶಗಳ ದ್ವಿಪಕ್ಷೀಯ ಸಂಬಂಧದ ಮುಂದುವರಿಕೆ, ಬಲಪಡಿಸುವಿಕೆ ಹಾಗೂ ವಿಸ್ತರಣೆಗೆ ಅಗತ್ಯವಾದ ಬದ್ಧತೆಯನ್ನು ದೃಢೀಕರಿಸುವ ಸಂಕೇತದಂತಿದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಏಕಪಕ್ಷೀಯ ನಿರ್ಧಾರಗಳ ಕಾರಣದಿಂದಾಗಿ ಉಂಟಾಗಿರುವ ಜಾಗತಿಕ ಅಸ್ಥಿರತೆಯ ಸಂದರ್ಭದಲ್ಲಿ ಭಾರತ-ಫ್ರಾನ್ಸ್ ದ್ವಿಪಕ್ಷೀಯ ಸಂಬಂಧಕ್ಕೆ ವಿಶೇಷ ಮಹತ್ವವಿದೆ. 'ಐರೋಪ್ಯ ಒಕ್ಕೂಟ'ದ ಭಾಗವಾಗಿದ್ದರೂ, ಇತರ ದೇಶಗಳೊಂದಿಗೆ ಸ್ವತಂತ್ರ ಸಂಬಂಧಗಳನ್ನು ರೂಪಿಸಿಕೊಳ್ಳಲು ಫ್ರಾನ್ಸ್ ಪ್ರಯತ್ನಿಸುತ್ತಿದೆ. ವ್ಯಾಪಾರ ಮತ್ತು ಇತರ ಕ್ಷೇತ್ರಗಳಲ್ಲಿ ವಿಶ್ವ ಅಸ್ಥಿರ ಪರಿಸ್ಥಿತಿ ಎದುರಿಸುತ್ತಿರುವ ಸನ್ನಿವೇಶದಲ್ಲಿ ಸ್ಥಿರವಾದ ದ್ವಿಪಕ್ಷೀಯ ಸಂಬಂಧಗಳು ಸಹಜವಾಗಿಯೇ ವಿಶೇಷ ಮಹತ್ವ ಪಡೆದುಕೊಳ್ಳುತ್ತವೆ. ಇದು ಮ್ಯಾಕ್ರನ್ ಅವರ ನಾಲ್ಕನೇ ಭಾರತ ಭೇಟಿಯಾಗಿದ್ದು, ಈ ಭೇಟಿಯ ಸಂದರ್ಭದಲ್ಲಿ ಫ್ರಾನ್ಸ್‌ನೊಂದಿಗಿನ ಸಂಬಂಧವನ್ನು ಜಾಗತಿಕ ಕಾರ್ಯತಂತ್ರದ ವಿಶೇಷ ಪಾಲುದಾರಿಕೆಯ ಹಂತಕ್ಕೆ ಏರಿಸುವುದಾಗಿ ಮೋದಿ ಅವರು ಘೋಷಿಸಿರುವುದು ಗಮನಾರ್ಹ ಬೆಳವಣಿಗೆಯಾಗಿದೆ. ಉಭಯ ದೇಶಗಳ ಸಂಬಂಧದ ಬಲಪಡಿಸುವಿಕೆಯು, ಇತ್ತೀಚೆಗಷ್ಟೇ ನಡೆದ ಐರೋಪ್ಯ ಒಕ್ಕೂಟದೊಂದಿಗೆ ಭಾರತ ಮಾಡಿಕೊಂಡ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಪೂರಕವಾದ ನಡೆಯಾಗಿ ಪರಿಣಮಿಸುವ ಸಾಧ್ಯತೆಯಿದೆ.

ಜಾಲತಾಣ

ಗೆಲುವಿನ ಸೂತ್ರ

ಚಿತ್ರರಂಗ ಉದ್ಧಾರವಾಗಬೇಕಾದರೆ ಮೊದಲು ಒಳ್ಳೆಯ ಕಥೆಗಳ ಸಿನಿಮಾ ಮಾಡಿ; ಮಾಡಿದ್ದೇ ಒಳ್ಳೆಯದು ಎನ್ನಬೇಡಿ. ಒಂದೊಂದು ಕ್ಷೇತ್ರದಲ್ಲಿ ಸಾಧನೆ ಮಾಡಿ ರುವವರನ್ನು ಅವರ ಕೆಲಸ ಮಾಡಲು ಬಿಡಿ. ಎಲ್ಲವನ್ನೂ ನಾನೇ ಮಾಡುವೆ, ಎಲ್ಲದರಲ್ಲೂ ನಾನೇ ನಿಪುಣ ಎಂಬ ಧೋರಣೆ ಬಿಡಿ. ಉತ್ತಮ ಸಾಹಿತ್ಯವುಳ್ಳ ಹಾಡು, ಇಂಪಾದ ಸಂಗೀತ ಕೆಟ್ಟ ಚಿತ್ರವನ್ನೂ ಗೆಲ್ಲಿಸುತ್ತದೆ.

ರೋಹಿತ್ ಸಿಂಹ, ಎಂಜಿನಿಯರ್, 'ಎಕ್ಸ್'ನಿಂದ

ಕಿಡಿನುಡಿ

ರಾಜ್ಯ ಕಾಂಗ್ರೆಸ್ ಸರ್ಕಾರದ ಓಲೈಕೆಯ ರಾಜಕಾರಣದ ಪರಿಣಾಮದಿಂದ ಕರ್ನಾಟಕ ಅಶಾಂತಿಯ ತಾಣವಾಗಿ ಮಾರ್ಪಟ್ಟಿದೆ. ಬಾಗಲಕೋಟೆಯಲ್ಲಿ ಶಿವಾಜಿ ಜಯಂತಿಯ ಮೆರವಣಿಗೆ ಮೇಲೆ ಕಲ್ಲುತೂರಾಟ ನಡೆಸಿರುವುದೇ ಇದಕ್ಕೆ ನಿದರ್ಶನ.

ವಿ. ಸೋಮಣ್ಣ, ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ

25 ವರ್ಷಗಳ ಹಿಂದೆ

ಬುಧವಾರ, 21-2-2001

• **ಅನುದಾನ ಕಡಿತ: 'ಪರಿಸ್ಥಿತಿ ನಿಭಾಯಿಸಲು ಸರ್ಕಾರ ಸಿದ್ಧ'**

ಬೆಂಗಳೂರು, ಫೆ. 20– ಉನ್ನತ ಶಿಕ್ಷಣದ ಅನುದಾನಿತ ಖಾಸಗಿ ಕಾಲೇಜುಗಳ ಅನುದಾನದಲ್ಲಿ ಶೇ 15ರಷ್ಟು ಕಡಿತ ಮಾಡಿ ಸರ್ಕಾರ ಹೊರಡಿಸಿರುವ ಆದೇಶ ಅಂತಿಮ ವಾಗಿದ್ದು, ಅದನ್ನು ಹಿಂತೆಗೆದು ಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಉನ್ನತ ಶಿಕ್ಷಣ ಸಚಿವ ಜಿ. ಪರಮೇಶ್ವರ ಇಂದು ಇಲ್ಲಿ ಹೇಳಿದರು.

ಪ್ರಾಥಮಿಕ ಶಿಕ್ಷಣಕ್ಕೆ ಆದ್ಯತೆ ಕೊಡುವ ದೃಷ್ಟಿಯಿಂದ ಉನ್ನತ ಶಿಕ್ಷಣಕ್ಕೆ ವೆಚ್ಚ ಮಾಡುವ ಹಣದಲ್ಲಿ ಕಡಿತ ಮಾಡುವ ಮೊದಲ ಹೆಜ್ಜೆಯಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆಯೆಂದು ಮುಖ್ಯಮಂತ್ರಿ ಅವರು ಈಗಾಗಲೇ ಹೇಳಿದ್ದಾರೆ ಎಂದು ತಮ್ಮನ್ನು ಭೇಟಿ ಮಾಡಿದ ವರದಿಗಾರರಿಗೆ ತಿಳಿಸಿದರು.

• **ಇಂದ್ರಜಿತ್ ಗುಪ್ತಾ ನಿಧನ**

ಕೋಲ್ಕತ್ತ, ಫೆ. 20 (ಪಿಟಿಐ, ಯುಎನ್ಐ)– ಹಿರಿಯ ಕಮ್ಯೂನಿಸ್ಟ್ ನಾಯಕ, ಸಂಸತ್ತಿನ ಪಿತಾಮಹ ಎಂದೇ ಹೆಸರಾಗಿದ್ದ ಇಂದ್ರಜಿತ್ ಗುಪ್ತಾ (82) ಅವರು ಇಂದು ಬೆಳಗಿನಜಾವ ತಮ್ಮ ನಿವಾಸದಲ್ಲಿ ನಿಧನರಾದರು.

ಅವರು ಪತ್ನಿ ಸುರೈಯಾ, ಪುತ್ರ ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ. ಕಳೆದ ಒಂದು ವರ್ಷದಿಂದ ಅವರು ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಅವರಿಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಕಳೆದ ಜ. 17ರಂದು ಅವರನ್ನು ಇಲ್ಲಿಗೆ ಕರೆತರಲಾಗಿತ್ತು.

75 ವರ್ಷಗಳ ಹಿಂದೆ

ಬುಧವಾರ, 21-2-1951

• **ಮುಂಜಾಗ್ರತಾ ಸ್ಥಾನಬದ್ಧತೆಯ ತಿದ್ದಿದ ಶಾಸನ**

ನವದೆಹಲಿ, ಫೆ. 20– ಏಳು ದಿನಗಳ ಕಾಲ, ಇಪ್ಪತ್ತೆಂಟು ಗಂಟೆಗಳಷ್ಟು ಚರ್ಚೆ ನಡೆದ ಬಳಿಕ ಭಾರತ ಪಾರ್ಲಿಮೆಂಟ್ ಇಂದು ಮುಂಜಾಗ್ರತಾ ಸ್ಥಾನಬದ್ಧತೆ (ತಿದ್ದುಪಡಿ) ಮಸೂದೆಗೆ ಅಂಗೀಕಾರ ನೀಡಿತು.

ಪ್ರಸ್ತುತ ಕಾನೂನನ್ನು ಸಡಿಲ ಗೊಳಿಸಿ ಮುಂಜಾಗ್ರತಾ ಸ್ಥಾನ ಬದ್ಧತೆಗೆ ಸರ್ಕಾರಕ್ಕಿರುವ ಅಧಿಕಾರ ವನ್ನು ಒಂದು ವರ್ಷ ಮುಂದುವರಿ ಸುವ ಕ್ರಮದ ಬಗ್ಗೆ ಚರ್ಚಿಸಿ ತೀರ್ಮಾನಕ್ಕೆ ಬರಲು ಪಾರ್ಲಿಮೆಂಟ್ ಇಂದು ಮಧ್ಯಾಹ್ನ 2 ಗಂಟೆಯಿಂದ ಏಳೂ ಕಾಲು ಗಂಟೆಯವರೆಗೆ ಸೇರಿತ್ತು.

'ಎಐ' ಕಾಲದಲ್ಲಿ ಕವಿರಾಜಮಾರ್ಗ

ವಿಶ್ಲೇಷಣೆ

ಅವಿನಾಶ್ ಗೋಪಾಲಕೃಷ್ಣ

ದಕ್ಷಿಣ ಭೂಗೋಳದಲ್ಲಿಯೇ ಮೊದಲನೆಯದಾದ ಕೃತಕ ಬುದ್ಧಿಮತ್ತೆಯ ಜಾಗತಿಕ ಸಮ್ಮೇಳನ 'ಎಐ ಇಂಪ್ಯಾಕ್ಟ್ ಸಮ್ಮಿಟ್' ಶುಕ್ರವಾರ (ಫೆ. 20) ದೆಹಲಿಯಲ್ಲಿ ಮುಕ್ತಾಯಗೊಂಡಿದೆ. ಈ ಮಹತ್ತಾದ ಮತ್ತು ಬೃಹತ್ತಾದ ಶೃಂಗಸಭೆಯಲ್ಲಿ ತಂತ್ರಜ್ಞಾನ ಕೇಂದ್ರೀಕೃತವಾಗಿರುವ, ಪಶ್ಚಿಮದ ತುದಿಯ ಸಿಲಿಕಾನ್ ಕಣಿವೆಯ ಬಹುತೇಕ ಪ್ರಸಿದ್ಧರೂ ನಿರ್ಮಾತೃಗಳೂ ಪಾಲ್ಗೊಂಡಿದ್ದರು. ಪಶ್ಚಿಮದಿಂದ ಪೂರ್ವದ ತುದಿಯವರೆಗೂ ಪ್ರಾಚ್ಯದೇಶಗಳನ್ನೂ ಹೊದೆದು ಹಬ್ಬುತ್ತಿರುವ ಈ ತಂತ್ರಜ್ಞಾನದ ಪಾಲುದಾರ ದೇಶ-ಸಮುದಾಯಗಳ ಪ್ರತಿನಿಧಿಗಳೂ ಆ ಕೂಟದಲ್ಲಿ ನೆರೆದಿದ್ದರು. ಜನಸಮುದಾಯಗಳ ಬದುಕಿನ ಕ್ರಮವನ್ನೇ ಪಲ್ಲಟಿಸಬಲ್ಲ ತಂತ್ರಾಂಶಗಳು, ಅಪ್ಲಿಕೇಷನ್‌ಗಳು ಮತ್ತು ಯೋಚನಾಕ್ರಮಗಳನ್ನು ಅಭಿವೃದ್ಧಿಪಡಿಸುವ ರೂಪುರೇಷೆ ಕುರಿತು ಚರ್ಚಿಸುವ ನಾಯಕರು ಈ ಸಮಾವೇಶದಲ್ಲಿ ಒಟ್ಟುಗೂಡಿದ್ದರು.

ಪೀಪಲ್, ಪ್ಲಾನೆಟ್ ಮತ್ತು ಪ್ರೊಗ್ರೆಸ್ ಎಂಬ ಮೂರು ಸೂತ್ರಗಳನ್ನು ಕೇಂದ್ರವಾಗುಳ್ಳ ಮೇಳದಲ್ಲಿ ಸಾಮಾಜಿಕ ನ್ಯಾಯ ಮತ್ತು ಆರ್ಥಿಕತೆ, ನಾವೀನ್ಯ ಮತ್ತು ಸ್ಥೈರ್ಯ, ಪ್ರಜಾತಾಂತ್ರಿಕ ತಂತ್ರಜ್ಞಾನ, ಮಾನವ ಸಂಪನ್ಮೂಲ, ವಿಶ್ವಾಸ ಮತ್ತು ನಂಬಿಕಾರ್ಹತೆ, ವಿಜ್ಞಾನ ಮತ್ತು ಒಳಗೊಳ್ಳುವಿಕೆ ಹಾಗೂ ಸಮಾಜ ಸಂವರ್ಧನೆ ಎನ್ನುವ ಏಳು ತಾತ್ತ್ವಿಕ ಚಕ್ರಗಳ ಸುತ್ತ ಅಂತರರಾಷ್ಟ್ರೀಯ ಕಾರ್ಯತಂಡಗಳು ಏನೇನು ಸಾಧ್ಯವೋ ಎಲ್ಲವನ್ನೂ ಚರ್ಚಿಸಿವೆ ಮತ್ತು ನಮ್ಮೆಲ್ಲರ ಮೇಲೂ ನೇರವಾಗಿಯೇ ಪರಿಣಾಮ ಬೀರುವ ಯೋಜನೆಗಳನ್ನು ರೂಪಿಸಲು ಯೋಜಿಸಿವೆ. ಯಾಂತ್ರಿಕ ಬುದ್ಧಿಮತ್ತೆಯ ಕುರಿತಾದ ಈ ಸಮಾವೇಶದ impact.indiaai.gov.in ಜಾಲತಾಣದಲ್ಲಿ ಚೋದ್ಯವೊಂದು ಅಡಕವಾಗಿದೆ. ಅದೇಂದರೆ, ಈ ಜಾಲತಾಣದಲ್ಲಿ ಅತ್ಯವಶ್ಯವಾಗಿ ಬಳಕೆಯಾಗಬೇಕಿದ್ದರೂ, ಒಮ್ಮೆಯೂ ಬಳಕೆಯೇ ಆಗದ ಶಬ್ದವೊಂದಿದೆ. ಅದು: ತಾಯ್ನುಡಿ ಅಥವಾ ಮಾತೃಭಾಷೆ.

ಕೆ.ವಿ. ಸುಬ್ಬಣ್ಣನವರು ತಮ್ಮ 'ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು' ಪುಸ್ತಕದಲ್ಲಿ ನೆಬ್ರಿಜಾ ಎಂಬುವವನ ಕಥೆಯೊಂದನ್ನು ಹೇಳುತ್ತಾರೆ. ಭಾಷೆಯನ್ನೇ ಮೂಲಾಧಾರವನ್ನಾಗಿ ಹೊಂದಿದ ತಂತ್ರಜ್ಞಾನವೊಂದರ ಜಾಗತಿಕ ಸಮಾವೇಶದ ಜಾಲತಾಣದಲ್ಲಿ ಭಾಷೆಯ ಕುರಿತ ಮಾತೇ ಇಲ್ಲದಿರುವುದು ಏಕಾಗಿರಬಹುದು ಎಂಬುದಕ್ಕೆ ಆ ಕಥೆಯಲ್ಲಿ ಸುಳುಹುಗಳಿವೆ.

ಸ್ಪೇನ್‌ನ ಖ್ಯಾತ ರಾಣಿ ಇಸಾಬೆಲ್ಲಾಳ ಕಾಲದಲ್ಲಿದ್ದ ಅಂತೋನಿಯೋ ನೆಬ್ರಿಜಾ (ಕ್ರಿ.ಶ. 1444–1522) ಲ್ಯಾಟಿನ್ ವ್ಯಾಕರಣ ಗ್ರಂಥವನ್ನು ಬರೆದು ಪ್ರಸಿದ್ಧನಾಗಿದ್ದ ಭಾಷಾತಜ್ಞ, ವಯ್ಯಾಕರಣಿ. ಅಪರಿಮಿತ ರಾಜ್ಯ ವಿಸ್ತರಣೆಯ ಮಹತ್ವಾಕಾಂಕ್ಷೆಯಿದ್ದ ರಾಣಿಯ ಸಹಾಯ ಪಡೆದು– ಕೊಲಂಬಸ್ ಸಮುದ್ರಾಂತರ ಹೊರಟಿದ್ದ ಆ ಸಮಯದಲ್ಲಿ– ನೆಬ್ರಿಜಾ, ಸಾಮ್ರಾಜ್ಯ ವಿಸ್ತರಣೆಗೆ ಹಡಗುಗಳೊಂದೇ ಸಾಲದು ಅದಕ್ಕೆ ಸ್ಥಿರವಾದ ಭಾಷೆಯೊಂದು ಅಗತ್ಯವಿದೆ; ಈಗ ಛಿದ್ರವಾಗಿರುವ ಭಾಷೆಗಳನ್ನೆಲ್ಲ ಸಂಕಲಿಸಿ ತಾನೊಂದು ರಾಜಭಾಷೆ ರೂಪಿಸುತ್ತೇನೆ ಎಂದು ರಾಣಿಯನ್ನು ಒಪ್ಪಿಸಿ ಮೊತ್ತಮೊದಲ ಸ್ಪ್ಯಾನಿಶ್ ವ್ಯಾಕರಣವನ್ನು ರಚಿಸಿ ಪ್ರಕಟಿಸಿದ. ಅದು ಯುರೋಪಿಯನ್ ಭಾಷೆಗಳಲ್ಲಿ ಬಂದ ಮೊದಲ ವ್ಯಾಕರಣ ಗ್ರಂಥ. ರಾಜ್ಯ ಅಥವಾ ಸಾಮ್ರಾಜ್ಯವೊಂದರ ನಿರ್ಮಾಣಕ್ಕೆ ಮೊದಲು ಭಾಷೆಯೊಂದರ ಅಸ್ತಿವಾರವನ್ನು ಸಿದ್ಧಪಡಿಸಿಕೊಳ್ಳುವ ಪ್ರಕ್ರಿಯೆಯು ನೆಬ್ರಿಜಾನ ಹಿಂದೆಯೂ, ಚಾರಿತ್ರಿಕವಾಗಿ ಯಾವತ್ತೂ ಚಾಲ್ತಿಯಲ್ಲಿದ್ದುದನ್ನು ತೋರಿಸುವ ಅನೇಕ ಉದಾಹರಣೆಗಳನ್ನು ಸುಬ್ಬಣ್ಣನವರು ನಮ್ಮ ಮುಂದಿಡುತ್ತಾರೆ. ಅಮೆರಿಕ ಪ್ರಣೀತವಾದ 'ಬೃಹತ್ ಭಾಷಾ ಮಾದರಿ'ಗಳ ಹಿಂದಿರುವ ಕಾರ್ಪೊರೇಟ್ ಸಂಸ್ಥೆಗಳು ಹೇಗೆ ಈಸ್ಟ್ ಇಂಡಿಯಾ ಕಂಪನಿಗಳ ಮುಂದುವರಿದ ರೂಪಗಳು ಎಂಬುದನ್ನೂ ಮತ್ತು ಸಾಮ್ರಾಜ್ಯವಾದಿ ವಿಸ್ತರಣೆಯ ಭಾಗ ಎಂಬುದನ್ನೂ, ಜಿಪಿಟಿಯ ಉದಯದ ತರುವಾಯ, ಅನೇಕ ಪ್ರಮುಖ ಚಿಂತಕರು ಈಗಾಗಲೇ ತೋರಿಸಿಕೊಡುತ್ತಲೂ ಬಂದಿದ್ದಾರೆ. ಭಾಷೆ-ಸಂಸ್ಕೃತಿಗಳ ಬಹುರೂಪಗಳನ್ನು

'ವಿಶ್ವ ತಾಯ್ನುಡಿ ದಿನ'ದ (ಫೆ. 21) ಮುನ್ನಾದಿನವಷ್ಟೇ ದೆಹಲಿಯಲ್ಲಿ ಕೊನೆಗೊಂಡ ಕೃತಕ ಬುದ್ಧಿಮತ್ತೆ ಮೇಳ, ಮಾತೃಭಾಷೆ ಹೊರತುಪಡಿಸಿ ಉಳಿದೆಲ್ಲವನ್ನೂ ಚರ್ಚಿಸಿದಂತಿದೆ. ವೈವಿಧ್ಯವನ್ನು ನಿರಾಕರಿಸುವ ಅಪಾಯಕರ ಏಕಾಕೃತಿಯ ಹೊಸ ಆವೃತ್ತಿಯಂತೆ 'ಎಐ' ಕಾಣಿಸುತ್ತಿದೆ.

ಬೇಕೆಂದೇ ಕಡೆಗಣಿಸಿ, ಏಕತ್ರ ಜಾಗತಿಕ ವ್ಯಾಕರಣವೊಂದನ್ನು ಸಾಧಿಸಹೊರಟ ಆಧುನಿಕ ತಂತ್ರಜ್ಞಾನದ ಸ್ವರೂಪದಲ್ಲಿಯೇ ತಾಯ್ನುಡಿಯನ್ನು ಮರೆಯುವ ಮತ್ತು ಮರೆಸುವ ಕ್ರಮವೂ ಅಂತರ್ಗತವಾಗಿರುವುದು ಕಾಕತಾಳೀಯವಲ್ಲ.

ಕ್ರಿ.ಶ. 860–870ರ ನಡುವೆ ರಚಿತವಾದ ಕವಿರಾಜಮಾರ್ಗ ಗ್ರಂಥವನ್ನಾಗಲೀ, ಅದರ ನೆಪದಲ್ಲಿ ಸುಬ್ಬಣ್ಣನವರು ಕನ್ನಡ ಜಗತ್ತನ್ನು ಮತ್ತೊಮ್ಮೆ ತಲಸ್ಪರ್ಶಿಯಾಗಿ ಪರಿಭಾವಿಸಿ ಬರೆದ ಕೃತಿಯನ್ನಾಗಲೀ ಅವಲೋಕನ ಮಾಡುವುದು ಈ ಬರಹದ ಉದ್ದೇಶವಲ್ಲ. ಸುಬ್ಬಣ್ಣನವರನ್ನು ಅವರ ಗುರುಗಳಾದ ಎಸ್.ವಿ. ಪರಮೇಶ್ವರ ಭಟ್ಟರು 'ನಾಲ್ಕಾರು ದಿನ ಕೂರಿಸಿಕೊಂಡು ಓದಿ ಹೇಳಿದ್ದ' ಕವಿರಾಜಮಾರ್ಗಕಾರನ ಕೃತಿಯು, 1980ರದಶಕದ ಕನ್ನಡ-ಗೋಕಾಕ್ ಚಳವಳಿಯ ಸಮಯದ ಮರು ಓದಿನಲ್ಲಿ ಅವರಲ್ಲಿ 'ನಿಜವಾಗಿ ಸ್ಫೋಟಿಸಿದ' ಹೊಸ ಅರ್ಥಗಳನ್ನು ಮತ್ತು ಅವರಿಗೆ 'ಬಹುಪಾಲು ನನ್ನೆದುರೇ ನಡೆದಿದ್ದ ನಮ್ಮ ಈಚಿನ ಇತಿಹಾಸವಾಹಿನಿಯ ಮೇಲೆ ಅದು ಬೆಳಕು ಚೆಲ್ಲಿ ಬೆಳಗಿಸುತ್ತಿರುವಂತೆ' ಭಾಸವಾದ ಕೃತಿಯ ಮೂಲಕ ಅವರು ಪಡೆದ ಒಳನೋಟಗಳನ್ನು, 2026ರಲ್ಲಿ ನಮ್ಮ ಕಾಲಕ್ಕೆ ಅಗತ್ಯವಾದ ಪಾಠಗಳನ್ನು ಟಿಪ್ಪಣಿ ಮಾಡುವುದು ಈ ಬರಹದ ಉದ್ದೇಶ.

ತಂತ್ರಜ್ಞಾನವೆಂಬುದು ಯಾವತ್ತೂ ಕೇಂದ್ರೀಕರಣದ ಅಡಿಗೆ ಜನರನ್ನು ತಳ್ಳುವ 'ಟಾಪ್-ಡೌನ್' ಐಡಿಯಾ. ಅದರ ವಿರುದ್ಧವಾಗಿ ಭಾಷೆ ಎಂಬುದು ದಿನವೂ ಬದಲಾಗುತ್ತ ನಮ್ಮನ್ನು ವಿಕೇಂದ್ರೀಕೃತವಾಗಿ ಜೀವಂತವಿರಿಸಬಲ್ಲ ಒಂದು ಮೂಲತಂತ್ರಜ್ಞಾನ. ತಂತ್ರಜ್ಞಾನ ಇಟ್ಟಿಗೆಯಾದರೆ, ಭಾಷೆ ಮಣ್ಣು. ಮಣ್ಣನ್ನು ಮನುಷ್ಯರು ಕಲಸಬೇಕು ಮತ್ತು ಅದು ಯಾವ ಆಕಾರಗಳ ಇಟ್ಟಿಗೆಗಳಾಗಬೇಕು ಎಂಬುದನ್ನು ಸಮಷ್ಟಿ ನಿರ್ಧರಿಸಬೇಕು. ಅದು ಏಕಾಕೃತಿ ಆಗದಂತೆ ತಡೆಯಬೇಕಾದರೆ, ಕನ್ನಡನಾಡಿನ ಒಳಗೇ ಬಾಳಿ ಕೊಂಡಿರುವ ಭಾಷಾ ಸಮುದಾಯಗಳು 'ಬಾಟಮ್ ಅಪ್' ಆಗಿ ತಮ್ಮ ಅಸ್ತಿತ್ವವನ್ನು, ಲೋಕರೂಢಿಗಳನ್ನು, ಜಗತ್ತಿನ ಕುರಿತಾದ ತಮ್ಮ ನಿಲುವುಗಳನ್ನೂ ಪ್ರಕಟಿಸಬೇಕು. ಯಾಂತ್ರಿಕ ಬುದ್ಧಿಮತ್ತೆಯ ಮಹಾರಥಕ್ಕೆ ಬಹುಭಾಷೆಗಳ ಗಾಲಿ ತೊಡಿಸಿದರೆ ಮಾತ್ರವೇ ಬಹುಮುಖಿಯಾದ ಲೋಕವಾಸ್ತವಗಳು ಒಟ್ಟಿಗೆ ಬಾಳಿಕೊಳ್ಳುತ್ತವೆ.

ಇದನ್ನು ಮಾರುಕಟ್ಟೆಯಾಗಲೀ, ಕಾರ್ಪೊರೇಟ್‌ಗಳಾಗಲೀ ಮಾಡುವುದಿಲ್ಲ. ಅವು ಹೆಚ್ಚು ಜನರು ಮಾತನಾಡುವ ಭಾಷೆಗಳಲ್ಲಿ ಮಾತ್ರವೇ ತಂತ್ರಜ್ಞಾನದ ಅಭಿವೃದ್ಧಿಗೆ ಗಮನ ಕೊಡುತ್ತಿರುತ್ತವೆ ಮತ್ತು ವೈವಿಧ್ಯವು ವ್ಯವಹಾರಕ್ಕೆ ಹಾನಿಕರ ಎಂಬ ತಾತ್ಪರ್ಯದ ಮೇಲೆ ಕಾರ್ಯ ನಿರ್ವಹಿಸುತ್ತಿರುತ್ತವೆ.

ಇದು ವಾಸ್ತವದಲ್ಲಿ ಕವಿಗಳ (ಸಾಹಿತಿಗಳ) ಕೆಲಸ. ಆದರೆ, ಕವಿಲೋಕವಷ್ಟೇ ಇದನ್ನು ಮಾಡಲು ಸಾಧ್ಯವೆಂದು ಭಾವಿಸುವುದು ಅವಾಸ್ತವ. ನುಡಿಯ ಕುರಿತಾದ ಕೆಲಸಕ್ಕೆ ಜನರಷ್ಟೇ ಅಲ್ಲ, ರಾಜನ ನೆರವೂ ಬೇಕು. ಕನ್ನಡ ನಾಡಿನ ಅನೇಕ ನುಡಿಗಳನ್ನೂ ಮತ್ತು ಉಪನುಡಿಗಳನ್ನೂ 'ಎಐ'ನ ಭಾಗವಾಗಿಸಲು 'ಕವಿರಾಜಮಾರ್ಗ'ದಲ್ಲಿ ಸರ್ಕಾರವೂ ಕೈಜೋಡಿಸಿದಾಗ, ಭಾಷೆಗಳ ಭಿನ್ನ ವಿವೇಕಗಳು ಸಾಮಾಜಿಕ ಏಕಾಭಿಪ್ರಾಯ ನಿರ್ಮಾಣವಾಗದಂತೆ ಕಾಪಾಡುತ್ತವೆ.

ಸರಳವಾಗಿಯೂ ಮತ್ತು ತಾಂತ್ರಿಕವಾಗಿಯೂ ಹೇಳುವುದಾದರೆ, ನಮ್ಮ ಜ್ಞಾನವ್ಯವಸ್ಥೆಗಳನ್ನು ಅನೇಕ ಭಾಷೆಗಳಲ್ಲಿ ಅನೋಟೇಟ್ ಮಾಡುವ ಮತ್ತು ಅಂತರ್ ಭಾಷೆಗಳಲ್ಲಿ ಅನುವಾದಗಳನ್ನು ಮಾಡುವ ಕೆಲಸವನ್ನು ಒಂದು ಯೋಜನೆಯಂತೆ ಸಂಯೋಜಿಸಬೇಕು. ಅದು ತಂತ್ರಜ್ಞಾನದ ಪ್ರವಾಹಕ್ಕೆ ಕ್ರಮವಾಗಿ ಎದುರಾಗಿ ಅಣೆಕಟ್ಟು-ಸೇತುವೆಗಳನ್ನು ಕಟ್ಟುವುದಕ್ಕೆ ಸಹಾಯ ಮಾಡುತ್ತದೆ. ಕವಿರಾಜಮಾರ್ಗದ ಮೊದಲ ಪರಿಚ್ಛೇದ 'ದೋಷಾನಿರ್ಣಯ'ವನ್ನು ಕುರಿತಾದುದು ಎಂದು ಗಮನಿಸುವ ಸುಬ್ಬಣ್ಣನವರು 'ಭಾಷೆ-ಜನಪದ-ರಾಜ್ಯಗಳ ಸಮಷ್ಟಿಯು ಅದೇ ಮೊದಲ ಬಾರಿಗೆ ಉದಯಗೊಳ್ಳುತ್ತಿದ್ದ ಸಂದರ್ಭದಲ್ಲಿ ಈ ಗ್ರಂಥವು ಹೀಗೆ ಭಾಷೆಯಲ್ಲಿನ ದೋಷಗಳ ಬಗ್ಗೆ ಹೆಚ್ಚು ಜಾಗೃತವಾಗಿದ್ದುದು ಸಹಜವಾದದ್ದೇ' ಎಂದು ಗುರುತಿಸುತ್ತಾರೆ. ಆದರೆ, ಈ ದೋಷಾನಿರ್ಣಯವು ಬರೀ ತಪ್ಪನ್ನು ಹೇಳುವುದಾಗದೆ, ಕನ್ನಡದ ವೈವಿಧ್ಯ ಕಸುವುಗಳನ್ನು ಹೇಳುವುದಕ್ಕೂ ಆಗಿದೆ. ಈಗಿನ ಕಾಲವು ಮತ್ತು ಕನ್ನಡವು ಕೂಡ ಒಂದು 'ದೋಷಾನಿರ್ಣಯ'ದ ಘಟ್ಟದಲ್ಲಿ ನಿಂತಿದೆ ಎಂದು ಯಾರಿಗಾದರೂ ಅನ್ನಿಸುವ ಪಕ್ಷದಲ್ಲಿರುವ ಯಾರೂ ಮತ್ತೂ ಎಲ್ಲರೂ ಈ ಸೃಜನಶೀಲ ಕಟ್ಟುವಿಕೆಯಲ್ಲಿ ಪಾಲ್ಗೊಳ್ಳಬೇಕು. ಆಗ ಒಟ್ಟೂ ಕನ್ನಡನಾಡು ಮತ್ತು ನುಡಿಯ ಸತುವನ್ನು– ಎಲ್ಲ ಮತ್ತು ಎಲ್ಲರ ಕನ್ನಡವನ್ನು– ಯಾಂತ್ರಿಕ ಬುದ್ಧಿಮತ್ತೆ ಹಾಗೂ ಅದರ ತಳಹದಿಯಾದ 'ವೈಶ್ವಿಕ ವ್ಯಾಕರಣ'ದ ಅರ್ಥಪೂರ್ಣ ಮತ್ತು ಅಗತ್ಯ ಭಾಗವಾಗಿಸಬಹುದು.

ಬಹುತ್ವವನ್ನು ತಾಳಿಕೊಳ್ಳಬಲ್ಲ ಮತ್ತು ಒಳಗೊಳ್ಳಬಲ್ಲ ಕರ್ನಾಟಕದ ಬಹುಭಾಷಿಕ ಗುಣದ ಕಾರಣದಿಂದಲೇ ಬೆಂಗಳೂರು ಎಂಬ ನಗರ ರೂಪುಗೊಳ್ಳಲು ಸಾಧ್ಯವಾದುದು ಮತ್ತು ಯಾಂತ್ರಿಕ ಬುದ್ಧಿಮತ್ತೆಯ ಒಂದು ಜಾಗತಿಕ ಕೇಂದ್ರವಾಗಿ ರೂಪುಗೊಳ್ಳಲು ಸಾಧ್ಯವಾಗಿರುವುದು. ಬೆಂಗಳೂರನ್ನು ಸೃಜಿಸಿದ ಕರ್ನಾಟಕವೇ ಭಾರತದ ಭಾಷಿಕ ವೈವಿಧ್ಯವನ್ನು ಕಾಪಿಟ್ಟು ಕಟ್ಟಲು ಅರ್ಹವೂ ಆಗಿದೆ. ಅದರ ಮೊದಲ ಹೆಜ್ಜೆಯಾಗಿ ತಂತ್ರಜ್ಞಾನದ ಜಡೆಯಲ್ಲಿ ಕನ್ನಡ ನಾಡಿನ ಭಾಷೆ ಮತ್ತು ಭಾವಲೋಕಗಳನ್ನು ಮುಂದಿನ ಕಾಲಕ್ಕೆ ಒಟ್ಟುಕಟ್ಟಬೇಕಾದ್ದು ನಮ್ಮ ಕೆಲಸ. ಅದು ಜನ, ಸಂಸ್ಥೆ ಮತ್ತು ಸರ್ಕಾರಗಳು ಒಗ್ಗೂಡಿ ಮಾಡಬೇಕಾದ ಕ್ರಿಯಾಶೀಲವೂ ಮತ್ತು ಕರ್ತೃತ್ವಶಾಲಿಯೂ ಆದ ಜವಾಬ್ದಾರಿ.

'ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು'ನ್ನು ಕೆ.ವಿ. ಸುಬ್ಬಣ್ಣನವರು ಪ್ರಕಟಿಸಿದ್ದು 2001ನೇ ಇಸವಿಯಲ್ಲಿ. ಅದರ ಒಂದು ದಶಕದ ಹಿಂದೆ ಭಾರತ ಜಾಗತೀಕರಣದ ಬಾಗಿಲುಗಳನ್ನು ತೆಗೆಯುವ ಮೊದಲಿನ ನಲವತ್ತು ವರ್ಷಗಳ ಕಾಲ ಅವರ ಮರು ಓದುಗಳಲ್ಲಿ ಪಾಕಗೊಂಡ ಈ ಕೃತಿ ನಮಗೆ ಬಹುಮುಖ್ಯವಾದುದನ್ನು ನಿವೇದಿಸುತ್ತಿದೆ. ಅವರು 'ಹೇವರಿಕೆ'ಯಿಂದ ನೆನಪಿಸಿಕೊಳ್ಳುವ ಏಕಾಕೃತಿಯ ಅಪಾಯಗಳು ಈಗ ಕಾಲು ಶತಮಾನದ ನಂತರ ಭಯೋತ್ಪಾದಕ ಸವಾಲಾಗಿ ಮುಂದಡಿ ಇಡುತ್ತಿರುವಾಗ ಇದಕ್ಕೆ ಹೇಗೆ ಎಚ್ಚರಿಕೆಯಿಂದ ಮತ್ತು ಎಚ್ಚರವಾಗಿ ಎದುರಾಗಬೇಕೆಂಬ ಸೂಚನೆಗಳನ್ನು ನಾವು ಈ ಪಠ್ಯದಿಂದ ಪಡೆಯಬಹುದು.

ಲೇಖಕ: ಸಿಇಒ, ವರ್ಡ್ ವೈಸ್ ಲ್ಯಾಂಗ್ವೇಜ್ ಲ್ಯಾಬ್ಸ್



ಸುಭಾಷಿತ

ಎಲ್ಲರನ್ನೂ ಎಲ್ಲ ಕಾಲಕ್ಕೂ ಮೋಸಪಡಿಸಲು ಸಾಧ್ಯವಿಲ್ಲ.

–ಅಬ್ರಹಾಂ ಲಿಂಕನ್

ವಾಚಕರ ವಾಣಿ

ಪ್ರಾಧಿಕಾರದ ಅಧ್ಯಕ್ಷರ ನಿಲುವು ಪ್ರಶ್ನಾರ್ಹ

ರಾಜ್ಯ ಸರ್ಕಾರ ಒಂದು ಸಾವಿರ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳನ್ನು ತೆರೆಯುತ್ತಿರುವುದು ಸಾಮಾಜಿಕ ಬದ್ಧತೆಯ ನಿದರ್ಶನವೆಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೇ ಹೇಳಿರುವುದು ಆಘಾತಕಾರಿ ಹಾಗೂ ಖಂಡನೀಯ. ಇದು ಗಾಂಧೀಜಿ, ಟ್ಯಾಗೋರ್, ಕುವೆಂಪು, ಎಂ. ಚಿದಾನಂದಮೂರ್ತಿ, ಯು.ಆರ್. ಅನಂತಮೂರ್ತಿ, ಎಸ್.ಎಲ್. ಭೈರಪ್ಪ, ದೇವನೂರ ಮಹಾದೇವ ಮುಂತಾದವರ ಜನಪರ ಭಾಷಾ ಚಿಂತನೆಗಳಿಗೆ ತದ್ವಿರುದ್ಧದ ಧೋರಣೆ. ಅದರಲ್ಲೂ ಕುವೆಂಪುರವರ 'ಪಂಪನಿಲ್ಲಿ ಮುಖ್ಯಮಂತ್ರಿ, ನೃಪತುಂಗನೆ ಚಕ್ರವರ್ತಿ' ಎನ್ನುವ ಮಾತನ್ನು ಅಣಕಿಸುವಂತೆ ನಿಲುವು ತಾಳಿರುವುದು ಪ್ರಶ್ನಾರ್ಹ.

'ವಿಶ್ವ ಮಾತೃಭಾಷಾ ದಿನ'ದ (ಫೆ. 21) ಹೊಸ್ತಿಲಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಮುಖ್ಯಮಂತ್ರಿಗೆ ಉಘೇ... ಉಘೇ... ಎಂದಿರುವುದು ಕ್ರೂರ ವ್ಯಂಗ್ಯ. ಕೆಪಿಎಸ್ ಎಂದರೆ ಬೇರೇನೂ ಅಲ್ಲ, ಸರ್ಕಾರವೇ ಇಂಗ್ಲಿಷ್ ಮಾಧ್ಯಮ ಶಾಲೆ ತೆರೆಯುವುದಾಗಿದೆ. ಪ್ರಾಧಿಕಾರದ ಮೂಲ ಉದ್ದೇಶವೇ ಕನ್ನಡದ ಹಿತಕಾಯುವುದಲ್ಲವೇ? ಸರ್ಕಾರದ ನಡೆ ಕನ್ನಡಮಾಧ್ಯಮಕ್ಕೆ ಮರಣಶಾಸನವೇ ಸರಿ. ವಾಸ್ತವವಾಗಿ, ಬಿಳಿಮಲೆಯವರು ಇದನ್ನು ಖಂಡತುಂಡವಾಗಿ ವಿರೋಧಿಸಿ, ಕನ್ನಡಪರ ಆಂದೋಲನಕ್ಕೆ ಮುನ್ನುಡಿ ಬರೆಯಬೇಕಿತ್ತು. ಆದರೆ, ಅವರಿಂದಲೇ ರಾಜಸೇವಾ ಸಕ್ತಿಯ ಪ್ರದರ್ಶನವಾಗುತ್ತಿರುವುದು ಕುಚೋದ್ಯ.

ರಾ.ನಂ. ಚಂದ್ರಶೇಖರ, ಬಿ.ಎಸ್. ಜಯಪ್ರಕಾಶ ನಾರಾಯಣ, ಬೆಂಗಳೂರು

ಮೃತ್ಯು ಗುಂಡಿಗೆ ಪ್ಲಾಸ್ಟಿಕ್ ರಸ್ತೆ ಪರಿಹಾರ

ಬೆಂಗಳೂರಿನಲ್ಲಿ ರಸ್ತೆ ಗುಂಡಿ ತಪ್ಪಿಸಲು ಹೋಗಿ ಸ್ಕೂಟರ್‌ಗೆ ಕಾರು ಡಿಕ್ಕಿ ಹೊಡೆದಿದ್ದು, ಕೆಳಗೆ ಬಿದ್ದ ಎರಡು ವರ್ಷದ ಮಗು ಸಾವು ಕಂಡಿದೆ. ಈ ದುರ್ಘಟನೆಯು ರಾಜ್ಯದಲ್ಲಿರುವ ರಸ್ತೆಗಳು ಎಷ್ಟು ಅಪಾಯಕಾರಿಯಾಗಿವೆ ಎಂಬುದಕ್ಕೆ ನಿದರ್ಶನ. ಅದರಲ್ಲೂ ಗ್ರಾಮೀಣ ರಸ್ತೆಗಳ ಸ್ಥಿತಿಯನ್ನು ಕೇಳುವವರಿಲ್ಲದಂತಾಗಿದೆ. ಪ್ಲಾಸ್ಟಿಕ್ ರಸ್ತೆ ನಿರ್ಮಿಸುವುದೇ ಇದಕ್ಕೆ ಪರಿಹಾರ. ಈಗಾಗಲೇ ತಮಿಳುನಾಡಿನಲ್ಲಿ ಪ್ರೊ. ವಾಸುದೇವನ್ ಅವರ ಪ್ಲಾಸ್ಟಿಕ್ ರಸ್ತೆಗಳ ತಂತ್ರಜ್ಞಾನವನ್ನು ಅನುಸರಿಸಲಾಗುತ್ತಿದೆ. ರಾಜ್ಯದಲ್ಲಿಯೂ ಪ್ಲಾಸ್ಟಿಕ್ ರಸ್ತೆ ಮಾಡುವತ್ತ ಯೋಚಿಸಬೇಕಾಗಿದೆ. ಪ್ಲಾಸ್ಟಿಕ್ ಅನ್ನು ಬಿಟುಮೆನ್‌ನೊಂದಿಗೆ ಬೆರೆಸುವುದರಿಂದ ರಸ್ತೆಗಳು ದೀರ್ಘಕಾಲ ಬಾಳಿಕೆ ಬರುತ್ತವೆ. ಪರಿಸರಸ್ನೇಹಿ ಮತ್ತು ವೆಚ್ಚದ ದೃಷ್ಟಿಯಿಂದಲೂ ಇದು ಉತ್ತಮ.

ಆನಂದ ಮೇಷ್ಟ್ರು, ಕಲಬುರಗಿ

ಆಗುಂಬೆ ಸುರಂಗ ಮಾರ್ಗ ಸುರಕ್ಷಿತವೆ?

ಆಗುಂಬೆ ಘಾಟಿಯಲ್ಲಿ ಸುರಂಗ ಮಾರ್ಗ ನಿರ್ಮಾಣದಿಂದ ಅಲ್ಲಿನ ಸೂಕ್ಷ್ಮ ಪರಿಸರಕ್ಕೆ ಧಕ್ಕೆಯಾಗುವುದು ನಿಶ್ಚಿತ (ಆಳ-ಅಗಲ, ಪ್ರ.ವಾ., ಫೆ. 19). ಹವಾಮಾನ ಬದಲಾವಣೆಯಿಂದಾಗಿ ಅಲ್ಲಿ ಪ್ರತಿವರ್ಷ ಮಳೆ ಪ್ರಮಾಣ ಕಡಿಮೆಯಾಗುತ್ತಿದ್ದು, 'ದಕ್ಷಿಣದ ಚಿರಾಪುಂಜಿ'ಯೆಂಬ ಬಿರುದನ್ನು ಕಳೆದುಕೊಳ್ಳುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಕಾಡು ಕಡಿದು, ಗುಡ್ಡ ಕೊರೆದು, ಬಂಡೆ ಸ್ಫೋಟಿಸಿ ಮಾಡಬೇಕಾದ 'ಸುರಂಗ ಮಾರ್ಗ'ದ ಔಚಿತ್ಯವಾದರೂ ಏನು? ಕೇಂದ್ರದ ನಡೆ ಆಶ್ಚರ್ಯ ಹುಟ್ಟಿಸುತ್ತಿದೆ. ಭೂಕುಸಿತಗಳಿಂದ ಪಶ್ಚಿಮಘಟ್ಟ ನಲುಗಿದೆ. ಈ ಯೋಜನೆ ಜಾರಿಯಾದರೆ ಭವಿಷ್ಯದಲ್ಲಿ ಇಡೀ ಗುಡ್ಡವೇ ಸ್ಫೋಟಿಸಬಹುದು. ಹಣ ಕೇಂದ್ರಿತ ಯೋಜನೆಗಳನ್ನು ಕೈಬಿಟ್ಟು ಸುಸ್ಥಿರ ಅಭಿವೃದ್ಧಿಯತ್ತ ಗಮನಹರಿಸಬೇಕಿದೆ.

ಮೋಹಿತ್ ಮೇಗರವಳ್ಳಿ, ತೀರ್ಥಹಳ್ಳಿ

ಸಭ್ಯರ ಆಟಕ್ಕೆ ಅಹಂಕಾರ ಭೂಷಣವಲ್ಲ

2023ರಲ್ಲಿ ಆಸ್ಟ್ರೇಲಿಯಾ ಕ್ರಿಕೆಟ್ ತಂಡ ಏಕದಿನ ವಿಶ್ವಕಪ್ ಗೆದ್ದಿತ್ತು. ಟ್ರೋಫಿಯು ನಮಗೆ ಕಾಲಿನ ದೂಳಿಗೆ ಸಮ ಎಂಬಂತೆ ಅದರ ಮೇಲೆಯೇ ಕಾಲು ಹಾಕಿಕೊಂಡು ತಂಡದ ನಾಯಕ ಮಿಚೆಲ್ ಮಾರ್ಷ್ ಗರ್ವದಿಂದ ಫೋಟೊ ತೆಗೆಸಿಕೊಂಡಿದ್ದರು. ಆಗ ಅವರಾಡಿದ್ದ ಮಾತುಗಳು ಫೈನಲ್‌ನಲ್ಲಿ ಮುಗ್ಗರಿಸಿದ್ದ ಭಾರತೀಯರಿಗೆ ನೋವು ಉಂಟು ಮಾಡಿತ್ತು. ಪ್ರಸ್ತುತ ನಡೆಯುತ್ತಿರುವ ಟಿ20 ವಿಶ್ವಕಪ್‌ನಲ್ಲೂ ಜಿಂಬಾಬ್ವೆ ತಂಡದ ಎದುರು ಹೀನಾಯವಾಗಿ ಸೋತಿರುವ ಆಸ್ಟ್ರೇಲಿಯಾ ಲೀಗ್ ಹಂತದಲ್ಲಿಯೇ ನಿರ್ಗಮಿಸಿದೆ. ಯಾರೇ ಆಗಲಿ, ಸೋತಾಗ ತಾಳ್ಮೆ ಇರಬೇಕು, ಗೆದ್ದಾಗ ಸೌಜನ್ಯ ಇರಬೇಕು. ಅತಿಯಾದ ಅಹಂಕಾರವೇ ಈ ಸೋಲಿಗೆ ಕಾರಣ.

ಶ್ರೀನಿವಾಸ ಎನ್. ದೇಸಾಯಿ, ಕುಷ್ಟಗಿ

ಪ್ರಧಾನಿಯವರದ್ದು ಹುರುಳಿಲ್ಲದ ಭರವಸೆ

'ಎಐ ಹೊಸ ಅವಕಾಶ ಸೃಷ್ಟಿಸಲಿದೆ; ಉದ್ಯೋಗ ನಷ್ಟದ ಆತಂಕ ಬೇಡ'ವೆಂದು ಪ್ರಧಾನಿ ಮೋದಿ ಹೇಳಿದ್ದಾರೆ. ಈ ಮಾತು ಹುಸಿ ಭರವಸೆಯಂತೆ ತೋರುತ್ತಿದೆ. ಮೋದಿಯವರು ಮೂರನೇ ಅವಧಿಗೆ ಅಧಿಕಾರದ ಗದ್ದುಗೆ ಏರಿದರೂ ದೇಶದ ನಿರುದ್ಯೋಗ ಸಮಸ್ಯೆ ಹೋಗಲಾಡಿಸಲು ಸಾಧ್ಯವಾಗುತ್ತಿಲ್ಲ. ಉದ್ಯೋಗಾವಕಾಶ ಸೃಷ್ಟಿಸುವ ಯೋಜನೆಗಳು ಕಾರ್ಯರೂಪಕ್ಕೆ ಬರುತ್ತಿಲ್ಲ. ಎಐ ತಂತ್ರಜ್ಞಾನ ವೇಗವಾಗಿ ಮುನ್ನುಗ್ಗುತ್ತಿದೆ. ಹಲವಾರು ಕ್ಷೇತ್ರದ ಉದ್ಯೋಗ ಕಬಳಿಸಲು ಸಜ್ಜಾಗಿದೆ. ಹೀಗಿರುವಾಗ ಪ್ರಧಾನಿಯವರ ಈ ಭರವಸೆಯು ಹುರುಳಿಲ್ಲದಂತೆ ತೋರುತ್ತಿದೆ.

ಅಶೋಕ ಪ. ಹೊನಕೇರಿ, ಧಾರವಾಡ

ಧರ್ಮಾಧಾರಿತ ಚರ್ಚೆ: ಜನತಂತ್ರಕ್ಕೆ ಧಕ್ಕೆ

ವಿಶ್ವವಿದ್ಯಾಲಯಗಳಲ್ಲಿ ಸಂವಿಧಾನದ ಆಶಯದಂತೆ ಬಹು ಧರ್ಮೀಯರು ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ವಿ.ವಿಗಳಲ್ಲಿ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕೆ ಅನುಗುಣವಾಗಿ ವಿಷಯ ತಜ್ಞರಿಂದ ಸಂವಾದ ನಡೆಸಬೇಕು. ಇದು ಜ್ಞಾನ ಕೌಶಲಕ್ಕೆ ಸಹಕಾರಿ. ಆದರೆ, ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು, ಲಖನೌ ವಿವಿಯಲ್ಲಿ ವಿದ್ಯಾರ್ಥಿಗಳು ಮತ್ತು ಸಂಶೋಧನಾರ್ಥಿಗಳೊಂದಿಗೆ ಸಂವಾದ ನಡೆಸಿರುವುದು ಅಕ್ಷಮ್ಯ. ಧರ್ಮಾಧಾರಿತ ಭಾಷಣದಿಂದ ವಿದ್ಯಾರ್ಥಿಗಳಲ್ಲಿ ಕೌಶಲ ಜ್ಞಾನ ವೃದ್ಧಿಯಾಗುವುದೆ? ಧರ್ಮಾಧಾರಿತ ನೆಲೆಗಟ್ಟಿನ ಸಂಘ-ಸಂಸ್ಥೆಗಳ ಮುಖ್ಯಸ್ಥರೊಂದಿಗೆ ನಡೆಸುವ ಸಂವಾದಗಳು ಜಾತ್ಯತೀತ ರಾಷ್ಟ್ರಕ್ಕೆ ಅಪಾಯಕಾರಿ.

ಆರ್. ಕುಮಾರ್, ಬೆಂಗಳೂರು

ಚುರುಮುರಿ

ಬಿಟ್ ಬಿಟ್ ಪರೀಕ್ಷೆ!

• ತುರುವೇಕೆರೆ ಪ್ರಸಾದ್

'ಏನ್ರಪ್ಪಾ, ಎಲ್ಲಾ ಕಡೆ ಪರೀಕ್ಷಾ ಕಾವು ರಾಚ್ತಿದೆ. ಚಿಲ್ಟಾರಿಗಳಿಂದ ಹಿಡ್ದು ದೊಡ್ಡೋರ್‌ಗಂಟ ಎಲ್ರಿಗೂ ಪರೀಕ್ಷಾ ಜ್ವರ ಅಂಟ್ಕಂಡದೆ. ಮೊದ್ಲೇ ಮನೇಲಿ ಬಾಯ್ ಬಿಡಂಗಿಲ್ಲ, ಈಗಂತೂ ತುಟಿ ಹೊಲ್ಕಂಡಿರಬೇಕು' ಎಂದ ಗುದ್ಲಿಂಗ ಹರಟೆಕಟ್ಟೇಲಿ!

'ನಮ್ ರಾಜಕೀಯದೋರ್ಗೂ ಬಿಟ್ ಬಿಟ್ ಪರೀಕ್ಷೆ ಬತ್ತೈತೆ, ಒಬ್ರು ಮೇಲೊಬ್ರು ನಮ್ ಸಿಎಂ ಸಾಹೇಬ್ರುಗೆ ಸತ್ವಪರೀಕ್ಷೆ, ಅಗ್ನಿಪರೀಕ್ಷೆ ಒಡ್ತಾನೇ ಅವ್ರೆ' ಎಂದ ಮಾಲಿಂಗ.

'ಸಾರಿಗೆದು ಅರಿಯರ್ಸ್ ಪರೀಕ್ಷೆ ಮುಗಿದಂಗಾಯ್ತಲ್ಲ. ಜೆಸ್ಟ್ ಪಾಸಾಗಿ ಉಸ್ ಅಂತ ಉಸುರ್ ಬಿಡ್ತಾವ್ರೆ' ಎಂದ ಕಲ್ಲೇಶಿ.

'ಪರೀಕ್ಷೆ ಇನ್ನೂ ಮುಗಿದಿಲ್ಲಪ್ಪ, ಅದು ಕ್ಯಾರಿಓವರ್! ಪ್ರಿಲಿಮಿನರಿ ಆಗೈತೆ, ಮೈನ್ ಎಕ್ಸಾಮು ಮುಂದಕ್ಕೆ ಹಾಕವ್ರೆ ಅಷ್ಟೇ. ಅದರ ಹಿಂದೇನೆ ಗುತ್ತಿಗೆದಾರ್ರು ಬಿಲ್ ಎಕ್ಸಾಮ್ ಕುತ್ತಿಗೆಗೇ ಬಂದೈತಲ್ಲ'.

'ಅದಕ್ಕೆ ಡಿಸಿಎಂ ಸಾಹೇಬ್ರು ಕಾಪಿಚಿಟ್ ಪರೀಕ್ಷೆಗೆಲ್ಲ ಕೇರ್ ಮಾಡಕಿಲ್ಲ ಅಂತ ಗುಡುಗವ್ರಲ್ಲ'.

'ವ್ಹಾ ಕಣ್ಲಾ! ಅವರ್ಗೆ ಇದೆಲ್ಲಾ ಯಾವ ಮಹಾ ಹೇಳು? ಅವರಂತೂ ಒಂದು ವರ್ಷದಿಂದ ಎಕ್ಸಾಮ್ ಫೇಸ್ ಮಾಡ್ತಾವ್ರೆ. ರಿಟನ್ ಟೆಸ್ಟು, ಗ್ರೂಪ್ ಡಿಸ್ಕಶನ್ನು, ಇಂಟ್ರವ್ಯೂ ಎಲ್ಲಾ ಆದ್ರೂ ಕೆಪಿಎಸ್ಸಿ ತರ ರಿಸಲ್ಟ್ ಮಾತ್ರ ಸಿಕ್ತಿಲ್ಲ'.

'ಸಿಎಂಗೂ ಬಜೆಟ್ ಪರೀಕ್ಷೆ ಜೊತೆಗೆ ವಚನಪಾಲನೆ ಪರೀಕ್ಷೆ ಬೇರೆ ನಡೀತಿದೆ, ಅದ್ಕೇ ಅಲ್ವಾ ಟಿ.ವಿಯೋರಿಗೆ ವಿಧಾನಸೌಧದಾಗೆ ಎಲ್ಲಂದ್ರಲ್ಲಿ 'ಬಿಟ್' ತಗಳಂಗಿಲ್ಲ ಅಂತ ಆದೇಶ ಮಾಡಿರಾದು'.

'ಇದು ಪತ್ರಿಕಾ ಸ್ವಾತಂತ್ರ್ಯದ ಹರಣ ಅಲ್ವಾ?'

'ಅಲ್ಲಲೇ, ಮಕ್ಕಳು ಓದ್ಕತಾವೆ ಅಂತ ಎಷ್ಟೋ ಕಡೆ ಟಿ.ವಿ, ಮೊಬೈಲು ಬಂದ್ ಮಾಡ್ಸಿಲ್ವಾ? ಅಂಗೇ ಇದೂವೆ! ಇಲ್ ದೊಡ್ಡೋರ್ ಪರೀಕ್ಷೆಗೆ ಡಿಸ್ಟರ್ಬ್ ಆಯ್ತದೆ, ಎಲ್ಲಂದ್ರಲ್ಲಿ 'ಬಿಟ್' ಬ್ಯಾಡ ಅನ್ನೋದು ತಪ್ಪೇನ್ಲಾ?'

'ತಪ್ಪಲ್ಲ ಬುಡು, ಪರೀಕ್ಷೆ ಅಂದ್ರೆ ಹಬ್ಬ ಅಂತ ಯೋಳಲ್ವಾ?'

'ಉಡುಗ್ರುಗೆ ಹಬ್ಬ, ರಾಜಕೀಯದೋರಿಗೆ ಮಾರಿ ಹಬ್ಬ!' ಎಂದ ಪರ್ಮೇಶಿ.

ಎಲ್ಲಾ ಗೊಳ್ಳನೆ ನಕ್ಕರು.

ಸಂಗತ

ಕಾಡು ತಣ್ಣಗಿರಲಿ, ಬೆಂಕಿಯ ಕಿಡಿ ತಾಗದಿರಲಿ!

ಬೇಸಿಗೆ ಸಮಯ ಕಾಡಿನ ಕಾಳಜಿ ಗರಿಷ್ಠ ಪ್ರಮಾಣದಲ್ಲಿ ಇರಬೇಕಾದ ಸಂದರ್ಭ. ಕಾಳ್ಗಿಚ್ಚು ಕಾಡನ್ನಷ್ಟೇ ಸುಡುವುದಿಲ್ಲ; ಅದರ ಬಿಸಿ ನಾಡನ್ನೂ ಬಾಧಿಸುತ್ತದೆ.

• ಉಮೇಶಭಟ್ಟ ಪಿ.ಎಚ್.

ಹದಿನೈದು ವರ್ಷಗಳ ಹಿಂದಿನ ನೆನಪು. ನಾಗರಹೊಳೆ ರಾಷ್ಟ್ರೀಯ ಉದ್ಯಾನದ ಹೃದಯಭಾಗಕ್ಕೆ ಬೆಂಕಿ ಬಿದ್ದಿತ್ತು. ಅದೆಷ್ಟೋ ಜೀವಗಳು, ಮರಗಳು ಬೆಂಕಿಯಲ್ಲಿ ಉರಿದು ಹೋದವು. ಆನೆಗಳಿಗೆ ಆಹಾರವಾಗಿದ್ದ ಬಿದಿರುಮೆಳೆ ಸುಟ್ಟು ಹೋಯಿತು. ದುರಂತದ ಕಾರಣ ಪತ್ತೆಹಚ್ಚಲು ನಡೆದ ಸಿಐಡಿ ತನಿಖೆಯಲ್ಲಿ, ಅರಣ್ಯ ಇಲಾಖೆಯ ಸಿಬ್ಬಂದಿಯ ಸಹಕಾರದಿಂದ ಸ್ಥಳೀಯರೇ ಕಾಡಿಗೆ ಬೆಂಕಿ ಕೊಟ್ಟ ಆಘಾತದ ಸಂಗತಿ ಬಯಲಿಗೆ ಬಂತು.

ಭಾರತದ ಹಳೆಯ ಹುಲಿಧಾಮಗಳಲ್ಲಿ ಬಂಡೀಪುರವೂ ಒಂದು. ಅಲ್ಲಿ, ಇಲಾಖೆಯ ಅಧಿಕಾರಿಗಳ ಮೇಲಿನ ನೌಕರರ ಸಿಟ್ಟು ಬೆಂಕಿಯ ರೂಪ ತಾಳಿ, ಎರಡು ಬಾರಿ ಕಾಡನ್ನು ಬಾಧಿಸಿದೆ. ಪ್ರಕರಣವೊಂದರಲ್ಲಿ, ಬಂಡೀಪುರ ರಾಷ್ಟ್ರೀಯ ಉದ್ಯಾನದ ನಿರ್ದೇಶಕರಾಗಿದ್ದವರು ಸೇರಿದಂತೆ ಕೆಳಹಂತದ ಅಧಿಕಾರಿಗಳು ಅಮಾನತುಗೊಂಡಿದ್ದರು. ಕೆಲವರ ಕಿಚ್ಚಿಗೆ ಅರಣ್ಯ ಬಸವಳಿಯಿತು. ಇದು ನಾಗರಹೊಳೆ, ಬಂಡೀಪುರಕ್ಕೆ ಸೀಮಿತವಾದ ವಿದ್ಯಮಾನವಲ್ಲ. ರಾಜ್ಯದ ಹದಿನೈದಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಅಸಹಜವಾದ ಕಾಡಿನ ಬೆಂಕಿ ಕಾಣಿಸಿಕೊಂಡಿದೆ.

ಕರ್ನಾಟಕದ ಅರಣ್ಯ ಹಾಗೂ ಅರಣ್ಯದಂಚಿನ ಭಾಗದಲ್ಲಿ ಕಾಡಿನ ಬೆಂಕಿ ಸಾಮಾನ್ಯವಾಗಿ ಬೇಸಿಗೆಯಲ್ಲಿ ಕಂಡು ಬರುತ್ತದೆ. ಡಿಸೆಂಬರ್ ಬಂತೆಂದರೆ, ಕಾಡಿನ ಬೆಂಕಿ ತಡೆ ಚಟುವಟಿಕೆಯನ್ನು ಅರಣ್ಯ ಇಲಾಖೆ ಆರಂಭಿಸುತ್ತದೆ. ಫೆಬ್ರುವರಿವರೆಗೂ ತಯಾರಿಯ ಸಮಯ. ಫೆಬ್ರುವರಿ ವೇಳೆಗೆ ಎಲೆಗಳು ಉದುರಿ ಕಾಡು ಬದಲಾವಣೆ ಪರ್ವದಲ್ಲಿ ನಿಂತಿರುತ್ತದೆ. ಈ ವೇಳೆ ಎಲ್ಲೆಡೆ ಒಣ ವಾತಾವರಣ ಇರುವುದರಿಂದ, ಸಣ್ಣ ಬೆಂಕಿ ಬಿದ್ದರೂ ಹೆಕ್ಟೇರ್‌ಗಟ್ಟಲೆ ಅರಣ್ಯ ನಾಶವಾಗುತ್ತದೆ.



ರಾಜ್ಯದಲ್ಲಿ ಸದ್ಯ 43 ಸಾವಿರ ಚದರ ಕಿ.ಮೀ. ಅರಣ್ಯವಿದೆ. ಅಂದರೆ, ಒಟ್ಟು ಭೂ ಭಾಗದಲ್ಲಿ ಶೇ 22ರಷ್ಟು ಅರಣ್ಯ ಪ್ರದೇಶವಿದೆ. ಪಶ್ಚಿಮಘಟ್ಟದ ನೀಲಗಿರಿ ಜೀವವೈವಿಧ್ಯ ತಾಣವೂ ಒಳಗೊಂಡು ನಿತ್ಯ ಹರಿದ್ವರ್ಣ ಅರಣ್ಯದ ಪ್ರಮಾಣ ನಮ್ಮಲ್ಲಿ ಹೆಚ್ಚಿದೆ. ಐದು ಹುಲಿ ಸಂರಕ್ಷಿತ ಪ್ರದೇಶಗಳಿದ್ದು, ಸುಮಾರು 6,300 ಚದರ ಕಿ.ಮೀ. ವ್ಯಾಪ್ತಿಯಿದೆ. ಹುಲಿ, ಆನೆ, ಚಿರತೆ, ಕಾಟಿ, ಕರಡಿ, ಕಡವೆ, ಜಿಂಕೆ, ಕಾಡು ಕುರಿಯಂತಹ ಪ್ರಾಣಿಗಳು, ನವಿಲು ಸೇರಿ ಹಲವು ಬಗೆಯ ಪಕ್ಷಿಗಳು ಅರಣ್ಯದಲ್ಲಿ ಬದುಕು ಕಟ್ಟಿಕೊಂಡಿವೆ. ನೂರಾರು ಪ್ರಭೇದಗಳ ಮರಗಳು ಕರುನಾಡ ಅರಣ್ಯದ ಸಮೃದ್ಧಿಯನ್ನು ಹೆಚ್ಚಿಸಿವೆ.

ಅರಣ್ಯ ಪ್ರದೇಶವನ್ನು ಶೇ 30ಕ್ಕೆ ವಿಸ್ತರಿಸಲು ರಾಜ್ಯದಲ್ಲಿ ನಿರಂತರ ಚಟುವಟಿಕೆಗಳು ನಡೆದಿದ್ದರೂ, ಗುರಿ ತಲಪಲು ಇದುವರೆಗೂ ಆಗಿಲ್ಲ. ಗುರಿಗೆ ಅಡ್ಡಿಯಾಗಿರುವ ಮುಖ್ಯ ಕಾರಣಗಳಲ್ಲೊಂದು– ಕಾಡಿನ ಬೆಂಕಿ!

ಅರಣ್ಯದಲ್ಲಿ ಮರಗಳ ನಡುವೆ ಘರ್ಷಣೆಯಾದಾಗ ಅದು ಬೆಂಕಿಯ ರೂಪ ಪಡೆಯಬಹುದಾದರೂ, ಆ ಸಾಧ್ಯತೆ ಕಡಿಮೆ. ಕಾಡಿನ ಬೆಂಕಿಗೆ ಶೇ 99ರಷ್ಟು ಕಾರಣ ಮಾನವನೇ. ಅರಣ್ಯ ಇಲಾಖೆ ಮೇಲಿನ ಸಿಟ್ಟಿಗೋ, ಅಧಿಕಾರಿಗಳು ಇಲ್ಲವೇ ಸಿಬ್ಬಂದಿ ಮೇಲಿನ ಬೇಸರಕ್ಕೋ ಕಾಡಿಗೆ ಬೆಂಕಿ ಹಚ್ಚುವವರು ಹೆಚ್ಚು. ಇಲಾಖೆಯವರು ತಮ್ಮ ಜಾನುವಾರುಗಳನ್ನು ಮೇಯಿಸಲು ಬಿಡದೇ ಇದ್ದಾಗ, ಇಲ್ಲವೇ ಅರಣ್ಯ ಉತ್ಪನ್ನಗಳನ್ನು ತರಲು ಅಡ್ಡಿಪಡಿಸಿದಾಗ ಬೆಂಕಿ ನೀಡುವವರೂ ಇದ್ದಾರೆ. ಮಾರ್ಗಮಧ್ಯೆ ಹೋಗುವವರು ಎಸೆದ ಸಿಗರೇಟು, ಬೆಂಕಿಕಡ್ಡಿಯ ಕಿಡಿಯೂ ಅನಾಹುತಕ್ಕೆ ಕಾರಣವಾದ ಉದಾಹರಣೆಗಳಿವೆ.

ಅರಣ್ಯ ಇಲಾಖೆ ಸ್ಥಳೀಯರಿಗೆ ಕಾಡಿನ ಬೆಂಕಿ ನಿರ್ವಹಣೆ ಉದ್ಯೋಗವನ್ನು ನೀಡುವ ಪರಿಪಾಠ ರೂಢಿಸಿಕೊಂಡಿದೆ. ಸ್ಥಳೀಯವಾಗಿ ಗಿರಿಜನರು ಇಲ್ಲವೇ ಕಾಡುಕುರುಬ, ಸೋಲಿಗ ಸಮುದಾಯದವರಿಗೆ ಅಲ್ಲಿನ ಅರಣ್ಯದ ಮಾಹಿತಿ ಇರುವುದರಿಂದ, ಅವರು ಚೆನ್ನಾಗಿ ಮೇಲುಸ್ತುವಾರಿ ಮಾಡಬಲ್ಲರು. ಈ ಸಮುದಾಯದವರು ಕಾಡನ್ನು ದೇವರು ಎಂದೇ ನಂಬಿ ಅದನ್ನು ಕಾಪಾಡುತ್ತಾರೆ. ಆದರೆ, ಇವರಿಗೆ ಉದ್ಯೋಗ ಸಿಗದೇ ಇದ್ದಾಗ, ತೊಂದರೆಯಾದಾಗ ಕೆಲವರು ಬೆಂಕಿ ಕೊಟ್ಟು ಸಿಕ್ಕಿ ಹಾಕಿಕೊಂಡ ಉದಾಹರಣೆಗಳೂ ಇವೆ.

ಕರ್ನಾಟಕದಲ್ಲಿ ಕಳೆದ ಐದು ವರ್ಷದಲ್ಲಿ 20,920 ಕಾಡಿನ ಬೆಂಕಿ ಪ್ರಕರಣಗಳು ವರದಿಯಾಗಿವೆ. 2023ರಲ್ಲಿ 6,888 ಕಾಡಿನ ಬೆಂಕಿ ಪ್ರಕರಣಗಳು ದಾಖಲಾಗಿದ್ದರೆ, ಉಳಿದ ವರ್ಷಗಳಲ್ಲಿ 4,000ದ ಒಳಗೆ ಇವೆ. ಅರಣ್ಯ ಇಲಾಖೆ ಕಾಡಿಗೆ ಬೆಂಕಿ ಬೀಳದಂತೆ ತಡೆಯಲು ಆಧುನಿಕ ತಂತ್ರಜ್ಞಾನದ ಮೊರೆ ಹೋಗಿದೆ. ದೂರ ಸಂವೇದಿ ತಂತ್ರಜ್ಞಾನದ ಮೂಲಕ ಬೆಂಕಿ ಬಿದ್ದಿರುವ ಸ್ಥಳದ ನಿಖರ ಮಾಹಿತಿ ಪಡೆದು, ಬೆಂಕಿ ಆರಿಸಲು ಸಿಬ್ಬಂದಿ ನಿಯೋಜಿಸುತ್ತಿದೆ. ಅಮೆರಿಕದಂಥ ದೇಶದಲ್ಲಿ ಬೆಂಕಿ ಬಿದ್ದಾಗ ಹೆಲಿಕಾಪ್ಟರ್ ಬಳಸಲಾಗುತ್ತದೆ. ಅಂತಹ ಅವಕಾಶ ನಮ್ಮಲ್ಲಿಲ್ಲದೇ ಇದ್ದರೂ, ಇಲಾಖೆಯ ಸಿಬ್ಬಂದಿ ಜತೆಗೆ ಸ್ಥಳೀಯರು ಕೈ ಜೋಡಿಸಿ ಹೆಚ್ಚು ಅರಣ್ಯ ನಾಶವಾಗದಂತೆ ನೋಡಿಕೊಳ್ಳುತ್ತಾರೆ.

ಅರಣ್ಯ ಎಂದರೆ ಮರಗಳು, ವನ್ಯಜೀವಿಗಳಷ್ಟೇ ಅಲ್ಲ; ಅದೊಂದು ಸಂಸ್ಕೃತಿ. ಅರಣ್ಯ ಸಮೃದ್ಧವಾಗಿದ್ದರೆ ಪರಿಸರ ಸಮತೋಲನವೂ ಆಗಿ, ಮಳೆ ಬೆಳೆಗೆ ಪರೋಕ್ಷವಾಗಿ ನೆರವಾಗಲಿದೆ. ಒಂದು ಹುಲಿ ಇದ್ದರೆ ಆಹಾರ ಸರಪಳಿ ರೂಪದಲ್ಲಿ ಅದೆಷ್ಟೋ ಪ್ರಾಣಿಗಳಿಗೆ ಕಾಡು ನೆಲೆಯಾಗಬಲ್ಲದು.

ಕಾರಣ ಏನೇ ಇರಲಿ, ಆಕ್ರೋಶದಿಂದ ಕಾಡಿಗೆ ಬೆಂಕಿ ಹಚ್ಚಿದರೆ, ಅದು ನಮ್ಮ ಒಡಲಿಗೆ ನಾವೇ ಬೆಂಕಿ ಇಟ್ಟುಕೊಂಡಂತೆ. 'ಕಾಡುಗಳಿಲ್ಲದ, ಕಾಡುಪ್ರಾಣಿಗಳಿಲ್ಲದ ಪರಿಸರವು ಸ್ಮಶಾನಕ್ಕಿಂತ ಭೀಕರವಾಗಿ ಕಾಣುತ್ತವೆ. ಕಾಡಿದ್ದರೆ ನಾವು ಎನ್ನುವ ಸತ್ಯ ನಮಗೆ ಅರ್ಥವಾಗಬೇಕು. ಕಾಡು ನಾಶವಾದರೆ, ಮನುಷ್ಯನ ಅವನತಿ ಪ್ರಾರಂಭವಾದಂತೆ' ಎನ್ನುವ ಸಾಹಿತಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಮಾತು ನಮ್ಮನ್ನು ಎಚ್ಚರಿಸಲಿ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hospapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಾಂಗ್ರೆಸ್ ಸರ್ಕಾರವು ಎಸ್‌ಸಿಎಸ್‌ಪಿ- ಟಿಎಸ್‌ಪಿ ಹಣವನ್ನು ಅನ್ಯ ಉದ್ದೇಶಕ್ಕೆ ಬಳಸಿ ದಲಿತರಿಗೆ ಅನ್ಯಾಯ ಮಾಡಿದೆಯೇ?

ಪರಿಶಿಷ್ಟರ ಅಭಿವೃದ್ಧಿಗೆ ನಮ್ಮಷ್ಟು ಅನುದಾನ ಯಾರೂ ಕೊಟ್ಟಿಲ್ಲ

• ಡಾ.ಎಚ್‌.ಸಿ.ಮಹದೇವಪ್ಪ

ಕರ್ನಾಟಕದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷದ ಸರ್ಕಾರವು ಮುಖ್ಯಮಂತ್ರಿ ಸಿದ್ಧರಾಮಯ್ಯನವರ ನೇತೃತ್ವದಲ್ಲಿ ಪರಿಶಿಷ್ಟ ಸಮುದಾಯಗಳ ಏಳಿಗೆಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಪರಿಶಿಷ್ಟರ ವಿಚಾರದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ ಅವರ ಬದುಕು ಹಸನುಗೊಳಿಸುವ ದಿಸೆಯಲ್ಲಿ ಮಹತ್ವದ ಕಾಯ್ದೆಗಳನ್ನೂ ರೂಪಿಸಿದೆ. ಈ ಪೈಕಿ ಬಡ್ತಿ ಮೀಸಲಾತಿ ಕಾಯ್ದೆ, ಗುತ್ತಿಗೆ ಮೀಸಲಾತಿ ಕಾಯ್ದೆ, ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ)/ಪರಿಶಿಷ್ಟ ಪಂಗಡ (ಟಿಎಸ್‌ಪಿ) ಕಾಯ್ದೆಗಳು ಪ್ರಮುಖವಾದವು. ನಮ್ಮ ಈಗಿನ ಸರ್ಕಾರವು ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯ್ದೆಯಲ್ಲಿದ್ದ 7ಡಿ ಸೆಕ್ಷನ್ ರದ್ದುಪಡಿಸಿದೆ. ಅಲ್ಲದೇ, ಪಿಟಿಸಿಎಲ್ ಕಾಯ್ದೆಯಲ್ಲಿದ್ದ ಸಮಸ್ಯೆಗಳನ್ನು ಬಗೆಹರಿಸುವ ಕೆಲಸವನ್ನೂ ಮಾಡಿದೆ. ಎಲ್ಲಕ್ಕಿಂತ ಮುಖ್ಯವಾಗಿ ಜಿಲ್ಲೆಗೆ ಒಂದರಂತೆ ಡಿಸಿಆರ್‌ಇ ಪೊಲೀಸ್ ಠಾಣೆಗಳನ್ನು ಸ್ಥಾಪಿಸಿ, ಪರಿಶಿಷ್ಟರ ಮೇಲಿನ ದೌರ್ಜನ್ಯದ ಪ್ರಕರಣಗಳು ಕ್ಷಿಪ್ರ ಅವಧಿಯಲ್ಲಿ ಇತ್ಯರ್ಥಗೊಳಿಸಬೇಕೆಂದು ಆದೇಶ ಹೊರಡಿಸಿದೆ.

ಪರಿಶಿಷ್ಟರ ಏಳಿಗೆಗಾಗಿ ಹಿಂದಿನ ಸರ್ಕಾರಗಳು ಮಾಡಿದ್ದಕ್ಕಿಂತಲೂ ಎರಡು–ಮೂರು ಪಟ್ಟು ಹೆಚ್ಚಿನ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ ಎಂಬುದು ಈ ಅವಧಿಯಲ್ಲಿ ಆಡಳಿತದ ಭಾಗವಾಗಿ ಕೆಲಸ ಮಾಡುತ್ತಿರುವ ನಾವೆಲ್ಲರೂ ಹೆಮ್ಮೆಯಿಂದ ಹೇಳಿಕೊಳ್ಳುವಂತಹ ಸಂಗತಿ. ಅದರಲ್ಲೂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಏಳಿಗೆಗಾಗಿ ಅವರ ಜನಸಂಖ್ಯೆಯ ಆಧಾರದ ಮೇಲೆ ಅವರಿಗೆ ಅನುದಾನವನ್ನು ನಿಗದಿಪಡಿಸುತ್ತಾ ಬಂದಿರುವ ಸರ್ಕಾರವು 2023ರಿಂದ ಇಲ್ಲಿಯವರೆಗೆ ₹83,824 ಕೋಟಿ ಹಣವನ್ನು ಹಂಚಿಕೆ ಮಾಡಿದೆ. ಇದರಲ್ಲಿ ₹69,527 ಕೋಟಿ ಖರ್ಚು ಮಾಡಿದೆ.

ಎಸ್‌ಸಿಎಸ್‌ಪಿ/ಟಿಎಸ್‌ಪಿ ಪರಿಶಿಷ್ಟರ ಜನಸಂಖ್ಯೆಗೆ ಅನುಗುಣವಾಗಿ ಸುಮಾರು ₹42 ಸಾವಿರ ಕೋಟಿ ಅನುದಾನವನ್ನು ಸರ್ಕಾರವು ನಿಗದಿಪಡಿಸಿದೆ.

ಇದು ಕೆಲಸ ಮಾಡುವುದು ಹೇಗೆ?: ಸಮಾಜ ಕಲ್ಯಾಣ ಇಲಾಖೆಗೆ ಬಜೆಟ್‌ನಲ್ಲಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯ್ದೆಯಡಿ ₹42 ಸಾವಿರ ಕೋಟಿ ಹಂಚಿಕೆ ಮಾಡಲಾಗಿದೆ. ಎಂದ ಮಾತ್ರಕ್ಕೆ, ಆ ಸಂಪೂರ್ಣ ಅನುದಾನದ ಮೇಲೆ ಸಮಾಜ ಕಲ್ಯಾಣ ಇಲಾಖೆಗೆ ನಿಯಂತ್ರಣ ಇರುವುದಿಲ್ಲ. ಸರ್ಕಾರವು ಬಜೆಟ್ ಮೂಲಕ ಮೀಸಲಿಟ್ಟ ಅನುದಾನವನ್ನು ಸರ್ಕಾರದ ಎಲ್ಲಾ 30 ಇಲಾಖೆಗಳಿಗೆ ಹಂಚಲಾಗುತ್ತದೆ. ಹೀಗೆ ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡಲಾದ ಅನುದಾನದ ವೆಚ್ಚ ಮತ್ತು ಅಭಿವೃದ್ಧಿಯ ಮೇಲ್ವಿಚಾರಣೆಯನ್ನು ಮಾತ್ರ ಸಮಾಜ ಕಲ್ಯಾಣ ಇಲಾಖೆ ನೋಡಲ್ ಏಜೆನ್ಸಿಯಾಗಿ ನಿರ್ವಹಿಸುತ್ತದೆ. ಪರಿಶಿಷ್ಟ ಜಾತಿಯವರ ಅಭಿವೃದ್ಧಿಗಾಗಿ ರೂಪಿಸಿರುವ ಕಾರ್ಯಕ್ರಮಗಳು ಪ್ರತಿಯೊಂದು ಇಲಾಖೆಯಲ್ಲೂ ಎಷ್ಟರ ಮಟ್ಟಿಗೆ ಜಾರಿಯಾಗಿವೆ, ಅದರಿಂದ ಪರಿಶಿಷ್ಟರ ಬದುಕು ಎಷ್ಟರ ಮಟ್ಟಿಗೆ ಸುಧಾರಣೆ ಕಂಡಿದೆ ಮುಂತಾದ ಅಂಶಗಳನ್ನು ಇಲಾಖೆಯು ಗಮನಿಸುತ್ತದೆ.

ಹೀಗೆ ಗಮನಿಸಿದಾಗ, ಪರಿಶಿಷ್ಟರ ಬದುಕಿಗೆ ಹಿಂದಿನ ಸರ್ಕಾರ ಮಾಡಿರುವ ಹಂಚಿಕೆ ಮತ್ತು ನಮ್ಮ ಸರ್ಕಾರವು ಮಾಡಿರುವಂತಹ ಹಣದ ಹಂಚಿಕೆಯ ಚಿತ್ರಣವು ಎದುರಿಗೆ ಬರುತ್ತದೆ. 2019ರಿಂದ 2023ರ ತನಕ ಅಂದರೆ, ಐದು ವರ್ಷಗಳಲ್ಲಿ ಹಿಂದಿನ ಸರ್ಕಾರದ ಅವಧಿಯಲ್ಲಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯಡಿ ಹಂಚಿಕೆಯಾಗಿರುವ ಅನುದಾನದ ಪ್ರಮಾಣವು ಸರಾಸರಿ ₹27,612.03 ಕೋಟಿ. ಆದರೆ, 2023ರಿಂದ 2026ರ ನಡುವೆ ನಮ್ಮ ಸರ್ಕಾರ ಹಂಚಿಕೆ ಮಾಡಿದ ಅನುದಾನ ₹83,824 ಸಾವಿರ ಕೋಟಿ. ಇದು ಬಿಜೆಪಿ ಮತ್ತು ಇನ್ಯಾವುದೇ ಪಕ್ಷದ ಸರ್ಕಾರಕ್ಕಿಂತಲೂ ಹೆಚ್ಚಿಗೆ ಪ್ರಮಾಣದಲ್ಲಿ ನೀಡಿರುವಂತಹ ಹಣವಾಗಿದ್ದು, ಪರಿಶಿಷ್ಟರ ಅಭಿವೃದ್ಧಿಯ ಬಗ್ಗೆ ಸರ್ಕಾರದ ಬದ್ಧತೆಯ ಪ್ರತೀಕವಾಗಿದೆ.

2023ರ ಚುನಾವಣೆಯ ಸಂದರ್ಭದಲ್ಲಿ ಜನರಿಗೆ ಭರವಸೆ ನೀಡಿದಂತೆ ಐದು ಗ್ಯಾರಂಟಿ ಯೋಜನೆಗಳನ್ನು ನಮ್ಮ ಸರ್ಕಾರವು ಪರಿಣಾಮಕಾರಿಯಾಗಿ ಜಾರಿಗೊಳಿಸಿದೆ. ಗ್ಯಾರಂಟಿ ಯೋಜನೆಗಳಿಗೆ ಎಸ್‌ಸಿಎಸ್‌ಪಿ/ ಟಿಎಸ್‌ಪಿ ಯೋಜನೆಯ ಹಣವನ್ನು ವಿನಿಯೋಗಿಸಲಾಗಿದೆ ಎಂಬ ಮಾತನ್ನು ಆರೋಪ ಮಾಡುವ ಧಾಟಿಯಲ್ಲಿ ಹೇಳಲಾಗುತ್ತಿದೆ. ಅಷ್ಟೇ ಅಲ್ಲದೆ ಈ ವಿಚಾರವನ್ನು ಚರ್ಚೆಯ ಕೇಂದ್ರಬಿಂದುವನ್ನಾಗಿ ಮಾಡಲಾಗುತ್ತಿದೆ. ಆದರೆ. ಈ ಆರೋಪದಲ್ಲಿ ಹುರುಳಿಲ್ಲ.

> ಗೃಹಲಕ್ಷ್ಮಿ, ಅನ್ನಭಾಗ್ಯ ಮತ್ತು ಯುವ ನಿಧಿ ಯೋಜನೆಯಲ್ಲಿ ಪರಿಶಿಷ್ಟ ಸಮುದಾಯಗಳಿಗೆ ಸೇರಿದ ಸುಮಾರು 56,88,822ರಷ್ಟು ಜನರಿದ್ದು, ಶಕ್ತಿ ಮತ್ತು ಗೃಹಜ್ಯೋತಿ ಯೋಜನೆಯಡಿ ಇರುವ ಪರಿಶಿಷ್ಟ ಸಮುದಾಯಗಳ ಫಲಾನುಭವಿಗಳ ಸಂಖ್ಯೆಯೂ ಹಲವು ಲಕ್ಷಗಳಷ್ಟಿದೆ. ಈ ಫಲಾನುಭವಿಗಳು ಬಹುತೇಕ ಭೂ ರಹಿತ ಸ್ಥಿತಿಯಲ್ಲಿದ್ದಾರೆ. ದೈನಂದಿನ ಶ್ರಮದ ಆಧಾರದಲ್ಲಿ ಅದೆಷ್ಟೋ ಪರಿಶಿಷ್ಟ ಕುಟುಂಬಗಳು ಬದುಕುತ್ತಿವೆ. ಹೀಗಾಗಿ ಯಾರೇ ಆಗಲಿ ಆರೋಪ ಮಾಡುವ ಮುನ್ನ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿರುವ ಜನರ ಸ್ಥಿತಿಯನ್ನು ಕಣ್ಣೆದುರಿಗೆ ತಂದುಕೊಂಡು ಸರ್ಕಾರದ ಈ ಪ್ರಯತ್ನವನ್ನು ಸಂವೇದನೆಯಿಂದ ನೋಡಬೇಕಾದ ಅಗತ್ಯವಿದೆ

ಗೃಹಲಕ್ಷ್ಮಿ, ಅನ್ನಭಾಗ್ಯ ಮತ್ತು ಯುವನಿಧಿ ಯೋಜನೆಯಲ್ಲಿ ಪರಿಶಿಷ್ಟ ಸಮುದಾಯಗಳಿಗೆ ಸೇರಿದ ಸುಮಾರು 56,88,822ರಷ್ಟು ಜನರಿದ್ದು, ಶಕ್ತಿ ಮತ್ತು ಗೃಹಜ್ಯೋತಿ ಯೋಜನೆಯಡಿ ಇರುವ ಪರಿಶಿಷ್ಟ ಸಮುದಾಯಗಳ ಫಲಾನುಭವಿಗಳ ಸಂಖ್ಯೆಯೂ ಹಲವು ಲಕ್ಷಗಳಷ್ಟಿದೆ. ಈ ಫಲಾನುಭವಿಗಳು ಬಹುತೇಕ ಭೂ ರಹಿತ ಸ್ಥಿತಿಯಲ್ಲಿದ್ದಾರೆ. ದೈನಂದಿನ ಶ್ರಮದ ಆಧಾರದಲ್ಲಿ ಅದೆಷ್ಟೋ ಪರಿಶಿಷ್ಟ ಕುಟುಂಬಗಳು ಬದುಕುತ್ತಿವೆ. ಹೀಗಾಗಿ ಯಾರೇ ಆಗಲಿ ಆರೋಪ ಮಾಡುವ ಮುನ್ನ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿರುವ ಜನರ ಸ್ಥಿತಿಯನ್ನು ಕಣ್ಣೆದುರಿಗೆ ತಂದುಕೊಂಡು ಸರ್ಕಾರದ ಈ ಪ್ರಯತ್ನವನ್ನು ಸಂವೇದನೆಯಿಂದ ನೋಡಲೇಬೇಕಾದ ಅಗತ್ಯವಿದೆ.

ರಾಜ್ಯದಲ್ಲಿ ಜನಸಂಖ್ಯಾವಾರು ಅತ್ಯಂತ ಹೆಚ್ಚಾಗಿರುವ ಪರಿಶಿಷ್ಟ ಸಮುದಾಯಗಳ ನಿರೀಕ್ಷೆಯು ಸಹಜವಾಗಿ ಹೆಚ್ಚಾಗಿದೆ. ಈ ಒಂದು ಕಾರಣಕ್ಕಾಗಿಯೇ ಪರಿಶಿಷ್ಟ ಸಮುದಾಯಗಳಿಗೆ ಕಲ್ಪಿಸಿರುವ ಸೌಲಭ್ಯಗಳನ್ನು ಹೆಚ್ಚಾಗಿ ನೀಡಲು ಮತ್ತು ಪರಿಶಿಷ್ಟರ ಬಹುಕಾಲದ ಬೇಡಿಕೆಯಾದಂತಹ ಅಂಬೇಡ್ಕರ್ ಮ್ಯೂಸಿಯಂ ಮತ್ತು ದೇಶದ ಅತಿದೊಡ್ಡ ಅಂಬೇಡ್ಕರ್ ಪ್ರತಿಮೆಯನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ಮುಖ್ಯಮಂತ್ರಿಯವರಿಗೆ ಮನವಿ ಮಾಡಿದ್ದು ಅವರೂ ಸಕಾರಾತ್ಮಕವಾಗಿ ಸ್ಪಂದಿಸಿರುತ್ತಾರೆ.

ಇದರ ಜೊತೆಗೆ, ನಮ್ಮ ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಪರಿಶಿಷ್ಟ ಸಮುದಾಯದ ವಿದ್ಯಾರ್ಥಿಗಳು ದೇಶದ ಎಲ್ಲಾ ವಲಯಗಳಲ್ಲಿ ಅಂದರೆ ವೈದ್ಯಕೀಯ, ಶಿಕ್ಷಣ, ವಿಜ್ಞಾನ, ಕ್ರೀಡೆ, ಕಲೆ ಮತ್ತು ಸಾಹಿತ್ಯ, ಎಂಜಿನಿಯರಿಂಗ್, ಪೈಲಟ್, ಐಎಎಸ್/ಐಪಿಎಸ್ ಆದಿಯಾಗಿ ದೇಶದ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನದ ವಿಭಾಗದಲ್ಲಿ ಪರಿಣಾಮಕಾರಿಯಾಗಿ ತರಬೇತಿಯನ್ನು ಪಡೆಯಬೇಕೆಂಬ ಉದ್ದೇಶದಿಂದ ಅವರಿಗೆ ಪ್ರಬುದ್ಧ ಯೋಜನೆಯಡಿಯಲ್ಲಿ ಇನ್ನು ಮುಂದೆ ಯೋಜಿತ ರೀತಿಯಲ್ಲಿ ಅವಕಾಶಗಳನ್ನು ಕಲ್ಪಿಸುವ ಬಗ್ಗೆ ಇಲಾಖೆಯು ಗಂಭೀರವಾಗಿ ಯೋಚಿಸಿದೆ. ಎಲ್ಲ ವಲಯಗಳಲ್ಲಿಯೂ ಪರಿಶಿಷ್ಟ ಸಮುದಾಯವರಿಗೆ ವಿಪುಲ ಅವಕಾಶಗಳು ಸೃಷ್ಟಿಯಾಗಬೇಕು ಎಂಬುದೇ ಇಲ್ಲಿನ ಸದಾಶಯವಾಗಿದೆ.

ಶೈಕ್ಷಣಿಕ ವಲಯದಲ್ಲಿ ಪರಿಶಿಷ್ಟ ಸಮುದಾಯದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂಬ ಉದ್ದೇಶದಿಂದ ಈಗಾಗಲೇ ಕ್ರೈಸ್ ವಸತಿ ಶಿಕ್ಷಣ ಸಂಸ್ಥೆಯ ಸಮೂಹದಡಿ ಬಹುವಂತಹ ಎಲ್ಲಾ 821 ವಸತಿ ಶಾಲೆಗಳಲ್ಲಿ ಒಂದಿಲ್ಲೊಂದು ರೀತಿಯ ಶೈಕ್ಷಣಿಕ ಚಟುವಟಿಕೆಯನ್ನು ನೀಡುತ್ತಿರುವ ನಮ್ಮ ಇಲಾಖೆಯು, ಮೂಲ ಸೌಕರ್ಯದ ಅಭಿವೃದ್ಧಿ ವಿಷಯದಲ್ಲೂ ಹಿಂದೆ ಬಿದ್ದಿಲ್ಲ.

ಮಾನ್ಯ ಮುಖ್ಯಮಂತ್ರಿಯವರ ದೂರದೃಷ್ಟಿಗೆ ಅನುಸಾರವಾಗಿ ಹೋಬಳಿಗೊಂದು ವಸತಿ ಶಾಲೆ ಪ್ರಸ್ತಾವದಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಹಲವು ಹೊಸ ವಸತಿ ಶಾಲೆಗಳ ನಿರ್ಮಾಣ ಕಾರ್ಯವೂ ಜರುಗುತ್ತಿದ್ದು, ಇದೊಂದು ಬಹುಮುಖ್ಯವಾದಂತಹ ಕೆಲಸವಾಗಿದೆ. ಇದರ ಜೊತೆ ಜೊತೆಗೆ ಕೇಂದ್ರದಿಂದಲೂ ಸಹ ಪರಿಶಿಷ್ಟ ಸಮುದಾಯದ ಏಳಿಗೆಗಾಗಿ ಅರ್ಹವಾಗಿ ದೊರೆಯಬೇಕಿರುವ ರಾಜ್ಯದ ಪಾಲನ್ನೂ ನ್ಯಾಯಬದ್ಧವಾಗಿ ನೀಡಿದರೆ ಅದರಿಂದ ಎಲ್ಲರಿಗೂ ಅನುಕೂಲ ಆಗುತ್ತದೆ ಎಂಬ ಸಂಗತಿಯನ್ನೂ ಇದೇ ವೇಳೆ ಪ್ರಸ್ತಾಪಿಸುತ್ತಾ, ಪರಿಶಿಷ್ಟ ಸಮುದಾಯಗಳ ಏಳಿಗೆಯ ವಿಷಯದಲ್ಲಿ ರಾಜ್ಯ ಸರ್ಕಾರ ಎಂದಿಗೂ ರಾಜಿಯಿಲ್ಲದ ನಿಲುವು ಹೊಂದಿದೆ ಎಂದು ಮತ್ತೊಮ್ಮೆ ಸ್ಪಷ್ಟಪಡಿಸುತ್ತಿದ್ದೇನೆ.

ಲೇಖಕ: ಸಮಾಜ ಕಲ್ಯಾಣ ಸಚಿವ

ಎಸ್‌ಸಿಎಸ್‌ಪಿ–ಟಿಎಸ್‌ಪಿಗೆ ಅನುದಾನ ಹಂಚಿಕೆ ಮತ್ತು ವೆಚ್ಚ (ಕೋಟಿಗಳಲ್ಲಿ)



*ಫೆ 16ರವರೆಗೆ

ರಾಜ್ಯ ಸರ್ಕಾರದಿಂದ ಪರಿಶಿಷ್ಟರ ‘ಹಣ ತಿರುವು ಯೋಜನೆ’

• ಗೋವಿಂದ ಎಂ. ಕಾರಜೋಳ

ಭಾರತಕ್ಕೆ ಸ್ವಾತಂತ್ರ್ಯ ಬಂದ ಏಳೂವರೆ ದಶಕಗಳಲ್ಲಿ ಕಾಂಗ್ರೆಸ್ ನಾಯಕತ್ವವು ಎರಡು ವಿಷಯಗಳನ್ನು ಮತಬ್ಯಾಂಕ್‌ಗಳನ್ನಾಗಿ ಮಾಡಿಕೊಂಡಿದೆ. ಪರಿಶಿಷ್ಟರು ಹಾಗೂ ಅಲ್ಪಸಂಖ್ಯಾತರ ಉದ್ಧಾರಕರು, ರಕ್ಷಕರು ತಾವು ಎಂದು ಅದರ ನಾಯಕರು ಡಂಗೂರ ಬಾರಿಸಿಕೊಂಡು ಬರುತ್ತಿದ್ದಾರೆ. ಆ ಹಣೆಪಟ್ಟಿಯ ಆಧಾರದಲ್ಲಿಯೇ ಅವರ ರಾಜಕೀಯ ನಡೆಯುತ್ತಿದೆ. ಆದರೆ, ಇಷ್ಟು ವರ್ಷಗಳಲ್ಲಿ ಆ ಸಮುದಾಯಗಳ ಹೆಸರಲ್ಲಿ ರಾಜಕೀಯ ಮಾಡಿದವರು ಉದ್ಧಾರವಾದರೇ ಹೊರತು, ಸಮುದಾಯದವರು ಮಾತ್ರ ಅಲ್ಲಿಯೇ ಉಳಿದುಕೊಂಡರು. ಈಗ ಕರ್ನಾಟಕದಲ್ಲಿ ಗ್ಯಾರಂಟಿ ಹಾಗೂ ಎಸ್‌ಸಿಎಸ್‌ಪಿ- ಟಿಎಸ್‌ಪಿ ಅನುದಾನಗಳ ವಿಷಯದಲ್ಲಿಯೂ ದಶಕದ ಹಿಂದಿನ ಟೋಪಿಗೆ ಹೊಸ ಬಣ್ಣ ಹಚ್ಚಿ ಚಲಾವಣೆಗೆ ತರಲಾಗುತ್ತಿದೆ.

ಪರಿಶಿಷ್ಟ ಸಮುದಾಯದ ಅಭಿವೃದ್ಧಿಗೆ ಪ್ರತಿ ಇಲಾಖೆಯಲ್ಲೂ ಹಣ ಮೀಸಲಿಡುವ ಬಗ್ಗೆ ಎಸ್‌ಸಿಎಸ್‌ಪಿ- ಟಿಎಸ್‌ಪಿ ಕಾಯ್ದೆಯನ್ನು ಜಾರಿಗೆ ತಂದಾಗ, ಕಾಂಗ್ರೆಸ್ ಸರ್ಕಾರವು ಅದನ್ನು ಅನುಸರಿಸುವ ಭರವಸೆ ಕೊಟ್ಟಿತ್ತು. ಅವರು ಚುನಾವಣೆಯ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಯನ್ನು ಘೋಷಿಸಿದಾಗ, ಎರಡನ್ನೂ ವಿಲೀನಗೊಳಿಸುವ ಪ್ರಸ್ತಾವ ಮಾಡಿರಲಿಲ್ಲ. ಆದರೆ ಅಧಿಕಾರದ ಗದ್ದುಗೆ ಏರಿದಾಗ ಎಂದಿನಂತೆ ಪರಿಶಿಷ್ಟರ ಉದ್ಧಾರ ಹಾಗೂ ರಕ್ಷಣೆಯ ವಿಚಾರ ಮರೆತುಹೋಯಿತು. ಏಕೆಂದರೆ, ಚುನಾವಣೆಗಳು ಬಂದಾಗ ಟೋಪಿ ಹಾಕಲು ಮಾತ್ರವೇ ಕಾಂಗ್ರೆಸ್‌ಗೆ ಪರಿಶಿಷ್ಟರು ನೆನಪಾಗುತ್ತಾರೆ. ಅಧಿಕಾರಕ್ಕೇರಿದ ನಂತರ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಆಮೂಲಾಗ್ರ ಅಭಿವೃದ್ಧಿಗೆ ಮೀಸಲಿಟ್ಟ ಹಣವೆಲ್ಲ ಗ್ಯಾರಂಟಿ ಕಡೆಗೆ ಹರಿಯಲು ಶುರುವಾಯಿತು. ಪರಿಣಾಮವಾಗಿ ಪರಿಶಿಷ್ಟರ ಅಭಿವೃದ್ಧಿಗೆ ಬಳಕೆಯಾಗಬೇಕಿದ್ದ ಹಣದಲ್ಲಿ ಕೊರತೆಯಾಗಲು ಆರಂಭವಾಯಿತು. ಇದರ ಫಲಿತಾಂಶವೇನೆಂದರೆ, ಮೂರು ವರ್ಷಗಳಲ್ಲಿ ₹39 ಸಾವಿರ ಕೋಟಿಗೂ ಅಧಿಕ ಎಸ್‌ಸಿಎಸ್‌ಪಿ- ಟಿಎಸ್‌ಪಿ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ವರ್ಗಾಯಿಸಲಾಗಿದೆ.

> ಗ್ಯಾರಂಟಿ ಯೋಜನೆಗಳಿಗೆ ಹಣ ಸಂಗ್ರಹಿಸಲು ಅನ್ಯ ಮಾರ್ಗಗಳಿವೆ ಎಂದು ಕಾಂಗ್ರೆಸ್ ಚುನಾವಣೆ ವೇಳೆ ಹೇಳಿತ್ತು. ಆದರೆ ಅಧಿಕಾರಕ್ಕೆ ಬಂದ ನಂತರದ ಸ್ಥಿತಿ ಅವರು ಹೇಳಿದ್ದಕ್ಕೆ ಸಂಪೂರ್ಣ ವಿರುದ್ಧವಾಗಿದೆ. ಪರಿಶಿಷ್ಟರಿಗೆ ಮೀಸಲಿಟ್ಟ ಹಣವೇ ಗ್ಯಾರಂಟಿಗೆ ದೊಡ್ಡ ಹಣದ ಮೂಲವಾಗಿದೆ. ಪರಿಶಿಷ್ಟರ ಕೇರಿಗಳ ಮುಂದೆ ಆಗಬೇಕಿದ್ದ ರಸ್ತೆ, ಸಮುದಾಯ ಭವನಗಳು ಕಾಣೆಯಾಗಿವೆ. ಪರಿಶಿಷ್ಟರ ಪ್ರತಿಭಾನ್ವಿತ ಮಕ್ಕಳ ಶಿಕ್ಷಣಕ್ಕೆ ಸಿಗಬೇಕಿದ್ದ ನೆರವಿನ ಹಣಕ್ಕೆ ಕೊರತೆಯಾಗಿದೆ. ಪರಿಶಿಷ್ಟ ವರ್ಗದಲ್ಲಿ ಉದ್ಯಮ ಕಟ್ಟುವ ಕನಸು ಕಾಣುತ್ತಿರುವವರಿಗೆ ಸರ್ಕಾರದ ನೆರವು ಗಗನಕುಸುಮವಾಗಿದೆ. ಕುಟುಂಬಕ್ಕೆ ಸೂರು ಕಟ್ಟಿಕೊಳ್ಳಬೇಕು ಎನ್ನುವ ಪರಿಶಿಷ್ಟರ ಮಹದಾಸೆಗೆ ತಣ್ಣೀರು ಎರಚಲಾಗಿದೆ

ಈ ವಿಚಾರವನ್ನು ಪ್ರಸ್ತಾಪಿಸಿದಾಗ ಸಿದ್ದರಾಮಯ್ಯ ಸರ್ಕಾರದಿಂದ ಕಪೋಲಕಲ್ಪಿತವಾದ, ಆಧಾರರಹಿತವಾದ ಸಮಜಾಯಿಷಿ ಬರುತ್ತದೆ. ‘ಗ್ಯಾರಂಟಿ ಯೋಜನೆಯ ಲಾಭ ಪಡೆಯುವ ಪರಿಶಿಷ್ಟರಿಗೆ ಈ ಹಣ ವರ್ಗಾವಣೆ ಮಾಡಲಾಗಿದೆ’ ಎನ್ನುತ್ತಾರೆ. ಈ ಸಮರ್ಥನೆಯು ವಿರೋಧಾಭಾಸದಿಂದ ಕೂಡಿದೆ.

ಗ್ಯಾರಂಟಿ ಯೋಜನೆಯನ್ನು ಜಾತಿ ಅಥವಾ ಸಮುದಾಯವಾರು ನೀಡುತ್ತಿಲ್ಲ. ಎಲ್ಲ ಗ್ಯಾರಂಟಿ ಯೋಜನೆಗಳನ್ನು ಎಲ್ಲರಿಗೂ ನೀಡಲಾಗುತ್ತಿದೆ. ಆದರೆ, ಇಲ್ಲಿ ಹಣ ಖರ್ಚು ಮಾಡಿದ್ದಕ್ಕೆ ಪರಿಶಿಷ್ಟರು ಎನ್ನುವ ಲೆಕ್ಕ ತೋರಿಸಲಾಗಿದೆಯಷ್ಟೇ. ಇದರಿಂದಾಗಿ ಪರಿಶಿಷ್ಟರ ವಸತಿ, ರಸ್ತೆ, ಶಿಕ್ಷಣ, ಆರೋಗ್ಯ ಹಾಗೂ ಇತರ ಮೂಲಭೂತ ಆದ್ಯತೆಗಳಿಗೆ ಮೀಸಲಿಡಬೇಕಾದ ಅನುದಾನ ಮಾಯವಾಗುತ್ತಿದೆ. ಪರಿಶಿಷ್ಟ ವರ್ಗದವರು ಕಳೆದ ಬಾರಿ ಕಾಂಗ್ರೆಸ್ ಜೊತೆಗೆ ಕೈಜೋಡಿಸುವಾಗ, ಎಸ್‌ಸಿಎಸ್‌ಪಿ–ಟಿಎಸ್‌ಪಿ ಅನುದಾನದ ಜೊತೆಗೆ ಗ್ಯಾರಂಟಿ ಯೋಜನೆಯ ಲಾಭವೂ ತಮಗೆ ದೊರೆಯುತ್ತದೆ ಎಂದುಕೊಂಡಿದ್ದರು. ಆದರೆ, ಕಾಂಗ್ರೆಸ್ ಸರ್ಕಾರವು ರಾಜ್ಯದ ಎಲ್ಲ ಜನರಿಗೆ ಮಾಡಿದ ಮೋಸವನ್ನೇ ಇನ್ನೂ ದೊಡ್ಡ ಪ್ರಮಾಣದಲ್ಲಿ ಎಸ್‌ಸಿ –ಎಸ್‌ಟಿಯವರಿಗೆ ಮಾಡಿದೆ. ಕಾನೂನು ಪ್ರಕಾರ ಪರಿಶಿಷ್ಟ ವರ್ಗಕ್ಕೆ ಮೀಸಲಿಟ್ಟಿದ್ದ ಹಣವನ್ನು ಲಪಟಾಯಿಸಿ, ಗ್ಯಾರಂಟಿ ಮೂಲಕ ಅವರಿಗೆ ಅದನ್ನು ನೀಡಿ ದೊಡ್ಡ ಸಾಧನೆ ಮಾಡಿದಂತೆ ಬೀಗುತ್ತಿದೆ.

ಕಾಂಗ್ರೆಸ್ ಸರ್ಕಾರ ಮಾಡಿದ ಈ ಮೋಸಕ್ಕೆ ಸ್ಪಷ್ಟ ಉದಾಹರಣೆ ಎಂದರೆ, ಕೆಲವು ಇಲಾಖೆಗಳಲ್ಲಿನ ಅನುದಾನದಲ್ಲಿನ ಕೊರತೆ ಮತ್ತು ಕೆಲವು ಇಲಾಖೆಗಳಲ್ಲಿನ ಅನುದಾನದ ಏರಿಕೆ. ಇಂಧನ, ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆಹಾರ ಹಾಗೂ ಸಾರಿಗೆ ಇಲಾಖೆಯಲ್ಲಿನ ಅನುದಾನವು ಹೆಚ್ಚಳವಾಗಿದೆ. ಗ್ಯಾರಂಟಿಗಾಗಿ ಬೇರೆ ಇಲಾಖೆಗಳಲ್ಲಿನ ಎಸ್‌ಸಿಎಸ್‌ಪಿ– ಟಿಎಸ್‌ಪಿ ಹಣವನ್ನು ಆ ಇಲಾಖೆಗಳಿಗೆ ವರ್ಗಾಯಿಸಿದ್ದೇ ಈ ಏರಿಕೆಗೆ ಕಾರಣವಾಗಿದೆ. ಆದರೆ ಪರಿಶಿಷ್ಟ ವರ್ಗದ ಅಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರವಹಿಸುವ ಸಮಾಜ ಕಲ್ಯಾಣ, ವಸತಿ, ಕಂದಾಯ, ಶಿಕ್ಷಣ, ಆದಿವಾಸಿ ಕಲ್ಯಾಣ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಗಳಲ್ಲಿನ ಅನುದಾನದಲ್ಲಿ ಸುಮಾರು ಶೇ 5ರವರೆಗೆ ಕಡಿತವಾಗಿದೆ. ಪರಿಶಿಷ್ಟ ವರ್ಗದ ಅಭಿವೃದ್ಧಿಗಾಗಿಯೇ ಮೀಸಲಾಗಿರುವ ನಿಗಮ-ಮಂಡಳಿಗಳಿಗೆ ನೀಡುವ ಅನುದಾನಕ್ಕೂ ಕೊಕ್ಕೆ ಹಾಕಲಾಗಿದೆ. ಇನ್ನು ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಅಳಿದುಳಿದ ಹಣದ ವಿಚಾರದಲ್ಲಿ ಸಿದ್ದರಾಮಯ್ಯ ಸರ್ಕಾರ ಏನು ಮಾಡಿತು ಎನ್ನುವುದನ್ನು ಕನ್ನಡಿಗರು ನೋಡಿದ್ದಾರೆ.

ಗ್ಯಾರಂಟಿ ಯೋಜನೆಗಳಿಗೆ ಹಣ ಸಂಗ್ರಹಿಸಲು ಅನ್ಯ ಮಾರ್ಗಗಳಿವೆ ಎಂದು ಕಾಂಗ್ರೆಸ್ ಚುನಾವಣೆ ಸಂದರ್ಭದಲ್ಲಿ ಹೇಳಿತ್ತು. ಆದರೆ ಅಧಿಕಾರಕ್ಕೆ ಬಂದ ನಂತರದ ಸ್ಥಿತಿ ಅವರು ಹೇಳಿದ್ದಕ್ಕೆ ಸಂಪೂರ್ಣ ವಿರುದ್ಧವಾಗಿದೆ. ಪರಿಶಿಷ್ಟರಿಗೆ ಮೀಸಲಿಟ್ಟ ಹಣವೇ ಗ್ಯಾರಂಟಿಗೆ ದೊಡ್ಡ ಹಣದ ಮೂಲವಾಗಿದೆ. ಪರಿಶಿಷ್ಟರ ಕೇರಿಗಳ ಮುಂದೆ ಆಗಬೇಕಿದ್ದ ರಸ್ತೆ, ಸಮುದಾಯ ಭವನಗಳು ಕಾಣೆಯಾಗಿವೆ. ಪರಿಶಿಷ್ಟರ ಮನೆಗಳಲ್ಲಿನ ಪ್ರತಿಭಾನ್ವಿತ ಮಕ್ಕಳ ಶಿಕ್ಷಣಕ್ಕೆ ಸಿಗಬೇಕಿದ್ದ ನೆರವಿನ ಹಣಕ್ಕೆ ಕೊರತೆಯಾಗಿದೆ. ಪರಿಶಿಷ್ಟ ವರ್ಗದಲ್ಲಿ ಉದ್ಯಮ ಕಟ್ಟುವ ಕನಸು ಕಾಣುತ್ತಿರುವವರಿಗೆ ಸರ್ಕಾರದ ನೆರವು ಗಗನಕುಸುಮವಾಗಿದೆ. ಕುಟುಂಬಕ್ಕೆ ಸೂರು ಕಟ್ಟಿಕೊಳ್ಳಬೇಕು ಎನ್ನುವ ಪರಿಶಿಷ್ಟರ ಮಹದಾಸೆಗೆ ತಣ್ಣೀರು ಎರಚಲಾಗಿದೆ.

ಪರಿಶಿಷ್ಟ ಸಮುದಾಯಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಹಣವನ್ನು ಮೀಸಲಾಗಿರಿಸಬೇಕು. ಮತ ಬ್ಯಾಂಕ್ ರಾಜಕಾರಣದ ಯೋಜನೆಗಳಿಗಾಗಿ ಬಳಸಿಕೊಳ್ಳಬಾರದು. ಆ ಹಣವನ್ನು ಸಾರ್ವತ್ರಿಕ ಯೋಜನೆಗಳಿಗೆ ಬಳಸಬಾರದು. ದಲಿತರಿಗೆ ಉದ್ಯೋಗ ಸೃಷ್ಟಿ ಮಾಡಲು, ಸ್ವಯಂ ಉದ್ಯೋಗ ಕಲ್ಪಿಸಲು ಹಣ ಮೀಸಲಿಡಬೇಕು. ಅವರ ಶಿಕ್ಷಣಕ್ಕೆ, ಅವರ ಮಕ್ಕಳಿಗೆ ಬಳಸಬೇಕು. ಅವರಿಗೆ ವಸತಿ ಶಾಲೆಗಳನ್ನು ನಿರ್ಮಿಸಬೇಕು. ಅವರಿಗೆ ತಾಂತ್ರಿಕ ಶಿಕ್ಷಣ ಕೊಡಬೇಕು. ದಲಿತರ ಮಕ್ಕಳು ಅಖಿಲ ಭಾರತ ಸೇವೆಗೆ ಆಯ್ಕೆ ಆಗುವ ರೀತಿ ಶಿಕ್ಷಣ, ತರಬೇತಿ ಕೊಡಬೇಕು.

ಸ್ವಯಂ ಉದ್ಯೋಗ ಮಾಡಲು ಫಲಾನುಭವಿಗಳ ಬಳಿ ಹಣ ಇರಬೇಕಾಗುತ್ತದೆ. ಆದರೆ, ಹಾಗೆ ಹಣ ಇಲ್ಲದಿರುವ ಅನೇಕರಿದ್ದಾರೆ. ಅಂಥ ಬಡ ಪರಿಶಿಷ್ಟರ ಮಕ್ಕಳಿಗೆ ಸ್ವಯಂ ಉದ್ಯೋಗ ಮಾಡಲು ಸರ್ಕಾರ ನೆರವು ನೀಡಬೇಕು. ಭೂ ಒಡೆತನ ಯೋಜನೆಯಲ್ಲಿ ಅರ್ಹರಿಗೆ ಭೂಮಿ ಕೊಡಬೇಕು. ಅಂಥ ಭೂಮಿಯಲ್ಲಿ ಗಂಗಾ ಕಲ್ಯಾಣ ಯೋಜನೆಯ ಅಡಿ ಒಂದು ಕೊಳವೆ ಬಾವಿ ತೋಡಿಕೊಟ್ಟರೆ, ಒಂದು ಕುಟುಂಬಕ್ಕೆ ಅನುಕೂಲ ಆಗುತ್ತದೆ, ಒಂದು ಕುಟುಂಬ ಉದ್ಧಾರ ಆಗುತ್ತದೆ. ಅವರ ಬದುಕು ಹಸನಾಗುತ್ತದೆ. ನಮ್ಮ ಸರ್ಕಾರ ಇದ್ದಾಗ ಇಂಥ ಅನೇಕ ಕೆಲಸಗಳನ್ನು ಮಾಡಿದ್ದೇವೆ. ಆದರೆ, ಈ ಸರ್ಕಾರ ಬಂದ ನಂತರದ ಈ ಮೂರು ವರ್ಷದಲ್ಲಿ ಕೊಳವೆ ಬಾವಿಗೆ ದುಡ್ಡಿಲ್ಲ. ಗಂಗಾ ಕಲ್ಯಾಣಕ್ಕೆ ಅನುದಾನವಿಲ್ಲ. ಒಂದೊಂದು ವಿಧಾನಸಭಾ ಕ್ಷೇತ್ರಕ್ಕೆ ಒಂದೋ ಎರಡೋ ಕೊಳವೆ ಬಾವಿ ನೀಡಿದರೆ, ಶಾಸಕರು ಯಾರಿಗೆ ಎಂದು ಕೊಡುವುದು? ಹೀಗಾಗಿ ಇಡೀ ಯೋಜನೆಯನ್ನೇ ಕೈಬಿಟ್ಟಂತಾಗಿದೆ.

ಇಂದು ಬಡವರಿಗೆ ಮನೆ ಕಟ್ಟಲು ಒಂದು ನಿವೇಶನ ಸಹ ಇಲ್ಲದಂತಾಗಿದೆ. ಈಗ ಏನಾಗಿದೆ ಅಂದರೆ, ಒಬ್ಬ ತಂದೆಗೆ ಇಬ್ಬರು ಮೂವರು ಮಕ್ಕಳು ಇದ್ದರೆ, ಎಲ್ಲರೂ ಒಂದೇ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ. 20x30 ಅಡಿಯ ನಿವೇಶನ ಕೂಡ ಲಭ್ಯವಿಲ್ಲದಂತಾಗಿದೆ. ಬಡವರಿಗೆ, ಅದರಲ್ಲೂ ವಿಶೇಷವಾಗಿ ಎಸ್‌ಸಿ, ಎಸ್‌ಟಿ ಸಮುದಾಯಗಳ ಜನರಿಗೆ ನಿವೇಶನಗಳನ್ನು ಹಂಚುವ ಕೆಲಸ ಆಗಬೇಕು. ಕಾಂಗ್ರೆಸ್ ಸರ್ಕಾರವು ಎಸ್‌ಸಿಎಸ್‌ಪಿ–ಟಿಎಸ್‌ಪಿ ಹಣದಲ್ಲಿ ಇಂಥ ಯೋಜನೆಗಳನ್ನು ರೂಪಿಸುವ ಬದಲು ಆ ಹಣವನ್ನು ಇತರೆ ವೆಚ್ಚಗಳಿಗೆ ಬಳಸಿ ದಲಿತರಿಗೆ ಅನ್ಯಾಯ ಮಾಡುತ್ತಿದೆ.

ಲೇಖಕ: ಬಿಜೆಪಿ ಸಂಸದ

ಮೂವರು ಆರೋಪಿಗಳು

ಸಿದ್ದರಾಮಯ್ಯ ಸರ್ಕಾರವು ರಾಜ್ಯದ ಜನರ ಒಂದು ಪ್ರಶ್ನೆಗೆ ಉತ್ತರಿಸಬೇಕಿದೆ; ಕಳೆದ ಬಜೆಟ್‌ನಲ್ಲಿ ಎಸ್‌ಸಿಎಸ್‌ಪಿ- ಟಿಎಸ್‌ಪಿಗೆ ₹42 ಸಾವಿರ ಕೋಟಿ ಹಣವನ್ನು ಸರ್ಕಾರ ಮೀಸಲಿಟ್ಟಿತ್ತು. ಈ ಪೈಕಿ ₹14 ಸಾವಿರ ಕೋಟಿ ಹಣವನ್ನು ಕಾನೂನುಬಾಹಿರವಾಗಿ ಗ್ಯಾರಂಟಿ ಯೋಜನೆಗಳಿಗೆ ವರ್ಗಾಯಿಸಲಾಗಿದೆ. ಅಂದರೆ, ಪರಿಶಿಷ್ಟರಿಗೆ ಸಿಗಬೇಕಿದ್ದ ಮೊತ್ತದಲ್ಲಿ ಶೇ 30ಕ್ಕೂ ಅಧಿಕ ಹಣ ಇತರೆ ಉದ್ದೇಶಗಳಿಗೆ ಬಳಕೆಯಾಗಿದೆ; ಗೃಹಲಕ್ಷ್ಮಿಗೆ ₹7,400 ಕೋಟಿ, ಗೃಹಜ್ಯೋತಿಗೆ ₹2,700 ಕೋಟಿ, ಅನ್ನಭಾಗ್ಯಕ್ಕೆ ₹1,700 ಕೋಟಿ ಹಾಗೂ ಶಕ್ತಿ ಯೋಜನೆಗೆ ₹1,500 ಕೋಟಿಗೂ ಅಧಿಕ ಹಣ ಹರಿದಿದೆ. ನದಿ ತಿರುವು ಯೋಜನೆಯಂತೆ ಪರಿಶಿಷ್ಟರ ಅನುದಾನ ತಿರುವು ಯೋಜನೆಯನ್ನು ಕಾಂಗ್ರೆಸ್ ಯಶಸ್ವಿಯಾಗಿ ಮಾಡಿ ಟೋಪಿ ಹಾಕಿದೆ. ಇದೇ ಸಿದ್ದರಾಮಯ್ಯ ಅವರು ಮಾಡಿದ ಎಸ್‌ಸಿಎಸ್‌ಪಿ–ಟಿಎಸ್‌ಪಿ ಕಾಯ್ದೆ ಪ್ರಕಾರ, ಹಣ ವರ್ಗಾಯಿಸುವುದು ಅಥವಾ ಅನ್ಯ ಉದ್ದೇಶಕ್ಕೆ ಬಳಕೆ ಮಾಡುವುದು ಅಪರಾಧ. ಹಾಗಿದ್ದರೆ ಗ್ಯಾರಂಟಿ ಯೋಜನೆಗೆ ಹಣ ತಿರುಗಿಸಿದ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಹಾಗೂ ಎಚ್‌.ಸಿ.ಮಹದೇವಪ್ಪ ಅವರನ್ನು ಈ ಪ್ರಕರಣದಲ್ಲಿ ಮೊದಲ ಮೂವರು ಆರೋಪಿಗಳ ಸ್ಥಾನದಲ್ಲಿ ಕೂರಿಸಬೇಕಲ್ಲವೇ?

ಎಸ್‌ಸಿಎಸ್‌ಪಿ ಟಿಎಸ್‌ಪಿ ಹಣ ದುರ್ಬಳಕೆ ಖಂಡಿಸಿ ಬೆಂಗಳೂರಿನಲ್ಲಿ ನಡೆದ ಧರಣಿ ಸತ್ಯಾಗ್ರಹ ಸಂಗ್ರಹ ಚಿತ್ರ

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

21 ಫೆಬ್ರುವರಿ 2026 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಚತುರ್ಥಿ ಗಂ. 13-01 ನಕ್ಷತ್ರ: ರೇವತಿ ಗಂ. 19-07 ಯೋಗ: ಶುಭ ಗಂ. 15-51 ಕರಣ: ವಿಷ್ಟಿ ಗಂ. 13-01 ಕುಂಭ ಮಾಸದ 09 ನೇ ದಿನ. ಮಳೆ ನಕ್ಷತ್ರ : ಶತಭಿಷ 1 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 - 10-30, ಸೂರ್ಯೋದಯ : 06-54 ಸೂರ್ಯಾಸ್ತ : 06-34, ಮುಸ್ಲಿಂ ದಿನಾಂಕ : 3 ರಂಜಾನ್, ಅದೃಷ್ಟ ಸಂಖ್ಯೆ : 8, 3

ಮೇಷ: ಕೆಲಸ-ಕಾರ್ಯವನ್ನು ಜಾಣ್ಮೆಯಿಂದ ಸೂಕ್ಷ್ಮವಾಗಿ ನಿರ್ವಹಿಸುವಂಥ ಬುದ್ಧಿವಂತಿಕೆ ತೋರುವಿರಿ. ಕಣ್ಣಿನ ದೃಷ್ಟಿಗೆ ಸಂಬಂಧಿಸಿದಂತೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು ಶಸ್ತ್ರ ಚಿಕಿತ್ಸೆಯನ್ನು ತಪ್ಪಿಸಲಿದೆ.

ವೃಷಭ: ಗೃಹದಲ್ಲಿ ಹೊಂದಾಣಿಕೆ ಕೊರತೆಯಿಂದ ಭಿನ್ನಾಭಿಪ್ರಾಯ ಮೂಡಿಬಂದು ದುಗುಡುತನ ಹೆಚ್ಚಾಗಲಿದೆ. ಹೊಸತನ್ನು ಸಾಧಿಸುವ ಪ್ರಚೋದನೆ ಮತ್ತು ವಿಭಿನ್ನ ವಿಷಯಗಳು ಗಮನ ಸೆಳೆಯಲಿವೆ.

ಮಿಥುನ: ಫಲಕಾರಿ ಯೋಚನಾಲಹರಿಗಳನ್ನು ಕಂಡ ವ್ಯವಹಾರದ ಪಾಲುದಾರರು ಮಾತಿನಂತೆಯೇ ನಡೆಯುವರು. ಕಾರ್ಯಸಾಧನೆಗೆ ರಾಜಕೀಯ ವ್ಯಕ್ತಿಗಳೊಂದಿಗೆ ಒಡನಾಟ ಬೆಳೆಸಿಕೊಳ್ಳಬೇಕಾದ ಸನ್ನಿವೇಶ ಎದುರಾಗುತ್ತದೆ.

ಕರ್ಕಾಟಕ: ತಂದೆ ಹೇಳುವ ವಿಚಾರಗಳನ್ನು ಸಂಪೂರ್ಣವಾಗಿ ಕೇಳಿಸಿಕೊಳ್ಳದೇ ಅಪಾರ್ಥವಾಗಿ ಅರ್ಥೈಸಿಕೊಳ್ಳುವುದರಿಂದ ಘರ್ಷಣೆಗಳಾಗಬಹುದು. ಅತಿಯಾದ ಆಲಸ್ಯತನ ಸರ್ವತೋಮುಖ ಏಳಿಗೆಗೆ ಹಾನಿ ಉಂಟುಮಾಡಲಿದೆ.

ಸಿಂಹ: ದುರ್ಬುದ್ಧಿ ಹೊಂದಿರುವ ಜನರ ಸಹವಾಸದಿಂದ ದೂರವಿರುವ ಬಗ್ಗೆ ಪ್ರಯತ್ನವಿರಲಿ. ಸಂಶೋಧಕರಿಗೆ ಕಾರ್ಯ ಪ್ರವೃತ್ತಿಯಲ್ಲಿ ದೊಡ್ಡಮಟ್ಟದಲ್ಲಿ ವಸ್ತು ನಷ್ಟ ಆಗಬಹುದು ಅಥವಾ ಸಂಶೋಧನೆಯಲ್ಲಿ ಹಿನ್ನಡೆಯಾಗುತ್ತದೆ.

ಕನ್ಯಾ: ಕಾರ್ಯದಲ್ಲಿ ಕ್ರಿಯಾಶೀಲರಾಗಿ. ನಡೆನುಡಿ ಉತ್ತಮವಾಗಿದ್ದ-ರೆ ಪ್ರತಿಫಲ ಆಕರ್ಷಕವಾಗಿರಲಿದೆ. ರಿಯಲ್ ಎಸ್ಟೇಟ್ ವ್ಯವಹಾರಗಳ ಸಮಸ್ಯೆಯನ್ನು ನಿವಾರಿಸಿಕೊಂಡು, ವರಮಾನವನ್ನೂ ಹೆಚ್ಚಿಸಿಕೊಳ್ಳುವಿರಿ.

ತುಲಾ: ಕೊಟ್ಟ ಮಾತನ್ನು ಅನಿವಾರ್ಯವಾಗಿ ಕಳೆದುಕೊಳ್ಳಬೇಕಾದಂತಹ ಪರಿಸ್ಥಿತಿ ಎದುರಾಗಬಹುದು. ಅನಾಥ ಹುಡುಗನೊಬ್ಬನ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವ ಯೋಚನೆಯನ್ನು ಮಾಡುವಿರಿ.

ವೃಶ್ಚಿಕ: ಕೆಲಸದಲ್ಲಿ ತೊಡಕು ತಾಪತ್ರಯ ಉಂಟುಮಾಡುವ ಶತ್ರುಗಳ ಪ್ರಯತ್ನ ವಿಫಲವಾಗುವುದು. ನಿರ್ದಾಕ್ಷಿಣ್ಯ ಕಾರ್ಯ ವೈಖರಿಯಿಂದ ಅಧಿಕಾರಿಗಳಿಗೂ ನಿಮಗೂ ಸಂಪರ್ಕ ದೂರಾಗುವಂತಾಗಲಿದೆ.

ಧನು: ಹಣದ ವಿಚಾರದಲ್ಲಿ ಖರ್ಚು-ವೆಚ್ಚಗಳ ಬಗ್ಗೆ ಜಾಗ್ರತೆ ಇರಲಿ. ಆರ್ಥಿಕ ಸ್ಥಿತಿಯು ಕೊಂಚ ಸುಧಾರಿಸಲಿದೆ. ಎಲ್ಲಾ ದಾರಿಗಳು ಸುಗಮ ಎನಿಸಿ ಎಲ್ಲಾ ಕಷ್ಟ ನಷ್ಟಗಳು ನಿವಾರಣೆಯಾಗಲಿವೆ.

ಮಕರ: ಮಗನಿಗೆ ಸದಸ್ಯತ್ವದ ಸಂಸ್ಥೆಯಿಂದ ವಿದೇಶದಲ್ಲಿ ವಿದ್ಯಾಭ್ಯಾಸಕ್ಕೆ ನೆರವು ಸಿಗಲಿದೆ. ಹಣಕಾಸಿನ ವಿಷಯದಲ್ಲಿ ಜಾಗರೂಕತೆ ವಹಿಸಿ. ಅನುಭವದಿಂದ ಆತ್ಮಾಭಿಮಾನ ವೃದ್ಧಿಯಾಗಲಿದೆ.

ಕುಂಭ: ಸಣ್ಣ ಉದ್ಯಮಿಗಳಿಗೆ ಹೆಚ್ಚು ವ್ಯಾಪಾರ ಇರಲಿದೆ. ಕೆಲಸಗಾರರ ಸಹಕಾರ ಸಿಗುವುದು. ಅಧಿಕ ರೀತಿಯ ಖರ್ಚು-ವೆಚ್ಚಗಳು ಬಂದರೂ ಉಳಿತಾಯಕ್ಕೆ ಕೊರತೆ ಕಾಣುವುದಿಲ್ಲ. ಆರೋಗ್ಯದಲ್ಲಿ ಸುಧಾರಣೆ ಕಾಣುವುದು.

ಮೀನ: ಅಭಿವೃದ್ಧಿಗೆ ಬೇಕಾದ ಅದ್ಭುತ ಅವಕಾಶ ದೇವರ ಆಶೀರ್ವಾದದಿಂದ ಒದಗಿ ಬರಲಿದೆ. ಪದವಿ ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಪರಿಶ್ರಮ ಪಡಬೇಕಾಗುತ್ತ-ದೆ. ಎಲೆಕ್ಟ್ರಾನಿಕ್ ಉಪಕರಣಗಳ ಮೇಲೆ ಬಂಡವಾಳ ಹೂಡಬಹುದು.

ಪದಬಂಧ 6322

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನಿಶ್ಚಿತವಾದ ಉದ್ದೇಶ (4)
3.ಅತೀಂದ್ರಿಯವಾದ ಅನುಭವ (4)
5.ಕೊನೆಗೆ ಮುಖ ತೋರಿಸಿದ ಕಪಿ! (4)
7.ನಿರಂತರವಾದದು ಎನ್ನುವುದನ್ನು ಹೀಗೂ ಹೇಳಬಹುದು (4)
9.ಬೇರೆ ಬೇರೆ ದೇಶಗಳಿಗೆ ಪರಸ್ಪರ ಸಂಬಂಧಿಸಿದ್ದು (5)
12.ದಣಿವಿಗೊಂದು ಪರ್ಯಾಯ ಪದ (4)
13.ನಿಸ್ಸಾರವಾದುದು ಇಲ್ಲಿದೆ (4)
15.ಖಾಲಿಯಾದ ಕೈ (4)
16.ಅನಿರೀಕ್ಷಿತವಾಗಿ ತಗಲಿದ ಪೆಟ್ಟು (4)

ಮೇಲಿಂದ ಕೆಳಕ್ಕೆ
1.ನಿರ್ಣಯ ಅಥವಾ ಠರಾವು (4)
2.ವಸ್ತುಗಳನ್ನು ಸಂಗ್ರಹಿಸುವ ಮಳಿಗೆ (3)
4.ವರಾಂಡದಲ್ಲಿ ಮಾಡಿರುವ ಒತ್ತಾಯ! (3)
6.ಉಚಿತವೆಂದರೂ ಇದು ನಿಶ್ಚಿತ! (3)
8.ಗೆಲುವು ಈ ರೀತಿ ಬಂದಿದೆ (3)
9.ಬೆರಳು ಇಲ್ಲಿದೆ (3)
10.ಕರವನ್ನು ಕೊನೆಗಿಟ್ಟು ಸಿಡಿಸಿದ ತುಂತುರು (3)
11.ಮಂದಿಯ ಒಳಿತು (4)
12.ಕೋಟೆಯ ಮೇಲುಭಾಗ (3)
14.ಸರಸದ ಮಾತುಕತೆ (3)



6321ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಮತ್ತೇಭ 4.ವಾಸನೆ
5.ಅಂಗಾರಕ 6.ವಾಚ್ಯಾತೀತ
7.ನರ 9.ಗವಿ
13.ಮನ್ವಂತರ 14.ಅಪವ್ಯಯ
15.ವಂಚನೆ 16.ಮಹಂತ

ಮೇಲಿಂದ ಕೆಳಕ್ಕೆ:
1.ಜವಾಹಿರಿ 2.ಮನೆವಾಳ್ತನ
3.ಅರಮನೆ 5.ಅಂತರಂಗ
8.ರಸಮಯ 10.ವಿಚಾರವಂತ
11.ಸಭಾಪತಿ 12.ಕುಂಟುನೆಪ

ಸುಡೊಕು 6706

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		7	1		2		6	
	1			3		8		9
2		4				1		7
	6	8		5			4	1
						7	9	
9	4			2				
3	7			8		9		5
		6						
	8		3		5	6		2

6705 ಸುಡೊಕು

4	5	7	3	6	8	9	1	2
9	8	1	5	7	2	3	4	6
6	3	2	9	4	1	7	5	8
3	7	4	2	8	9	1	6	5
5	2	9	4	1	6	8	3	7
1	6	8	7	3	5	2	9	4
2	9	3	8	5	4	6	7	1
7	4	6	1	2	3	5	8	9
8	1	5	6	9	7	4	2	3

‘ಮಾಧ್ಯಮಕ್ಕೆ ಸಕಾರಣ ನಿರ್ಬಂಧ’

ಸಿದ್ದರಾಮಯ್ಯ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸೌಧದಲ್ಲಿ ಮಾಧ್ಯಮಗಳಿಗೆ ನಿರ್ಬಂಧ ವಿಧಿಸುವಂತೆ ನಾನೇ ಆದೇಶ ಮಾಡಿಸಿದ್ದೇನೆ. ಈಗ ಮಾಡಿರುವುದು ಸಕಾರಣ ನಿರ್ಬಂಧವೇ ವಿನಾ ಸಂಪೂರ್ಣ ನಿರ್ಬಂಧವಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸೌಧದ ಆವರಣದಲ್ಲಿ ಮಾಧ್ಯಮಗಳ ಮೇಲೆ ನಿರ್ಬಂಧ ವಿಧಿಸಿರುವುದನ್ನು ತೆರವು ಮಾಡುವಂತೆ ಮನವಿ ಸಲ್ಲಿಸಿದ ಪತ್ರಕರ್ತರಿಗೆ ಸಿದ್ದರಾಮಯ್ಯ ಅವರು ಹೀಗೆ ಸ್ಪಷ್ಟನೆ ನೀಡಿದರು.

‘ಸ್ವಾತಂತ್ರ್ಯ ಸ್ವೇಚ್ಛೆ ಆಗಬಾರದು, ಕಂಡ ಕಂಡಲ್ಲಿ ಬಂದು ತೊಂದರೆ ಕೊಡುತ್ತಾ ಇದ್ದೀರಿ. ನಾವು ಕರೆದಾಗ ಬನ್ನಿ ಸಾಕು. ವಿಧಾನಸೌಧಕ್ಕೆ ಬರುವುದು ಬೇಡ ಎಂದು ನಾನು ಹೇಳುವುದಿಲ್ಲ. ಗಾಂಧಿ ಪ್ರತಿಮೆ ಬಳಿ ಚಳವಳಿ ಮಾಡಿದ್ದೀರಿ, ಮಾಡಿ. ಆದರೆ, ಆದೇಶ ಹಿಂದೆ ಪಡೆಯುವುದಿಲ್ಲ. ನಿಮ್ಮ ಮನವಿ ಪರಿಶೀಲಿಸುತ್ತೇನೆ’ ಎಂದು ಹೇಳಿದರು.

ಪ್ರತಿಭಟನೆ: ಮಾಧ್ಯಮಗಳಿಗೆ ನಿರ್ಬಂಧ ವಿಧಿಸಿರುವ ಸರ್ಕಾರದ ನಿರ್ಧಾರ ವಿರೋಧಿಸಿ ಪತ್ರಕರ್ತರು ಗಾಂಧಿ ಪ್ರತಿಮೆ ಎದುರು ಶುಕ್ರವಾರ ಕಪ್ಪು ಬಟ್ಟೆ, ಕಪ್ಪು ಮಾಸ್ಕ್ ಧರಿಸಿ ಸಾಂಕೇತಿಕ ಪ್ರತಿಭಟನೆ ನಡೆಸಿದರು.

ವಿಧಾನಸೌಧದ 313, 334 ಕೊಠಡಿ ಸೇರಿ ಕಾರಿಡಾರ್‌ಗಳಲ್ಲಿ ಮಾಧ್ಯಮ ಪ್ರತಿನಿಧಿಗಳು ಓಡಾಡುವುದರಿಂದ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಗೃಹ ಸಚಿವರು ಸೇರಿ ಗಣ್ಯರು ಹಾಗೂ ಶಾಸಕರ ಭದ್ರತೆಗೆ ತೊಂದರೆಯಾಗುತ್ತದೆ. ಆದ್ದರಿಂದ, ಮಾಧ್ಯಮ ಪ್ರತಿನಿಧಿಗಳು ಕೆಂಗಲ್ ಗೇಟ್ ಬಳಿ ಮಾತ್ರ ಹೇಳಿಕೆಗಳನ್ನು ಪಡೆಯುವಂತೆ ನಿರ್ಬಂಧ ವಿಧಿಸಬೇಕು ವಿಧಾನಸೌಧ ಭದ್ರತಾ ವಿಭಾಗದ ಡಿಸಿಪಿ ಪ್ರಸ್ತಾವ ಸಲ್ಲಿಸಿದ್ದರು. ಅದನ್ನು ಉಲ್ಲೇಖಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ನಿರ್ಬಂಧದ ಆದೇಶ ಹೊರಡಿಸಿತ್ತು.

ಸರ್ಕಾರದ ನಿರ್ಧಾರವನ್ನು ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಖಂಡಿಸಿದ್ದಾರೆ.

ನಿಯಮ ಉಲ್ಲಂಘನೆ: 28 ಸಂಸ್ಥೆಗಳಿಗೆ ದಂಡ

ಕೆಪಿಎಂಇ ಪ್ರಾಧಿಕಾರದ ಸಭೆ: ₹9.3 ಲಕ್ಷ ಪಾವತಿಸಲು ನಗರ ಜಿಲ್ಲಾಧಿಕಾರಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆಯ (ಕೆಪಿಎಂಇ) ನಿಯಮಗಳ ಉಲ್ಲಂಘನೆ ಕಾರಣ ಆಸ್ಪತ್ರೆಗಳು ಸೇರಿ 28 ವೈದ್ಯಕೀಯ ಸಂಸ್ಥೆಗಳಿಗೆ ಒಟ್ಟು ₹9.35 ಲಕ್ಷ ದಂಡ ವಿಧಿಸುವಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ಆದೇಶಿಸಿದ್ದಾರೆ.

ಕೆಪಿಎಂಇ ನೋಂದಣಿ ಮತ್ತು ಕುಂದು ಕೊರತೆ ಪ್ರಾಧಿಕಾರದ ಸಭೆಯನ್ನು ಅವರು ನಗರದಲ್ಲಿ ಶುಕ್ರವಾರ ನಡೆಸಿದರು. ಕೆಪಿಎಂಇ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ಆರೋಗ್ಯಾಧಿಕಾರಿಗಳು 65 ಪ್ರಕರಣಗಳ ಬಗ್ಗೆ ವಿವರ ಸಲ್ಲಿಸಿದ್ದರು. ಇವುಗಳಲ್ಲಿ ಬ್ಯಾಟರಾಯನ ಪುರದ ಆರ್‌ಎಂಎಸ್ ಲೇಔಟ್‌ನಲ್ಲಿರುವ ಆಸ್ತಾ ಡಯಾಗ್ನಾಸ್ಟಿಕ್ ಸೆಂಟರ್ ವಿರುದ್ಧ ಎಫ್‌ಐಆರ್ ದಾಖಲಿಸಲು ಜಿಲ್ಲಾಧಿಕಾರಿ ಸೂಚಿಸಿದ್ದಾರೆ.

ನಾಲ್ಕು ಪ್ರಕರಣವನ್ನು ಕರ್ನಾಟಕ ವೈದ್ಯಕೀಯ ಪರಿಷತ್ತಿಗೆ ವರ್ಗಾಯಿಸಲಾಗಿದೆ. ಇನ್ನೂ ನಾಲ್ಕು ಪ್ರಕರಣಗಳನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಆದೇಶಿಸಿದ್ದಾರೆ.

ದಂಡ ವಿಧಿಸಲ್ಪಟ್ಟ ಸಂಸ್ಥೆಗಳು: ಕೊಡಿಗೆ ಹಳ್ಳಿಯ ಮಂಗಳ ಮಲ್ಟಿಸ್ಪೇಷಾಲಿಟಿ ಕ್ಲಿನಿಕ್, ಕೆ.ಆರ್.ಪುರದ ದೇವಸಂದ್ರ ಮುಖ್ಯರಸ್ತೆಯಲ್ಲಿರುವ ವಿಶ್ವ ಹೆಲ್ತ್‌ಕೇರ್ ಸೆಂಟರ್, ರಾಜಾಜಿನಗರದ ಅಂಚೆಕಚೇರಿ ಮುಂಭಾಗ ಇರುವ ಆಯುಷ್ ಹೆಲ್ತ್ ಸೆಂಟರ್, ಕಮ್ಮನಹಳ್ಳಿ ಮುಖ್ಯರಸ್ತೆಯಲ್ಲಿರುವ ಲೈಫ್ ಕೇರ್ ಹೋಮಿಯೊ ಫಾರ್ಮಾ, ಸೌಂದರ್ಯ ಲೇಔಟ್‌ನಲ್ಲಿ ಹೆಸರಘಟ್ಟ ಮುಖ್ಯರಸ್ತೆಯಲ್ಲಿರುವ ಇಬ್ಬನಿ ಸಿಲ್ಕು ಕಾಸ್ಮೆಟಾಲಜಿ, ಕೆ.ಆರ್.ಪುರದ ಗಾಯತ್ರಿ ಲೇಔಟ್‌ನಲ್ಲಿರುವ ಶಂಕರ್ ಕ್ಲಿನಿಕ್, ಲಿಂಗದಿರನಹಳ್ಳಿಯ ನಾಲ್ಕನೇ ಬ್ಲಾಕ್‌ನಲ್ಲಿರುವ ಎಸ್‌ಎಲ್‌ವಿ ಕ್ಲಿನಿಕ್, ವಸಂತನಗರದ ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿರುವ ಫೋರ್ಟಿಸ್ ಆಸ್ಪತ್ರೆ ಹಾಗೂ ಮಹದೇವಪುರದ ನಾರಾಯಣಪುರ ಮುಖ್ಯರಸ್ತೆಯಲ್ಲಿರುವ ಆರ್ಥೋಸ್ಕ್ವೇರ್ ಮಲ್ಟಿಸ್ಪೆಷಾಲಿಟಿ ಡೆಂಟಲ್ ಕ್ಲಿನಿಕ್‌ಗೆ ತಲಾ ₹ 50 ಸಾವಿರ ದಂಡ ವಿಧಿಸಲಾಗಿದೆ.

ಉಲ್ಲಾಳು ಮುಖ್ಯರಸ್ತೆಯಲ್ಲಿರುವ ನಿಹಾಸ್ವಿ ಪಾಲಿ ಕ್ಲಿನಿಕ್ ಆ್ಯಂಡ್ ಮೆಡಿಕಲ್, ದೊಡ್ಡಬ್ಯಾಲಕೆರೆ ಗ್ರಾಮದಲ್ಲಿರುವ ಸಾಯಿರಾಂ ಕ್ಲಿನಿಕ್, ಮಾಗಡಿ ಮುಖ್ಯರಸ್ತೆಯ ಗೊಲ್ಲರಹಟ್ಟಿಯಲ್ಲಿರುವ ವಾಸು ಕ್ಲಿನಿಕ್, ಕಮ್ಮನಹಳ್ಳಿಯಲ್ಲಿರುವ ಆರ್.ಕೆ. ಆಸ್ಪತ್ರೆ, ಚನ್ನೇನಹಳ್ಳಿಯಲ್ಲಿರುವ ಶರಣು ಕ್ಲಿನಿಕ್, ಲಗ್ಗೆರೆಯಲ್ಲಿರುವ ಮಾರುತಿ ಕ್ಲಿನಿಕ್, ಸಹಕಾರ ನಗರದಲ್ಲಿರುವ ಸುಖಿಭವ ಕ್ಲಿನಿಕ್, ಹುರಳಿ ಚಿಕ್ಕನಹಳ್ಳಿಯಲ್ಲಿರುವ ಲಕ್ಷ್ಮಿ ವೆಂಕಟೇಶ್ವರ ಪಾಲಿ ಕ್ಲಿನಿಕ್, ಹೆಗ್ಗನಹಳ್ಳಿ ಕ್ರಾಸ್ ಮುಖ್ಯರಸ್ತೆಯಲ್ಲಿರುವ ಸಿದ್ಧಿ ವಿನಾಯಕ ಕ್ಲಿನಿಕ್, ಯಲಹಂಕದ ಅಟ್ಟೂರು ಮುಖ್ಯರಸ್ತೆಯಲ್ಲಿರುವ ಪಬ್ಲಿಕ್ ಹೆಲ್ತ್ ಡಯಾಗ್ನಾಸ್ಟಿಕ್ಸ್‌ಗೆ ತಲಾ ₹ 25 ಸಾವಿರ ದಂಡ ಹಾಕಲಾಗಿದೆ.

ಮಾದನಾಯಕನಹಳ್ಳಿಯಲ್ಲಿರುವ ಪಬ್ಲಿಕ್ಸ್ ಹೆಲ್ತ್‌ಕೇರ್, ಮೈಸೂರು ರಸ್ತೆಯ ವೈಷ್ಣವಿ ನಗರದಲ್ಲಿರುವ ರಿಕವರಿಂಗ್ ಕ್ಯಾಟ್ಸ್, ಕಮ್ಮನಹಳ್ಳಿ ಮುಖ್ಯರಸ್ತೆಯಲ್ಲಿರುವ ಉಷಾ ಆಸ್ಪತ್ರೆ, ಅಂದ್ರಳ್ಳಿಯ ಎಬಿಎನ್ ಕನ್ವೆನ್ಷನ್ ಹಾಲ್ ಎದುರು ಇರುವ ಎಸ್‌ಎಸ್‌ಎಂ ಆಸ್ಪತ್ರೆ, ಯಲಹಂಕದಲ್ಲಿರುವ ಎನ್‌ಡಿಆರ್ ಆಸ್ಪತ್ರೆ ಹಾಗೂ ವಿದ್ಯಾರಣ್ಯಪುರದಲ್ಲಿರುವ ಡಾ.ರೆಡ್ಡಿ ಪಾಲಿಕ್ಲಿನಿಕ್‌ಗೆ ತಲಾ ₹ 25 ಸಾವಿರ ದಂಡ ವಿಧಿಸಲಾಗಿದೆ.

ಸುಂಕದಕಟ್ಟೆಯಲ್ಲಿರುವ ಗೋಲ್ಡನ್ ಲೈಫ್ ಟ್ರಸ್ಟ್‌ಗೆ ಕೆಪಿಎಂಇ ನಿಯಮಗಳ ಉಲ್ಲಂಘನೆ ಕಾರಣ ₹10 ಸಾವಿರ ದಂಡ ಹಾಕಲಾಗಿದೆ ಎಂದು ಬೆಂಗಳೂರು ನಗರ ಜಿಲ್ಲಾ ಆರೋಗ್ಯಾಧಿಕಾರಿ ತಿಳಿಸಿದ್ದಾರೆ.

ಮುಖ್ಯಾಂಶಗಳು

- ವೈದ್ಯಕೀಯ ಸಂಸ್ಥೆಗಳ ವಿರುದ್ಧ ಕ್ರಮಕ್ಕೆ ಆದೇಶ
- ನಾಲ್ಕು ಪ್ರಕರಣ ವೈದ್ಯಕೀಯ ಪರಿಷತ್ತಿಗೆ ವರ್ಗಾವಣೆ

ಹಳಿ ತಪ್ಪಿದ್ದ ಮೆಟ್ರೊ: ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗದ ಮೆಟ್ರೊ ರೈಲು ಹೆಬ್ಬಗೋಡಿ ಡಿಪೊದಲ್ಲಿ ಒಂದು ತಿಂಗಳ ಹಿಂದೆ ಹಳಿ ತಪ್ಪಿದ್ದು, ಈ ಬಗ್ಗೆ ವಿಚಾರಣೆ ನಡೆಸಲು ಶೋಧನಾ ಸಮಿತಿ ರಚಿಸಲಾಗಿದೆ.

ಹಳದಿ ಮಾರ್ಗಕ್ಕೆ ಚಾಲಕರಹಿತ ಎಂಜಿನ್ ಹೊಂದಿರುವ ಎಂಟು ರೈಲುಗಳು ಬಂದಿದ್ದು, ಅದರಲ್ಲಿ ಮೂರನೇ ರೈಲು ಜನವರಿ 15ರಂದು ಹೆಬ್ಬಗೋಡಿ ಡಿಪೊದಿಂದ ಬೊಮ್ಮಸಂದ್ರ ಮೆಟ್ರೊ ನಿಲ್ದಾಣದ ಕಡೆಗೆ ಹೊರಡುವ ವೇಳೆ ಹಳಿ ತಪ್ಪಿದೆ. ಇದರಿಂದ ಟ್ರ್ಯಾಕ್ ಸ್ಲೀಪರ್ (ಹಳಿ ಆಧಾರ), ಟ್ರ್ಯಾಕ್ಷನ್ ಹಾಗೂ ಬೋಗಿಗೆ ಹಾನಿಯಾಗಿದೆ.

ಸಿಬ್ಬಂದಿಯ ಅಜಾಗರೂಕತೆ, ಸಿಗ್ನಲಿಂಗ್ ಸಮಸ್ಯೆ, ಇತರೆ ತಾಂತ್ರಿಕ ದೋಷ ಸಹಿತ ಯಾವ ಕಾರಣದಿಂದ ಮೆಟ್ರೊ ರೈಲು ಹಳಿ ತಪ್ಪಿದೆ ಎಂದು ಕಂಡುಕೊಳ್ಳಲು ಶೋಧನಾ ಸಮಿತಿ ರಚಿಸಲಾಗಿದೆ. ರೈಲು ಆಪರೇಟರ್, ಡಿಪೊ ನಿಯಂತ್ರಕರು, ಸಿಬ್ಬಂದಿ ಸಹಿತ ಸಂಬಂಧಪಟ್ಟವರನ್ನು ಸಮಿತಿ ವಿಚಾರಣೆ ನಡೆಸಿದೆ. ವರದಿ ಸಲ್ಲಿಕೆಯಾದ ಬಳಿಕ ಮುಂದಿನ ಕ್ರಮಗಳು ಜರುಗಲಿವೆ ಎಂದು ಬಿಎಂಆರ್‌ಸಿಎಲ್ ಮೂಲಗಳು ತಿಳಿಸಿವೆ.



ಹೆಬ್ಬಗೋಡಿ ಡಿಪೊದಲ್ಲಿ ಹಳಿ ತಪ್ಪಿದ್ದ ಮೆಟ್ರೊ ರೈಲು

‘ಮೆಟ್ರೊದಲ್ಲಿ ಮದ್ಯಸಾಗಾಟ: ಹಾಸ್ಯಾಸ್ಪದ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊದಲ್ಲಿ ಮದ್ಯ ಸಾಗಾಟಕ್ಕೆ ಅವಕಾಶ ನೀಡಲು ಬಿಎಂಆರ್‌ಸಿಎಲ್ ಚಿಂತನೆ ನಡೆಸಿರುವುದು ಹಾಸ್ಯಾಸ್ಪದ ಎಂದು ಮೆಟ್ರೊ ಪ್ರಯಾಣಿಕರ ವೇದಿಕೆ ಟೀಕಿಸಿದೆ.

ಮೆಟ್ರೊದಲ್ಲಿ ಪ್ರಯಾಣಿಸುವವರ ಸಂಖ್ಯೆಯನ್ನು ಹೆಚ್ಚಿಸಲು ಪ್ರಯಾಣ ದರ ಇಳಿಸಬೇಕು. ಅಗತ್ಯಕ್ಕೆ ಅನುಗುಣವಾಗಿ ರೈಲುಗಳನ್ನು ಮತ್ತು ಟ್ರಿಪ್‌ಗಳನ್ನು ಹೆಚ್ಚು ಮಾಡಬೇಕು. ಮೆಟ್ರೊ ನಿಲ್ದಾಣಗಳಲ್ಲಿ ಉಚಿತ ಅಥವಾ ರಿಯಾಯಿತಿ ದರದಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಬೇಕು. ಮೆಟ್ರೊ ಫೀಡರ್ ಬಿಎಂಟಿಸಿ ಬಸ್‌ಗಳನ್ನು ನಿಗದಿತವಾಗಿ ಒದಗಿಸಬೇಕು. ಹೊಸ ಮಾರ್ಗಗಳನ್ನು ತ್ವರಿತವಾಗಿ ಆರಂಭಿಸಬೇಕು. ಆಗ ಆದಾಯ ಹೆಚ್ಚಳವಾಗಲಿದೆ. ಮದ್ಯ ಸಾಗಾಟಕ್ಕೆ ಅವಕಾಶ ನೀಡುವುದು ಸರಿಯಾದ ಮಾರ್ಗವಲ್ಲ ಎಂದು ವೇದಿಕೆಯ ಸಂಚಾಲಕರಾದ ಗೌರಮ್ಮ ಮತ್ತು ರವಿಚಂದ್ರನ್ ಹೇಳಿದ್ದಾರೆ.

ಸೇಂಟ್ ಜೋಸೆಫ್ ನೀರಥಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೇಂಟ್ ಜೋಸೆಫ್ ವಿಶ್ವವಿದ್ಯಾಲಯವು ಫೆ.22ರಂದು ಬೆಳಿಗ್ಗೆ 5ಕ್ಕೆ ನೀರಥಾನ್–26 ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯುವ 9ನೇ ಆವೃತ್ತಿಯ ಕಾರ್ಯಕ್ರಮವನ್ನು ಅಲಯನ್ಸ್ ಇಂಡಸ್ಟ್ರೀಸ್, ವನ್ಯಜೀವಿ ಹಾಗೂ ಸಂರಕ್ಷಣಾ ಕ್ಲಬ್ ಸಹಯೋಗದಲ್ಲಿ ಆಯೋಜಿಸಲಾಗುತ್ತಿದೆ.

ಅಂದು ಬೆಳಿಗ್ಗೆ 5.30ರಿಂದ 5, 10 ಕಿ.ಮೀ, 5.50ಕ್ಕೆ 2 ಕಿ.ಮೀ ಓಟ ಪ್ರಾರಂಭವಾಗಲಿದೆ. ಲೇಕ್ ಮ್ಯಾನ್ ಆಫ್ ಇಂಡಿಯಾ ಖ್ಯಾತಿಯ ಆನಂದ ಮಲ್ಲಿಗವಾಡ್ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು. ಅಲಯನ್ಸ್ ಹೌಸಿಂಗ್‌ನ ಆಸೀಮ್ ಜಾಹೀರ್ ಅವರು ಅತಿಥಿಯಾಗಿ ಭಾಗವಹಿಸಲಿದ್ದಾರೆ.

ಆಸಕ್ತರು neerathon.in ವೆಬ್‌ಸೈಟ್ ಮೂಲಕ ಹೆಸರು ನೊಂದಾಯಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

25ಕ್ಕೆ ವಿಚಾರ ಸಂಕಿರಣ

ಬೆಂಗಳೂರು: ರಾಜ್ಯ ಸರ್ಕಾರಿ ನಿವೃತ್ತ ನೌಕರರ ಹಾಗೂ ಹಿರಿಯ ನಾಗರಿಕರ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ವಿಚಾರ ಸಂಕಿರಣ ಹಾಗೂ 75 ವರ್ಷ ಮೇಲ್ಪಟ್ಟ ನಿವೃತ್ತ ನೌಕರರಿಗೆ ಮತ್ತು ಕುಟುಂಬ ಪಿಂಚಣಿದಾರರಿಗೆ ಅಭಿನಂದನಾ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಕೇಂದ್ರ ಸಂಘವು ಫೆ.25ರಂದು ಬೆಳಿಗ್ಗೆ 10 ಗಂಟೆಗೆ ಸರ್ಕಾರಿ ನೌಕರರ ಭವನದಲ್ಲಿ ಆಯೋಜಿಸಿದೆ.

ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್ ಉದ್ಘಾಟಿಸಲಿದ್ದಾರೆ. ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ, ಅಂಗವಿಕಲರ, ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ನಿರ್ದೇಶಕ ಅಶೋಕ ಕೆ.ಎ.ಎಸ್., ಬೀದರ್‌ನ ಶಾಹೀನ್ ಗ್ರೂಪ್ ಆಫ್ ವಿದ್ಯಾ ಸಂಸ್ಥೆಯ ಅಧ್ಯಕ್ಷ ಅಬ್ದುಲ್ ಕದೀರ್, ನಿವೃತ್ತ ಎಸ್‌ಪಿ ಬೆಟ್ಟೇಗೌಡ, ಕರ್ನಾಟಕ ಮಾಧ್ಯಮ ಅಕಾಡೆಮಿ ಮಾಜಿ ಅಧ್ಯಕ್ಷ ಸಿದ್ದರಾಜು ಭಾಗವಹಿಸಲಿದ್ದಾರೆ ಎಂದು ಸಂಘದ ಅಧ್ಯಕ್ಷ ಡಾ.ಎಲ್.ಭೈರಪ್ಪ ತಿಳಿಸಿದ್ದಾರೆ.

CEMILAC - DRDO

ಭಾರತ ಸರ್ಕಾರ, ರಕ್ಷಣಾ ಸಚಿವಾಲಯ
ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ)
ಮಿಲಿಟರಿ ಏರ್‌ವರ್ದಿನೆಸ್ & ಸರ್ಟಿಫಿಕೇಶನ್ ಕೇಂದ್ರ (ಸೆಮಿಲ್ಯಾಕ್)
ಮಾರತಹಳ್ಳಿ ಕಾಲೋನಿ, ಬೆಂಗಳೂರು–560037

ಉಲ್ಲೇಖ/ಜಾಹೀರಾತು: ಸೆಮಿಲ್ಯಾಕ್/5925/ಎಚ್‌ಆರ್‌ಡಿ/ಆರ್‌ಎಫ್ 27 ಜನವರಿ 2026

ಸೆಮಿಲ್ಯಾಕ್, ಬೆಂಗಳೂರು ಇವರಲ್ಲಿ ಜೂನಿಯರ್ ರಿಸರ್ಚ್ ಫೆಲೋಶಿಪ್ (ಜೆಆರ್‌ಎಫ್) ಹುದ್ದೆಗಾಗಿ ಅರ್ಜಿ

ಮಿಲಿಟರಿ ಏರ್‌ವರ್ದಿನೆಸ್ & ಸರ್ಟಿಫಿಕೇಶನ್ ಕೇಂದ್ರ (ಸೆಮಿಲ್ಯಾಕ್) ಎಂಬ ಸಂಸ್ಥೆಯು ಡಿಆರ್‌ಡಿಒ ಅಡಿಯಲ್ಲಿ ನಿಯಂತ್ರಿತ ಒಂದು ಕೇಂದ್ರವಾಗಿದ್ದು, ಮಿಲಿಟರಿ ಏರ್‌ಕ್ರಾಫ್ಟ್, ಹೆಲಿಕಾಪ್ಟರ್, ಅನ್‌ಆರ್ಮ್ಡ್ ಏರಿಯಲ್ ಸಿಸ್ಟಮ್ಸ್ (ಯುಎಎಸ್), ಏರೋ ಇಂಜಿನ್ಸ್, ಏರ್ ಲಾಂಚ್ಡ್ ವೆಪನ್ಸ್ ಮತ್ತು ಇನ್ನಿತರ ಏರ್‌ಬೋರ್ನ್ ಸ್ಟೋರ್‌ಗಳಿಗೆ ಏರ್‌ವರ್ದಿನೆಸ್ ಸರ್ಟಿಫಿಕೇಶನ್ ನೀಡುವ ಕಾರ್ಯನಿರ್ವಹಿಸುತ್ತದೆ. ಭಾರತದಾದ್ಯಂತ ಸ್ಥಿತಗೊಂಡಿರುವ 18 ಮಿಲಿಟರಿ ಏರ್‌ವರ್ದಿನೆಸ್ ಪ್ರಾದೇಶಿಕ ಕೇಂದ್ರಗಳ (ಆರ್‌ಸಿಎಂಎ) ಮುಖಾಂತರ ಏರ್‌ವರ್ದಿನೆಸ್ ಕಾರ್ಯವನ್ನು ಅನುಷ್ಠಾನಗೊಳಿಸಲಾಗುತ್ತದೆ ಮತ್ತು ಸೆಮಿಲ್ಯಾಕ್ ಸಂಸ್ಥೆಯು ಕಾರ್ಪೊರೇಟ್ ಹೆಡ್‌ಕ್ವಾರ್ಟರ್ಸ್ ಆಗಿ ಕಾರ್ಯನಿರ್ವಹಿಸುತ್ತದೆ.

2. **ಕೆಳಕಂಡ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:**

ಕ್ರ. ಸಂ.	ಫೆಲೋಶಿಪ್ ಮಾದರಿ	ಫೆಲೋಶಿಪ್ ಸಂಖ್ಯೆ	ವಿಷಯ ವಿಭಾಗ	ಕನಿಷ್ಠ ಶೈಕ್ಷಣಿಕ ವಿದ್ಯಾರ್ಹತೆ
1.	ಜೂನಿಯರ್ ರಿಸರ್ಚ್ ಫೆಲೋ	01	ಏರೋನಾಟಿಕಲ್ ಇಂಜಿನಿಯರಿಂಗ್	ಸಂಬಂಧಿತ ವಿಷಯ/ವಿಭಾಗದ ವೃತ್ತಿಪರ ಕೋರ್ಸ್‌ನಲ್ಲಿ (ಬಿ.ಇ/ಬಿ.ಟೆಕ್) ಪ್ರಥಮ ದರ್ಜೆಯಲ್ಲಿ ಗ್ರಾಜುಯೇಟ್ ಪದವಿ ಪಡೆದಿರಬೇಕು ಜೊತೆಗೆ ಗೇಟ್ ಪೂರೈಸಿರಬೇಕು ಅಥವಾ ಸಂಬಂಧಿತ ವಿಷಯ/ವಿಭಾಗದ ವೃತ್ತಿಪರ ಕೋರ್ಸ್‌ನಲ್ಲಿ (ಎಂ.ಇ/ಎಂ.ಟೆಕ್) ಪೋಸ್ಟ್ ಗ್ರಾಜುಯೇಟ್ ಪದವಿ ಪಡೆದಿರಬೇಕು, ಗ್ರಾಜುಯೇಟ್ ಮತ್ತು ಪೋಸ್ಟ್ ಗ್ರಾಜುಯೇಟ್ ಎರಡೂ ಹಂತಗಳಲ್ಲೂ ಪ್ರಥಮ ದರ್ಜೆ ಹೊಂದಿರಬೇಕು.

3. **ಗರಿಷ್ಠ ವಯೋಮಿತಿ:** ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕದ ಮೇರೆಗೆ 28 ವರ್ಷ. ಚಾಲ್ತಿಯಲ್ಲಿರುವ ಸರ್ಕಾರಿ ನಿಯಮಗಳ ಪ್ರಕಾರ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ (ಎನ್‌ಸಿಎಲ್) ಪ್ರವರ್ಗದ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.
4. **ಸಂಭಾವನೆ:** ನಿಯಮಗಳ ಪ್ರಕಾರ ಮಾಸಿಕ ರೂ. 37,000/– ಸ್ಟೈಪಂಡ್ + ಎಚ್‌ಆರ್‌ಎ ಮತ್ತು ವೈದ್ಯಕೀಯ ಸೌಲಭ್ಯಗಳು ಅನ್ವಯಿಸುತ್ತವೆ.
5. **ಅವಧಿ:** ಆರಂಭಿಕವಾಗಿ 02 ವರ್ಷಗಳ ಅವಧಿಗೆ ನೀಡಲಾಗುತ್ತದೆ, ಡಿಆರ್‌ಡಿಒ’ದಲ್ಲಿನ ರಿಸರ್ಚ್ ಫೆಲೋ ಯೋಜನೆಯ ನಿಯಮಗಳ ಪ್ರಕಾರ ಗರಿಷ್ಠ 04 ವರ್ಷಗಳ ಅವಧಿಗೆ ವಿಸ್ತರಿಸಬಹುದಾಗಿರುತ್ತದೆ.
6. ಅಡಕಗೊಳಿಸಲಾಗಿರುವ ನಮೂನೆಯಲ್ಲಿ ಟೈಪ್ ಮಾಡಲಾಗಿರುವ ಅರ್ಜಿಯ ಜೊತೆಗೆ (**www.drdo.gov.in ---> ಕರಿಯರ್ಸ್ ಇಲ್ಲಿ ಲಭ್ಯವಿರುತ್ತದೆ**) ಸ್ವಯಂ ದೃಢೀಕೃತ ಶೈಕ್ಷಣಿಕ ಪ್ರಮಾಣಪತ್ರಗಳು ಮತ್ತು ಅನುಭವ ಪ್ರಮಾಣಪತ್ರವಗಳನ್ನು ಲಗತ್ತಿಸಿ “ದೀ ಚೀಫ್ ಎಕ್ಸಿಕ್ಯೂಟಿವ್ (ಏರ್‌ವರ್ದಿನೆಸ್)” ಇವರ
   ಸೆಂಟರ್ ಫಾರ್ ಮಿಲಿಟರಿ ಏರ್‌ವರ್ದಿನೆಸ್ & ಸರ್ಟಿಫಿಕೇಶನ್ (ಸೆಮಿಲ್ಯಾಕ್), ಡಿಆರ್‌ಡಿಒ, ರಕ್ಷಣಾ ಸಚಿವಾಲಯ, ಮಾರತಹಳ್ಳಿ ಕಾಲೋನಿ ಅಂಚೆ, ಬೆಂಗಳೂರು–560037
   ವಿಳಾಸಕ್ಕೆ, ಸದರಿ ಜಾಹೀರಾತು ಎಂಪ್ಲಾಯ್‌ಮೆಂಟ್ ನ್ಯೂಸ್‌ನಲ್ಲಿ ಪ್ರಕಟಗೊಂಡ ದಿನಾಂಕದಿಂದ 21 ದಿನಗಳೊಳಗೆ ತಲುಪುವಂತೆ ರವಾನಿಸತಕ್ಕದ್ದು. ಅರ್ಜಿಯನ್ನು ಒಳಗೊಂಡಿರುವ ಲಕೋಟೆಯ ಮೇಲೆ ಎಡಭಾಗದ ಮೂಲೆಯಲ್ಲಿ ದಪ್ಪ ಅಕ್ಷರಗಳಲ್ಲಿ “ಜೆಆರ್‌ಎಫ್ ಹುದ್ದೆಗಾಗಿ ಅರ್ಜಿ” ಎಂದು ನಮೂದಿಸತಕ್ಕದ್ದು.
7. ಈಗಾಗಲೇ ಸರ್ಕಾರಿ/ಸಾರ್ವಜನಿಕ ಕ್ಷೇತ್ರ ಅಧೀನಗಳಲ್ಲಿ/ ಸ್ವಾಯುತ್ತ ಅಂಗಸಂಸ್ಥೆಗಳಲ್ಲಿ ಉದ್ಯೋಗ ನಿರ್ವಹಿಸುತ್ತಿರುವ ಅಭ್ಯರ್ಥಿಗಳು, ಸಂದರ್ಶನದ ಸಮಯದಲ್ಲಿ ಎನ್‌ಒಸಿ–ನಿರಾಕ್ಷೇಪಣಾ ಪ್ರಮಾಣಪತ್ರ (ನೋ ಆಬ್ಜೆಕ್ಷನ್ ಸರ್ಟಿಫಿಕೇಟ್) ಹಾಜರುಪಡಿಸಬೇಕು.
8. ಸಂದರ್ಶನದ ಸಮಯದಲ್ಲಿ ಅಭ್ಯರ್ಥಿಗಳು ತಮ್ಮ ಮೂಲ ಪ್ರಮಾಣಪತ್ರಗಳು / ದಾಖಲಾತಿಗಳನ್ನು ಹಾಜರುಪಡಿಸಬೇಕು.
9. ದಯವಿಟ್ಟು ಗಮನದಲ್ಲಿರಲಿ, ಫೆಲೋಶಿಪ್ ಅವಕಾಶ ಲಭಿಸಿದ ಮಾತ್ರಕ್ಕೆ, ಅಭ್ಯರ್ಥಿಗೆ ಡಿಆರ್‌ಡಿಒ ಸಂಸ್ಥೆಯಲ್ಲಿ ಸೇರ್ಪಡೆಗೊಳ್ಳುವ ಹಕ್ಕು ಲಭಿಸಿದಂತಲ್ಲ.
10. ಫೆಲೋಶಿಪ್ ಅವಧಿಯಲ್ಲಿ, ಅಭ್ಯರ್ಥಿಗಳು ಯಾವುದೇ ವಿಶ್ವವಿದ್ಯಾಲಯ/ಸಂಸ್ಥೆಯಲ್ಲಿ ಪಿಎಚ್.ಡಿ ಅಧ್ಯಯನಕ್ಕೆ ನೋಂದಣಿ ಮಾಡಿಕೊಳ್ಳಲು ಅವಕಾಶ ನೀಡಲಾಗುತ್ತದೆ.
11. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ, ಅರ್ಜಿಯಲ್ಲಿ ಉಲ್ಲೇಖಿಸಲಾಗಿರುವ ಕನಿಷ್ಠ ದೂರದ ಅಥವಾ ಪ್ರಯಾಣ ಆರಂಭಿಸಿದ ಸ್ಥಳದಿಂದ, ಯಾವುದು ಕಿರು ಮಾರ್ಗವಾಗಿರುತ್ತದೆಯೊ, ಆ ಮಾರ್ಗದಲ್ಲಿ ಬಂದು ಹೋಗುವ ಸ್ಲೀಪರ್ ಕ್ಲಾಸ್ ರೈಲ್ವೆ ಪ್ರಯಾಣ ದರ ಹಿಂದಿರುಗಿಸಲಾಗುತ್ತದೆ.

ಸಹಿ/–
ಮುಖ್ಯಸ್ಥರು–ಎಚ್‌ಆರ್‌ಡಿ
ಚೀಫ್ ಎಕ್ಸಿಕ್ಯೂಟಿವ್ (ಏರ್‌ವರ್ದಿನೆಸ್) ಪರವಾಗಿ

ಡಿಆರ್‌ಡಿಒ ಸಂಸ್ಥೆಯಲ್ಲಿ ರಿಸರ್ಚ್ ಫೆಲೋಶಿಪ್‌ಗಾಗಿ ಅರ್ಜಿ

ಇತ್ತೀಚಿನ ಭಾವಚಿತ್ರ ಅಂಟಿಸಿರಿ

1. ಹೆಸರು (ಬ್ಲಾಕ್ ಅಕ್ಷರಗಳಲ್ಲಿ): ______
2. ತಂದೆಯ / ಪತಿಯ ಹೆಸರು: ______
3. ಎ) ವೈವಾಹಿಕ ಸ್ಥಿತಿಗತಿ (ವಿವಾಹಿತ/ಅವಿವಾಹಿತ):______ ಬಿ) ರಾಷ್ಟ್ರೀಯತೆ: ______
4. ಎ) ಪ್ರವರ್ಗ (ಸಾಮಾನ್ಯ/ಎಸ್‌ಸಿ/ಎಸ್‌ಟಿ/ಒಬಿಸಿ/ಪಿಎಚ್):______ ಬಿ) ಜನ್ಮ ದಿನಾಂಕ:______
   ಸಿ) ಅರ್ಜಿ ದಿನಾಂಕದ ಮೇರೆಗೆ ಪ್ರಾಯ: ವರ್ಷ______ ತಿಂಗಳು______ ದಿನಗಳು______
5. ಪತ್ರ ವ್ಯವಹಾರಕ್ಕಾಗಿ ವಿಳಾಸ: ______
   ರಾಜ್ಯ:______ ಪಿನ್ ಕೋಡ್: ______
   ಸಂಪರ್ಕ ವಿವರಗಳು: ಲ್ಯಾಂಡ್‌ಲೈನ್ (ಎಸ್‌ಟಿಎ ಕೋಡ್ ಸಮೇತ): ______ ಮೊಬೈಲ್ ನಂ.:______
   ಇ–ಮೇಲ್ ವಿಳಾಸ:______
6. ಶಾಶ್ವತ ಮನೆ ವಿಳಾಸ: ______
   ರಾಜ್ಯ:______ ಪಿನ್ ಕೋಡ್: ______
7. **ಶೈಕ್ಷಣಿಕ ವಿದ್ಯಾರ್ಹತೆ (ಎಸ್‌ಎಸ್‌ಸಿ ಇಂದ/ಮ್ಯಾಟ್ರಿಕ್ ಮೇಲ್ಪಟ್ಟು; ಸ್ವಯಂ ದೃಢೀಕೃತ ಪ್ರಮಾಣಪತ್ರಗಳನ್ನು ಲಗತ್ತಿಸುವುದು)**

ಉತ್ತೀರ್ಣಗೊಂಡ ಪರೀಕ್ಷೆ	ವಿಷಯಗಳು	ವಿಶ್ವವಿದ್ಯಾಲಯ/ ಮಂಡಳಿ	ಉತ್ತೀರ್ಣಗೊಂಡ ವರ್ಷ	ದರ್ಜೆ/ವರ್ಗ	% ಅಂಕಗಳು

8. ಗ್ರಾಜುಯೇಶನ್ / ಪೋಸ್ಟ್ ಗ್ರಾಜುಯೇಶನ್ ಹಂತದಲ್ಲಿ ಕೈಗೊಂಡಿರುವ ಪ್ರಾಜೆಕ್ಟ್ ವರ್ಕ್‌ನ ಸಂಕ್ಷಿಪ್ತ ವಿವರ:______
9. ಅನುಭವ:

ಸಂಸ್ಥೆಯ ಹೆಸರು	ಸೇವೆಯ ಅವಧಿ		ಕೆಲಸ ಬಿಟ್ಟ ಕಾರಣ
	ಇಂದ	ವರೆಗೆ	

10. ಯುಜಿಸಿ/ಸಿಎಸ್‌ಐಆರ್/ಎನ್‌ಇಟಿ/ಗೇಟ್ ಪರೀಕ್ಷೆಗಳಲ್ಲಿನ ಅರ್ಹತೆ: ಹೌದು/ಇಲ್ಲ
    ಹೌದು ಎಂದಾದಲ್ಲಿ, ವಿವರಗಳನ್ನು ನೀಡಿರಿ (ದಾಖಲೆಯನ್ನು ಲಗತ್ತಿಸುವುದು)
11. ಡಿಆರ್‌ಡಿಒ ಸಂಸ್ಥೆಯ ಯಾವುದೇ ಘಟಕದಲ್ಲಿ, ಯಾವತ್ತಾದರೂ ಸಂದರ್ಶನ ಎದುರಿಸಿದ್ದಲ್ಲಿ, ವಿವರಗಳನ್ನು ನೀಡಿರಿ: ಹೌದು/ಇಲ್ಲ

(ಸೂಚನೆ: ಈ ಮೊದಲು ಡಿಆರ್‌ಡಿಒ ಸಂಸ್ಥೆಯ ಯಾವುದೇ ಘಟಕದಲ್ಲಿ ಜೆಆರ್‌ಎಫ್ ಹುದ್ದೆಯನ್ನು ಪಡೆದಿದ್ದ ಅಭ್ಯರ್ಥಿಗಳು, ಪುನಃ ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ)

12. ಇನ್ನಿತರ ಯಾವುದೇ ಮಾಹಿತಿ:

ಘೋಷಣೆ: ಇಲ್ಲಿ ಮೇಲೆ ತಿಳಿಸಲಾಗಿರುವ ಎಲ್ಲಾ ಮಾಹಿತಿಯು ಸರಿಯಾಗಿರುತ್ತದೆ ಮತ್ತು ಯಾವುದೇ ಮಾಹಿತಿಯನ್ನು ಮರೆ ಮಾಚಲಾಗಿಲ್ಲ ಎಂದು ಘೋಷಿಸುತ್ತೇನೆ.

ಸ್ಥಳ:
ದಿನಾಂಕ:

CBC 10301/11/0173/2526 (ಅಭ್ಯರ್ಥಿಯ ಸಹಿ)

NIAM

ಸಿ.ಸಿ.ಎಸ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಗ್ರಿಕಲ್ಚರ್ ಮಾರ್ಕೆಟಿಂಗ್
(ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ ಅಡಿಯಲ್ಲಿನ ಭಾರತ ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆ, ಬಂಬಾಲಾ, ಕೋಟಾ ರಸ್ತೆ, ಜೈಪುರ–302033 ರಾಜಸ್ಥಾನ)

ದಾಖಲಾತಿ ಆರಂಭವಾಗಿದೆ 2026–28

ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಡಿಪ್ಲೊಮಾ
ಅಗ್ರಿ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10 ಏಪ್ರಿಲ್, 2026

ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಡಿಪ್ಲೊಮಾ
ಇನೋವೇಶನ್, ಆಂಟರ್ಪ್ರೀನರ್‌ಶಿಪ್ ಆಂಡ್ ವೆಂಚರ್ ಡೆವಲಪ್ಮೆಂಟ್
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31 ಮೇ, 2026

ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಡಿಪ್ಲೊಮಾ
ಸಸ್ಟೈನಬಲಿಟಿ ಮ್ಯಾನೇಜ್ಮೆಂಟ್
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15 ಏಪ್ರಿಲ್, 2026

ಈಗಲೇ ಅರ್ಜಿ ಸಲ್ಲಿಸಿ!

ಸಂಪರ್ಕಿಸಿ:
(ದಾಖಲಾತಿ ಸಂಬಂಧಿತ ಮಾಹಿತಿಗಾಗಿ)
(For PGDM-ABMಗಾಗಿ) 0141-2795141, info.abm@ccsniam.ac.in
(For PGDM-IEVಗಾಗಿ)0141-2795128, pgdiev@ccsniam.ac.in
(For PGDM-SMಗಾಗಿ)0141-2795132(PGDM-SM), info.pgdmsam@ccsniam.ac.in

ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ: www.ccsniam.gov.in

CBC 01375/11/0006/2526

ಭಾರತ ಸರ್ಕಾರ
ಸಾಲ ವಸೂಲಾತಿ ನ್ಯಾಯಾಧಿಕರಣ–1, ಬೆಂಗಳೂರು
4ನೇ ಮಹಡಿ, ಟೆಲಿಫೋನ್ ಹೌಸ್ ಬಿಲ್ಡಿಂಗ್, ರಾಜಭವನ ರಸ್ತೆ, ಬೆಂಗಳೂರು – 560 001.

ಡಿಆರ್‌ಸಿ ನಂ. 10363 ಫಾರಂ ನಂ. 14 (ರೆಗ್ಯುಲೇಷನ್ 33(2))

ಕರ್ನಾಟಕ ಬ್ಯಾಂಕ್ ಲಿ., ವರ್ತೂರು ಶಾಖೆ, ಬೆಂಗಳೂರು –560 087 **... ಸರ್ಟಿಫಿಕೇಟ್ ಹೋಲ್ಡರ್**

ವಿರುದ್ಧ

ಮೆ. ಸಾಯಿ ಪೇಪರ್ ಪ್ರಾಡಕ್ಟ್ಸ್ **... ಪ್ರತಿವಾದಿಗಳು**

ಡಿಮ್ಯಾಂಡ್ ನೋಟೀಸು

ಇವರಿಗೆ :

1. ಮೆ. ಸಾಯಿ ಪೇಪರ್ ಪ್ರಾಡಕ್ಟ್ಸ್, ಪ್ರತಿನಿಧಿಸುವವರು ಇದರ ಮಾಲೀಕರಾದ ಶ್ರೀಮತಿ ವಿಜಯಲಕ್ಷ್ಮಿ ಎಸ್., ಕೊಂ. ಶ್ರೀ ಕೆ. ಆರ್. ವೆಂಕಟರಾಜು, ಹನುಮಂತೇಗೌಡ ಬಿಲ್ಡಿಂಗ್ ಇಮ್ಮಡಿಹಳ್ಳಿ ಅಂಚೆ, ವೈಟ್‌ಫೀಲ್ಡ್, ಬೆಂಗಳೂರು – 560 066

ಮತ್ತೊಂದು ವಿಳಾಸ : C/o. ಎಸ್.ಎಲ್ .ವಿ. ಎಂಟರ್‌ಪ್ರೈಸಸ್, ನಂ. 14 KSIIDC ಕೈಗಾರಿಕಾ ಪ್ರದೇಶ, ಪಿಳ್ಳಗೊಂಪ ರಸ್ತೆ, ಹೊಸಕೋಟೆ – 562 114, ಮಾಲೀಕರು: ವಾಸ : ನಂ. 16, ವಿಜಯಲಕ್ಷ್ಮಿ ಕಾಲೊನಿ, ಕಾಡುಗೋಡಿ, ಬೆಂಗಳೂರು– 560 067. **... ಪ್ರತಿವಾದಿಗಳು**

ಗೌರವಾನ್ವಿತ ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ಪ್ರಾಧಿಕಾರ, ಬೆಂಗಳೂರು ಇವರು **ಒ.ಎ. ನಂ. 1504/2015**ರಲ್ಲಿ ಜಾರಿ ಮಾಡಿದ ರಿಕವರಿ ಸರ್ಟಿಫಿಕೇಟ್‌ನಂತೆ **ರೂ.12,47,693/-** (ರೂಪಾಯಿ ಹನ್ನೆರಡು ಲಕ್ಷದ ನಲವತ್ತೇಳು ಸಾವಿರದ ಆರು ನೂರ ತೊಂಬತ್ತ ಮೂರು ಮಾತ್ರ) ಜೊತೆಗೆ ಒ.ಎ ಜಾರಿ ಮಾಡಿದ ದಿನಾಂಕದಿಂದ ಪೂರ್ತಿಪಾವತಿಯ ದಿನಾಂಕದವರೆಗಿನ ರಿಕವರಿ ಸರ್ಟಿಫಿಕೇಟ್‌ನಲ್ಲಿನ ಮೊತ್ತ, ಬಡ್ಡಿ ಮತ್ತು ಇತರ ವೆಚ್ಚ ನಿಮ್ಮಿಂದ ಬಾಕಿ ಇರುತ್ತದೆ.

ನೀವು ಸದರಿ ಮೊತ್ತವನ್ನು ಈ ಪ್ರಕಟಣೆ ನೀಡಿದ 15 ದಿನಗಳ ಒಳಗೆ ಪಾವತಿಸಬೇಕಾಗುತ್ತದೆ. ಇದಕ್ಕೆ ತಪ್ಪಿದಲ್ಲಿ, ನಿಯಮಗಳ ಅನ್ವಯ ಮೊತ್ತವನ್ನು ವಸೂಲಿ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ಹೇಳಲ್ಪಟ್ಟ ಮೊತ್ತವಲ್ಲದೆ ನೀವು ಹೆಚ್ಚುವರಿಯಾಗಿ ಮುಂದಿನದಕ್ಕೂ ಬಾಧ್ಯರಾಗುತ್ತೀರಿ :

ಎ. ಈ ನೋಟೀಸು ನೀಡಿದ ನಂತರದ ಪ್ರಕ್ರಿಯೆಯನ್ನುಪ್ರಾರಂಭಿಸುವ ಅವಧಿಗೆ ಆದೇಶದ ಪ್ರಕಾರ ಕೊಡಬೇಕಾಗಿರುವಂತಹ ಬಡ್ಡಿ ಮೊತ್ತ, ಬಿ. ಈ ನೋಟೀಸನ್ನು ಜಾರಿ ಮಾಡಲು ಮತ್ತು ಇತರ ಪ್ರಕ್ರಿಯೆ ಹಾಗೂ ಸಾಲವನ್ನು ವಸೂಲಿ ಮಾಡುವಲ್ಲಿ ತಗಲುವ ಎಲ್ಲ ಖರ್ಚು ಮತ್ತು ವೆಚ್ಚಗಳು.

ನನ್ನ ಕೈಯಿಂದ ಮತ್ತು ಈ ನ್ಯಾಯಾಧಿಕರಣದ ಮುದ್ರೆಯ ಅಡಿಯಲ್ಲಿ **09.11.2017** ರಂದು ಕೊಡಲ್ಪಟ್ಟಿದೆ.

ಸಹಿ/- ವಸೂಲಾತಿ ಅಧಿಕಾರಿ
ಸಾಲ ವಸೂಲಾತಿ ನ್ಯಾಯಾಧಿಕರಣ , ಬೆಂಗಳೂರು

ಗಮನಿಸಿ : ಆರ್ಥಿಕ ಸಂಸ್ಥೆಗಳಿಗೆ ಮತ್ತು ಬ್ಯಾಂಕ್‌ಗಳಿಗೆ ಬಾಕಿ ಇರುವ ಸಾಲಗಳ ವಸೂಲಾತಿ ಕಾಯ್ದೆ 1993ರ ಜೊತೆಯಲ್ಲಿ ಓದಿಕೊಂಡಂತೆ ಆದಾಯ ತೆರಿಗೆ ಕಾಯ್ದೆ 1961ರ ಎರಡನೇ ಷೆಡ್ಯೂಲಿನ ನಿಯಮ 16ರತ್ತ ಗಮನ ಸೆಳೆಯಲಾಗಿದ್ದು, ಅದು ಈ ಕೆಳಗಿನಂತಿದೆ : 16 (1)ನಿಯಮ 2 ರ ಅಡಿಯಲ್ಲಿ ಸುಸ್ತಿದಾರರೊಬ್ಬರಿಗೆ ನೋಟೀಸನ್ನು ನೀಡಿರುವಾಗ, ಸುಸ್ತಿದಾರರೇ ಆಗಲಿ ಅವರ ಆಸಕ್ತ ಪ್ರತಿನಿಧಿಯೇ ಆಗಲಿ, ಸಾಲ ವಸೂಲಾತಿ ಅಧಿಕಾರಿಯ ಅನುಮತಿ ಪಡೆದುಕೊಂಡ ಹೊರತು, ತಮಗೆ ಸೇರಿದ ಯಾವುದೇ ಆಸ್ತಿಯನ್ನು ಒತ್ತೆ ಇಡುವುದು/ ಮಾರುವುದು/ಬಾಡಿಗೆಗೆ ಕೊಡುವುದು ಅಥವಾ ಇನ್ನು ಯಾವುದೇ ರೀತಿಯಲ್ಲಿ ಪರಭಾರೆ ಮಾಡುವುದಕ್ಕೆ ಅರ್ಹರಾಗಿರುವುದಿಲ್ಲ ; ಹಾಗೆಯೇ, ಅಂಥ ಆಸ್ತಿಯ ಸಂಬಂಧವಾಗಿ ಹಣವನ್ನು ಸಂದಾಯ ಮಾಡುವುದಕ್ಕೆ ವಿರುದ್ಧವಾಗಿ ಯಾವುದೇ ಸಿವಿಲ್ ಕೋರ್ಟು ಯಾವುದೇ ಕ್ರಮವನ್ನು ಆದೇಶಿಸುವಂತಿಲ್ಲ. 2) ಈ ಷೆಡ್ಯೂಲಿನ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿರುವಾಗ, ಮುಟ್ಟುಗೋಲು ಹಾಕಲ್ಪಟ್ಟ ಆಸ್ತಿಯ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಭಾಗದ ಖಾಸಗಿ ವರ್ಗಾವಣೆ ಅಥವಾ ನೀಡಿಕೆಯಾಗಲಿ, ಸದರಿ ಮುಟ್ಟುಗೋಲು ಹಾಕುವಿಕೆಗೆ ವಿರುದ್ಧವಾಗಿ ಸುಸ್ತಿದಾರರಿಗೆ ಯಾವುದೇ ಸಾಲದ ಲಾಭಾಂಶ ಅಥವಾ ಇತರ ಹಣಗಳ ಪಾವತಿಯಾಗಲಿ, ಮುಟ್ಟುಗೋಲಿನ ಅಡಿಯಲ್ಲಿ ಒತ್ತಾಯಿಸಬಹುದಾದ ಎಲ್ಲ ಕ್ಲೇಮುಗಳ ವಿರುದ್ಧವಾಗಿ ಅಸಿಂಧೂವಾಗುತ್ತವೆ.

ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ,
ಸಾರ್ವಜನಿಕ ಆಸ್ಪತ್ರೆ, ಬಂಗಾರಪೇಟೆ
ಕೋಲಾರ ಜಿಲ್ಲೆ

ಅಧಿಸೂಚನೆ ಸಂಖ್ಯೆ:ಸಾ,ಆ,ಬ /ಪಥ್ಯಾಹಾರ, ಹಾಲು /ಬ್ರೆಡ್ /01/2025–26
ದಿನಾಂಕ:18.02.2026

ಟೆಂಡರ್ ಪ್ರಕಟಣೆ

ವಿಷಯ: 2026–27 ನೇ ಸಾಲಿನ ಸಾರ್ವಜನಿಕ ಆಸ್ಪತ್ರೆ ಬಂಗಾರಪೇಟೆ ಈ ಆಸ್ಪತ್ರೆಯ ಪಥ್ಯಾಹಾರ, ಹಾಲು ಮತ್ತು ಬ್ರೇಡ್ ಸರಬರಾಜು ಮಾಡಲು ದ್ವಿ–ಲಕೋಟೆಯ ಮೂಲಕ ಟೆಂಡರ್ ಪ್ರಕಟಣೆ ಕುರಿತು.

ಸಾರ್ವಜನಿಕ ಆಸ್ಪತ್ರೆ ಬಂಗಾರಪೇಟೆ ಕೋಲಾರ ಜಿಲ್ಲೆ ಇಲ್ಲಿನ 2026–27 ನೇ ಸಾಲಿನ ಇ–ಟೆಂಡರ್ (**ಟೆಂಡರ್ ಅಂಗೀಕೃತಗೂಂಡ ದಿನಾಂಕ: 18.02.2026 ರಿಂದ 04.03.2026 ರವರೆಗೆ**) 15 ದಿನಗಳ ಅಲ್ಪಾವಧಿ ಪಥ್ಯಾಹಾರ ಹಾಲು ಮತ್ತು ಬ್ರೆಡ್ ಸರಬರಾಜು ಒದಗಿಸಲು ಕರ್ನಾಟಕ ಕಾರ್ಮಿಕ ಇಲಾಖೆಯಿಂದ ಅಂಗೀಕೃತಗೂಂಡ ಅರ್ಹ ಗುತ್ತಿಗೆದಾರರಿಂದ **http://kppp.karnataka.gov.in** ಕೆ.ಪಿ.ಪಿ.ಪಿ ಪೋರ್ಟಲ್ ಪದ್ದತಿಯಲ್ಲಿ ಆಹ್ವಾನಿಸಲಾಗಿದೆ. ಟೆಂಡರ್ ಫಾರಂನ್ನು **ದಿನಾಂಕ: 18.02.2026 ರಿಂದ 04.03.2026 ರವರೆಗೆ http://kppp.karnataka.gov.in** ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಪಡೆಯಬಹುದು. ಭರ್ತಿಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 04.03.2026 ರಂದು ಸಂಜೆ: 5.30 ಗಂಟೆಗೆಯವರೆಗೆ** ಮಾತ್ರ, ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಪಡೆಯಬಹುದು. **(1)** ಪ್ರಾರಂಭ **ದಿನಾಂಕ: 18.02.2026 ಕೊನೆಯ ದಿನಾಂಕ: 04.03.2026 (2)** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:06.03.2026 ಬೆಳಿಗ್ಗೆ: 10.30 ಗಂಟೆಗೆ. (3)** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 09.03.2026 ಬೆಳಿಗ್ಗೆ: 10.30 ಗಂಟೆಗೆ.** ಟೆಂಡರ್ ಅಂದಾಜು ಒಟ್ಟು ಮೊತ್ತ: (ಪಥ್ಯಾಹಾರ, ಹಾಲು ಮತ್ತು ಬ್ರೆಡ್) **ರೂ. 44,08,470/–.**

ಸಹಿ/–
ಆಡಳಿತ ವೈದ್ಯಾಧಿಕಾರಿಗಳು
ಸಾರ್ವಜನಿಕ ಆಸ್ಪತ್ರೆ, ಬಂಗಾರಪೇಟೆ
ಕೋಲಾರ ಜಿಲ್ಲೆ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:505/ಕೆಎಸ್‌ಎಂಸಿಎ/2025–26

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
(ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು)
E-Mail :- ka.bengaluru.urban.dudc@gmail.com | Phone No-080-22211372/352

ಸಂಖ್ಯೆ: ಜಿನಕೋ/ಸಾಮಾನ್ಯ/ಸಿಆರ್/42/2024–25 ದಿನಾಂಕ: 19/02/2026

ಕರಡು ಅಧಿಸೂಚನೆ

ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ/4/ಎಂಎಲ್‌ಆರ್/2014, ದಿನಾಂಕ: 15.02.2014ರಲ್ಲಿ ನೀಡಿರುವ ಮಾರ್ಗಸೂಚಿಗಳ ಪ್ರಕಾರ ಕರ್ನಾಟಕ ಪುರಸಭೆಗಳ ಕಾಯ್ದೆ 1964ರ ನಿಯಮ 13ರಡಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ/104/ಟಿಎಂಎಸ್/2014, ದಿನಾಂಕ: 09.01.2015ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರವನ್ನು ಚಲಾಯಿಸಿ, ಜಗದೀಶ.ಜಿ, ಭಾ.ಆ.ಸೇ, ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಆದ ನಾನು ಬೆಂಗಳೂರು ನಗರ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿಯಿಂದ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/64/ಕೆಎಂಆರ್/2017, ದಿನಾಂಕ:26.03.2018ರಂತೆ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲಾಗಿರುವ ದೊಡ್ಡತೋಗೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯೊಳಗೆ ಇರುವ ಪ್ರದೇಶವನ್ನು 2011ರ ಜನಗಣತಿ–ಯನ್ನಾಧರಿಸಿ 19 ಏಕಸದಸ್ಯ ವಾರ್ಡ್‌ಗಳನ್ನಾಗಿ ಪುನರ್ ವಿಂಗಡಿಸಲು ಉದ್ದೇಶಿಸಿ, ಲಗತ್ತು ಅನುಬಂಧ ಕೋಷ್ಟಕದಲ್ಲಿ ದೊಡ್ಡತೋಗೂರು ಪಟ್ಟಣ ಪಂಚಾಯಿತಿಯ ಪ್ರತಿಯೊಂದು ವಾರ್ಡ್ ಸಂಖ್ಯೆ ಮತ್ತು ಹೆಸರನ್ನು, ವಾರ್ಡ್ ಚಕ್ಕುಬಂದಿಯನ್ನು ಹಾಗೂ ವಾರ್ಡ್ ವ್ಯಾಪ್ತಿಗೆ ಒಳಪಡುವ ಪ್ರದೇಶವನ್ನು ನಿಗಧಿಪಡಿಸಿರುವಂತೆ ಕರಡು ಅಧಿಸೂಚನೆಯನ್ನು ಪ್ರಕಟಿಸಿರುತ್ತೇನೆ.

ಈ ಅಧಿಸೂಚನೆಯ ಮೂಲಕ ದೊಡ್ಡತೋಗೂರು ಪಟ್ಟಣ ಪಂಚಾಯಿತಿಯ ಕರಡು ವಾರ್ಡ್‌ವಾರು ಪುನರ್ ವಿಂಗಡಣಾ ಮಾಹಿತಿಯನ್ನು ಸಾರ್ವಜನಿಕ ಅವಗಾಹನೆಗಾಗಿ ಪ್ರಕಟಿಸಲಾಗಿದೆ. ಈ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ 15 ದಿನಗಳ ಅವಧಿಯೊಳಗಾಗಿ ಬಾಧಿತರಾಗಬಹುದಾದ ಸಾರ್ವಜನಿಕರು ವಾರ್ಡ್‌ಗಳ ಪುನರ್ ವಿಂಗಡಣೆ ಬಗ್ಗೆ ಯಾವುದೇ ತರಹದ ಆಕ್ಷೇಪಣೆ ಮತ್ತು ಸಲಹೆಗಳನ್ನು ಸಲ್ಲಿಸಲು ಇಚ್ಚಿಸುವ ವ್ಯಕ್ತಿಗಳು ಅದನ್ನು ಲಿಖಿತ ಕಾರಣ ಸಹಿತವಾಗಿ ದಾಖಲೆಗಳೊಂದಿಗೆ ನಿಗಧಿತ ದಿನಾಂಕಕ್ಕೆ ಮೊದಲು ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಕಛೇರಿ ವೇಳೆಯಲ್ಲಿ ಸಲ್ಲಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಸಹಿ/–
(ಜಗದೀಶ.ಜಿ, ಭಾ.ಆ.ಸೇ.)
ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ.

ವಾಸಾಸಂಇ/ವಾಪ್ರ/ಜಿಎ/5778/2025–26

ಭಾರತ ಸರಕಾರ
ವಿತ್ತ ಸಚಿವಾಲಯ, ಹಣಕಾಸು ಸೇವೆಗಳ ವಿಭಾಗ
ಸಾಲ ವಸೂಲಾತಿ ನ್ಯಾಯಾಧಿಕರಣ, ಬೆಂಗಳೂರು –1
4ನೇ ಮಹಡಿ, ಟೆಲಿಫೋನ್ ಹೌಸ್ ಬಿಲ್ಡಿಂಗ್, ರಾಜಭವನ ರಸ್ತೆ, ಬೆಂಗಳೂರು - 560 001.

ಫಾರಂ ನಂ. 14 (ನೋಡಿ ರೆಗ್ಯುಲೇಶನ್ 33(2))

ಡಿಮ್ಯಾಂಡ್ ನೋಟೀಸು

ಸಾಲ ವಸೂಲಾತಿ ಮತ್ತು ದಿವಾಳಿತನ ಕಾಯಿದೆ 1993ರ ಸೆಕ್ಷನ್ 25ರಿಂದ 28ನ್ನು ಮತ್ತು ಇನ್‌ಕಂ ಟ್ಯಾಕ್ಸ್ ಆಕ್ಟ್ 1961ರ 2ನೇ ಷೆಡ್ಯೂಲಿನ ನಿಯಮ 2ರ ಅನ್ವಯ ನೋಟೀಸ್

ಆರ್‌ಸಿ ನಂ. 141/2023 ಒ. ನಂ. 282/2021

ಕರ್ನಾಟಕ ಬ್ಯಾಂಕ್ ಲಿಮಿಟೆಡ್ V/s ಅನಂತ ಕೆ.

ಇವರಿಗೆ: (ಸಿಹೆಚ್) ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಮಹಾಲಕ್ಷ್ಮಿಪುರಂ ಶಾಖೆ, ನಂ. 16, 1ನೇ ಮಹಡಿ, 8ನೇ ಮುಖ್ಯ ರಸ್ತೆ, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು – 560 086. **.....ಅರ್ಜಿದಾರರು/ಸರ್ಟಿಫಿಕೇಟ್ ಹೋಲ್ಡರ್**

Vs

(ಸಿಡಿ 1) **ಶ್ರೀ ಅನಂತ ಕೆ.,** ಬಿನ್ ಶ್ರೀ ಕೇಶವ ಮೂರ್ತಿ ಎಸ್. ವಿ. ನಂ. 20/2, 15ನೇ ಮುಖ್ಯ ರಸ್ತೆ, ಜೆ. ಸಿ. ನಗರ, ಬೆಂಗಳೂರು – 560 086.
(ಸಿಡಿ 2) **ಶ್ರೀಮತಿ ಎಸ್. ಪಿ. ರಶ್ಮಿ,** ಕೋಂ. ಶ್ರೀ ಕೆ. ಅನಂತ, ನಂ. 20/2, 15ನೇ ಮುಖ್ಯ ರಸ್ತೆ, ಜೆ. ಸಿ. ನಗರ, ಬೆಂಗಳೂರು – 560 086.
(ಸಿಡಿ 3) **ಶ್ರೀ ಉಗ್ರ ಮೂರ್ತಿ ಯು.** ಬಿನ್ ಶ್ರೀ ಉಗ್ರ ನರಸಿಂಹ, ನಂ. 61, 7ನೇ ಅಡ್ಡ ರಸ್ತೆ, ಜೈಮಾರುತಿನಗರ, ನಂದಿನಿ ಲೇಔಟ್, ಬೆಂಗಳೂರು – 560 096.
(ಸಿಡಿ 4) **ಮೆ. ಕಾಂಕರ್ ಮಾರ್ಕೆಟಿಂಗ್ ಪ್ರೈ ಲಿ.,** ಪ್ರತಿನಿಧಿಸುವವರು ಇದರ ಇಂಟ್ರಿಮ್ ರೆಸಲ್ಯೂಷನ್ ಪ್ರೊಫೆಷನಲ್ (IRP) ಲಿಕ್ವಿಡೇಟರ್, ಶ್ರೀ ಶಿವದತ್ತ ಬನ್ನಂಜೆ, ನಂ. ಬಿ –208, 6ನೇ ಮುಖ್ಯ ರಸ್ತೆ, ಡಿ. ದೇವರಾಜಸ್ ಟ್ರಸ್ಟ್ ಟರ್ಮಿನಿಲ್ ಲಿ., ಇಂಡಸ್ಟ್ರಿಯಲ್ ಸಬರ್ಬ್ 2ನೇ ಹಂತ, ಯಶವಂತಪುರ, ಬೆಂಗಳೂರು – 560 022.

IRP/ಲಿಕ್ವಿಡೇಟರ್‌ರವರ ವಿಳಾಸ: ಶ್ರೀ ಶಿವದತ್ತ ಬನ್ನಂಜೆ, ಬಿನ್ ಲೇಟ್ ಬಿ. ಕೆ. ಭಂಡರಿ, ನಂ. 228, 1ನೇ ಘಟ್ಟ,, ಕ್ಲಾಸಿಕ್ ಆರ್ಚೆಡ್ಸ್, ಬಿ. ಜಿ.ರಸ್ತೆ, ಮಿನಾಕ್ಷಿ ದೇವಸ್ಥಾನದ ಹಿಂಭಾಗ, ಬನ್ನೇರುಘಟ್ಟ ರಸ್ತೆ, ಬೆಂಗಳೂರು ದಕ್ಷಿಣ, ಕರ್ನಾಟಕ–560 076. **.......ಪ್ರತಿವಾದಿಗಳು/ಸರ್ಟಿಫಿಕೇಟ್ ಡೆಟರ್ಸ್**

ಗೌರವಾನ್ವಿತ ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ನ್ಯಾಯಾಧಿಕರಣ ಬೆಂಗಳೂರು (ಡಿಆರ್‌ಟಿ–2) ಇವರು, ಒ.ಎ. ನಂ./282/2021 ಸರ್ಟಿಫಿಕೇಟ್‌ನಂತೆ **ರೂ. 19882718.11** (ರೂಪಾಯಿ ಒಂದು ಕೋಟಿ ತೊಂಬತ್ತೆಂಟು ಲಕ್ಷ ಎಂಬತ್ತೆರಡು ಸಾವಿರದ ಏಳು ನೂರ ಹದಿನೆಂಟು ಮತ್ತು ಪೈಸೆ ಹನ್ನೊಂದು ಮಾತ್ರ) ಜೊತೆಗೆ ದಿನಾಂಕ20.02.2021ರಿಂದ ಪೂರ್ತಿ ಪಾವತಿಯ ದಿನಾಂಕದ ವರೆಗೆ ವಾರ್ಷಿಕ ಶೇ.13.50% (ದಂಡಬಡ್ಡಿ 3% ಹೊರತುಪಡಿಸಿ) ಮಾಸಿಕ ಚಕ್ರಬಡ್ಡಿ ಮತ್ತು ವೆಚ್ಚ **ರೂ.150005/–** (ರೂಪಾಯಿ ಒಂದು ಲಕ್ಷ ಐವತ್ತು ಸಾವಿರದ ಐದು ಮಾತ್ರ) ಸರ್ಟಿಫಿಕೇಟ್ ಡೆಟರ್ಸ್ ರವರಿಂದ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ/ಪೂರ್ತಿಯಾಗಿ ಬಾಕಿ ಇರುತ್ತದೆ. (2) ನೀವು ಸದರಿ ಮೊತ್ತವನ್ನು ಈ ನೋಟಿಸನ್ನು ನೀಡಿದ 15 ದಿನಗಳ ಒಳಗೆ ಪಾವತಿಸಬೇಕಾಗುತ್ತದೆ. ಇದಕ್ಕೆ ತಪ್ಪಿದಲ್ಲಿ, ರಿಕವರಿ ಆಫ್ ಡೆಟ್ಸ್ ಡ್ಯೂ ಬ್ಯಾಂಕ್ಸ್ ಅಂಡ್ ಫೈನಾನ್ಷಿಯಲ್ ಇನ್‌ಸ್ಟಿಟ್ಯೂಷನ್ ಆಕ್ಟ್ 1993ರ ನಿಯಮಗಳ ಅನ್ವಯ ಮೊತ್ತವನ್ನು ವಸೂಲಿ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುವುದು. 3. ಮುಂದಿನ ವಿಚಾರಣೆಯ ದಿನಾಂಕ ಅಥವಾ ಮೊದಲು ನಿಮ್ಮ ಸ್ವತ್ತುಗಳ ವಿವರಗಳನ್ನು ಅಫಿಡವಿಟ್‌ನಲ್ಲಿ ಘೋಷಿಸಲು ನಿಮಗೆ ಈ ಮೂಲಕ ಆದೇಶಿಸಲಾಗಿದೆ. 4.ನಿಮಗೆ ಈ ಮೂಲಕ ಆದೇಶಿಸುವುದೇನೆಂದರೆ ಮುಂದಿನ ಪ್ರಕ್ರಿಯೆಗಳಿಗಾಗಿ ದಿನಾಂಕ 26.02.2024 ರ ಬೆಳಿಗ್ಗೆ 10.30 ಗಂಟೆ ಒಳಗೆ ಕೆಳಸಹಿದಾರರ ಮುಂದೆ ಹಾಜರಾಗಬೇಕು. 5. ಮೇಲೆ ಹೇಳಿದ ಮೊತ್ತಕ್ಕೆ ಹೆಚ್ಚುವರಿಯಾಗಿ ನೀವು ಪಾವತಿಸಬೇಕಾಗುತ್ತದೆ. (ಎ)ಈ ನೋಟೀಸು ನೀಡಿದ ನಂತರದ ಪ್ರಕ್ರಿಯೆಯನ್ನು ಪ್ರಾರಂಭಿಸುವ ಅವಧಿಗೆ ಆದೇಶದ ಪ್ರಕಾರ ಕೊಡಬೇಕಾಗಿರುವಂತಹ ಬಡ್ಡಿ ಮೊತ್ತ (ಬಿ) ಈ ನೋಟೀಸನ್ನು ಜಾರಿ ಮಾಡಲು ಮತ್ತು ವಾರಂಟ್‌ಗಳಿಗೆ ಮತ್ತು ಇತರ ಪ್ರಕ್ರಿಯೆಗಳಿಗೆ ಮತ್ತು ಇತರ ಎಲ್ಲಾ ನಡಾವಳಿಗಳಿಗೆ ಸಾಲ ವಸೂಲಾತಿ ಮಾಡುವಲ್ಲಿ ತಗಲುವ ಎಲ್ಲಾ ಖರ್ಚು ಮತ್ತು ವೆಚ್ಚಗಳು.

ನನ್ನ ಕೈಯಿಂದ ಮತ್ತು ಈ ನ್ಯಾಯಾಧಿಕರಣದ ಮುದ್ರೆಯ ಅಡಿಯಲ್ಲಿ 06.01.2024 ರಂದು ಕೊಡಲ್ಪಟ್ಟಿದೆ.

ಸಹಿ/– (ಸಂಜೀವ್ ಕುಮಾರ್) ವಸೂಲಾತಿ ಅಧಿಕಾರಿ–1
ಸಾಲ ವಸೂಲಾತಿ ನ್ಯಾಯಾಧಿಕರಣ (ಡಿಆರ್‌ಟಿ–1)

ಗಮನಿಸಿ : ಆರ್ಥಿಕ ಸಂಸ್ಥೆಗಳಿಗೆ ಮತ್ತು ಬ್ಯಾಂಕ್‌ಗಳಿಗೆ ಬಾಕಿ ಇರುವ ಸಾಲಗಳ ವಸೂಲಾತಿ ಕಾಯ್ದೆ 1993ರ ಜೊತೆಯಲ್ಲಿ ಓದಿಕೊಂಡಂತೆ ಆದಾಯ ತೆರಿಗೆ ಕಾಯ್ದೆ 1961ರ ಎರಡನೇ ಷೆಡ್ಯೂಲಿನ ನಿಯಮ 16ರತ್ತ ಗಮನ ಸೆಳೆಯಲಾಗಿದ್ದು, ಅದು ಈ ಕೆಳಗಿನಂತಿದೆ : 16 (1)ನಿಯಮ 2 ರ ಅಡಿಯಲ್ಲಿ ಸುಸ್ತಿದಾರರೊಬ್ಬರಿಗೆ ನೋಟೀಸನ್ನು ನೀಡಿರುವಾಗ, ಸುಸ್ತಿದಾರರೇ ಆಗಲಿ ಅವರ ಆಸಕ್ತ ಪ್ರತಿನಿಧಿಯೇ ಆಗಲಿ, ಸಾಲ ವಸೂಲಾತಿ ಅಧಿಕಾರಿಯ ಅನುಮತಿ ಪಡೆದುಕೊಂಡ ಹೊರತು, ತಮಗೆ ಸೇರಿದ ಯಾವುದೇ ಆಸ್ತಿಯನ್ನು ಒತ್ತೆ ಇಡುವುದು/ಮಾರುವುದು/ಬಾಡಿಗೆಗೆ ಕೊಡುವುದು ಅಥವಾ ಇನ್ನು ಯಾವುದೇ ರೀತಿಯಲ್ಲಿ ಪರಭಾರೆ ಮಾಡುವುದಕ್ಕೆ ಅರ್ಹರಾಗಿರುವುದಿಲ್ಲ; ಹಾಗೆಯೇ, ಅಂಥ ಆಸ್ತಿಯ ಸಂಬಂಧವಾಗಿ ಹಣವನ್ನು ಸಂದಾಯ ಮಾಡುವುದಕ್ಕೆ ವಿರುದ್ಧವಾಗಿ ಯಾವುದೇ ಸಿವಿಲ್ ಕೋರ್ಟು ಯಾವುದೇ ಕ್ರಮವನ್ನು ಆದೇಶಿಸುವಂತಿಲ್ಲ. 2) ಈ ಷೆಡ್ಯೂಲಿನ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿರುವಾಗ, ಮುಟ್ಟುಗೋಲು ಹಾಕಲ್ಪಟ್ಟ ಆಸ್ತಿಯ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಭಾಗದ ಖಾಸಗಿ ವರ್ಗಾವಣೆ ಅಥವಾ ನೀಡಿಕೆಯಾಗಲಿ, ಸದರಿ ಮುಟ್ಟುಗೋಲು ಹಾಕುವಿಕೆಗೆ ವಿರುದ್ಧವಾಗಿ ಸುಸ್ತಿದಾರರಿಗೆ ಯಾವುದೇ ಸಾಲದ ಲಾಭಾಂಶ ಅಥವಾ ಇತರ ಹಣಗಳ ಪಾವತಿಯಾಗಲಿ, ಮುಟ್ಟುಗೋಲಿನ ಅಡಿಯಲ್ಲಿ ಒತ್ತಾಯಿಸಬಹುದಾದ ಎಲ್ಲ ಕ್ಲೇಮುಗಳ ವಿರುದ್ಧವಾಗಿ ಅಸಿಂಧೂವಾಗುತ್ತವೆ. 3) ನೀವು ಕಳೆದ 5 ವರ್ಷಗಳ ಆದಾಯ ತೆರಿಗೆ ಪಾವತಿಯ ದಾಖಲೆಗಳೊಂದಿಗೆ ನಿಮ್ಮ ಸ್ಥಿರ ಮತ್ತು ಚರಾಸ್ತಿಗಳ ವಿವರಗಳನ್ನು ಈ ನ್ಯಾಯಾಧಿಕರಣಕ್ಕೆ ಸಲ್ಲಿಸಬೇಕಾಗಿದೆ.

NEWS 1st Eco-friendly initiative

Supported by
भारी उद्योग मंत्रालय
MINISTRY OF HEAVY INDUSTRIES
सत्यमेव जयते

ಕರ್ನಾಟಕದ ಅತಿ ದೊಡ್ಡ ಎಲೆಕ್ಟ್ರಿಕ್ ವೆಹಿಕಲ್ಸ್ EXPO

EV ready
KARNATAKA'S LARGEST EV EXPO

ಉದ್ಘಾಟನೆ
21.02.2026, ಶನಿವಾರ
ಬೆಳಗ್ಗೆ 10.30ಕ್ಕೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ
ಸನ್ಮಾನ್ಯ ಕೇಂದ್ರ ಸಚಿವರು
ಬೃಹತ್ ಕೈಗಾರಿಕೆ ಮತ್ತು ಉಕ್ಕು
ಭಾರತ ಸರ್ಕಾರ

- ದೇಶ ವಿದೇಶಗಳ ಪ್ರತಿಷ್ಠಿತ ಬ್ರ್ಯಾಂಡ್‌ಗಳು
- ಸ್ಪಾಟ್ ಬುಕಿಂಗ್ ಮಾಡಿದವರಿಗೆ ವಿಶೇಷ ರಿಯಾಯಿತಿ
- ಟೆಸ್ಟ್ ಡ್ರೈವ್ ಮಾಡಲು ಅವಕಾಶ
- ಎಲೆಕ್ಟ್ರಿಕ್ ವೆಹಿಕಲ್ಸ್ ಕುರಿತು ನಿಮ್ಮ ಗೊಂದಲಗಳಿಗೆ ಸ್ಥಳದಲ್ಲೇ ಉತ್ತರ

Presented by: TATA ev | TATA MOTORS COMMERCIAL VEHICLES | Better Always

Co-Presented by: ELECTRIC ORIGIN SUVs mahindra | mahindra LAST MILE MOBILITY

Super Powered by: ASHOK LEYLAND Koi Manzil Door Nahin | SWITCH

Powered by: KIA | MG MORRIS GARAGES Since 1924 | EM ENERGY IN MOTION

Special Partners: ATHER | TVS | VIDA Powered by Hero | eka | VE COMMERCIAL VEHICLES A VOLVO GROUP AND EICHER MOTORS JOINT VENTURE | PIAGGIO

Super Charging Partners: ಬೆಸ್ಕಾಂ BESCOM | ಕವಿಪ್ರನಿನಿ KPTCL

Road Safety Partner: Karnataka State Road Safety Authority

Commuting Partner: ಸಾರಿಗೆ ಇಲಾಖೆ TRANSPORT DEPARTMENT

ಪ್ರತಿದಿನ ಒಬ್ಬ ಅದೃಷ್ಟಶಾಲಿಗೆ ಉಚಿತ EV ಬೈಕ್

ಫೆಬ್ರವರಿ 21, 22 ಮತ್ತು 23, 2026
ತ್ರಿಪುರವಾಸಿನಿ ಅರಮನೆ ಮೈದಾನ, ಬೆಂಗಳೂರು
ಬೆಳಗ್ಗೆ 10 ರಿಂದ ಸಂಜೆ 7 ರವರೆಗೆ

ಪ್ರವೇಶ ಉಚಿತ

ಹೆಚ್ಚಿನ ಮಾಹಿತಿಗೆ ಲಾಗಿನ್ ಮಾಡಿ
www.evready.co.in

Association Partner: GBITCIA GREATER BENGALURU IT COMPANIES AND INDUSTRIES ASSOCIATION

Radio Partner: 92.7 BIG FM

ಅಮಿತ ಕೋರೆ ಕೆಎಲ್‌ಇ ಕಾರ್ಯಾಧ್ಯಕ್ಷ

ಬೆಳಗಾವಿ: ಇಲ್ಲಿನ ಕರ್ನಾಟಕ ಲಿಂಗಾಯತ ಶಿಕ್ಷಣ (ಕೆಎಲ್‌ಇ) ಸಂಸ್ಥೆಯ ನೂತನ ಕಾರ್ಯಾಧ್ಯಕ್ಷರಾಗಿ ಅಮಿತ ಪ್ರಭಾಕರ ಕೋರೆ ಶುಕ್ರವಾರ ಆಯ್ಕೆಯಾಗಿದ್ದಾರೆ. ಅಲ್ಲದೇ, 42 ವರ್ಷಗಳ ಕಾಲ ಕಾರ್ಯಾಧ್ಯಕ್ಷರಾಗಿದ್ದ ಪ್ರಭಾಕರ ಕೋರೆ ಅವರನ್ನು ಗೌರವಾನ್ವಿತ ಕಾರ್ಯಾಧ್ಯಕ್ಷರಾಗಿ ನೇಮಿಸಲಾಗಿದೆ.

ಅಮಿತ ಕೋರೆ


ಪ್ರಭಾಕರ ಕೋರೆ

ಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ಜರುಗಿದ ನೂತನ ಆಡಳಿತ ಮಂಡಳಿಯ ಸಭೆಯಲ್ಲಿ ಅಮಿತ ಅವರಿಗೆ ಸಂಸ್ಥೆಯ ಸಾರಥ್ಯ ನೀಡಲಾಯಿತು. ಪ್ರಭಾಕರ ಅವರ ಪುತ್ರ, 46ರ ಹರೆಯದ ಅಮಿತ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರಾಗಿ 2010ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಶಿಕ್ಷಣ, ಸಹಕಾರ ಹಾಗೂ ಕೈಗಾರಿಕಾ ವಲಯದಲ್ಲಿ ಅನುಭವ ಹೊಂದಿದ್ದಾರೆ.

ಚಿದಾನಂದ ಬಸಪ್ರಭು ಕೋರೆ ಸಕ್ಕರೆ ಕಾರ್ಖಾನೆ ನಿರ್ದೇಶಕರಾಗಿ, ನವದೆಹಲಿಯ ನ್ಯಾಷನಲ್ ಫೆಡರೇಶನ್ ಆಫ್ ಕೋ-ಆಪರೇಟಿವ್ ಶುಗರ್ ಫ್ಯಾಕ್ಟರಿಸ್‌ನ ಉಪಾಧ್ಯಕ್ಷರಾಗಿ, ಶಿವಶಕ್ತಿ ಸಕ್ಕರೆ ಕಾರ್ಖಾನೆ ನಿರ್ದೇಶಕರಾಗಿ, ಹರ್ಮ್ಸ್ ಡಿಸ್ಟಿಲ್ಲರಿ ಪ್ರೈ.ಲಿ.ನ ವ್ಯವಸ್ಥಾಪಕ ನಿರ್ದೇಶಕರಾಗಿ, ಇನಾಂದಾರ ಶುಗರ್ಸ್‌ನ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸುಳ್ಳು ಮಾಹಿತಿ: ಸ್ನೇಹಮಯಿ ಕೃಷ್ಣ ಬಂಧನ

ನ್ಯಾಯಾಲಯದ ಆವರಣದಲ್ಲಿ ವಶಕ್ಕೆ ಪಡೆದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಎಸ್ ಅಧಿಕಾರಿ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಮಾಹಿತಿ ಹಂಚಿಕೊಂಡಿದ್ದ ಆರೋಪದಡಿ ದಾಖಲಾಗಿದ್ದ ಪ್ರಕರಣದಲ್ಲಿ ಮೈಸೂರಿನ ಸ್ನೇಹಮಯಿ ಕೃಷ್ಣ ಅವರನ್ನು ಸಿಸಿಬಿ ಪೊಲೀಸರು ಶುಕ್ರವಾರ ಮಧ್ಯಾಹ್ನ ಬಂಧಿಸಿದ್ದಾರೆ.

ಸ್ನೇಹಮಯಿ ಕೃಷ್ಣ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಮಾಜಿ ಆಯುಕ್ತ, ಕೆಎಎಸ್ ಅಧಿಕಾರಿ ಡಿ.ಬಿ. ನಟೇಶ್ ಅವರು ಸ್ನೇಹಮಯಿ ಕೃಷ್ಣ ವಿರುದ್ಧ ದೂರು ನೀಡಿದ್ದರು. ಫೆ.18ರಂದು ಬೆಂಗಳೂರು ನಗರ ಸೈಬರ್ ಅಪರಾಧ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಪ್ರಕರಣವೊಂದರ ವಿಚಾರಣೆಗೆ ಸ್ನೇಹಮಯಿ ಕೃಷ್ಣ ಅವರು ತಮ್ಮ ಪುತ್ರನ ಜತೆಗೆ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಶುಕ್ರವಾರ ಬಂದಿದ್ದರು. ಆ ಸಂದರ್ಭದಲ್ಲಿ ನ್ಯಾಯಾಲಯದ ಆವರಣದಲ್ಲಿ ಅವರನ್ನು ವಶಕ್ಕೆ ಪಡೆದುಕೊಳ್ಳಲಾಯಿತು ಎಂದು ಸಿಸಿಬಿ ಮೂಲಗಳು ತಿಳಿಸಿವೆ.

‘ಮಡಿವಾಳದ ವಿಧಿ ವಿಜ್ಞಾನ ಪ್ರಯೋಗಾಲಯ ಬಳಿಯ ಸಿಸಿಬಿ ಕಚೇರಿಯಲ್ಲಿ ಸ್ನೇಹಮಯಿ ಕೃಷ್ಣ ಅವರನ್ನು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

> **ಅಧಿಕಾರಿಗಳ ವಿರುದ್ಧ ಆಧಾರವಿಲ್ಲದೆ ಆರೋಪ ಮಾಡಿದರೆ ತೇಜೋವಧೆಯಾಗುತ್ತದೆ. ಅಂಥವರ ವಿರುದ್ಧ ಕ್ರಮ ಅನಿವಾರ್ಯ**
> **ಡಾ.ಯತೀಂದ್ರ ಸಿದ್ದರಾಮಯ್ಯ**, ವಿಧಾನ ಪರಿಷತ್ ಸದಸ್ಯ

‘ಮುಂಬಡ್ತಿ ಪಡೆಯಲು ಡಿ.ಬಿ. ನಟೇಶ್ ಅವರು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ₹1.5 ಕೋಟಿ ಲಂಚ ನೀಡಿದ್ದಾರೆಂದು ಆರೋಪಿಸಿ, ಸ್ನೇಹಮಯಿ ಕೃಷ್ಣ ತಮ್ಮ ಸಾಮಾಜಿಕ ಜಾಲತಾಣ ಖಾತೆಗಳಲ್ಲಿ ಮಾಹಿತಿ ಹಂಚಿಕೊಂಡಿದ್ದರು. ತಮ್ಮ ಮೇಲಿನ ಆರೋಪವನ್ನು ಶಾಲಿನಿ ರಜನೀಶ್ ಅವರು ನಿರಾಕರಿಸಿದ್ದರು. ಮತ್ತೊಂದೆಡೆ ನಟೇಶ್ ಅವರು ಸಿಸಿಬಿಗೆ ದೂರು ನೀಡಿದ್ದರು’ ಎಂದು ಮೂಲಗಳು ತಿಳಿಸಿವೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ (ಮುಡಾ) ಕಾನೂನು ಬಾಹಿರವಾಗಿ ನಿವೇಶನ ಪಡೆದಿದ್ದಾರೆಂದು ಆರೋಪಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಪತ್ನಿ ಬಿ.ಎಂ.ಪಾರ್ವತಿ ಸೇರಿದಂತೆ ನಾಲ್ವರ ವಿರುದ್ಧ ಈ ಹಿಂದೆ ಸ್ನೇಹಮಯಿ ಕೃಷ್ಣ ಅವರು ಲೋಕಾಯುಕ್ತ ಹಾಗೂ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ದೂರು ನೀಡಿದ್ದರು. ಬಳಿಕ ಲೋಕಾಯುಕ್ತ ಪೊಲೀಸರು ತನಿಖೆ ನಡೆಸಿ, ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ‘ಬಿ’ ರಿಪೋರ್ಟ್ ಸಲ್ಲಿಸಿದ್ದರು. ನ್ಯಾಯಾಲಯವು ಬಿ–ರಿಪೋರ್ಟ್ ಅನ್ನು ಇತ್ತೀಚೆಗೆ ಮಾನ್ಯ ಮಾಡಿದೆ.

ಮೈಸೂರಿನ ಭೈರವೇಶ್ವರ ನಗರದಲ್ಲಿರುವ ಸ್ನೇಹಮಯಿ ಕೃಷ್ಣ ಅವರ ಮನೆಯಲ್ಲಿ ತಪಾಸಣೆ ನಡೆಸಿ ತೆರಳಿದ ಸಿಸಿಬಿ ತಂಡ

ನಟೇಶ್ ದೂರಿನಲ್ಲಿ ಏನಿತ್ತು?

‘ನನ್ನ ಫೋಟೊ ಬಳಸಿಕೊಂಡು ನಕಲಿ ಆಡಿಯೊ ಹಾಗೂ ದಾಖಲೆ ಸೃಷ್ಟಿಸಿಕೊಂಡು ಸಾಮಾಜಿಕ ಜಾಲತಾಣದಲ್ಲಿ ಅಪಪ್ರಚಾರ ನಡೆಸುತ್ತಿದ್ದಾರೆ. ಅಲ್ಲದೇ ಮಾನಸಿಕ ಕಿರುಕುಳ ನೀಡುತ್ತಿದ್ದಾರೆ’ ಎಂದು ನಟೇಶ್ ಅವರು ದೂರಿನಲ್ಲಿ ಉಲ್ಲೇಖಿಸಿದ್ದರು.

ಮೈಸೂರು ಮನೆಯಲ್ಲಿ ಸಿಸಿಬಿ ಪೊಲೀಸರಿಂದ ತಪಾಸಣೆ

ಮೈಸೂರು: ಸಾಮಾಜಿಕ ಹೋರಾಟಗಾರ, ಸ್ನೇಹಮಯಿ ಕೃಷ್ಣ ಅವರ ಇಲ್ಲಿನ ಕಚೇರಿ ಹಾಗೂ ಮನೆಯಲ್ಲಿ ಬೆಂಗಳೂರು ಸಿಸಿಬಿ ಪೊಲೀಸರು ಶುಕ್ರವಾರ ತಪಾಸಣೆ ನಡೆಸಿದರು.

ಇನ್‌ಸ್ಪೆಕ್ಟರ್ ಪಿ.ಗೌರಿಶಂಕರ್ ನೇತೃತ್ವದಲ್ಲಿ 9 ಅಧಿಕಾರಿ ಹಾಗೂ ಸಿಬ್ಬಂದಿಯ ತಂಡ ಭೈರವೇಶ್ವರ ನಗರಕ್ಕೆ ಮಧ್ಯಾಹ್ನ 2.45ರ ಸುಮಾರಿಗೆ ಸರ್ಚ್ ವಾರಂಟ್‌ನೊಂದಿಗೆ ಧಾವಿಸಿತು.

ಕೃಷ್ಣ ಅವರ ಶಿವಕೃಪಾ ಫೈನಾನ್ಸ್ ಕಾರ್ಪೊರೇಷನ್ಸ್ ಕಚೇರಿಯಲ್ಲಿ ಹುಡುಕಾಟ ನಡೆಸಿದ ಪೊಲೀಸರು, ಬಳಿಕ ಮನೆಯಲ್ಲಿ ಮೂರು ಗಂಟೆ ತಪಾಸಣೆ ನಡೆಸಿದರು. ಕಂಪ್ಯೂಟರ್ ಪರಿಶೀಲಿಸಿ ಹಾರ್ಡ್‌ಡಿಸ್ಕ್ ವಶಕ್ಕೆ ಪಡೆದರು. ಅವರ ಅಂಗಿಯ ಜೇಬಿನಲ್ಲಿದ್ದ ಪೆನ್‌ಡ್ರೈವ್, ನಟೇಶ್ ನೀಡಿದ ದೂರಿಗೆ ಸಂಬಂಧಿಸಿದ ಪತ್ರದ ದಾಖಲೆಗಳನ್ನು ವಶಕ್ಕೆ ಪಡೆದರು.

ಬಂಡೀಪಾಳ್ಯದಲ್ಲಿರುವ ಅವರ ತಾಯಿ ಜಯಮ್ಮ ಮನೆಯಲ್ಲೂ ಪೊಲೀಸರು ಪರಿಶೀಲಿಸಿದರು. ಅಲ್ಲಿ ಯಾವುದೇ ದಾಖಲೆ ವಶಪಡಿಸಿಕೊಂಡಿಲ್ಲ. ಇಬ್ಬರು ವಿಡಿಯೊಗ್ರಾಫರ್‌ಗಳು ವಿಡಿಯೊ ದಾಖಲಿಸಿಕೊಂಡರು.

‘ಪತಿಯು ಪ್ರತೀ ವಾರ ಎರಡು ಬಾರಿ ಬೆಂಗಳೂರಿಗೆ ನ್ಯಾಯಾಲಯಕ್ಕೆ ತೆರಳುತ್ತಿದ್ದರು. ಈ ಬಾರಿ ಮಗನೊಂದಿಗೆ ಹೋಗಿದ್ದರು. ಪೊಲೀಸರು ಮಧ್ಯಾಹ್ನ ಮನೆಗೆ ಸರ್ಚ್ ವಾರಂಟ್‌ನೊಂದಿಗೆ ಬಂದಾಗ, ಅವರು ಪೊಲೀಸ್ ವಶದಲ್ಲಿರುವುದು ತಿಳಿಯಿತು’ ಎಂದು ಕೃಷ್ಣ ಅವರ ಪತ್ನಿ ವಿನೋದಾ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

‘ಅನ್ಯಾಯದ ವಿರುದ್ಧ ಹೋರಾಡುತ್ತಿರುವುದರಿಂದಾಗಿ ಅವರನ್ನು ಸಿಲುಕಿಸಬೇಕೆಂದು, ಅವರಿಲ್ಲದ ಸಮಯದಲ್ಲಿ ಪೊಲೀಸರು ಮನೆಗೆ ಬಂದಿದ್ದಾರೆ. ಸಣ್ಣ– ಪುಟ್ಟ ವಿಚಾರಕ್ಕೆ ಬಂಧಿಸಿ ದೌರ್ಜನ್ಯ ಮಾಡುತ್ತಿರುವುದು ಭಯ ಮೂಡಿಸಿದೆ. ಇದಕ್ಕೆಲ್ಲಾ ಅವರು ಹೆದರುವುದಿಲ್ಲ. ಹೋರಾಟ ಮುಂದುವರಿಸುತ್ತಾರೆ’ ಎಂದರು.

ಸುದ್ದಿ 2 ನಿಮಿಷ

ಭಿನ್ನಾಭಿಪ್ರಾಯ ಮೂಡಿಸಲು ಆಮಿಷ; ಹೊನ್ನೂರು ಪ್ರಕಾಶ್

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ‘ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಫಾರಿಯನ್ನು ಮತ್ತೆ ಆರಂಭಿಸುವ ವಿಚಾರದಲ್ಲಿ ಅರಣ್ಯಾಧಿಕಾರಿಗಳು ರೈತರು ಮತ್ತು ಗ್ರಾಮಸ್ಥರಿಗೆ ಹಣದ ಆಮಿಷ ಒಡ್ಡಿ ಭಿನ್ನಾಭಿಪ್ರಾಯ ಮೂಡಿಸಲು ಮುಂದಾಗಿದ್ದಾರೆ’ ಎಂದು ರೈತ ಮುಖಂಡ ಹೊನ್ನೂರು ಪ್ರಕಾಶ್ ಆರೋಪಿಸಿದರು.

‘ಸಫಾರಿ ಪುನರಾರಂಭ ವಿರೋಧಿಸಿ ಸಾಮೂಹಿಕ ನಾಯಕತ್ವದಲ್ಲಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಮುಖಂಡರು ಬಂಡೀಪುರದ ಮೇಲುಕಾಮನಹಳ್ಳಿ ಸಫಾರಿ ಕೇಂದ್ರದ ಬಳಿ ಪ್ರತಿಭಟನೆಗೆ ಮುಂದಾಗಿದ್ದೆವು. ಆಗ ಅರಣ್ಯಾಧಿಕಾರಿಗಳು ಸ್ಥಳೀಯರಿಗೆ ಕುಮ್ಮಕ್ಕು ನೀಡಿ ರೈತರ ಮೇಲೆ ಮುಗಿಬೀಳುವಂತೆ ಕಾರ್ಯತಂತ್ರ ರೂಪಿಸಿದ್ದರು. ಈ ಘಟನೆ ಕುರಿತು ತನಿಖೆ ನಡೆಸಿ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕು’ ಎಂದು ಒತ್ತಾಯಿಸಿದರು.



‘ಸಫಾರಿ ಮರು ಆರಂಭ ನಿರ್ಧಾರವನ್ನು ವಿರೋಧಿಸಿ ಸ್ಥಳೀಯ ಗ್ರಾಮ ಪಂಚಾಯಿತಿಗಳಿಗೆ ಹಕ್ಕೊತ್ತಾಯ ಮನವಿ ಸಲ್ಲಿಸಲು ನಿರ್ಧರಿಸಲಾಗಿದೆ. ಸ್ಥಳೀಯ ಮಟ್ಟದಲ್ಲಿ ಸಫಾರಿ ವಿರುದ್ಧ ಪ್ರತಿಭಟನೆ ನಡೆಸಲಾಗುವುದು’ ಎಂದು ತಿಳಿಸಿದರು.

ನಕಲು ತಡೆ: ಪರೀಕ್ಷಾ ಮೇಲ್ವಿಚಾರಕರ ಮೇಲೆ ವಿದ್ಯಾರ್ಥಿ ಹಲ್ಲೆ

ಕಲಬುರಗಿ: ನಕಲು ಮಾಡುತ್ತಿರುವುದನ್ನು ತಡೆಯಲು ಮುಂದಾದ ಪರೀಕ್ಷಾ ಮೇಲ್ವಿಚಾರಕರೊಬ್ಬರ ಮೇಲೆ ಪರೀಕ್ಷೆ ಬರೆಯುತ್ತಿದ್ದ ವಿದ್ಯಾರ್ಥಿಯೊಬ್ಬ ಹಲ್ಲೆ ನಡೆಸಿದ ಘಟನೆ ಕಲಬುರಗಿ ನಗರದ ಡಾ. ಮಾಲಕರೆಡ್ಡಿ ಹೋಮಿಯೋಪಥಿಕ್ ಮೆಡಿಕಲ್ ಕಾಲೇಜಿನಲ್ಲಿ ಇತ್ತೀಚೆಗೆ ನಡೆದಿದೆ.

ಈ ಘಟನೆ ಪರೀಕ್ಷಾ ಕೊಠಡಿಯ ಸಿ.ಸಿ.ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಪದವಿ ಅಂತಿಮ ವರ್ಷದ ‘ಹೋಮಿಯೋಪಥಿಕ್ ಮಟೇರಿಯಾ ಮೆಡಿಕಾ’ ವಿಷಯದ ಆಂತರಿಕ ಪರೀಕ್ಷೆ ನಡೆಯುದ್ದಾಗ ವಿದ್ಯಾರ್ಥಿ ಶಹಬಾಜ್ ಮೊಬೈಲ್ ಫೋನ್ ಬಳಸಿ ನಕಲು ಮಾಡುತ್ತಿದ್ದ. ಅದನ್ನು ಸಹಾಯಕ ಪ್ರಾಧ್ಯಾಪಕ ಶಿವರಾಜ್ ಕುಮಾರ್ ಪ್ರಶ್ನಿಸಿ, ಉತ್ತರ ಪತ್ರಿಕೆ ವಶಕ್ಕೆ ಪಡೆದು, ಕೊಠಡಿಯಿಂದ ಹೊರ ಹೋಗಲು ಸೂಚಿಸಿದ್ದಾರೆ. ಇದರಿಂದ ಕೋಪಗೊಂಡ ವಿದ್ಯಾರ್ಥಿಯು ಸಹಾಯಕ ಪ್ರಾಧ್ಯಾಪಕರ ಮೇಲೆ ಹಲ್ಲೆ ನಡೆಸಿದ್ದಾನೆ.

‘ಹಲ್ಲೆ ಘಟನೆ ಕುರಿತು ಆಂತರಿಕ ಸಮಿತಿ ರಚಿಸಲಾಗಿತ್ತು. ಸಮಿತಿ ನೀಡಿದ ವರದಿಯನ್ನು ಕಾಲೇಜಿನ ಸೊಸೈಟಿ ಹಾಗೂ ವಿವಿಗೆ ಸಲ್ಲಿಸಲಾಗಿದೆ’ ಎಂದು ಪ್ರತಿಕ್ರಿಯಿಸಿರುವ ಕಾಲೇಜಿನ ಅಧಿಕಾರಿಗಳು ಹೆಚ್ಚಿನ ಮಾಹಿತಿ ನೀಡಲು ನಿರಾಕರಿಸಿದರು.

‘ಗೂಂಡಾ ಕಾಯ್ದೆಯಡಿ ಕ್ರಮ ಜರುಗಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಾಗಲಕೋಟೆಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಭಾವಚಿತ್ರದ ಮೆರವಣಿಗೆ ವೇಳೆ ಕಲ್ಲು ತೂರಾಟ ಮಾಡಿದ ಮತಾಂಧರ ವಿರುದ್ಧ ಗೂಂಡಾ ಕಾಯ್ದೆಯಡಿ ಕ್ರಮ ತೆಗೆದುಕೊಳ್ಳಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಒತ್ತಾಯಿಸಿದರು.

‘ಈ ಕಲ್ಲು ತೂರಾಟ ಪೂರ್ವ ನಿಯೋಜಿತ ಕೃತ್ಯ’ ಎಂದು ಅವರು ಸುದ್ದಿಗೋಷ್ಠಿಯಲ್ಲಿ ದೂರಿದರು.

‘ಈ ಹಿಂದೆ ಮಂಡ್ಯ ಜಿಲ್ಲೆಯಲ್ಲೂ ಗಣೇಶ ವಿಸರ್ಜನೆ ಮೆರವಣಿಗೆಯ ಮೇಲೆ ಕಲ್ಲು ತೂರಾಟ ಮಾಡಿ, ಶ್ರೀರಾಮನ ಚಿತ್ರವಿದ್ದ ಫ್ಲೆಕ್ಸ್ ಹರಿದು ಹಾಕಿದ್ದರು. ಇಂತಹ ಮುಸ್ಲಿಂ ಮತಾಂಧರನ್ನು ಬಂಧಿಸಬಾರದು ಎಂದು ಸರ್ಕಾರವೇ ಪೊಲೀಸರಿಗೆ ಸೂಚನೆ ನೀಡಿದಂತಿದೆ’ ಎಂದರು.

‘ಕುಕ್ಕರ್ ಬಾಂಬ್ ಸ್ಫೋಟ ಮಾಡುವವರು ನಮ್ಮ ಬ್ರದರ್‌ಗಳು, ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಎಂದು ಹೇಳುವವರು ನಮ್ಮ ಬಂಧುಗಳು ಎಂದು ಕಾಂಗ್ರೆಸ್ ನಾಯಕರೇ ಹೇಳಿದ್ದಾರೆ. ಇವರ ವಿರುದ್ಧ ಪ್ರಕರಣ ದಾಖಲಿಸಬಾರದು ಎಂದು ಪೊಲೀಸರಿಗೆ ಸೂಚಿಸಿರುವ ಕಾರಣ ಪದೇ ಪದೇ ಇಂತಹ ಘಟನೆಗಳು ನಡೆಯುತ್ತಿವೆ’ ಎಂದು ಅಶೋಕ ಟೀಕಿಸಿದರು.

‘ಈ ಹಿಂದೆ ನಡೆದ ಪ್ರಕರಣಗಳಲ್ಲಿ ಕಿಡಿಗೇಡಿಗಳ ವಿರುದ್ಧ ದಾಖಲಿಸಿದ್ದ ಪ್ರಕರಣಗಳನ್ನು ಹಿಂದಕ್ಕೆ ಪಡೆದ ಕಾರಣ ಮುಸ್ಲಿಮರು ಪದೇ ಪದೇ ಈ ರೀತಿ ವರ್ತಿಸುತ್ತಿದ್ದಾರೆ. ಇಂತಹ ದುಷ್ಕರ್ಮಿಗಳ ವಿರುದ್ಧ ಗೂಂಡಾ ಕಾಯ್ದೆ ಹಾಕಿ, ಜೈಲಿಗೆ ಹಾಕಬೇಕು. ಇಲ್ಲವಾದರೆ ಸರ್ಕಾರವೇ ಇದರಲ್ಲಿ ಶಾಮೀಲಾಗಿದೆ ಮತ್ತು ಮತಕ್ಕಾಗಿ ಓಲೈಕೆ ಮಾಡುತ್ತಿದೆ ಎಂದು ಭಾವಿಸಬೇಕಾಗುತ್ತದೆ’ ಎಂದು ಅಶೋಕ ಹೇಳಿದರು.

‘ಮತಾಂಧರಿಗೆ ಆಶ್ರಯ’

> **ಶಿವಾಜಿ ಜಯಂತಿ ಮೆರವಣಿಗೆ ಮೇಲೆ ಕಲ್ಲು ತೂರಾಟ ನಡೆಸಿದ ದುಷ್ಕರ್ಮಿಗಳನ್ನು ಒದ್ದು ಒಳಗೆ ಹಾಕಿ. ಟಿಪ್ಪು, ಔರಂಗಜೇಬ್ ಮನಸ್ಥಿತಿ ಇರುವ ಕಿಡಿಗೇಡಿಗಳನ್ನು ಯಾವುದೇ ಕಾರಣಕ್ಕೂ ಕ್ಷಮಿಸಬಾರದು**
> **ಬಿ.ವೈ.ವಿಜಯೇಂದ್ರ**, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

‘ಬಾಗಲಕೋಟೆ ಬಸವಣ್ಣನ ಐಕ್ಯ ನಾಡು. ಅಲ್ಲಿ ಎಲ್ಲ ಸಮಾಜದವರು ಸಾಮರಸ್ಯದಿಂದ ಇದ್ದಾರೆ. ಇಂತಹ ಜಿಲ್ಲೆಯಲ್ಲಿ ಮತಾಂಧರಿಗೆ ಸರ್ಕಾರ ಆಶ್ರಯ ನೀಡುವಂತಹದ್ದು, ಅತ್ಯಂತ ಕೇಡಿನ ಸಂಗತಿ’ ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

‘ಶಿವಾಜಿ ಮಹಾರಾಜರು ಭಾರತ ಕಂಡ ಒಬ್ಬ ಅಪ್ರತಿಮ ನಾಯಕ. ಇಡೀ ದೇಶ ಅವರನ್ನು ಗೌರವದಿಂದ ಕಾಣುತ್ತದೆ. ಕಿಡಿಗೇಡಿಗಳು ಅವರ ಭಾವಚಿತ್ರದ ಮೆರವಣಿಗೆಗೆ ಅಪಮಾನ ಮಾಡಿರುವುದು ಖಂಡನೀಯ. ಬಾಗಲಕೋಟೆಯ ಎಸ್ಪಿಗೆ ಕಲ್ಲೇಟು ಬಿಟ್ಟು ರಕ್ತ ಸುರಿಯುತ್ತಿರುವ ದೃಶಗಳು ಇದ್ದರೂ ಕೂಡ ನನಗೇನು ಆಗಿಲ್ಲ ಎಂದು ಹೇಳಿದ್ದಾರೆ. ಕಲ್ಲು ತೂರಿದವರಿಗೆ, ಚಪ್ಪಲಿ ತೂರಿದವರಿಗೆ ಇದರ ಹಿಂದೆ ಷಡ್ಯಂತ್ರ ಮಾಡಿದವರಿಗೆ ಸರ್ಕಾರ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳುವುದಿಲ್ಲ. ತುಷ್ಟೀಕರಣ ಪರಾಕಾಷ್ಠೆಗೆ ಈ ಸರ್ಕಾರ ಮುಟ್ಟಿದೆ. ಇಲ್ಲಿ ನ್ಯಾಯ, ಧರ್ಮ ಮತ್ತು ನೀತಿಗೆ ಬೆಲೆ ಇಲ್ಲವಾಗಿದೆ’ ಎಂದು ಟೀಕಿಸಿದ್ದಾರೆ.

ಪೊಲೀಸ್–ಜೈಲು ಕಾರ್ಯ ವೈಖರಿಗೆ ಕಿಡಿ

ವಿಚಾರಣೆರಹಿತ ನ್ಯಾಯಾಂಗ ಬಂಧನದಲ್ಲಿ ಆರೋಪಿ; ಡಿಸಿಪಿ ಹಾಜರಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ಕು ವರ್ಷಗಳಿಂದ ಜೈಲಿನಲ್ಲಿರುವ ಆರೋಪಿಯೊಬ್ಬರನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣಾ ನ್ಯಾಯಾಲಯಕ್ಕೆ ಹಾಜರುಪಡಿಸದ ಜೈಲು ಅಧಿಕಾರಿಗಳು ಮತ್ತು ಇದೇ ಆರೋಪಿ ಜೈಲಿನಲ್ಲಿದ್ದರೂ ಜಾಮೀನು ರಹಿತ ವಾರಂಟ್ ಅನ್ನು ಜಾರಿಗೆ ತರಲು ಊರೆಲ್ಲಾ ಹುಡುಕಿದ ಎಚ್‌ಎಎಲ್ ಪೊಲೀಸರ ಕಾರ್ಯ ವೈಖರಿಗೆ ಕೆಂಡಾಮಂಡಲವಾದ ಹೈಕೋರ್ಟ್, ಕಾರಾಗೃಹಗಳ ಡಿಐಜಿ ಮತ್ತು ವೈಟ್‌ಫೀಲ್ಡ್ ವಿಭಾಗದ ಡಿಸಿಪಿಯ ಖುದ್ದು ಹಾಜರಿಗೆ ಆದೇಶಿಸಿದೆ.

ಈ ಸಂಬಂಧ ನಗರದ ಮದರಸಾ ಇಸ್ಲಾಂಪುರದ ಇಮ್ರಾನ್ ಅಲಿಯಾಸ್ ಕುಳ್ಳ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಸ್.ಆರ್. ಜಗದೀಶ, ‘ಆರೋಪಿ ಇಮ್ರಾನ್ ಅವರನ್ನು 2022ರ ಡಿಸೆಂಬರ್ 20ರಿಂದ ನ್ಯಾಯಾಂಗ ಬಂಧನದಲ್ಲಿ ಇರಿಸಲಾಗಿದೆ. ಈತನಕ ವಿಚಾರಣಾ ನ್ಯಾಯಾಲಯಕ್ಕೆ ಕೇವಲ ಮೂರು ಬಾರಿ ಮಾತ್ರ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಲಾಗಿದೆ. ಅಂತೆಯೇ, ಎಚ್‌ಎಲ್ ಪೊಲೀಸ್ ಠಾಣೆಯಲ್ಲೇ ದಾಖಲಾಗಿರುವ ಮತ್ತೊಂದು ಪ್ರಕರಣದಲ್ಲಿ ಬಾಡಿ ವಾರಂಟ್ ಹೊರಡಿಸಲಾಗಿತ್ತು. ಆದರೆ, ಆಸಾಮಿ ಮನೆಯಲ್ಲಿ ಇಲ್ಲದ ಕಾರಣ ವಾರಂಟ್ ಜಾರಿಗೊಳಿಸಿಲ್ಲ ಎಂದು ಎಚ್‌ಎಎಲ್ ಪೊಲೀಸರು ತಿಳಿಸಿದ್ದಾರೆ’ ಎಂದರು.

ಇದಕ್ಕೆ ರಾಜ್ಯ ಸರ್ಕಾರದ ಪರ ಹಾಜರಿದ್ದ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ‘ಈ ವಿಷಯದಲ್ಲಿ ಪೊಲೀಸರಿಂದ ತಪ್ಪಾಗಿದೆ’ ಎಂದರು. ಪ್ರಾಸಿಕ್ಯೂಷನ್ ವಿವರಣೆಗೆ ಆಘಾತ ವ್ಯಕ್ತಪಡಿಸಿದ ನ್ಯಾಯಪೀಠ ‘ಅರ್ಜಿದಾರ ಅಕ್ರಮ ಕಸ್ಟಡಿಯಲ್ಲಿದ್ದಾರೆ ಮತ್ತು ನ್ಯಾಯಾಂಗ ಬಂಧನದಲ್ಲಿರುವ ಆರೋಪಿಗೆ ಜಾಮೀನು ರಹಿತ ವಾರಂಟ್ (ಎನ್‌ಬಿಡಬ್ಲ್ಯು) ಜಾರಿ ಮಾಡಿರುವುದು ಕಾನೂನಿನ ತತ್ವಗಳ ಉಲ್ಲಂಘನೆಯಲ್ಲವೇ’ ಎಂದು ಪ್ರಶ್ನಿಸಿತು.

ಇಮ್ರಾನ್ ಅವರನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಲು ವಿಫಲವಾದ ಜೈಲು ಅಧಿಕಾರಿಗಳನ್ನೂ ಕಟುವಾಗಿ ತರಾಟೆಗೆ ತೆಗೆದುಕೊಂಡ ನ್ಯಾಯಪೀಠ, ‘ರೆಗ್ಯುಲರ್ ಕೇಸಿನಲ್ಲಿ ಆರೋಪಿಯನ್ನು ಇಷ್ಟು ದೀರ್ಘ ಅವಧಿಯಿಂದ ಸಕ್ಷಮ ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಇದು ಎಂಥ ಜೈಲು ಪ್ರಾಧಿಕಾರ? ಯಾಕೆ ಜೈಲಿನಲ್ಲಿ ವಿಡಿಯೊ ಕಾನ್ಫರೆನ್ಸ್ ಕನೆಕ್ಷನ್ ಸರಿ ಇರಲಿಲ್ಲವಾ ಅಥವಾ ಏನಾದರೂ ತಾಂತ್ರಿಕ ಸಮಸ್ಯೆ ಇತ್ತೇ?’ ಎಂದು ಕಿಡಿಕಾರಿತು.

‘ಈ ಲೋಪಕ್ಕೆ ಸಂಬಂಧಿಸಿದಂತೆ, ಕಾರಾಗೃಹಗಳ ಡಿಐಜಿ ಮತ್ತು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ನಾಳೆ ನ್ಯಾಯಾಲಯಕ್ಕೆ ಖುದ್ದು ಹಾಜರಾಗಿ ವಿವರಣೆ ನೀಡಬೇಕು’ ಎಂದು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಶನಿವಾರಕ್ಕೆ (ಫೆ.21) ಮುಂದೂಡಿತು.

ಆರೋಪಿಯ ಕೋರಿಕೆ ಏನು?

‘ನನ್ನ ವಿರುದ್ಧ ಮಾದಕ ದ್ರವ್ಯ ನಿಗ್ರಹ ಕಾಯ್ದೆ–1985 (ಎನ್‌ಡಿಪಿಎಸ್) ಮತ್ತು ಕಳ್ಳತನ ಅಪರಾಧಗಳ ಅಡಿಯಲ್ಲಿ ದಾಖಲಿಸಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಬೇಕು ಮತ್ತು ನನಗೆ ಪರಿಹಾರ ನೀಡಲು ಆದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

> **ಒಬ್ಬ ಆರೋಪಿ ವಿರುದ್ಧ ಒಂದೇ ಠಾಣೆಯಲ್ಲಿ 2 ಪ್ರಕರಣ ಇರುವುದು ಠಾಣಾಧಿಕಾರಿಗೆ ಗೊತ್ತಿಲ್ಲ ಎಂದರೆ ಏನರ್ಥ? ಠಾಣೆಗಳಲ್ಲಿ ಏನಾಗುತ್ತಿದೆ? ಪೊಲೀಸರಿಗೆ ಸೆಟಲ್‌ಮೆಂಟ್ ಮಾಡಲು ಸಮಯವಿದೆ. ಇದು ನಾಚಿಕೆಗೇಡಿನ ಸಂಗತಿಯಲ್ಲವೇ?**
> **ನ್ಯಾ.ಎಂ.ನಾಗಪ್ರಸನ್ನ**

ಆರೋಪಿ ಪತ್ತೆಗೆ ₹ 5 ಲಕ್ಷ ಬಹುಮಾನ ಘೋಷಿಸಿದ ರಾಷ್ಟ್ರೀಯ ತನಿಖಾ ದಳ

ಬೆಂಗಳೂರು: ಲಷ್ಕರ್ ಎ ತಯಬಾ ಸಂಘಟನೆಯ ಜತೆಗೆ ಸೇರಿ ಕಾರಾಗೃಹದಲ್ಲಿನ ಸಹ ಕೈದಿಗಳನ್ನು ಭಯೋತ್ಪಾದಕ ಕೃತ್ಯಗಳತ್ತ ಪ್ರೇರೇಪಿಸುತ್ತಿದ್ದ ಪ್ರಕರಣದ ಪ್ರಮುಖ ಆರೋಪಿಯ ಪತ್ತೆಗಾಗಿ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ₹5 ಲಕ್ಷ ನಗದು ಬಹುಮಾನ ಘೋಷಿಸಿದೆ.

ಜುನೈದ್ ಅಹಮದ್ (33) ಪತ್ತೆಗಾಗಿ ನಗದು ಬಹುಮಾನ ಎನ್‌ಐಎ ಘೋಷಿಸಿದೆ. ಆರೋಪಿ ವಿದೇಶದಲ್ಲಿ ತಲೆಮರೆಸಿಕೊಂಡಿರುವ ಶಂಕೆ ಇದೆ. ಆತನ ಪತ್ತೆಗೆ ಎನ್‌ಐಎ ಶೋಧ ನಡೆಸುತ್ತಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡನೇ ಪೂರಕ ದೋಷಾರೋಪಣೆಯನ್ನು ಇತ್ತೀಚೆಗೆ ಎನ್‌ಐಎ ನ್ಯಾಯಾಲಯಕ್ಕೆ ಸಲ್ಲಿಸಿತ್ತು.

ಜುನೈದ್ ಅಹಮದ್ ಅವರ ತಾಯಿ ಅನೀಸ್ ಫಾತಿಮಾ, ಎಎಸ್‌ಐ ಚಾನ್ ಪಾಷಾ ಹಾಗೂ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ವೈದ್ಯರಾಗಿದ್ದ ಎಸ್.ನಾಗರಾಜ್ ವಿರುದ್ಧ ಐಪಿಸಿ, ಯುಎ(ಪಿ) ಕಾಯ್ದೆ, ಸ್ಫೋಟಕ ವಸ್ತುಗಳ ಕಾಯ್ದೆ, ಭ್ರಷ್ಟಾಚಾರ ತಡೆ ಕಾಯ್ದೆ ಮತ್ತು ಕರ್ನಾಟಕ ಕಾರಾಗೃಹ ಕಾಯ್ದೆಯ ವಿವಿಧ ವಿಭಾಗಗಳ ಅಡಿಯಲ್ಲಿ ಆರೋಪಿಗಳು ಎಂದು ಎನ್‌ಐಎ ದೋಷಾರೋಪಪಟ್ಟಿಯಲ್ಲಿ ಉಲ್ಲೇಖಿಸಿತ್ತು.

ದಕ್ಷಿಣ ಕನ್ನಡ ಜಿಲ್ಲೆ ಮೂಡುಬಿದಿರೆಯ ಎಸ್‌ಕೆಎಫ್ ಸಂಸ್ಥೆ ಆರಂಭಿಸಿರುವ ಒಂದು ಲಕ್ಷ ನಗದು ಹೊಂದಿರುವ ‘ರೈತಪೀಠ’ ಪ್ರಶಸ್ತಿಯನ್ನು ಭತ್ತದ ತಳಿ ಸಂರಕ್ಷಿಸಿರುವ ಕೆ.ಬಿ. ದೇವರಾಯ ಮಿತ್ತಬಾಗಿಲು ದಂಪತಿಗೆ ಮುನಿಯಾಲು ಸಂಜೀವಿನಿ ಗೊಧಾಮದಲ್ಲಿ ಶುಕ್ರವಾರ ಪ್ರದಾನ ಮಾಡಲಾಯಿತು. ಎಸ್‌ಕೆಎಫ್ ಸಮೂಹ ಸಂಸ್ಥೆಯ ಸಂಸ್ಥಾಪಕ ಜಿ.ರಾಮಕೃಷ್ಣ ಆಚಾರ್, ಕನೇರಿ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ, ನಿಡಸೋಸಿಯ ನಿಜಲಿಂಗೇಶ್ವರ ಸ್ವಾಮೀಜಿ, ಡಾ. ಎಂ ಮೋಹನ್ ಆಳ್ವ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

‘ಮಂಡ್ಯಕ್ಕೆ ಎರಡು ಕೈಗಾರಿಕೆ ಖಚಿತ’

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ‘ಜಿಲ್ಲೆಯು ಮತ್ತಷ್ಟು ಅಭಿವೃದ್ಧಿ ಹೊಂದಬೇಕಾಗಿದ್ದು, ಒಂದು ಸಾವಿರ ಕೋಟಿ ವೆಚ್ಚದಲ್ಲಿ ಕನಿಷ್ಠ ಎರಡು ಕೈಗಾರಿಕೆಗಳನ್ನು ತರಲು ತೀರ್ಮಾನಿಸಿದ್ದೇನೆ. ಶ್ರೀ ಕಾಲಭೈರವನ ಈ ಸನ್ನಿಧಿಯಲ್ಲಿ ನಿಂತು ಧೈರ್ಯದಿಂದ ಹೇಳುತ್ತಿದ್ದೇನೆ. ಹೇಳಿದ ಕೆಲಸವನ್ನು ತಪ್ಪದೇ ಮಾಡುತ್ತೇನೆ’ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಭರವಸೆ ನೀಡಿದರು.

ತಾಲ್ಲೂಕಿನ ಆದಿಚುಂಚನಗಿರಿಯಲ್ಲಿ ಶುಕ್ರವಾರ ವಿಜ್ಞಾತಂ ಉತ್ಸವದಲ್ಲಿ ವಿಜ್ಞಾನಿ ಎಂ.ಕೆ.ಸೂರಪ್ಪ ಅವರಿಗೆ ಆದಿಚುಂಚನಗಿರಿ ಕ್ಷೇತ್ರ ನೀಡುವ ‘ವಿಜ್ಞಾತಂ 2026’ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ಜಿಲ್ಲೆಯ ಜನರ ಆಶೀರ್ವಾದ ನನ್ನ ಮೇಲಿದೆ. ಯಾವುದೇ ಕಾರಣಕ್ಕೂ ದ್ರೋಹ ಬಗೆಯದೆ ಕೆಲಸ ಮಾಡುತ್ತೇನೆ. ನನ್ನ ಕೆಲಸಗಳ ಬಗ್ಗೆ ಜಾಹೀರಾತು ಹಾಕಿಸಿ ಪ್ರಯೋಜನ ಪಡೆಯಲು ಬಯಸುವುದಿಲ್ಲ. ನನ್ನ ಕೆಲಸವನ್ನು ದೇವರು ನೋಡುತ್ತಾನೆ. ಭದ್ರಾವತಿ ಉಕ್ಕು ಕಾರ್ಖಾನೆ, ಎಚ್‌ಎಂಟಿ ಕಾರ್ಖಾನೆ ಶೀಘ್ರದಲ್ಲಿ ಪುನಶ್ಚೇತನಗೊಳಿಸಲಾಗುವುದು’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಆಧ್ಯಾತ್ಮದ ಜೊತೆಗೆ ವಿಜ್ಞಾನ ತಂತ್ರಜ್ಞಾನದ ವಿಷಯದಲ್ಲೂ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಯುವಪೀಳಿಗೆಗೆ ಮಾರ್ಗದರ್ಶಕರಾಗಿದ್ದಾರೆ’ ಎಂದರು.

> **ಅಭಿವೃದ್ಧಿಯಲ್ಲಿ ರಾಜಕೀಯ ಬೆರೆಸಬೇಕಾಗಿಲ್ಲ. ಪರಸ್ಪರ ಟೀಕೆ, ದೋಷಾರೋಪವೂ ಅಗತ್ಯವಿಲ್ಲ. ಎಲ್ಲರೂ ಸೇರಿ ಜಿಲ್ಲೆಯನ್ನು ಅಭಿವೃದ್ಧಿಪಥದತ್ತ ಕೊಂಡೊಯ್ಯೋಣ.**
> **ಎಚ್.ಡಿ.ಕುಮಾರಸ್ವಾಮಿ**, ಕೇಂದ್ರ ಸಚಿವ

ನಿರ್ಮಲಾನಂದನಾಥ ಸ್ವಾಮೀಜಿ ಅವರ 13ನೇ ವಾರ್ಷಿಕ ಪಟ್ಟಾಭಿಷೇಕದ ಅಂಗವಾಗಿ ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿಯಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಎಂ.ಕೆ.ಸೂರಪ್ಪ ಅವರಿಗೆ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು ‘ವಿಜ್ಞಾತಂ’ ಪ್ರಶಸ್ತಿ ಪ್ರದಾನ ಮಾಡಿದರು. ನಿರ್ಮಲಾನಂದನಾಥ ಸ್ವಾಮೀಜಿ, ಕೃಷಿ ಸಚಿವ ಚಲುವರಾಯಸ್ವಾಮಿ ಭಾಗವಹಿಸಿದ್ದರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಕಾಮಗಾರಿ ವಿಭಾಗ: ಹಾಸನ
ಕ.ರಾ.ರ.ಸಾ.ನಿ ಪ್ರಾದೇಶಿಕ ತರಬೇತಿ ಕೇಂದ್ರ ಕಟ್ಟಡ, ಡೈರಿ ವೃತ್ತದ ಹತ್ತಿರ, ರಿಂಗ್ ರಸ್ತೆ, ಹಾಸನ – 573 201.
ದೂರವಾಣಿ: 08172–295262. e-mail:eehsn@ksrtc.org
ಸಂ:ಕರಾಸಾ:ಕಾವಿಹಾ:ಕಾನಿಅ:ಕಿಅ: 599 :2025–26 ದಿನಾಂಕ: 18–02–2026

ಟೆಂಡರ್ ಪ್ರಕಟಣೆ ಸಂ: 09, 10, 11, 12 & 13 /2025–26
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ ಪದ್ಧತಿಯಲ್ಲಿ)
ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಎಂ.ಇ.ಎಸ್ ನಲ್ಲಿ ನೋಂದಾಯಿತರಾಗಿರುವ ಅರ್ಹ ಕಾಮಗಾರಿ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿ ಕೆಲಸಗಳಿಗೆ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು 'ಇ' ಆಡಳಿತದೊಡನೆ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಲು ಕೋರಲಾಗಿದೆ.
ಟೆಂಡರ್ ಪ್ರಕಟಣೆ ಮತ್ತು ಹೆಚ್ಚಿನ ವಿವರಗಳನ್ನು ಯಾವುದೇ ವೆಚ್ಚವಿಲ್ಲದೇ https://kppp.karnataka.gov.in Portal ವೆಬ್‌ಸೈಟ್‌ಗೆ ಲಾಗಿ ಆನ್ ಮಾಡಿ **ದಿನಾಂಕ: 21–02–2026ರ ನಂತರ** ವಿವರಗಳನ್ನು ಪಡೆದುಕೊಳ್ಳಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಯೋಜನಾ ಅಂದಾಜು ಮೊತ್ತ ರೂ.(ಲಕ್ಷಗಳಲ್ಲಿ)	ಮುಂಗಡ ಠೇವಣಿ ಹಣ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ
1.	ತರೀಕೆರೆ ನಗರದಲ್ಲಿ ಕ.ರಾ.ರ.ಸಾ.ನಿಗಮದ ಬಸ್ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಕಾಮಗಾರಿಗೆ ಯೋಜನಾ ನಿರ್ವಹಣೆ ಸಲಹೆಗಾರರನ್ನು ಆಯ್ಕೆ ಮಾಡುವುದು (ಪಿ.ಎಂ.ಸಿ)	915.00	45,000/–	07–03–2026
2.	ಕಡೂರು ನಗರದಲ್ಲಿ ಕ.ರಾ.ರ.ಸಾ.ನಿಗಮದ ಬಸ್ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಕಾಮಗಾರಿಗೆ ಯೋಜನಾ ನಿರ್ವಹಣೆ ಸಲಹೆಗಾರರನ್ನು ಆಯ್ಕೆ ಮಾಡುವುದು(ಪಿ.ಎಂ.ಸಿ)	598.00	25,000/–	07–03–2026
3.	ಅರಸೀಕೆರೆಯಲ್ಲಿರುವ ಕ.ರಾ.ರ.ಸಾ.ನಿಗಮದ ಬಸ್ ನಿಲ್ದಾಣವನ್ನು ಅಭಿವೃದ್ಧಿ ಪಡಿಸುವ ಕಾಮಗಾರಿಗೆ ಯೋಜನಾ ನಿರ್ವಹಣೆ ಸಲಹೆಗಾರರನ್ನು ಆಯ್ಕೆ ಮಾಡುವುದು(ಪಿ.ಎಂ.ಸಿ)	1958.00	75,000/–	07–03–2026
4.	ಚಿಕ್ಕಮಗಳೂರು ನಗರದಲ್ಲಿ ಕ.ರಾ.ರ.ಸಾ.ನಿಗಮದ ಬಸ್ ನಿಲ್ದಾಣದ ಉನ್ನತೀಕರಣ ಅಭಿವೃದ್ಧಿ ಕಾಮಗಾರಿಗೆ ಯೋಜನಾ ನಿರ್ವಹಣೆ ಸಲಹೆಗಾರರನ್ನು ಆಯ್ಕೆ ಮಾಡುವುದು(ಪಿ.ಎಂ.ಸಿ)	1987.00	75,000/–	07–03–2026
5.	ಸಕಲೇಶಪುರ ಬಾಗೆಯಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಉಪ ಪ್ರಾದೇಶಿಕ ಸಾರಿಗೆ ಕಛೇರಿಯ ಕಟ್ಟಡ ಹಾಗೂ ಚಾಲನಾ ಪಥ ಕಾಮಗಾರಿಗೆ ಯೋಜನಾ ನಿರ್ವಹಣೆ ಸಲಹೆಗಾರರನ್ನು ಆಯ್ಕೆ ಮಾಡುವುದು(ಪಿ.ಎಂ.ಸಿ)	1150.00	50,000/–	07–03–2026

ಹೆಚ್ಚಿನ ಮಾಹಿತಿಗಳನ್ನು **ಕಾರ್ಯನಿರ್ವಾಹಕ ಅಭಿಯಂತರರು, ಕ.ರಾ.ರ.ಸಾ.ನಿಗಮ, ಕಾಮಗಾರಿ ವಿಭಾಗ, ಕ.ರಾ.ರ.ಸಾ.ನಿಗಮ ಪ್ರಾದೇಶಿಕ ತರಬೇತಿ ಕಟ್ಟಡ, ಡೈರಿ ವೃತ್ತ ಹತ್ತಿರ, ರಿಂಗ್ ರಸ್ತೆ, ಹಾಸನ,** ಇಲ್ಲಿ ಕಚೇರಿ ದಿನಗಳಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಕ.ರಾ.ರ.ಸಾ.ನಿಗಮ, ಕಾಮಗಾರಿ ವಿಭಾಗ, ಹಾಸನ.
ವಾಸಾಸಂಇ/ವಾ.ಪ್ರ/5786/ಎಂಎಎ/2025–26

ಉಡುಪಿ ನಗರಸಭೆ
ಕವಿ ಮುದ್ದಣ್ಣ ಮಾರ್ಗ, ಉಡುಪಿ – 576 101 ದೂರವಾಣಿ ಸಂಖ್ಯೆ : 0820–2520306
E-MAIL: ka.udupi.cmc@gmail.com
ಸಂಖ್ಯೆ: ಉನಸ/ಹೆಚ್.ಎಲ್.ಹೆಚ್.2/ಸಿ.ಆರ್.–450/2025–26, ದಿನಾಂಕ: 20.02.2026

–::ಟೆಂಡರ್ ಪ್ರಕಟಣೆ–2ನೇ ಕರೆ::–
ಕೆ.ಟಿ.ಟಿ.ಪಿ.ಕಾಯ್ದೆ 1999 ಮತ್ತು ನಿಯಮಗಳು 2000ರನ್ವಯ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಉಡುಪಿ ನಗರಸಭೆಯ ನೆಲಭರ್ತಿ ಜಾಗದಲ್ಲಿ ಇರುವ ಮೆಟಿರಿಯಲ್ ರಿಕವೆರಿ ಫೆಸಿಲಿಟಿ (ಎಂ.ಆರ್.ಎಫ್.) ಮತ್ತು ಇತರೆ ಘಟಕಗಳಿಗೆ Rooftop Ongrid ಸೌರ ಘಟಕಗಳನ್ನು ಅಳವಡಿಸುವ ಬಗ್ಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 06/03/2026 ಸಮಯ ಸಂಜೆ 05.15 ಗಂಟೆವರೆಗೆ. ಅರ್ಹ ಗುತ್ತಿಗೆದಾರರು/ಏಜನ್ಸಿಯವರು ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (https://kppp.karnataka.gov.in) ಅಪ್‌ಲೋಡ್ ಮಾಡಿರುವ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದು.

ಕ್ರ.ಸಂ	ಕೆಲಸದ ಹಸರು	ಟೆಂಡರ್ ಸಂಖ್ಯೆ	ಟೆಂಡರಿಗಿಟ್ಟ ಮೊತ್ತ	ಇ.ಎಂ.ಡಿ ಮೊತ್ತ
1	Installation of roof top Solar Panel above the shed roof in SWM site Karwal	DMA/2025-26/IND5847/CALL-2	Rs.49.00 Lakhs.	Rs.1,22,500.00

ಸಹಿ/– ಪೌರಾಯುಕ್ತರು, ಉಡುಪಿ ನಗರಸಭೆ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
[ICAR, NAAC accredited and UGC u/s 12(B) & 2(f) approved]
ಸರಕು ಖರೀದಿ ಅಧಿಕಾರಿಗಳ ಕಾರ್ಯಲಯ, ಕೃವಿವಿ, ರಾಯಚೂರು
ಮಿಂಚಂಚೆ:spo@uasraichur.edu.in ದೂರವಾಣಿ ಸಂಖ್ಯೆ: 08532 220165
ಇ–ಟೆಂಡರ್ ಪ್ರಕಟಣೆ ಸಂಖ್ಯೆ: SPO/UASR/E-Proc-15/2025-26, Dt:19.02.2026
ಟೆಂಡರ ಪ್ರಕಟಣೆ
ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿಗೆ ಸಂಬಂಧಪಟ್ಟಂತೆ INVITING E- TENDER NOTIFICATION FOR THE SUPPLY, INSTALLATION & COMMISSIONING OF SEED PROCESSING PLANT, SCIENTIFIC EQUIPMENTS, VACCUME PACKING MACHINE & E-BOOKS ಟೆಂಡರನ್ನು ಕರೆಯಲಾಗಿದ್ದು, ಆಸಕ್ತ ಸರಬರಾಜುದಾರರು ಆನ್‌ಲೈನ್ ಮುಖಾಂತರ ಅಂದರೆ www.kppp.karnataka.gov.in ಜಾಲತಾಣದಲ್ಲಿ (ಬೇಡಿಕೆ ಸಂಖ್ಯೆ: UASRCR/2025-26/IND0071/Call-2, 0079/call-2 & 0088 to 0097) ಭಾಗವಹಿಸಬಹುದು. ಈ ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಭರ್ತಿಮಾಡಿ ಸಲ್ಲಿಸುವಕಡೆ ದಿನಾಂಕ: 06.03.2026 ಆಗಿರುತ್ತದೆ
ಸಹಿ/– ಸರಕು ಖರೀದಿ ಅಧಿಕಾರಿಗಳು,
ಕೃವಿವಿ., ರಾಯಚೂರು.
DIP/RCR/715/KSMCA/718/2025-26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
#2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು–560 009.
ದೂರವಾಣಿ ಸಂಖ್ಯೆ: 080–22265383., Website: www.kiadb.in
ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–28/1717/2025–26 ದಿನಾಂಕ:20.02.2026
ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಆಧುನಿಕ ತಂತ್ರಜ್ಞಾನದ ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕಾಮಗಾರಿಗಳಲ್ಲಿ ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ–ಲಕೋಟೆ ಪದ್ಧತಿಯಡಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು: ಯಾದಗಿರಿ ಜಿಲ್ಲೆ, ಯಾದಗಿರಿ ತಾಲ್ಲೂಕಿನ ಕಡೇಚೂರು ಕೈಗಾರಿಕಾ ಪ್ರದೇಶದ 2ನೇ ಹಂತದ ಉಪ ಬಡಾವಣೆಯಲ್ಲಿ ಡಾಂಬರೀಕರಣ, ಆರ್‌ಸಿಸಿ ಸೈಡ್ ಡ್ರೈನ್, ಆರ್‌ಸಿಸಿ ಕ್ರಾಸ್ ಡ್ರೈನೇಜ್ ಮತ್ತು ಎಚ್‌ಡಿಪಿಇ ನೀರು ಸರಬರಾಜು ಪೈಪ್‌ಲೈನ್ ನಿರ್ಮಾಣ ಒಳಗೊಂಡಂತೆ 15ಮೀ ಅಗಲದ ರಸ್ತೆಯ ರಚನೆ ಸೇರಿದಂತೆ ಕೈಗಾರಿಕಾ ಬಡಾವಣೆಯನ್ನು ನಿರ್ಮಿಸುವ ಕಾಮಗಾರಿ.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **09.03.2026, ಸಂಜೆ 4.00 ಗಂಟೆಯವರೆಗೆ.**
ಟೆಂಡರ್‌ದಾರರು ಬಿಡ್ಡಿಂಗ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
ಮುಖ್ಯ ಅಭಿಯಂತರರು–2
ವಾಸಾಸಂಇ/ವಾಪ್ರ/ಜೆಎ/5779/2025–26

‘ಅಮೆರಿಕದ ಬಿಗಿಹಿಡಿತದಲ್ಲಿ ಮೋದಿ’

ವ್ಯಾಪಾರ ಒಪ್ಪಂದ ವಿಚಾರವಾಗಿ ಕೇಂದ್ರ ಸರ್ಕಾರದ ವಿರುದ್ಧ ರಾಹುಲ್ ವಾಗ್ದಾಳಿ

ನವದೆಹಲಿ (ಪಿಟಿಐ): ಭಾರತ–ಅಮೆರಿಕ ವ್ಯಾಪಾರ ಒಪ್ಪಂದ ವಿಚಾರವಾಗಿ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ಮುಂದುವರಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ‘ಅಮೆರಿಕದ’ ಬಿಗಿ ಹಿಡಿತ’ಕ್ಕೆ ಸಿಲುಕಿ ಪ್ರಧಾನಿ ನರೇಂದ್ರ ಮೋದಿ ಅವರು ‘ದೈನ್ಯ ಸ್ಥಿತಿ’ಯಲ್ಲಿ ಶರಣಾಗಿದ್ದಾರೆ. ಹೀಗಾಗಿ ಅಮೆರಿಕಕ್ಕೆ ಹೆಚ್ಚಿನದನ್ನು ನೀಡಿ, ಭಾರತ ಕಡಿಮೆ ಪಡೆದುಕೊಳ್ಳುವ ಒಪ್ಪಂದಕ್ಕೆ ಅವರು ಸಹಿ ಮಾಡಿದ್ದಾರೆ’ ಎಂದು ಆರೋಪಿಸಿದ್ದಾರೆ.

ಒಪ್ಪಂದದಿಂದಾಗಿ ಭಾರತವು ‘ಡೇಟಾ ಕಾಲೊನಿ’ ಆಗಲಿದೆ ಎಂದೂ ಟೀಕಿಸಿದ್ದಾರೆ.

ಒಪ್ಪಂದದ ಮೂಲಕ ದೇಶವನ್ನೇ ಮಾರಾಟ ಮಾಡಲಾಗಿದೆ ಎಂದು ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ‘ಎಕ್ಸ್’ನಲ್ಲಿ ಕಿಡಿಕಾರಿದ್ದಾರೆ. ಇದರೊಂದಿಗೆ ಸಂಸತ್ತಿನಲ್ಲಿ ತಾವು ಇತ್ತೀಚೆಗೆ ಮಾತನಾಡಿದ್ದ ವಿಡಿಯೊವನ್ನೂ ಲಗತ್ತಿಸಿದ್ದಾರೆ.

‘ಅಮೆರಿಕನ್ನರ ಒಳ್ಳೆಯದಕ್ಕಾಗಿ ನಮ್ಮ ರೈತರೇಕೆ ತ್ಯಾಗ ಮಾಡಬೇಕು? ತೈಲ ಪೂರೈಕೆಯನ್ನು ಅಮೆರಿಕದ ನಿಯಂತ್ರಣಕ್ಕೆ ನೀಡಿ, ಭಾರತದ ಇಂಧನ ಭದ್ರತೆಯೊಂದಿಗೆ ಏಕೆ ರಾಜಿಯಾಗಬೇಕು ಮತ್ತು ಪ್ರಧಾನಿ ಏಕೆ ಒಪ್ಪಂದಕ್ಕೆ ಸಹಿ ಮಾಡಿದ್ದಾರೆ– ಈ ಎಲ್ಲಕ್ಕೂ ಉತ್ತರವೆಂದರೆ, ಮೋದಿ ಅಮೆರಿಕಕ್ಕೆ ಶರಣಾಗಿರುವುದು’ ಎಂದು ಹೇಳಿದ್ದಾರೆ.

‘ರಾಜಕೀಯ ‘ಬಿಗಿ ಹಿಡಿತ’ವು ಗುಟ್ಟಾಗಿರುತ್ತದೆ. ಸಾಮಾನ್ಯ ಜನರ ಕಣ್ಣಿಗೆ ಕಾಣುವುದಿಲ್ಲ. ಸೂಕ್ಷ್ಮವಾಗಿ ಗಮನಿಸಿದರಷ್ಟೇ ಕಾಣುತ್ತದೆ’ ಎಂದಿದ್ದಾರೆ.

‘ಒಂದೆಡೆ ಅಮೆರಿಕದಲ್ಲಿ ಉದ್ಯಮಿ ಗೌತಮ್ ಅದಾನಿ ವಿರುದ್ಧದ ಕ್ರಿಮಿನಲ್ ಪ್ರಕರಣ, ಇನ್ನೊಂದೆಡೆ ಎಪ್‌ಸ್ಟೈನ್ ಹಗರಣ, ಮತ್ತೊಂದೆಡೆ ಚೀನಾ (ನರವಣೆ ಅವರ ಅಪ್ರಕಟಿತ ‘ಆತ್ಮಚರಿತ್ರೆ’) ಇವೆಲ್ಲವೂ ಮೋದಿ ಅವರನ್ನು ಇಕ್ಕಟ್ಟಿಗೆ ಸಿಲುಕಿಸಿದೆ’ ಎಂದಿದ್ದಾರೆ.

ಚಮ್ಮಾರನ ಅಂಗಡಿಗೆ ಭೇಟಿ

ಸುಲ್ತಾನ್‌ಪುರ (ಪಿಟಿಐ): ರಾಹುಲ್ ಗಾಂಧಿ ಅವರು ಚಮ್ಮಾರ ದಿವಂಗತ ರಾಮ್ ಚೇತ್ ಅವರ ಅಂಗಡಿ ಮುಂದೆ ತಮ್ಮ ವಾಹನವನ್ನು ನಿಲ್ಲಿಸಿ, ಅವರ ಕುಟುಂಬಸ್ಥರೊಂದಿಗೆ ಶುಕ್ರವಾರ ಮಾತುಕತೆ ನಡೆಸಿದರು.

ರಾಹುಲ್ ಗಾಂಧಿ ಅವರು 2024ರಲ್ಲಿ ಸುಲ್ತಾನ್‌ಪುರ ಮಾರ್ಗವಾಗಿ ತೆರಳುತ್ತಿದ್ದ ವೇಳೆ ರಾಮ್ ಚೇತ್ ಅಂಗಡಿಗೆ ಭೇಟಿ ನೀಡಿದ್ದರು. ನಂತರದಲ್ಲಿ ಅಂಗಡಿಯು ಜನಜನಿತವಾಗಿತ್ತು. ಮೂರು ತಿಂಗಳ ಹಿಂದೆ ರಾಮ್ ಚೇತ್ ಅವರು ಕ್ಯಾನ್ಸರ್‌ನಿಂದ ಮೃತಪಟ್ಟಿದ್ದಾರೆ.

ರಾಹುಲ್ ಗಾಂಧಿ ಅವರು ರಾಮ್‌ಚೇತ್ ಅವರ ಕುಟುಂಬಸ್ಥರ ಕುಶಲೋಪರಿ ವಿಚಾರಿಸಿದರು. ಇದೇ ಸಂದರ್ಭದಲ್ಲಿ ನಿಧನಕ್ಕೆ ಸಂತಾಪ ಸೂಚಿಸಿದರು.

‘ರಾಜಕೀಯ ದುರುದ್ದೇಶದಿಂದ ಮಾನನಷ್ಟ ಮೊಕದ್ದಮೆ’

ಸುಲ್ತಾನ್‌ಪುರ, ಉತ್ತರಪ್ರದೇಶ (ಪಿಟಿಐ): ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧದ ಹೇಳಿಕೆಗಾಗಿ ಸಂಬಂಧಿಸಿದಂತೆ 2018ರಲ್ಲಿ ದಾಖಲಾದ ಮಾನನಷ್ಟ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಶುಕ್ರವಾರ ಸುಲ್ತಾನ್‌ಪುರದ ಜನಪ್ರತಿನಿಧಿಗಳ (ಸಂಸದರು–ಶಾಸಕರ) ನ್ಯಾಯಾಲಯದಲ್ಲಿ ಹೇಳಿಕೆ ದಾಖಲಿಸಿದರು.

ಲಖನೌದಲ್ಲಿರುವ ಚೌಧರಿ ಚರಣ್ ಸಿಂಗ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಶುಕ್ರವಾರ ಬಂದಿಳಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಪಕ್ಷದ ನಾಯಕರು ಬರಮಾಡಿಕೊಂಡರು ಪಿಟಿಐ ಚಿತ್ರ

‘ರಾಜಕೀಯ ದುರುದ್ದೇಶದಿಂದ ನನ್ನ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, ಪಕ್ಷ ಹಾಗೂ ನನ್ನ ವರ್ಚಸ್ಸನ್ನು ಹಾಳುಮಾಡುವ ಗುರಿ ಹೊಂದಿದ್ದಾರೆ ಎಂದು ವಿಶೇಷ ನ್ಯಾಯಾಧೀಶ ಶುಭಾಂ ವರ್ಮಾ ಮುಂದೆ ರಾಹುಲ್ ಗಾಂಧಿ ಹೇಳಿಕೆ ನೀಡಿದ್ದಾರೆ’ ಎಂದು ಅವರ ಪರ ವಕೀಲ ಕಾಶಿ ಪ್ರಸಾದ್ ಶುಕ್ಲಾ ಹೇಳಿಕೆ ನೀಡಿದ್ದಾರೆ.

ತನ್ನ ಮೇಲಿನ ಆರೋಪಕ್ಕೆ ಸಂಬಂಧಿಸಿದಂತೆ ರಾಹುಲ್ ಗಾಂಧಿ ಸಾಕ್ಷ್ಯ ಸಲ್ಲಿಸುವಂತೆ ಕೇಳಿಕೊಂಡ ಹಿನ್ನೆಲೆಯಲ್ಲಿ ಮುಂದಿನ ವಿಚಾರಣೆಯನ್ನು ಮಾರ್ಚ್ 9ಕ್ಕೆ ವಿಚಾರಣೆ ನಿಗದಿಪಡಿಸಲಾಗಿದೆ.

‘ನನ್ನ ಮೇಲಿನ ಆರೋಪವು ಆಧಾರರಹಿತವಾಗಿದೆ. ನಾನು ಯಾರ ವಿರುದ್ಧವೂ ಅವಹೇಳನಕಾರಿ ಪದಗಳನ್ನು ಬಳಸಿಲ್ಲ. ಯಾರನ್ನಾದರೂ ದೂಷಿಸುವ ಉದ್ದೇಶದಿಂದ ಅಂತಹ ಭಾಷೆ ಬಳಸಿದ್ದೇನೆಯೇ? ನನ್ನ ಹೇಳಿಕೆಯನ್ನು ತಿರುಚಿ, ಸುಳ್ಳು ದೂರು ದಾಖಲಿಸಲಾಗಿದೆ ಎಂದು ರಾಹುಲ್ ಗಾಂಧಿ ಅವರು ಹೇಳಿಕೆ ನೀಡಿದ್ದಾರೆ’ ಎಂದು ವಕೀಲ ಶುಕ್ಲಾ ವಿವರಿಸಿದ್ದಾರೆ.

ರಾಹುಲ್ ಗಾಂಧಿ ನ್ಯಾಯಾಲಯಕ್ಕೆ ಹೇಳಿಕೆ ದಾಖಲಿಸಲು ಬಂದ ವೇಳೆ ಅವರ ಕಾರ್ಯಕರ್ತರು ಘೋಷಣೆಗಳನ್ನು ಕೂಗಿದರು.

ನೆರೆದಿದ್ದ ಕಾರ್ಯಕರ್ತರತ್ತ ನಗೆಬೀರಿ ಅಲ್ಲಿಂದ ತೆರಳಿದರು.

ನ್ಯಾಯಾಲಯದ ವಿಚಾರಣೆಗೂ ಮುನ್ನ ಸ್ಥಳೀಯ ಕಾಂಗ್ರೆಸ್ ನಾಯಕರು ಸುಲ್ತಾನ್‌ಪುರದ ವೃತ್ತಗಳಲ್ಲಿ ‘ಸತ್ಯಮೇವ ಜಯತೇ’ ಪೋಸ್ಟರ್‌ಗಳನ್ನು ಪ್ರದರ್ಶಿಸಿದ್ದರು.

‘5 ವರ್ಷದ ಯೋಜನೆ ಬಗ್ಗೆ ಹೇಳಿ’

ಅಸ್ಸಾಂ ಮುಖ್ಯಮಂತ್ರಿ ವಿರುದ್ಧ ಪ್ರಿಯಾಂಕಾ ಗಾಂಧಿ ಟೀಕೆ

ಗುವಾಹಟಿ (ಪಿಟಿಐ): ‘ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ಮುಂದಿನ ಐದು ವರ್ಷಗಳಲ್ಲಿ ಒದಗಿಸಬಹುದಾದ ಉದ್ಯೋಗ, ಅಭಿವೃದ್ಧಿ ಕುರಿತು ಮಾತನಾಡಬೇಕೇ ಹೊರತು, 10 ವರ್ಷದ ಹಿಂದೆ ಕಾಂಗ್ರೆಸ್‌ನಲ್ಲಿ ತನಗೆ ಮುಖ್ಯಮಂತ್ರಿ ಸ್ಥಾನ ಸಿಗಲಿಲ್ಲ ಎಂಬ ಆರೋಪ ಮಾಡಿದರೆ ಏನೂ ಉಪಯೋಗವಿಲ್ಲ’ ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ, ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಶುಕ್ರವಾರ ಟೀಕಿಸಿದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಮತ್ತು ಅಸ್ಸಾಂ ಸ್ಕ್ರೀನಿಂಗ್ ಸಮಿತಿ ಅಧ್ಯಕ್ಷೆಯೂ ಆದ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಶುಕ್ರವಾರ ಗುವಾಹಟಿಯಲ್ಲಿ ಪಕ್ಷದ ನಾಯಕರ ಜತೆಗೆ ಮಾತುಕತೆ ನಡೆಸಿದರು ಪಿಟಿಐ ಚಿತ್ರ

ಅಸ್ಸಾಂ ಸರ್ಕಾರದಲ್ಲಿನ ಭ್ರಷ್ಟಾಚಾರ, ಒಂದು ಕುಟುಂಬದಲ್ಲಿ ಸಂಪತ್ತಿನ ಕೇಂದ್ರೀಕರಣ, ರಾಜ್ಯ ಆಸ್ತಿಗಳನ್ನು ಕೈಗಾರಿಕೋದ್ಯಮಿಗಳಿಗೆ ಹಸ್ತಾಂತರಿಸುತ್ತಿರುವ ವಿಚಾರಗಳ ಕುರಿತು ಶರ್ಮಾ ಅವರನ್ನು ಗುರಿಯಾಗಿಸಿ ಮಾತನಾಡಿದ ಪ್ರಿಯಾಂಕಾ, ಬದಲಾವಣೆಯ ಸಮಯ ಬಂದಿದೆ ಎಂಬುದನ್ನು ಅಸ್ಸಾಂನ ಜನರು ಅರಿತಿದ್ದಾರೆ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ರಾಜಕೀಯದಲ್ಲಿ ಅನೇಕ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತದೆ. ಅದರಲ್ಲಿ ಕೆಲವು ಪರವಾಗಿರಬಹುದು, ಇನ್ನೂ ಕೆಲವು ವಿರುದ್ಧವಾಗಿರಬಹುದು. ಅವುಗಳನ್ನು ಸಹಿಸಿಕೊಂಡು ಸಾಗಬೇಕು. ಆದರೆ ಶರ್ಮಾ ಅವರು ಇನ್ನೂ 10 ವರ್ಷಗಳ ಹಿಂದಿನ ವಿಷಯದ ಬಗ್ಗೆಯೇ ಅಳುತಿದ್ದರೆ ನಾನೇನು ಹೇಳಲಿ’ ಎಂದು ಅವರು ಪ್ರಶ್ನಿಸಿದರು.

ಇತ್ತೀಚೆಗೆ ಮಾತನಾಡಿದ್ದ ಶರ್ಮಾ ಅವರು, ‘ನಾನು ಕಾಂಗ್ರೆಸ್‌ನಲ್ಲಿದ್ದಾಗ 2014ರಲ್ಲಿ ಪಕ್ಷದ 58 ಶಾಸಕರು ನನ್ನನ್ನು ಬೆಂಬಲಿಸಿದ್ದರು. ಆಗಿನ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಅಸ್ಸಾಂನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲು ದಿನಾಂಕ ನಿಗದಿಪಡಿಸುವಂತೆ ಸೂಚಿಸಿದ್ದರು. ಆದರೆ ಅಮೆರಿಕದಲ್ಲಿದ್ದ ರಾಹುಲ್ ಗಾಂಧಿ ಅವರು ಪಕ್ಷದ ನಾಯಕರಿಗೆ ಫೋನ್ ಮಾಡಿದ ಬಳಿಕ ಪರಿಸ್ಥಿತಿ ಬದಲಾಯಿತು’ ಎಂದು ಹೇಳಿದ್ದರು. ಅದಕ್ಕೆ ಪ್ರಿಯಾಂಕಾ ಪ್ರತಿಕ್ರಿಯಿಸಿದರು.

> **ಪಾಕಿಸ್ತಾನದ ಜತೆ ಸಂಬಂಧ ಕಲ್ಪಿಸಿ, ಕಾಂಗ್ರೆಸ್ ಸಂಸದ ಗೌರವ್ ಗೊಗೊಯ್ ಅವರ ಪತ್ನಿ ಮತ್ತು ಮಕ್ಕಳ ವಿರುದ್ಧ ಆರೋಪಿಸುವುದು ಸರಿಯಾದ ರಾಜಕಾರಣವಲ್ಲ**
> **ಪ್ರಿಯಾಂಕಾ ಗಾಂಧಿ ವಾದ್ರಾ**
> ಕಾಂಗ್ರೆಸ್ ಸಂಸದೆ

‘ಯುವ ಸಮುದಾಯ ಮತ್ತು ಮಹಿಳೆಯರು ಉದ್ಯೋಗ ಬಯಸುತ್ತಿದ್ದಾರೆ. ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ’ ಎಂದು ಅವರು ವಾದ್ರಾ ಹೇಳಿದರು.

ಶರ್ಮಾ 2015ರಲ್ಲಿ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದರು. 2016ರಲ್ಲಿ ಅಸ್ಸಾಂನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದ್ದರು.

ಜುಬೀನ್ ಅಸ್ಸಾಂನ ಆತ್ಮದ ಧ್ವನಿ: ಗಾಯಕ ಜುಬೀನ್ ಗರ್ಗ್ ಅವರ ಸಮಾಧಿ ಸ್ಥಳಕ್ಕೆ ಶುಕ್ರವಾರ ತೆರಳಿದ ಪ್ರಿಯಾಂಕಾ ನಮಿಸಿ ಗೌರವ ಸಲ್ಲಿಸಿದರು. ‘ಗರ್ಗ್ ಅವರು ಅಸ್ಸಾಂನ ಆತ್ಮದ ಧ್ವನಿಯಾಗಿದ್ದರು. ಅವರು ರಾಜಕೀಯಕ್ಕಿಂತ ಉತ್ತುಂಗದಲ್ಲಿದ್ದಾರೆ’ ಎಂದು ಅವರು ಪ್ರತಿಕ್ರಿಯಿಸಿದರು.

‘ಘನತೆಯಿಂದ ಬದುಕುವ ಹಕ್ಕಿನ ಉಲ್ಲಂಘನೆ’

ಮನೆ ಪಕ್ಕದಲ್ಲಿರುವ ಸಾರ್ವಜನಿಕ ಶೌಚಾಲಯ ಕೆಡವಿ: ದೆಹಲಿ ಹೈಕೋರ್ಟ್

ನವದೆಹಲಿ (ಪಿಟಿಐ): ಮನೆ ಪಕ್ಕದಲ್ಲೇ ಸಾರ್ವಜನಿಕ ಶೌಚಾಲಯ ಹಾಗೂ ತೆರೆದ ಕಸದ ತೊಟ್ಟಿಯ ನಿರ್ಮಾಣವು ಸ್ವಚ್ಛ ಮತ್ತು ಆರೋಗ್ಯಕರ ವಾತಾವರಣದಲ್ಲಿ ಘನತೆಯಿಂದ ಬದುಕುವ ಹಕ್ಕನ್ನು ಉಲ್ಲಂಘಿಸುತ್ತದೆ ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ಆರೋಗ್ಯಕರ ವಾತಾವರಣವು ಆರೋಗ್ಯಕರ ಜೀವನದ ಅವಿಭಾಜ್ಯ ಅಂಗವಾಗಿದೆ ಹಾಗೂ ಅನಾರೋಗ್ಯಕರ ವಾತಾವರಣವು ಘನತೆಯಿಂದ ಬದುಕುವ ಹಕ್ಕಿಗೆ ಅಡ್ಡಿ ಉಂಟುಮಾಡಲಿದೆ ಎಂದು ನ್ಯಾಯಮೂರ್ತಿ ಅಮಿತ್ ಬನ್ಸಲ್ ಹೇಳಿದ್ದಾರೆ.

ಮನೆಯ ಗೋಡೆಗಳಿಗೆ ಹೊಂದಿಕೊಂಡಂತೆ ಅನಧಿಕೃತವಾಗಿ ತೆರೆದ ಕಸದ ತೊಟ್ಟಿ ಹಾಗೂ ಸಾರ್ವಜನಿಕ ಶೌಚಾಲಯ ನಿರ್ಮಿಸಿರುವ ಸ್ಥಳೀಯ ಆಡಳಿತದ ವಿರುದ್ಧ ಆಕ್ಷೇಪ ವ್ಯಕ್ತಪಡಿಸಿ ವಕೀಲರೊಬ್ಬರು ಸಲ್ಲಿಸಿರುವ ಅರ್ಜಿ ವಿಚಾರಣೆ ವೇಳೆ ನ್ಯಾಯಾಲಯವು ಫೆ.16ರಂದು ಈ ಆದೇಶವನ್ನು ಹೊರಡಿಸಿದೆ.

‘ನೆರೆಯ ಸುಮಾರು 150 ಕುಟುಂಬಗಳು ತಮ್ಮ ಮನೆಗಳ ತ್ಯಾಜ್ಯವನ್ನು ವಿಲೇವಾರಿ ಮಾಡಲು ನಮ್ಮ ಮನೆ ಪಕ್ಕದಲ್ಲಿರುವ ಕಸದ ತೊಟ್ಟಿಯನ್ನು ಬಳಸುತ್ತಿದ್ದಾರೆ. ಕಸದ ತೊಟ್ಟಿ ಮತ್ತು ಸಾರ್ವಜನಿಕ ಶೌಚಾಲಯದ ಬಳಿ ನೈರ್ಮಲ್ಯ ಕಾಪಾಡುವಂತೆ ಎಂಸಿಡಿ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ, ಇದುವರೆಗೆ ಯಾವೊಂದು ಕ್ರಮವನ್ನೂ ತೆಗೆದುಕೊಂಡಿಲ್ಲ’ ಎಂದು ಅರ್ಜಿದಾರ ವಕೀಲರು ನ್ಯಾಯಾಲಯದ ಗಮನಕ್ಕೆ ತಂದರು.

ಅರ್ಜಿದಾರರ ಮನೆ ಪಕ್ಕದಲ್ಲಿರುವ ಕಸದ ತೊಟ್ಟಿ ಹಾಗೂ ಸಾರ್ವಜನಿಕ ಶೌಚಾಲಯವನ್ನು ಕೆಡವುವಂತೆ ನ್ಯಾಯಾಲಯವು ಎಂಸಿಡಿಗೆ ನಿರ್ದೇಶಿಸಿದೆ.

‘ಐಎನ್‌ಎಸ್ ಶಿಕ್ರ: ನೌಕಾಪಡೆಯಿಂದ ಗುಪ್ತಚರ ವೈಫಲ್ಯ’

ಹೈಕೋರ್ಟ್ ಸುದ್ದಿ

ಮುಂಬೈ (ಪಿಟಿಐ): ಭಾರತೀಯ ನೌಕಾಪಡೆಯ ಪ್ರಮುಖ ವಾಯುನೆಲೆಗಳ ಪೈಕಿ ಒಂದಾಗಿರುವ ‘ಐಎನ್‌ಎಸ್ ಶಿಕ್ರ’ದ ಸಮೀಪ ಎತ್ತರದ ಕಟ್ಟಡ ನಿರ್ಮಾಣವಾಗುತ್ತಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ನೌಕಾಪಡೆಯನ್ನು ಬಾಂಬೆ ಹೈಕೋರ್ಟ್ ಶುಕ್ರವಾರ ತರಾಟೆ ತೆಗೆದುಕೊಂಡಿದೆ.

ನೌಕಾಪಡೆಯ ಗಮನಕ್ಕೂ ಬಾರದಂತೆ ವಾಯುನೆಲೆ ಸಮೀಪದಲ್ಲೇ 19 ಅಂತಸ್ತಿನ ಕಟ್ಟಡ ತಲೆ ಎತ್ತಿದ್ದು ಹೇಗೆ ಎಂದು ಪ್ರಶ್ನಿಸಿರುವ ನ್ಯಾಯಪೀಠವು, ಇದಕ್ಕೆ ನೌಕಾಪಡೆಯ ಗುಪ್ತಚರ ವೈಫಲ್ಯವೇ ಕಾರಣ ಎಂದೂ ಚಾಟಿ ಬೀಸಿದೆ.

‘ಶಿಕ್ರ’ ಬಳಿ ಎತ್ತರದ ಕಟ್ಟಡ ನಿರ್ಮಾಣವಾದರೆ ಗಂಭೀರ ಭದ್ರತಾ ಆತಂಕ ಎದುರಾಗುತ್ತದೆ. ಹೀಗಾಗಿ ಕಟ್ಟಡ ನಿರ್ಮಾಣಕ್ಕೆ ತಡೆ ನೀಡಬೇಕೆಂದು ಕೋರಿ ‘ಐಎನ್‌ಎಸ್ ಶಿಕ್ರ’ದ ಕಮಾಂಡಿಂಗ್ ಅಧಿಕಾರಿಯೊಬ್ಬರು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

ನ್ಯಾಯಮೂರ್ತಿ ರವೀಂದ್ರ ಘುಗೆ ಹಾಗೂ ನ್ಯಾಯಮೂರ್ತಿ ಅಭಯ್ ಮಂತ್ರಿ ಅವರಿದ್ದ ಪೀಠವು ಈ ಅರ್ಜಿಯ ವಿಚಾರಣೆ ನಡೆಸಿದೆ. 2024ರಿಂದಲೇ ಕಟ್ಟಡದ ನಿರ್ಮಾಣ ಆರಂಭವಾಗಿದ್ದು, ಈಗಾಗಲೇ 19 ಅಂತಸ್ತು (70 ಮೀಟರ್) ನಿರ್ಮಿಸಲಾಗಿದೆ. ಇಷ್ಟೆಲ್ಲಾ ಬೆಳವಣಿಗೆ ಆದ ಬಳಿಕ ನೌಕಾಪಡೆ ಎಚ್ಚೆತ್ತಿದೆ ಎಂಬುದನ್ನು ಗಮನಿಸಿದ ನ್ಯಾಯಪೀಠ, ಅಸಮಾಧಾನ ವ್ಯಕ್ತಪಡಿಸಿದೆ.

ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಅವರು ನಗರಕ್ಕೆ ಭೇಟಿ ನೀಡಿದ್ದಾಗ ಭದ್ರತಾ ಕಾರಣಕ್ಕಾಗಿ ಕಟ್ಟಡದ ನಿರ್ಮಾಣ ಕಾಮಗಾರಿಗಳಿಗೆ ತಾತ್ಕಾಲಿಕ ತಡೆ ನೀಡಲಾಗಿತ್ತು. ಆ ಆದೇಶವನ್ನು ಮುಂದುವರಿಸಲು ಸಾಧ್ಯವಿಲ್ಲ ಎಂದು ಹೇಳಿರುವ ಪೀಠ, ಮುಂದಿನ ವಿಚಾರಣೆಯನ್ನು ಮಾರ್ಚ್ 30ಕ್ಕೆ ನಿಗದಿಪಡಿಸಿದೆ.

ಕೆಲಸ ಮಾಡದೆ ಶ್ರೇಯ ಪಡೆದ ಮೋದಿ– ಕಾಂಗ್ರೆಸ್

ನವದೆಹಲಿ (ಪಿಟಿಐ): ‘ಯುಪಿಎ ಪಾವತಿ ಕುರಿತ ಯೋಜನೆಯ ಆರಂಭಿಕ ಪರಿಕಲ್ಪನೆ ರೂಪುಗೊಂಡಿದ್ದು 2012–13ರಲ್ಲಿದ್ದ ಯುಪಿಎ ಸರ್ಕಾರದ ಅವಧಿಯಲ್ಲಿ. ಆಗ ನರೇಂದ್ರ ಮೋದಿ ಅವರು ಇದಕ್ಕಾಗಿ ಯಾವುದೇ ಕೆಲಸ ಮಾಡಿರಲಿಲ್ಲ. ಇದೀಗ ಯೋಜನೆಯ ಯಶಸ್ಸಿನ ಎಲ್ಲ ಲಾಭ ಪಡೆಯಲು ಹವಣಿಸುತ್ತಿದ್ದಾರೆ. ವಿದ್ಯಾರ್ಥಿಯೊಬ್ಬ ಬೇರೆ ಸಹಪಾಠಿ ಮಾಡಿದ ಪ್ರಾಜೆಕ್ಟ್ ತನ್ನದೇ ಎಂದು ಹೇಳಿಕೊಂಡು ಶ್ರೇಯ ಪಡೆಯುವ ಚಾಳಿ ಇದು’ ಎಂದು ಕಾಂಗ್ರೆಸ್ ವ್ಯಂಗ್ಯವಾಡಿದೆ.

ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಅವರು ಭಾರತದ ಯುಪಿಐ ಪಾವತಿ ವಿಧಾನದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿ ಗುರುವಾರ ಮಾತನಾಡಿದ್ದರು. ಅದರ ಮರುದಿನ ಕಾಂಗ್ರೆಸ್ ಅದಕ್ಕೆ ಪ್ರತಿಕ್ರಿಯಿಸಿದೆ.

‘ಹಿಂದಿ ಉತ್ತೇಜಿಸಿದರೆ ಎಲ್ಲ ಭಾಷೆಗೂ ಬಲ’

ಅಗರ್ತಲಾ (ಪಿಟಿಐ): ಹಿಂದಿ ಭಾಷೆಯನ್ನು ಉತ್ತೇಜಿಸಿದಾಗ ಇತರ ಎಲ್ಲಾ ಭಾಷೆಗಳೂ ಗಟ್ಟಿಗೊಳ್ಳುತ್ತಿವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಹೇಳಿದರು.



ಅಮಿತ್ ಶಾ

ಇಲ್ಲಿ ನಡೆದ ರಾಜಭಾಷಾ ಸಮ್ಮೇಳನದಲ್ಲಿ ಮಾತನಾಡಿದ ಅವರು, ‘ಜನರ ಮೇಲೆ ಹಿಂದಿ ಹೇರಿಕೆ ಮಾಡಲಾಗುತ್ತಿದೆ ಎಂದು ಸುಳ್ಳು ಪ್ರಚಾರ ಮಾಡಲಾಗುತ್ತಿದೆ. ಆದರೆ, ನಮ್ಮ ಆಡಳಿತದಲ್ಲಿ ಹಿಂದಿ ಹೇರಿಕೆಯನ್ನು ಕಿತ್ತು ಹಾಕಲಾಗಿದೆ’ ಎಂದು ಹೇಳಿದರು.

‘ಹಿಂದಿ ಮತ್ತು ಇತರ ಯಾವುದೇ ಪ್ರಾದೇಶಿಕ ಭಾಷೆಗಳ ನಡುವೆ ಸಂಘರ್ಷವಿರುವುದಿಲ್ಲ. ಏಕೆಂದರೆ ಎರಡೂ ಭಾಷೆಗಳು ಒಂದೇ ತಾಯಿಯ ಮಕ್ಕಳಾಗಿದ್ದು, ಅವರು ಸಹೋದರಿಯರು. ಅವರು ಒಟ್ಟಾಗಿ ಪ್ರಗತಿ ಸಾಧಿಸುತ್ತಾರೆ’ ಎಂದರು.

‘ಭಾಷೆ ಮತ್ತು ಲಿಪಿಯು ವಿವಾದದ ವಿಷಯವಾಗಲು ಸಾಧ್ಯವಿಲ್ಲ. ಮನೆಯಲ್ಲಿ ಮಕ್ಕಳೊಂದಿಗೆ ನಿಮ್ಮ ಮಾತೃಭಾಷೆಯಲ್ಲಿಯೇ ಮಾತನಾಡಿ. ಇಲ್ಲವಾದರೆ ನಿಮ್ಮ ಮಕ್ಕಳು ತಮ್ಮ ಮಾತೃಭಾಷೆಯ ಸಾಹಿತ್ಯ, ಸಂಸ್ಕೃತಿ ಮತ್ತು ಸಂಪ್ರದಾಯಗಳಿಂದ ದೂರ ಉಳಿಯುತ್ತಾರೆ. ಮನೆಯಲ್ಲಿ ಸಾಧ್ಯವಾದಷ್ಟೂ ನಾವು ಮಾತೃಭಾಷೆಯನ್ನೇ ಬಳಸಬೇಕು’ ಎಂದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಯವರು ಈಶಾನ್ಯ ರಾಜ್ಯಗಳನ್ನು ‘ವಿವಾದ’ದ ಪ್ರದೇಶದಿಂದ ‘ವಿಕಾಸ’ದ ಪ್ರದೇಶವನ್ನಾಗಿ ಬದಲಾಯಿಸಿದ್ದಾರೆ.

ಮೋದಿ ಪ್ರಧಾನಿಯಾದ ಬಳಿಕ 2014ರಿಂದ ಈವರೆಗೆ, ನಿಷೇಧಿತ ಗುಂಪುಗಳೊಂದಿಗೆ 21 ಒಪ್ಪಂದಕ್ಕೆ ಸಹಿ ಹಾಕಲಾಗಿದೆ. 11,000 ಯುವಕರನ್ನು ಮುಖ್ಯವಾಹಿನಿಗೆ ತರಲಾಗಿದೆ ಎಂದರು.

‘ಗಡಿ ತೆರೆದಿಟ್ಟಿದ್ದ ಕಾಂಗ್ರೆಸ್’

ನಾಥನ್‌ಪುರ (ಅಸ್ಸಾಂ) (ಪಿಟಿಐ): ‘ಕಾಂಗ್ರೆಸ್ ಪಕ್ಷವು ದೇಶದ ಗಡಿಗಳನ್ನು ತೆರೆದಿಟ್ಟಿತ್ತು. ಇದರಿಂದಾಗಿ ಅಸ್ಸಾಂ ಒಳಗೆ ನುಸುಳುಕೋರರು ಪ್ರವೇಶಿಸಿದರು’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶುಕ್ರವಾರ ಆರೋಪಿಸಿದರು.

ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ನೇತೃತ್ವದ ಬಿಜೆಪಿ ಸರ್ಕಾರವು ಈ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಮಟ್ಟಹಾಕುತ್ತಿದೆ ಎಂದು ಹೇಳಿದರು.

ಕಛಾರ್ ಜಿಲ್ಲೆಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ‘ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಆಳ್ವಿಕೆ ಸಂದರ್ಭದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿರಲಿಲ್ಲ. ಆದರೆ ಈಗ ನಿತ್ಯವೂ 14 ಕಿ.ಮೀ. ರಸ್ತೆ ನಿರ್ಮಾಣವಾಗುತ್ತಿದೆ’ ಎಂದರು.

ಮೀಸಲು ರದ್ದು ಪ್ರಶ್ನಿಸಿ ಅರ್ಜಿ

ಮುಂಬೈ: ಉದ್ಯೋಗ ಮತ್ತು ಶಿಕ್ಷಣದಲ್ಲಿ ಮುಸ್ಲಿಮರಿಗೆ ನೀಡಲಾಗಿದ್ದ ಶೇ 5ರಷ್ಟು ಮೀಸಲಾತಿಯನ್ನು ಮಹಾರಾಷ್ಟ್ರ ಸರ್ಕಾರ ರದ್ದುಗೊಳಿಸಿರುವುದನ್ನು ಪ್ರಶ್ನಿಸಿ ಬಾಂಬೆ ಹೈಕೋರ್ಟ್‌ಗೆ ಶುಕ್ರವಾರ ಅರ್ಜಿ ಸಲ್ಲಿಕೆಯಾಗಿದೆ.

ವಕೀಲರಾದ ಸೈಯದ್ ಅಬ್ಬಾಸ್ ಅವರು ಈ ಬಗ್ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಿದ್ದಾರೆ.

ಮೈತೇಯಿ ದಾಳಿ: ಗಾಯಗೊಂಡಿದ್ದ ಕುಕಿ ಶಾಸಕ ವಾಲ್ಟೆ ನಿಧನ

ಗುವಾಹಟಿ: ಇಂಫಾಲ್‌ನಲ್ಲಿ 2023ರ ಮೇ 4ರಂದು ಮೈತೇಯಿ ಸಮುದಾಯದವರು ನಡೆಸಿದ್ದ ದಾಳಿಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ, ಕುಕಿ ಸಮುದಾಯ ನಾಯಕ, ಬಿಜೆಪಿ ಶಾಸಕ ವುಂಗ್‌ಜಾಗಿನ್ ವಾಲ್ಟೆ (64) ದೆಹಲಿಯ ಆಸ್ಪತ್ರೆಯಲ್ಲಿ ಶುಕ್ರವಾರ ನಿಧನರಾದರು.

ಕುಕಿ ಪ್ರಾಬಲ್ಯದ ಚುರಾಚಾಂದಪುರ ಜಿಲ್ಲೆಯ ಥಾನಲನ್ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸಿದ್ದ ವಾಲ್ಟೆ ಅವರ ಆರೋಗ್ಯ ಸ್ಥಿತಿ ಹದಗೆಟ್ಟದ್ದರಿಂದ, ಹೆಚ್ಚಿನ ಚಿಕಿತ್ಸೆಗಾಗಿ ಫೆಬ್ರುವರಿ 8ರಂದು ವಿಮಾನದ ಮೂಲಕ ನವದೆಹಲಿಗೆ ಕರೆದೊಯ್ಯಲಾಗಿತ್ತು. ಅವರು ದೆಹಲಿಗೆ ತೆರಳುವ ಮುನ್ನ ಇಂಫಾಲ್ ವಿಮಾನ ನಿಲ್ದಾಣದಲ್ಲಿ ನೂತನ ಮುಖ್ಯಮಂತ್ರಿ ವೈ.ಖೇಮಚಂದ್ ಸಿಂಗ್ ಅವರು ವಾಲ್ಟೆ ಅವರನ್ನು ಭೇಟಿ ಮಾಡಿದ್ದರು.

ಮಣಿಪುರದಲ್ಲಿ 2023ರ ಮೇ 3ರಂದು ಮೈತೇಯಿ ಮತ್ತು ಕುಕಿ ಸಮುದಾಯಗಳ ನಡುವೆ ಸಂಘರ್ಷ ಆರಂಭವಾದ ಮರುದಿನವೇ ವಾಲ್ಟೆ ಅವರ ಮೇಲೆ ಹಲ್ಲೆ ನಡೆದಿತ್ತು. ಮೈತೇಯಿ ಪ್ರಾಬಲ್ಯದ ಇಂಫಾಲ್‌ನಲ್ಲಿ ಅಂದಿನ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರನ್ನು ಭೇಟಿಯಾಗಿ ಹಿಂದಿರುಗುತ್ತಿದ್ದಾಗ ಮೈತೇಯಿ ಗುಂಪಿನಿಂದ ದಾಳಿ ನಡೆದಿತ್ತು ಎಂದು ಆರೋಪಿಸಲಾಗಿದೆ. ಅವರ ಚಾಲಕ ಸ್ಥಳದಲ್ಲೇ ಮೃತಪಟ್ಟಿದ್ದರು.

ಸಂಕ್ಷಿಪ್ತ ಸುದ್ದಿ

ಎಸ್‌ಐಆರ್: 69 ಲಕ್ಷ ಮತದಾರರಿಗೆ ಕೊಕ್

ನವದೆಹಲಿ (ಪಿಟಿಐ): ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಬಳಿಕ ಗುಜರಾತ್, ಲಕ್ಷದ್ವೀಪ ಮತ್ತು ಪಾಂಡಿಚೇರಿಯಲ್ಲಿ ಒಟ್ಟು 69 ಲಕ್ಷ ಮತದಾರರ ಹೆಸರನ್ನು ಪಟ್ಟಿಯಿಂದ ಅಳಿಸಲಾಗಿದೆ. ಚುನಾವಣಾ ಆಯೋಗ ಶುಕ್ರವಾರ ಹಂಚಿಕೊಂಡಿರುವ ದತ್ತಾಂಶದಲ್ಲಿ ಈ ಮಾಹಿತಿ ಲಭ್ಯವಾಗಿದೆ.

ಗುಜರಾತ್, ಲಕ್ಷದ್ವೀಪ ಮತ್ತು ಪಾಂಡಿಚೇರಿಯಲ್ಲಿ ಇತ್ತೀಚೆಗೆ ಮತದಾರರ ಅಂತಿಮ ಪಟ್ಟಿ ಬಿಡುಗಡೆಯಾಗಿದೆ.

ಎಸ್‌ಐಆರ್ ಘೋಷಣೆಗೂ ಮೊದಲು ಗುಜರಾತ್ ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳ ಒಟ್ಟು ಮತದಾರರ ಸಂಖ್ಯೆ 5.19 ಕೋಟಿ ಇತ್ತು. ಎಸ್‌ಐಆರ್ ನಂತರ ಈ ಸಂಖ್ಯೆ 4.50 ಕೋಟಿಗೆ ಇಳಿಕೆಯಾಗಿದೆ.

ಗುಜರಾತ್‌ನಲ್ಲಿ 5.08 ಕೋಟಿಯಷ್ಟಿದ್ದ ಮತದಾರರ ಸಂಖ್ಯೆ 4.40 ಕೋಟಿಗೆ ಇಳಿಕೆಯಾಗಿದೆ.

ಲಕ್ಷದ್ವೀಪದಲ್ಲಿ 57,813ರಿಂದ 57,607ಕ್ಕೆ ಮತ್ತು ಪಾಂಡಿಚೇರಿಯಲ್ಲಿ 10.21 ಲಕ್ಷದಿಂದ 9.44 ಲಕ್ಷಕ್ಕೆ ಇಳಿಕೆಯಾಗಿದೆ.

‘ಸ್ಟಾಲಿನ್ ಮತ್ತೆ ಮುಖ್ಯಮಂತ್ರಿ’

ಚೆನ್ನೈ: ‘ಎಂ.ಕೆ.ಸ್ಟಾಲಿನ್ ಮತ್ತೆ ಮುಖ್ಯಮಂತ್ರಿ ಆಗಬಹುದು, ಚುನಾವಣೆ ನಂತರ ಡಿಎಂಕೆ ಅಧಿಕಾರಕ್ಕೆ ಮರಳಬಹುದು’ ಎಂದು ಎಐಎಡಿಎಂಕೆಯ ಉಚ್ಚಾಟಿತ ಮುಖಂಡ ಒ. ಪನ್ನೀರ್‌ಸೆಲ್ವಂ ಹೇಳಿದ್ದಾರೆ.

ಶುಕ್ರವಾರ ಇಲ್ಲಿ ಸ್ಟಾಲಿನ್ ಅವರ ಭೇಟಿಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಪನ್ನೀರ್‌ಸೆಲ್ವಂ, ‘2026ರ ಚುನಾವಣೆಯಲ್ಲಿ ಡಿಎಂಕೆಗೆ ಗೆಲುವಿನ ಸಾಧ್ಯತೆ ಹೆಚ್ಚಿದೆ’ ಎಂದರು.

ಪನ್ನೀರ್‌ಸೆಲ್ವಂ ಅವರು ಡಿಎಂಕೆಯತ್ತ ವಾಲುತ್ತಿರುವ ಅಥವಾ ಆಡಳಿತ ಪಕ್ಷದೊಂದಿಗೆ ಮೈತ್ರಿ ಮಾಡಿಕೊಳ್ಳುವ ಸೂಚನೆಯು ಅವರ ಹೇಳಿಕೆ ಮೂಲಕ ಹೊರಬಿದ್ದಿದೆ ಎಂದು ಮೂಲಗಳು ತಿಳಿಸಿವೆ.

‘ಡಿಎಂಕೆಗೆ ವೋಟ್ ಹಾಕಿದವರ ಮತ್ತು ಹಾಕದವರ ಪರವಾಗಿಯೂ ನಾವು ಕೆಲಸ ಮಾಡಿದ್ದೇವೆ. ಹಾಗಾಗಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ 234 ಕ್ಷೇತ್ರಗಳಲ್ಲೂ ಜಯಗಳಿಸುವ ವಿಶ್ವಾಸ ಹೊಂದಿದ್ದೇವೆ’ ಎಂದು ಸ್ಟಾಲಿನ್ ಹೇಳಿದ್ದಾರೆ.

ಹಿಂಸಾಚಾರ: 49 ಮಂದಿ ಸೆರೆ

ಮಧ್ಯಪ್ರದೇಶದ ಸಿಹೋರಾ ಪಟ್ಟಣದಲ್ಲಿ ಕಿಡಿಗೇಡಿಗಳನ್ನು ಚದುರಿಸಲು ಪೊಲೀಸರು ಅಶ್ರುವಾಯು ಶೆಲ್ ಸಿಡಿಸಿದರು

ಜಬಲಪುರ (ಪಿಟಿಐ): ಮಧ್ಯಪ್ರದೇಶದ ಸಿಹೋರಾ ಪಟ್ಟಣದಲ್ಲಿ ಗುರುವಾರ ರಾತ್ರಿ ಎರಡು ಧಾರ್ಮಿಕ ಗುಂಪುಗಳ ನಡುವೆ ಹಿಂಸಾಚಾರ ನಡೆದಿದ್ದು, ಪೊಲೀಸರು 49 ಮಂದಿಯನ್ನು ಬಂಧಿಸಿದ್ದಾರೆ.

ಜಿಲ್ಲಾ ಕೇಂದ್ರದಿಂದ 40 ಕಿ.ಮೀ ದೂರದಲ್ಲಿರುವ ಸಿಹೋರಾದ ಆಜಾದ್ ಚೌಕದ ಬಳಿ ಮಸೀದಿ ಹಾಗೂ ದುರ್ಗಾ ದೇವಾಲಯ ಎದುರಿನ ಸ್ಥಳದಲ್ಲಿ ರಾತ್ರಿ 10 ಗಂಟೆ ಸುಮಾರಿಗೆ ಹಿಂಸಾಚಾರ ನಡೆದಿದೆ.

‘ದೇವಾಲಯದಲ್ಲಿ ‘ಆರತಿ’ ನಡೆಯುತ್ತಿದ್ದ ಸಮಯದಲ್ಲಿ ಕೆಲವು ಕಿಡಿಗೇಡಿಗಳು ದೇಗುಲದ ಕಬ್ಬಿಣದ ಗೇಟನ್ನು ಮುರಿದು ಕಲ್ಲು ತೂರಾಟ ನಡೆಸಿದ್ದಾರೆ’ ಎಂದು ಹಿಂದೂಪರ ಸಂಘಟನೆಗಳು ಆರೋಪಿಸಿವೆ.

‘ರಂಜಾನ್ ವಿಶೇಷ ಪ್ರಾರ್ಥನೆ ಮತ್ತು ದೇವಾಲಯದ ಆರತಿ ಏಕಕಾಲದಲ್ಲಿ ನಡೆಯುತ್ತಿದ್ದಾಗ ಈ ಘರ್ಷಣೆ ಸಂಭವಿಸಿದೆ’ ಎಂದು ಸ್ಥಳೀಯ ಮುಸ್ಲಿಮರು ಹೇಳಿದ್ದಾರೆ.

‘ಗುಂಪನ್ನು ಚದುರಿಸಲು ಪೊಲೀಸರು ಅಶ್ರುವಾಯು ಶೆಲ್‌ಗಳನ್ನು ಸಿಡಿಸಿದರು. ಘಟನೆಯಲ್ಲಿ ಯಾರೂ ಗಾಯಗೊಂಡಿಲ್ಲ. ಮುನ್ನೆಚ್ಚರಿಕೆ ಕ್ರಮವಾಗಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿದ್ದು, ಪರಿಸ್ಥಿತಿ ನಿಯಂತ್ರಣದಲ್ಲಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಂಪತ್ ಉಪಾಧ್ಯಾಯ ತಿಳಿಸಿದ್ದಾರೆ.

‘ಕಾನೂನು ಸುವ್ಯವಸ್ಥೆ ಕಾಪಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ’ ಎಂದು ಉಪಮುಖ್ಯಮಂತ್ರಿ ರಾಜೇಂದ್ರ ಶುಕ್ಲಾ ತಿಳಿಸಿದ್ದಾರೆ.

ಲಡ್ಡು ಪ್ರಸಾದ ಕಲಬೆರಕೆ: ಏಕವ್ಯಕ್ತಿ ಸಮಿತಿ ರಚನೆ

ಹೈದರಾಬಾದ್: ತಿರುಪತಿ ಲಡ್ಡು ಪ್ರಸಾದ ತಯಾರಿಕೆಗೆ ಕಲಬೆರಕೆ ತುಪ್ಪ ಬಳಸಿದ ಪ್ರಕರಣದಲ್ಲಿ ಟೆಂಡರ್ ನಿಯಾಮವಳಿಗಳನ್ನು ಸಡಿಲಗೊಳಿಸಿದ ಟಿಟಿಡಿ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳ ಲೋಪ ಪತ್ತೆಹಚ್ಚಿ ಶಿಸ್ತುಕ್ರಮಕ್ಕೆ ಸಲಹೆ ನೀಡುವ ಸಂಬಂಧ ನಿವೃತ್ತ ಮುಖ್ಯ ಕಾರ್ಯದರ್ಶಿ ದಿನೇಶ್ ಕುಮಾರ್ ನೇತೃತ್ವದಲ್ಲಿ ಆಂಧ್ರಪ್ರದೇಶ ಸರ್ಕಾರ ಏಕವ್ಯಕ್ತಿ ಸಮಿತಿ ರಚಿಸಿದೆ.

ಸಮಿತಿಯು ಟೆಂಡರ್ ನಿರ್ವಹಣೆಯಲ್ಲಿನ ಆಡಳಿತಾತ್ಮಕ ಲೋಪಗಳು, ನಿಯಾಮವಳಿಗಳನ್ನು ಅನುಸರಿಸಿದ ವಿಚಾರ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮಕ್ಕೆ ಸೂಚನೆ ನೀಡಲಿದೆ. 45 ದಿನಗಳ ಒಳಗಾಗಿ ವರದಿ ಸಲ್ಲಿಸುವಂತೆ ಸಮಿತಿ ಸರ್ಕಾರ ಗಡುವು ವಿಧಿಸಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,454
ಇಂದಿನ ಅಂತ್ಯ:	25,571
ದಿನದ ಗರಿಷ್ಠ:	25,633
	116

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹570
12 ಕ್ಕೆ	₹85
ಮೈಸೂರು: 100 ಕ್ಕೆ	₹570

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹211
ಆರ್‌ಎಸ್‌ಎಸ್-5	₹205
ಗುಡ್ ಲಾಟ್	₹193

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹555-782
ದ್ವಿತಳಿ (ಬಿ.ವಿ)	₹352-950

ಮುದ್ರೆಮನೆ ಕಾಫಿ	
ಎಪಿ	₹23000
ಎಸಿ	₹12880
ಆರ್‌ಪಿ	₹18350
ಆರ್‌ಸಿ	₹10000

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)	
ದೊಡ್ಡ	₹1500-2000
ಮಧ್ಯಮ	₹1000-1400
ಸಣ್ಣ	₹400-800

ರಫ್ತು ಉತ್ತೇಜನಕ್ಕೆ ಕ್ರಮ

ನವದೆಹಲಿ (ಪಿಟಿಐ): ದೇಶದ ರಫ್ತು ವಹಿವಾಟು ಜಾಸ್ತಿ ಮಾಡಲು ಇ-ವಾಣಿಜ್ಯ ಕ್ಷೇತ್ರದ ರಫ್ತುದಾರರಿಗೆ ಸಾಲದ ನೆರವು ಸೇರಿದಂತೆ ಹಲವು ಕ್ರಮಗಳನ್ನು ಕೇಂದ್ರ ಸರ್ಕಾರವು ಶುಕ್ರವಾರ ಪ್ರಕಟಿಸಿದೆ.

ರಫ್ತು ಉತ್ತೇಜನಕ್ಕೆ ರೂಪಿಸಿರುವ ₹25,060 ಕೋಟಿ ಮೊತ್ತದ ಯೋಜನೆ ಭಾಗವಾಗಿ ಈ ಕ್ರಮಗಳನ್ನು ಪ್ರಕಟಿಸಲಾಗಿದೆ. ಯೋಜನೆಯು 10 ಅಂಶಗಳನ್ನು ಹೊಂದಿದ್ದು, ಆ ಪೈಕಿ ಮೂರನ್ನು ಜನವರಿಯಲ್ಲಿ ಜಾರಿಗೆ ತರಲಾಗಿದೆ.

ಡಿಜಿಟಲ್ ವೇದಿಕೆಗಳನ್ನು ಬಳಸಿಕೊಂಡು ಸರಕುಗಳನ್ನು ರಫ್ತು ಮಾಡುವವರಿಗೆ ನೆರವು ನೀಡುವ ಉದ್ದೇಶದಿಂದ ಕೇಂದ್ರ ವಾಣಿಜ್ಯ ಸಚಿವಾಲಯವು ಬಡ್ಡಿ ರಿಯಾಯಿತಿಯ ಸಾಲ ಸೌಲಭ್ಯವನ್ನು ಪ್ರಕಟಿಸಿದೆ. ಅಲ್ಲದೆ, ಇದರ ಜೊತೆಯಲ್ಲೇ ಒಂದಿಷ್ಟು ಪ್ರಮಾಣದ ಸಾಲಕ್ಕೆ ಸರ್ಕಾರದ ಖಾತರಿ ಸಹ ಸಿಗಲಿದೆ. ಇ-ವಾಣಿಜ್ಯ ಸಾಲ ಸೌಲಭ್ಯದ ಅಡಿಯಲ್ಲಿ ₹50 ಲಕ್ಷದವರೆಗೆ ನೆರವು, ಸಾಲದ ಶೇ 90ರಷ್ಟು ಮೊತ್ತದ ವರೆಗೆ ಖಾತರಿಯ ಸೌಲಭ್ಯ ಇರಲಿದೆ.

ವಿದೇಶಿ ಮಾರುಕಟ್ಟೆಗಳಲ್ಲಿ ಸರಕುಗಳ ದಾಸ್ತಾನು ಇರಿಸಿಕೊಳ್ಳುವವರಿಗೆ ನೆರವು ನೀಡುವ ಉದ್ದೇಶದಿಂದ ₹5 ಕೋಟಿ ವರೆಗೆ ಸಾಲ, ಸಾಲದ ಶೇ 75ರಷ್ಟು ಮೊತ್ತದವರೆಗೆ ಖಾತರಿ, ಶೇ 2.75ರಷ್ಟು ಬಡ್ಡಿ ರಿಯಾಯಿತಿ ಸಿಗಲಿದೆ. ಆದರೆ ಬಡ್ಡಿ ರಿಯಾಯಿತಿಯು ವಾರ್ಷಿಕ ₹15 ಲಕ್ಷದ ಮಿತಿಯನ್ನು ಒಳಗೊಂಡಿರುತ್ತದೆ ಎಂದು ವಾಣಿಜ್ಯ ಸಚಿವಾಲಯ ತಿಳಿಸಿದೆ.

'ಭಾರತ–ಅಮೆರಿಕ ಮಧ್ಯಂತರ ವ್ಯಾಪಾರ ಒಪ್ಪಂದ ಏಪ್ರಿಲ್‌ನಲ್ಲಿ ಜಾರಿ'

ನವದೆಹಲಿ (ಪಿಟಿಐ): ಭಾರತ– ಅಮೆರಿಕ ನಡುವಿನ ಮಧ್ಯಂತರ ವ್ಯಾಪಾರ ಒಪ್ಪಂದಕ್ಕೆ ಮಾರ್ಚ್‌ನಲ್ಲಿ ಸಹಿ ಬೀಳುವ ನಿರೀಕ್ಷೆ ಇದೆ, ಒಪ್ಪಂದವು ಏಪ್ರಿಲ್‌ನಲ್ಲಿ ಜಾರಿಗೆ ಬರಲಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಫೆಬ್ರುವರಿ 23ರಿಂದ ವಾಷಿಂಗ್ಟನ್‌ನಲ್ಲಿ ಮೂರು ದಿನ ನಡೆಯಲಿರುವ ಸಭೆಯಲ್ಲಿ ಭಾರತ ಮತ್ತು ಅಮೆರಿಕದ ಅಧಿಕಾರಿಗಳು ಮಧ್ಯಂತರ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸಲಿದ್ದಾರೆ ಎಂದು ಎ.ಐ ಇಂಪ್ಯಾಕ್ಟ್ ಶೃಂಗ ಸಭೆಯಲ್ಲಿ ಹೇಳಿದ್ದಾರೆ.

ಅಮೆರಿಕದ ವ್ಯಾಪಾರ ಪ್ರತಿನಿಧಿ (ಯುಎಸ್‌ಟಿಆರ್) ಜೇಮ್‌ಸನ್ ಗ್ರೀರ್ ಭಾರತಕ್ಕೆ ಮಾರ್ಚ್‌ನಲ್ಲಿ ಭೇಟಿ ನೀಡಿ, ಒಪ್ಪಂದಕ್ಕೆ ಸಹಿ ಹಾಕುವ ನಿರೀಕ್ಷೆ ಇದೆ.

ಬ್ರಿಟನ್ ಮತ್ತು ಒಮಾನ್ ಜೊತೆ ಭಾರತ ಮಾಡಿ ಕೊಂಡಿರುವ ಮುಕ್ತ ವ್ಯಾಪಾರ ಒಪ್ಪಂದವು ಏಪ್ರಿಲ್‌ನಲ್ಲಿ ಅನುಷ್ಠಾನಗೊಳ್ಳುವ ನಿರೀಕ್ಷೆ ಇದೆ. ನ್ಯೂಜಿಲೆಂಡ್ ಜೊತೆಗಿನ ಒಪ್ಪಂದವು ಸೆಪ್ಟೆಂಬರ್‌ನಲ್ಲಿ ಜಾರಿಗೆ ಬರುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.

ಅಡಿಕೆ ಧಾರಣೆ

ಕುಮಟಾ		ಸರಕು	54999-96100	ಚಾಲಿ	40699-49715
ಚಾಲಿ	48099-51799	**ಸಿದ್ದಾಪುರ**		ಕೆಂಪುಗೋಟು	28498-38169
ಚಿಪ್ಪು	32569-41019	ಬಿಳಿಗೋಟು	27019-41119	ರಾಶಿ	53069-58018
ಕೋಕ	15090-36509	ಚಾಲಿ	45599-51259	**ಯಲ್ಲಾಪುರ**	
ಫ್ಯಾಕ್ಟರಿ	10189-27570	ಕೋಕ	23899-34109	ಆಪಿ	69199-69199
ಹೊಸಚಾಲಿ	43510-49395	ಹೊಸಚಾಲಿ	40609-48609	ಬಿಳಿಗೋಟು	16612-41001
ಪುತ್ತೂರು		ಕೆಂಪುಗೋಟು	28889-37699	ಕೋಕ	16900-32199
ಕೋಕ	20000-37000	ರಾಶಿ	49389-55099	ಹಳೆಚಾಲಿ	39119-52000
ಹೊಸತು	26000-48500	ತಟ್ಟಿಬೆಟ್ಟೆ	39099-49099	ಹೊಸಚಾಲಿ	40511-49499
ಶಿವಮೊಗ್ಗ		**ಶಿರಸಿ**		ಕೆಂಪುಗೋಟು	16900-38599
ಬೆಟ್ಟೆ	55100-66300	ಬೆಟ್ಟೆ	40099-52899	ರಾಶಿ	48099-62815
ಗೊರಬಲು	28777-41179	ಬಿಳಿಗೋಟು	29699-43300	ತಟ್ಟಿಬೆಟ್ಟೆ	38706-51999
ರಾಶಿ	45166-56301				

ಜಿಡಿಪಿ ಹೆಚ್ಚಳಕ್ಕೆ ಎ.ಐ ಸಹಕಾರಿ

ಅಂತರರಾಷ್ಟ್ರೀಯ ಹಣಕಾಸು ನಿಧಿಯ ಮುಖ್ಯಸ್ಥೆ ಜಾರ್ಜಿವಾ ಅಭಿಪ್ರಾಯ

ನವದೆಹಲಿ (ಪಿಟಿಐ): ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನವು ಜಾಗತಿಕವಾಗಿ ಜಿಡಿಪಿ ಬೆಳವಣಿಗೆ ಯನ್ನು ಶೇಕಡ 0.8ರಷ್ಟು ಹೆಚ್ಚಿಸಬಹುದು ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ವ್ಯವಸ್ಥಾಪಕ ನಿರ್ದೇಶಕಿ ಕ್ರಿಸ್ಟಲೀನಾ ಜಾರ್ಜಿವಾ ಅಂದಾಜು ಮಾಡಿದ್ದಾರೆ.

'ಅಲ್ಲದೆ, ಎ.ಐ ತಂತ್ರಜ್ಞಾನವು ವಿಕಸಿತ ಭಾರತ ಮತ್ತು ಅಭಿವೃದ್ಧಿ ಹೊಂದಿದ ದೇಶವಾಗುವ ಗುರಿ ಸಾಧನೆಗೆ ನೆರವಾಗಲಿದೆ' ಎಂದಿದ್ದಾರೆ.

'ಎ.ಐ ತಂತ್ರಜ್ಞಾನವು ಜಗತ್ತಿನ ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸಲಿದೆ. ಅಂದರೆ ಕೋವಿಡ್ ಸಾಂಕ್ರಾಮಿಕ-ಕ್ಕಿಂತ ಮೊದಲಿನ ಅವಧಿಯಲ್ಲಿ ಜಗತ್ತು ಎಷ್ಟು ವೇಗವಾಗಿ ಆರ್ಥಿಕ ಬೆಳವಣಿಗೆ ಕಾಣುತ್ತಿತ್ತೋ ಅದಕ್ಕಿಂತ ಹೆಚ್ಚಿನ ವೇಗದ ಬೆಳವಣಿಗೆ ಸಾಧ್ಯವಾಗಲಿದೆ. ಅದು ಹೊಸ ಅವಕಾಶಗಳನ್ನು, ಹೊಸ ಉದ್ಯೋಗ

ಗಳನ್ನು ಸೃಷ್ಟಿಸುವುದಕ್ಕೆ ಬಹಳ ಉತ್ತಮ' ಎಂದು ಇಲ್ಲಿ ನಡೆಯುತ್ತಿರುವ 'ಎ.ಐ ಇಂಪ್ಯಾಕ್ಟ್ ಶೃಂಗಸಭೆ'ಯಲ್ಲಿ ಅವರು ಶುಕ್ರವಾರ ಹೇಳಿದ್ದಾರೆ.

2047ರ ವೇಳೆಗೆ ಭಾರತವು ಅಭಿವೃದ್ಧಿ ಹೊಂದಿದ ದೇಶವಾಗುವ ಮತ್ತು 30 ಟ್ರಿಲಿಯನ್ ಡಾಲರ್ ಗಾತ್ರದ ಆರ್ಥಿಕತೆಯನ್ನು ಹೊಂದುವ ಮಹತ್ವಾ-ಕಾಂಕ್ಷೆಯನ್ನು ಇರಿಸಿಕೊಂಡಿದೆ.

ಕಣ್ಮರೆ ಆಗಲಿರುವ ಉದ್ಯೋಗಗಳು ಆರಂಭಿಕ ಹಂತದವು ಎಂಬುದು ಕಳವಳ ಮೂಡಿಸುವಂಥದ್ದು. ಈ ಬಗೆಯ ಉದ್ಯೋಗಗಳನ್ನು ಬಯಸುವವರಿಗೆ ಅಪಾಯ ಇದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ. ಎ.ಐ ಕ್ಷೇತ್ರದಲ್ಲಿ ಆಗುತ್ತಿರುವ ಬೆಳವಣಿಗೆಗಳನ್ನು ನಿರ್ವಹಿಸಬೇಕು ಎಂದಾದರೆ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ಆಗಬೇಕು, ಜನರು ಹೊಸದನ್ನು ಕಲಿಯುವುದನ್ನು ಕಲಿತುಕೊಳ್ಳಬೇಕು ಎಂದು ಹೇಳಿದ್ದಾರೆ.

ಎ.ಐ ಅಪಾಯಗಳ ಬಗ್ಗೆ ಎಚ್ಚರಿಕೆ

ಎ.ಐ ತಂತ್ರಜ್ಞಾನದ ಪರಿಣಾಮವಾಗಿ ಮೂರು ಪ್ರಮುಖ ಅಪಾಯಗಳು ಎದುರಾಗಬಹುದು ಎಂದು ಕ್ರಿಸ್ಟಲೀನಾ ಜಾರ್ಜಿವಾ ಎಚ್ಚರಿಸಿದರು.

ಮೊದಲನೆಯದಾಗಿ, 'ಜಗತ್ತಿನಲ್ಲಿ ಕೆಲವು ದೇಶಗಳು ಎ.ಐ ತಂತ್ರಜ್ಞಾನ ಹೊಂದಲಿವೆ, ಇತರ ಹಲವು ದೇಶಗಳ ಬಳಿ ಈ ತಂತ್ರಜ್ಞಾನ ಇರುವುದಿಲ್ಲ. ಇದರಿಂದಾಗಿ ಜಗತ್ತು ಹೆಚ್ಚು ಅಸಮಾನವಾಗುವ ಅಪಾಯವಿದೆ' ಎಂದಿದ್ದಾರೆ.

ಎರಡನೆಯದಾಗಿ, ಎ.ಐ ತಂತ್ರಜ್ಞಾನವು ಹಣಕಾಸು ಮಾರುಕಟ್ಟೆಗಳಲ್ಲಿ ಅಲ್ಲೋಲಕಲ್ಲೋಲ ಸೃಷ್ಟಿಸಬಹುದು ಎಂದು ಎಚ್ಚರಿಸಿದ್ದಾರೆ.

ಎ.ಐ ಕಾರಣದಿಂದಾಗಿ ಉದ್ಯೋಗಗಳಲ್ಲಿ ಬದಲಾವಣೆ ಆಗಬಹುದು. ಆದರೆ, ಎ.ಐ ಆಧಾರಿತ ಅರ್ಥವ್ಯವಸ್ಥೆಯಲ್ಲಿ ಕೆಲಸ ಕಂಡುಕೊಳ್ಳುವುದು ಹೇಗೆ ಎಂಬ ಬಗ್ಗೆ ಜನರಿಗೆ ನೆರವು ನೀಡುವ ವಿಚಾರವಾಗಿ ಹೆಚ್ಚು ಆಲೋಚನೆ ನಡೆಯುತ್ತಿಲ್ಲ ಎಂದಿದ್ದಾರೆ.

'ಎ.ಐ ಜಾಗತಿಕವಾಗಿ ಶೇ 40ರಷ್ಟು ಉದ್ಯೋಗಗಳ ಮೇಲೆ ಪರಿಣಾಮ ಬೀರುವ ಅಂದಾಜಿದೆ ಎಂದು ಕ್ರಿಸ್ಟಲಿನಾ ಜಾರ್ಜಿವಾ ಎಚ್ಚರಿಸಿದ್ದಾರೆ.

'ನಮ್ಮ ಅಂದಾಜಿನ ಪ್ರಕಾರ ಉದ್ಯೋಗ ಮಾರುಕಟ್ಟೆಯ ಮೇಲೆ ಎ.ಐ ಪರಿಣಾಮ ತುಂಬಾ ಹೆಚ್ಚಿರಲಿದೆ, ಸುನಾಮಿಯಂತಹ ಪರಿಣಾಮ ಬೀರಲಿದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಎ.ಐ ಶೇ 40ರಷ್ಟು ಉದ್ಯೋಗಗಳ ಮೇಲೆ ಪರಿಣಾಮ ಬೀರಿದರೆ, ಮುಂದುವರಿದ ದೇಶಗಳಲ್ಲಿ ಶೇ 60ರಷ್ಟು ಉದ್ಯೋಗಗಳ ಮೇಲೆ ಪರಿಣಾಮ ಬೀರುವ ಅಂದಾಜಿದೆ' ಎಂದು ಹೇಳಿದ್ದಾರೆ.

ಎ.ಐ. ಕ್ಷೇತ್ರದಲ್ಲಿ ಭಾರತದೊಂದಿಗೆ ಬಾಂಧವ್ಯ: ಸ್ಕೂಫ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಭಾರತದ ಜೊತೆ ನಿಕಟವಾದ ಒಡನಾಟ ಹೊಂದಲು ನೆದರ್ಲೆಂಡ್ಸ್ ಬಯಸುತ್ತದೆ ಎಂದು ಅಲ್ಲಿನ ಪ್ರಧಾನಿ ಡಿಕ್ ಸ್ಕೂಫ್ ಹೇಳಿದರು.

'ಡಚ್ ಉದ್ಯಮಗಳು ಹಾಗೂ ಭಾರತದ ಉದ್ಯಮಗಳು ಈ ಕ್ಷೇತ್ರದಲ್ಲಿ ಒಟ್ಟಾಗಿ ಕೆಲಸ ಮಾಡಬಹುದು. ನಮ್ಮ ದೊಡ್ಡ ಕಂಪನಿಗಳು ಇಲ್ಲಿವೆ, ಈ ದೇಶದಲ್ಲಿ ಪ್ರತಿಭೆ ಇದೆ. ನಾವಿಬ್ಬರೂ ಪರಸ್ಪರ ಬಹಳಷ್ಟು ಕಲಿತುಕೊಳ್ಳಬಹುದು' ಎಂದು ಅವರು ಬೆಂಗಳೂರಿನಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಸ್ಕೂಫ್ ಅವರು ನವದೆಹಲಿಯಲ್ಲಿ

ನೆದರ್ಲೆಂಡ್ಸ್ ಪ್ರಧಾನಿ ಡಿಕ್ ಸ್ಕೂಫ್ ಅವರು ಬೆಂಗಳೂರಿನಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು —ಪ್ರಜಾವಾಣಿ ಚಿತ್ರ

ನಡೆಯುತ್ತಿರುವ 'ಎ.ಐ. ಇಂಪ್ಯಾಕ್ಟ್ ಶೃಂಗ'ದಲ್ಲಿ ಭಾಗವಹಿಸಿದ್ದರು. ನಂತರ ಅವರು ಬೆಂಗಳೂರಿನಲ್ಲಿ ಎ.ಐ ತಂತ್ರಜ್ಞಾನವನ್ನು ಬಳಸಿ ಸಂಚಾರ ದಟ್ಟಣೆಯನ್ನು ನಿಯಂತ್ರಿಸುವ ಕೇಂದ್ರಕ್ಕೆ ಭೇಟಿ ನೀಡಿದ್ದರು.

'ಎಲ್ಲ ಕಡೆಗಳಿಂದ ಸಿಗುವ ದತ್ತಾಂಶವನ್ನು ಬಳಸಿ ಸಂಚಾರ ನಿಯಂತ್ರಣ ಕೇಂದ್ರದವರು ಮುಂದೆ ಏನಾಗುತ್ತದೆ ಎಂಬುದನ್ನೂ ಊಹಿಸುತ್ತಾರೆ' ಎಂದು ಕೇಂದ್ರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. 'ಸಿಸಿಟಿವಿ ಕ್ಯಾಮೆರಾಗಳ ಮೂಲಕ ಪಡೆದ ದತ್ತಾಂಶ ಬಳಸಿ ಅವರು ಬಹಳ ತ್ವರಿತವಾಗಿ ಸ್ಪಂದಿಸುತ್ತಾರೆ. ಉದಾಹರಣೆಗೆ, ರಸ್ತೆ ಅಪಘಾತ ಸಂಭವಿಸಿದಾಗ ಅದನ್ನು ಗುರುತಿಸಿ, ಸಂಚಾರ ಪೊಲೀಸರನ್ನು ಅಲ್ಲಿಗೆ ಕಳುಹಿಸಬಹುದು' ಎಂದರು.

ಜಾಗತಿಕ ಮಟ್ಟದಲ್ಲಿ ಸುಂಕಗಳನ್ನು ಅಸ್ತ್ರದ ರೂಪದಲ್ಲಿ ಬಳಸಿಕೊಂಡು ವ್ಯಾಪಾರ ಸಮರ ನಡೆಸುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಅವರು, 'ಸುಂಕಗಳನ್ನು ನೆದರ್ಲೆಂಡ್ಸ್ ವಿರೋಧಿಸುತ್ತದೆ... ಮುಕ್ತ ವ್ಯಾಪಾರದ ಬಗ್ಗೆ ನಾವು ಒಲವು ಹೊಂದಿದ್ದೇವೆ' ಎಂದು ಉತ್ತರಿಸಿದರು.

ಬೆಂಗಳೂರಿನಲ್ಲಿ ಇಷ್ಟವಾಗಿದ್ದು ಏನು?: 'ಬೆಂಗಳೂರಿನ ಹಸಿರು ನನಗೆ ಬಹಳ ಇಷ್ಟವಾಯಿತು... ನಾನು ಇಂದು (ಶುಕ್ರವಾರ) ಬೆಳಿಗ್ಗೆ ಜಾಗಿಂಗ್ ಮಾಡಿದೆ. ಇಲ್ಲಿನ ಗಾಳಿಯ ಗುಣಮಟ್ಟ ಚೆನ್ನಾಗಿತ್ತು' ಎಂದು ಪ್ರಶ್ನೆಯೊಂದಕ್ಕೆ ಉತ್ತರವಾಗಿ ಸ್ಕೂಫ್ ಹೇಳಿದರು.

'ಗಾಳಿಯ ಗುಣಮಟ್ಟವು ದೆಹಲಿಗಿಂತ ಇಲ್ಲಿ ಖಂಡಿತವಾಗಿ ಚೆನ್ನಾಗಿತ್ತು. ಬೆಂಗಳೂರಿನ ಗಾಳಿಯ ಗುಣಮಟ್ಟ ಹಾಗೂ ನೆದರ್ಲೆಂಡ್ಸ್‌ನ ಹೇಗ್‌ನಲ್ಲಿನ ಗಾಳಿಯ ಗುಣಮಟ್ಟವು ಬಹುತೇಕ ಒಂದೇ ಆಗಿದೆ' ಎಂದೂ ಅವರು ಹೇಳಿದರು.

ಸುದ್ದಿ 2 ನಿಮಿಷ

ಜಿಎಸ್‌ಟಿ ಮೇಲ್ಮನವಿ: ಇಂಗ್ಲಿಷ್ ನಿಯಮ ಕೈಬಿಡಲು ಮನವಿ

ಇಂದೋರ್ (ಪಿಟಿಐ): ಜಿಎಸ್‌ಟಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಮೇಲ್ಮನವಿ ಸಲ್ಲಿಸುವಾಗ ದಾಖಲೆಗಳ ಇಂಗ್ಲಿಷ್ ಅನುವಾದವನ್ನು ಕೂಡ ಇರಿಸಬೇಕು ಎಂಬ ನಿಯಮವನ್ನು ಕೇಂದ್ರ ಸರ್ಕಾರವು ರದ್ದುಪಡಿಸಬೇಕು ಎಂದು ಮಧ್ಯಪ್ರದೇಶದ ತೆರಿಗೆ ಸಮಾಲೋಚಕರನ್ನು ಪ್ರತಿನಿಧಿಸುವ ಸಂಘಟನೆಗಳು ಆಗ್ರಹಿಸಿವೆ.

ಕೇಂದ್ರದ ನಿಯಮವು ಮೇಲ್ಮನವಿ ಸಲ್ಲಿಸುವವರ ಮೇಲೆ ಅವಾಸ್ತವಿಕ ಹಣಕಾಸಿನ ಹೊರೆಯನ್ನು ಹೊರಿಸುತ್ತಿದೆ ಎಂದು ಅವು ಆಕ್ರೋಶ ವ್ಯಕ್ತಪಡಿಸಿವೆ.

ಈ ವಿಚಾರವಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಪತ್ರವೊಂದನ್ನು ಬರೆದಿರುವುದಾಗಿ ಮಧ್ಯಪ್ರದೇಶ ತೆರಿಗೆ ಕಾನೂನು ವಕೀಲರ ಸಂಘದ ಅಧ್ಯಕ್ಷ ಎ.ಕೆ. ಲಖೋಟಿಯಾ ತಿಳಿಸಿದ್ದಾರೆ.

ಸರಕು ಮತ್ತು ಸೇವಾ ತೆರಿಗೆ ಮೇಲ್ಮನವಿ ನ್ಯಾಯಮಂಡಳಿಗೆ ಸಂಬಂಧಿಸಿದ 23ನೆಯ ನಿಯಮದ ಪ್ರಕಾರ, ನ್ಯಾಯಮಂಡಳಿಯ ಎದುರು ಮೇಲ್ಮನವಿ ಸಲ್ಲಿಸುವಾಗ ಎಲ್ಲ ದಾಖಲೆಗಳ ಇಂಗ್ಲಿಷ್ ಅನುವಾದವನ್ನು ಸಲ್ಲಿಸುವುದು ಕಡ್ಡಾಯ ಎಂದು ಲಖೋಟಿಯಾ ವಿವರಿಸಿದರು.

'ಸರ್ಕಾರಿ ಭಾಷೆಗಳ ಕಾಯ್ದೆ 1963'ರ ಪ್ರಕಾರ ಮಧ್ಯಪ್ರದೇಶವು 'ವರ್ಗ ಎ' ಅಡಿಯಲ್ಲಿ ಬರುವ ರಾಜ್ಯ. ಇಲ್ಲಿ ಹಿಂದಿಯ ಬಳಕೆ ಅಗತ್ಯವಾಗಿದೆ. ಇಲ್ಲಿ ರಾಜ್ಯ ಜಿಎಸ್‌ಟಿ ಇಲಾಖೆಯ ಹೆಚ್ಚಿನ ಕಡತಗಳು ಹಿಂದಿಯಲ್ಲಿರುತ್ತವೆ. ಹೀಗಾಗಿ ಮೇಲ್ಮನವಿ ಸಲ್ಲಿಸುವಾಗ ಎಲ್ಲ ದಾಖಲೆಗಳನ್ನು ಇಂಗ್ಲಿಷ್‌ಗೆ ಕಡ್ಡಾಯವಾಗಿ ಅನುವಾದಿಸಬೇಕು ಎಂಬ ನಿಯಮವು ಅವಾಸ್ತವಿಕ ಎಂದು ಹೇಳಿದರು.

ಹಿಂದಿ ಭಾಷಿಕ ರಾಜ್ಯಗಳಲ್ಲಿನ ಜಿಎಸ್‌ಟಿ ಮೇಲ್ಮನವಿ ನ್ಯಾಯಮಂಡಳಿಗಳು ಮೇಲ್ಮನವಿ ಹಾಗೂ ಇತರ ಕೆಲವು ದಾಖಲೆಗಳನ್ನು ಹಿಂದಿಯಲ್ಲಿ ಸ್ವೀಕರಿಸಲು ಅವಕಾಶ ಕೊಡಬೇಕು ಎಂದು ಕೇಂದ್ರಕ್ಕೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು.



ಎ.ಐ ಅಭಿವೃದ್ಧಿ–ಮೋದಿ ಚರ್ಚೆ

ನವದೆಹಲಿ (ಪಿಟಿಐ): ಕೃಷಿ, ಪರಿಸರ ಸಂರಕ್ಷಣೆ ಮತ್ತು ಮಾತೃಭಾಷೆಯಲ್ಲಿ ಉನ್ನತ ಶಿಕ್ಷಣ ಸೇರಿದಂತೆ ವಿವಿಧ ವಲಯಗಳಲ್ಲಿ ಕೃತಕ ಬುದ್ಧಿಮತ್ತೆ (ಎ.ಐ) ಬಳಕೆಯ ಸಾಧ್ಯತೆಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಎ.ಐ ಮತ್ತು ಡೀಪ್‌ಟೆಕ್ ನವೋದ್ಯಮಗಳ ಸಿಇಒಗಳ ಜೊತೆ ಶುಕ್ರವಾರ ಚರ್ಚೆ ನಡೆಸಿದರು.

ಪ್ರಧಾನಿಯೊಂದಿಗೆ ದುಂಡುಮೇಜಿನ ಸಭೆ ನಡೆಸಿದ 16 ಎ.ಐ ಮತ್ತು ನವೋದ್ಯಮಗಳ ಸ್ಥಾಪಕರು ಮತ್ತು ಸಿಒಒಗಳು ತಮ್ಮ ಯೋಜನೆಗಳನ್ನು ಪ್ರಸ್ತುತಪಡಿಸಿದರು.

ಬಲವಾದ ದತ್ತಾಂಶ ನಿರ್ವಹಣೆ, ಸುಳ್ಳು ಮಾಹಿತಿಗಳ ನಿಗ್ರಹ ಮತ್ತು ಭಾರತದ ಅಗತ್ಯತೆಗಳಿಗೆ ಅನುಗುಣವಾದ ತಂತ್ರಜ್ಞಾನಗಳ ಅಗತ್ಯತೆಯನ್ನು ಮೋದಿ ಒತ್ತಿ ಹೇಳಿದರು.

ಬಾಹ್ಯಕಾಶ ವಲಯದಲ್ಲಿ ಖಾಸಗಿ ಸಹಭಾಗಿತ್ವವನ್ನು ವಿಸ್ತರಿಸುವ ಬಗ್ಗೆ ಮತ್ತು ಭಾರತದ ನವೋದ್ಯಮದ ಬಗ್ಗೆ ಹೂಡಿಕೆದಾರರ ಆಸಕ್ತಿ ಬಗ್ಗೆ ಮೋದಿ ಮಾತನಾಡಿದರು.

ಎ.ಐ ಸುಧಾರಣೆಗೆ ಪೂರಕ ವಾತಾವರಣ ಮತ್ತು ಬೆಂಬಲವನ್ನು ಭಾರತ ನೀಡುತ್ತಿದೆ ಹಾಗೂ ಜಾಗತಿಕ ಮಟ್ಟದಲ್ಲಿ ಎ.ಐ ವಲಯದಲ್ಲಿ ತನ್ನ ಇರುವಿಕೆಯನ್ನು ತೋರಿಸುತ್ತಿದೆ ಎಂದು ನವೋದ್ಯಮಿಗಳು ಹೇಳಿದರು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

SAD DEMISE



Mr. P. SRINIVASAN

DOB 12.06.1935 – DOD-19.02.2026

Sadly missed along life's way..
Lovingly remembered every day...
No longer in our life to share
But in our hearts you're always there.

Fondly Remembered by :
Mrs. S Shakunthala, Mr. P.S Muralidhar, Mrs. P.S Anuradha, Mrs. P.S Sujatha and Pattibaram Ramaiah's family.

ಎ.1ರಿಂದ ಟೋಲ್ ಪ್ಲಾಜಾ ನಗದುರಹಿತ?

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರೀಯ ಹೆದ್ದಾರಿಗಳ ಟೋಲ್ ಪ್ಲಾಜಾಗಳಲ್ಲಿ ಸಂಪೂರ್ಣ ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿಗೆ ತರಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ನಿರ್ಧರಿಸಿದ್ದು, ಏಪ್ರಿಲ್ 1ರಿಂದ ನಗದು ಪಾವತಿ ವ್ಯವಸ್ಥೆಯನ್ನು ನಿಲ್ಲಿಸಲು ಯೋಜಿಸಿದೆ.

ಹೊಸ ವ್ಯವಸ್ಥೆ ಕಾರ್ಯರೂಪಕ್ಕೆ ಬಂದರೆ, ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸುವ ವಾಹನಗಳು ಟೋಲ್ ಪ್ಲಾಜಾಗಳಲ್ಲಿ ಪಾವತಿಗಳಿಗೆ ಫಾಸ್ಟ್‌ಟ್ಯಾಗ್ ಅಥವಾ ಯುಪಿಐನಂತಹ ಡಿಜಿಟಲ್ ಪಾವತಿ ವ್ಯವಸ್ಥೆಗಳನ್ನು ಮಾತ್ರ ಬಳಸಬೇಕಾಗುತ್ತದೆ. ಯಾವುದೇ ನಗದು ಪಾವತಿಗೆ ಅವಕಾಶ ಇರುವುದಿಲ್ಲ.

ಟೋಲ್ ಪಾವತಿಗೆ ಸಂಬಂಧಿಸಿದಂತೆ ಈಗ ಇರುವ ನಿಯಮದ ಪ್ರಕಾರ, ಸಕ್ರಿಯ ಫಾಸ್ಟ್‌ಟ್ಯಾಗ್ ಇಲ್ಲದೆ ಟೋಲ್ ಪ್ಲಾಜಾ ಪ್ರವೇಶಿಸುವ ವಾಹನಗಳು ಶುಲ್ಕವನ್ನು ನಗದು ರೂಪದಲ್ಲಿ ಪಾವತಿಸುವುದಾದರೆ ಸಾಮಾನ್ಯ ಟೋಲ್ ಶುಲ್ಕದ ಎರಡು ಪಟ್ಟು ಹೆಚ್ಚು ಪಾವತಿಸಬೇಕು. ಆದರೆ, ಯುಪಿಐ ಮೂಲಕ ಶುಲ್ಕ ಪಾವತಿ ವಿಧಾನ ಆಯ್ಕೆ ಮಾಡಿಕೊಂಡರೆ, ಸಾಮಾನ್ಯ ಟೋಲ್ ಶುಲ್ಕದ 1.25 ಪಟ್ಟು ಶುಲ್ಕ ಪಾವತಿ ಮಾಡಬೇಕು.

'ಡಿಜಿಟಲ್ ಪಾವತಿ ವ್ಯವಸ್ಥೆಗೆ ಮಾತ್ರ ಅವಕಾಶ ನೀಡುವುದರಿಂದ ಟೋಲ್ ಪ್ಲಾಜಾಗಳಲ್ಲಿ ದಟ್ಟಣೆಯನ್ನು ಕಡಿಮೆ ಮಾಡಲು ಮತ್ತು ಟೋಲ್ ವಹಿವಾಟುಗಳಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ತರಲು ಸಾಧ್ಯವಾಗಲಿದೆ. ವಾಹನಗಳ ತಡೆರಹಿತ ಸಂಚಾರದೊಂದಿಗೆ ಪ್ರಯಾಣದ ಅವಧಿಯನ್ನು ಕಡಿಮೆ ಮಾಡಲಿದೆ' ಎಂದು ಎನ್‌ಎಚ್‌ಎಐ ತಿಳಿಸಿದೆ.

₹318 ಕೋಟಿ ಪಾವತಿಗೆ ಒಪ್ಪಿದ ಎಪ್‌ಸ್ಟೈನ್ ಎಸ್ಟೇಟ್

ಎಪ್‌ಸ್ಟೈನ್ ವಿರುದ್ಧ ಬಾಕಿ ಉಳಿದಿರುವ ಪ್ರಕರಣಗಳ ಇತ್ಯರ್ಥಕ್ಕೆ ಕೋರ್ಟ್‌ಗೆ ಮನವಿ

ವಾಷಿಂಗ್ಟನ್ (ಎಎಫ್‌ಪಿ): ಮಹಿಳೆಯರು ಮತ್ತು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಮಾನವ ಕಳ್ಳಸಾಗಣೆ ಪ್ರಕರಣಗಳಲ್ಲಿ ಅಪರಾಧಿಯಾಗಿದ್ದ ಉದ್ಯಮಿ ಜೆಫ್ರಿ ಎಪ್‌ಸ್ಟೈನ್ ವಿರುದ್ಧ ಬಾಕಿ ಉಳಿದಿರುವ ಪ್ರಕರಣಗಳಲ್ಲಿ 35 ಮಿಲಿಯನ್ ಡಾಲರ್ (ಅಂದಾಜು ₹318 ಕೋಟಿ) ಪರಿಹಾರ ಪಾವತಿಸಲು ಸಿದ್ಧವಿರುವುದಾಗಿ ಎಪ್‌ಸ್ಟೈನ್ ಎಸ್ಟೇಟ್, ಕೋರ್ಟ್‌ಗೆ ತಿಳಿಸಿದೆ.



ಜೆಫ್ರಿ ಎಫ್‌ಸ್ಟೈನ್

ಎಪ್‌ಸ್ಟೈನ್ ಎಸ್ಟೇಟ್ ಪಾವತಿಗೆ ಒಪ್ಪಿಕೊಂಡಿರುವ ಮೊತ್ತ ಪಾವತಿಸುವ ಪ್ರಸ್ತಾವವು ನ್ಯೂಯಾರ್ಕ್‌ನ ಫೆಡರಲ್ ನ್ಯಾಯಾಧೀಶರು ಅನುಮೋದಿಸಿದರೆ ಮಾತ್ರ ಅಂತಿಮಗೊಳ್ಳಲಿದೆ.

'1995ರ ಜನವರಿ 1ರಿಂದ 2019ರ ಆಗಸ್ಟ್ 10ರ ಅವಧಿಯಲ್ಲಿ ಎಪ್‌ಸ್ಟೈನ್‌ನ ಲೈಂಗಿಕ ದೌರ್ಜನ್ಯ, ಮಾನವ ಕಳ್ಳಸಾಗಣೆ ಜಾಲದಲ್ಲಿ ಸಿಲುಕಿ ನರಳಿದ್ದೇವೆ' ಎಂದು 40ಕ್ಕೂ ಹೆಚ್ಚು ಸಂತ್ರಸ್ತರು ಕೋರ್ಟ್‌ಗೆ ತಿಳಿಸಿದ್ದಾರೆ.

ನಲವತ್ತು ಅಥವಾ ಅದಕ್ಕಿಂತ ಹೆಚ್ಚಿನ ಸಂತ್ರಸ್ತರು ಇದ್ದರೆ 35 ಮಿಲಿಯನ್ ಡಾಲರ್ ಹಾಗೂ 40ಕ್ಕಿಂತ ಕಡಿಮೆ ಇದ್ದರೆ 25 ಮಿಲಿಯನ್ ಡಾಲರ್ ಪರಿಹಾರ ಪಾವತಿಸುವುದಾಗಿ ಎಪ್‌ಸ್ಟೈನ್‌ನ ಸಲಹೆಗಾರರೂ ಆಗಿರುವ ಮಾಜಿ ವಕೀಲ ಡರ್ರೈನ್ ಇಂಡೇಕ್ ಹಾಗೂ ಮಾಜಿ ಲೆಕ್ಕಾಧಿಕಾರಿ ರಿಚರ್ಡ್ ಕಾನ್ ಕೋರ್ಟ್‌ಗೆ ಮನವಿ ಸಲ್ಲಿಸಿದ್ದಾರೆ.

ಸಂತ್ರಸ್ತರ ಪರವಾಗಿ ಹೋರಾಟ ನಡೆಸುತ್ತಿರುವ ಕಾನೂನು ಸಂಸ್ಥೆಯ ಪ್ರತಿನಿಧಿ ಬೊಯಿಸ್ ಶಿಲ್ಲರ್ ಫ್ಲೆಕ್ನರ್, 'ಎಷ್ಟು ಮಂದಿ ಸಂತ್ರಸ್ತರು ಈ ಮೊಕದ್ದಮೆಯ ಭಾಗವಾಗಿದ್ದಾರೆ ಎನ್ನುವುದರ ಕುರಿತು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದರೆ, ಎಪ್‌ಸ್ಟೈನ್ ಎಸ್ಟೇಟ್ 40ಕ್ಕೂ ಹೆಚ್ಚು ಸಂತ್ರಸ್ತರ ಪರಿಹಾರ ಇತ್ಯರ್ಥ ಪಡಿಸಲು ಬಾಕಿ ಉಳಿಸಿಕೊಂಡಿದೆ ಎಂದು 'ಬ್ಲೂಮ್‌ಬರ್ಗ್ ನ್ಯೂಸ್' ವರದಿ ಮಾಡಿದೆ.

'ನಾವು ತಪ್ಪೆಸಗಿಲ್ಲ'

'ಎಪ್‌ಸ್ಟೈನ್ ಲೈಂಗಿಕ ದೌರ್ಜನ್ಯ ಪ್ರಕರಣಗಳಿಗೆ ನಾವು ಸಾಕ್ಷಿಗಳಲ್ಲ ಹಾಗೂ ಈ ಪ್ರಕರಣದ ಸಂತ್ರಸ್ತರ ಜತೆಗೆ ಯಾವುದೇ ತಪ್ಪೆಸಗಿಲ್ಲ' ಎಂದು ಎಪ್‌ಸ್ಟೈನ್ ಎಸ್ಟೇಟ್‌ನ ಕಾರ್ಯನಿರ್ವಾಹಕರೂ ಆಗಿರುವ ಡರ್ರೈನ್ ಇಂಡೇಕ್ ಮತ್ತು ರಿಚರ್ಡ್ ಕಾನ್ ಹೇಳಿದ್ದಾರೆ.

ಆದರೆ, ಎಪ್‌ಸ್ಟೈನ್ ವಿರುದ್ಧ 2024ರಲ್ಲಿ ದಾಖಲಾಗಿರುವ ಪ್ರಕರಣದಲ್ಲಿ, 'ಸಲಹೆಗಾರರು ತಮ್ಮ ಕಾನೂನು ಮತ್ತು ವ್ಯವಹಾರಗಳ ಮೂಲಕ ಎಪ್‌ಸ್ಟೈನ್‌ನ ಅಕ್ರಮ ಚಟುವಟಿಕೆಗಳನ್ನು ಸಕ್ರಿಯಗೊಳಿಸಿದ್ದಾರೆ' ಎಂದು ಆರೋಪಿಸಲಾಗಿದೆ.

'ಎಪ್‌ಸ್ಟೈನ್‌ನ ಸಲಹೆಗಾರರು ತಮ್ಮ ಮೇಲಿನ ತಪ್ಪುಗಳನ್ನು ಒಪ್ಪಿಕೊಂಡರೆ, ಮುಂದಿನ ಕಾನೂನು ಕ್ರಮಕ್ಕೆ ಒಳಪಡಬೇಕಾಗುತ್ತದೆ ಎಂದು ಅಮೆರಿಕದ ಮ್ಯಾನ್‌ಹಟನ್ ನ್ಯಾಯಾಲಯಕ್ಕೆ ಗುರುವಾರ ಸಲ್ಲಿಸಲಾಗಿರುವ ವರದಿಯಲ್ಲಿ ತಿಳಿಸಲಾಗಿದೆ.

ಆ್ಯಂಡ್ರೂ ನಿವಾಸದಲ್ಲಿ ಶೋಧ

ಲಂಡನ್ (ಎಪಿ): ಬ್ರಿಟನ್‌ನ ಮಾಜಿ ರಾಜಕುಮಾರ ಆ್ಯಂಡ್ರೂ ಮೌಂಟ್‌ಬ್ಯಾಟನ್–ವಿಂಡ್ಸರ್ ಅವರು ಈ ಹಿಂದೆ ವಾಸವಿದ್ದ ನಿವಾಸದಲ್ಲಿ ಪೊಲೀಸರು ಶುಕ್ರವಾರ ಶೋಧ ನಡೆಸಿದರು.

ಲೈಂಗಿಕ ಅಪರಾಧಿ ಎಪ್‌ಸ್ಟೈನ್ ಜತೆಗಿನ ನಂಟಿಗೆ ಸಂಬಂಧಿಸಿದಂತೆ, ಸರ್ಕಾರಿ ಹುದ್ದೆಯ-ಲ್ಲಿದ್ದಾಗ ಅನುಚಿತವಾಗಿ ವರ್ತಿಸಿರುವ ಶಂಕೆಯ ಮೇರೆಗೆ ಆ್ಯಂಡ್ರೂ ಅವರನ್ನು ಗುರುವಾರ ಬಂಧಿಸಿ, 11 ತಾಸಿನ ಬಳಿಕ ಬಿಡುಗಡೆ ಮಾಡಲಾಯಿತು. ಆ್ಯಂಡ್ರೂ ಅವರು ಶುಕ್ರವಾರ ಸ್ಯಾಂಡ್ರಿಗಮ್ ಎಸ್ಟೇಟ್‌ನಲ್ಲಿರುವ ನೂತನ ನಿವಾಸಕ್ಕೆ ಮರಳಿದರು. ಇದೇ ಸಂದರ್ಭದಲ್ಲಿ ಪೊಲೀಸರು ವಿಂಡ್ಸರ್ ಕ್ಯಾಸಲ್‌ನಲ್ಲಿರುವ 30 ಕೋಣೆಗಳ ನಿವಾಸದಲ್ಲಿ ಶೋಧ ನಡೆಸಿದರು.

ಸರ್ಕಾರಿ ಹುದ್ದೆಯಲ್ಲಿದ್ದಾಗ ಅನುಚಿತ ವರ್ತನೆಯ ಜತೆಗೆ 2010ರಲ್ಲಿ ಸರ್ಕಾರದ ಕೆಲವು ಗೋಪ್ಯ ಮಾಹಿತಿಗಳನ್ನು ಎಪ್‌ಸ್ಟೈನ್ ಜತೆಗೆ ಆ್ಯಂಡ್ರೂ ಹಂಚಿಕೊಂಡಿದ್ದಾರೆ ಎಂದು ಅಮೆರಿಕದ ನ್ಯಾಯಾಂಗ ಇಲಾಖೆಯು ಬಿಡುಗಡೆ ಮಾಡಿದ ವರದಿಯಲ್ಲಿ ಆರೋಪಿಸಲಾಗಿದೆ.

ಪ್ಯಾಕ್ಸ್ ಸಿಲಿಕಾ ಒಕ್ಕೂಟಕ್ಕೆ ಭಾರತ ಸೇರ್ಪಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿರಳ ಖನಿಜಗಳು ಮತ್ತು ಕೃತಕ ಬುದ್ಧಿಮತ್ತೆ (ಎ.ಐ) ಕ್ಷೇತ್ರಗಳಲ್ಲಿ ಪೂರೈಕೆ ಸರಪಳಿ ಸೃಷ್ಟಿಸುವ ಉದ್ದೇಶದಿಂದ ಅಮೆರಿಕ ನೇತೃತ್ವದ 'ಪ್ಯಾಕ್ಸ್ ಸಿಲಿಕಾ' ಒಕ್ಕೂಟಕ್ಕೆ ಭಾರತ ಶುಕ್ರವಾರ ಸೇರ್ಪಡೆಯಾಗಿದೆ.

'ಭಾರತ– ಅಮೆರಿಕ ಸಮಗ್ರ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆ ಅಡಿಯಲ್ಲಿ 'ಪ್ಯಾಕ್ಸ್ ಸಿಲಿಕಾ'ದೊಂದಿಗಿನ ಸಹಕಾರವು ತಂತ್ರಜ್ಞಾನ ಮತ್ತು ಪೂರೈಕೆ ಸರಪಳಿಯನ್ನು ಮತ್ತಷ್ಟು ಬಲಗೊಳಿಸುತ್ತದೆ. ಇದು ಭಾರತದ ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್ ಉದ್ಯಮಕ್ಕೆ ಹೆಚ್ಚಿನ ಪ್ರಯೋಜನ ನೀಡುತ್ತದೆ' ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಅಶ್ವಿನಿ ವೈಷ್ಣವ್

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

General

ಸೈಟ್ ತೆಗೆದುಕೊಳ್ಳುವಂತವರು ಸೈಟ್ ಮಾರಾಟಗಾರರು ಮನೆ ತೆಗೆದುಕೊಳ್ಳುವಂತವರು ಮನೆ ಮಾರಾಟಗಾರರು ಬಡವರಿಗೆ ಮನೆ ಕಟ್ಟಿ ಕೊಡಲು ಸಹಾಯ ಮಾಡಲಾಗುವುದು ಮತ್ತು 10 ಲಕ್ಷ, 25 ಲಕ್ಷ, 50 ಲಕ್ಷ ಚೀಟಿ ಹಾಕುವಂತವರು ಸಂಪರ್ಕಿಸಿ. ಬೆಂಗಳೂರು 9036957018.

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಆದ್ಯತೆ. 19,000-25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9964322833, 9742133993

Teachers/ Professors

TEACHERS WANTED SFS SCHOOL (CBSE), MALUR (Near Hosakote, Bengaluru; run by MSFS Fathers) We are seeking qualified TGTs and PRTs for English, Mathematics, Science, Hindi, Computer Science, and Social Science across secondary, upper primary, and lower primary levels. Montessori- trained/ NTTC teachers for kindergarten, as well as PT, music, work experience,dance, and art teachers, are also required.Fluency in English is mandatory for all positions.Free boarding and lodging OR complimentary transport from Electronic City is available, along with an attractive salary. Please apply with your biodata and a photograph within seven days to: sfsschoolmalur24@gmail.com

ಪ್ರವಾಸ

Holiday Package Tours

ಭಾರತೀಯ ರೈಲ್ವೆಯ ಪ್ರವಾಸಿ ರೈಲು ವೈಷ್ಣೋದೇವಿ, ಅಮೃತಸರ, ಹರಿದ್ವಾರ, ಮಥುರಾ ಪ್ರವಾಸಕ್ಕೆ 13 ದಿನಗಳ ಪ್ರವಾಸವನ್ನು ಏರ್ಪಡಿಸಿದೆ. ಇದು ಏಪ್ರಿಲ್ 11 ರಂದು ಬೆಂಗಳೂರಿನಿಂದ ಪ್ರಾರಂಭವಾಗುತ್ತದೆ, 3AC ಊಟ ಮತ್ತು ವಸತಿಯೊಂದಿಗೆ 48,700 ರೂ . ಬುಕಿಂಗ್‌ಗಾಗಿ 7305858585 / (www.tourtimes.in) ಸಂಪರ್ಕಿಸಿ .

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಯುವ ಕಾಂಗ್ರೆಸ್‌ನ ನಾಲ್ವರ ಬಂಧನ; 'ಕೈ' ವಿರುದ್ಧ ಬಿಜೆಪಿ ವಾಗ್ದಾಳಿ

ಎ.ಐ ಎಕ್ಸ್‌ಪೋ ತಾಣದಲ್ಲಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಯುವ ಕಾಂಗ್ರೆಸ್ ಕಾರ್ಯಕರ್ತರ ಗುಂಪೊಂದು ಎ.ಐ ಶೃಂಗಸಭೆಯ 'ಎಕ್ಸ್‌ಪೋ' ನಡೆಯುತ್ತಿರುವ ಹಾಲ್‌ನಲ್ಲಿ ಶುಕ್ರವಾರ ಕೆಲಹೊತ್ತು ಪ್ರತಿಭಟನೆ ನಡೆಸಿ, ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಘೋಷಣೆಗಳನ್ನು ಕೂಗಿದೆ.

ಬಿಜೆಪಿ ರಾಷ್ಟ್ರೀಯ ಉಪಾಧ್ಯಕ್ಷ ಬೈಜಯಂತ್ ಪಾಂಡಾ ಅವರು ಪ್ರತಿಭಟನೆಯನ್ನು 'ದೇಶ ವಿರೋಧಿ' ಎಂದು ಟೀಕಿಸಿದ್ದಾರೆ. ಯುವ ಕಾಂಗ್ರೆಸ್ ಅಧ್ಯಕ್ಷ ಉದಯ್ ಭಾನು ಚಿಬ್ ಅವರು 'ರಾಹುಲ್ ಗಾಂಧಿ ಸೈನಿಕರ' ಪ್ರತಿಭಟನೆಯನ್ನು ಸಮರ್ಥಿಸಿಕೊಂಡಿ-ದ್ದಾರೆ. ಪ್ರಧಾನಿ 'ರಾಜಿ' ಆಗಿರುವಾಗ ನಮಗೆ ಮೌನವಾಗಿರಲು ಸಾಧ್ಯವಿಲ್ಲ ಎಂದಿದ್ದಾರೆ.

'ಪ್ರಧಾನಿ ಮೋದಿ ಅವರನ್ನು ಗುರಿಯಾಗಿಸುವ ಭರದಲ್ಲಿ ದೇಶಕ್ಕೆ ಕಳಂಕ ಉಂಟುಮಾಡುವ ತನ್ನ ಚಾಳಿಯನ್ನು ಕಾಂಗ್ರೆಸ್ ಮುಂದುವರಿಸಿದೆ. ಇದನ್ನು ಕೇವಲ ವಿರೋಧ ಎನ್ನಲಾಗದು, ಇದು ದೇಶವಿರೋಧಿ ನಡೆ' ಎಂದು ಪಾಂಡಾ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ನಾಲ್ವರನ್ನು ಬಂಧಿಸಲಾಗಿದೆ. ಯುವ ಕಾಂಗ್ರೆಸ್ ರಾಷ್ಟ್ರೀಯ ಕಾರ್ಯದರ್ಶಿ-ಗಳಾದ ಬಿಹಾರದ ಕೃಷ್ಣ ಹರಿ ಮತ್ತು ಕುಂದನ್ ಯಾದವ್, ರಾಷ್ಟ್ರೀಯ ಸಂಯೋಜಕ ತೆಲಂಗಾಣದ ನರಸಿಂಹ ಯಾದವ್ ಹಾಗೂ ಉತ್ತರ ಪ್ರದೇಶ ಪೂರ್ವ ಘಟಕದ ಉಪಾಧ್ಯಕ್ಷ ಅಜಯ್ ಕುಮಾರ್ ಅವರು ಬಂಧಿತರು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಯುವ ಕಾಂಗ್ರೆಸ್ ಕಾರ್ಯಕರ್ತರು ಪ್ರಧಾನಿ ಮೋದಿ ಹಾಗೂ ಟ್ರಂಪ್ ಅವರ ಚಿತ್ರವಿರುವ ಟಿ–ಶರ್ಟ್ ಪ್ರದರ್ಶಿಸಿದರು —ಪಿಟಿಐ ಚಿತ್ರ

'ಘಟನೆಗೆ ಸಂಬಂಧಿಸಿದಂತೆ 15 ಮಂದಿಯನ್ನು ವಶಕ್ಕೆ ತೆಗೆದುಕೊಳ್ಳಲಾಗಿದ್ದು, ಎಲ್ಲರನ್ನೂ ತಿಲಕ್ ಮಾರ್ಗ ಪೊಲೀಸ್ ಠಾಣೆಗೆ ಕರೆದೊಯ್ಯಲಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿ ಯೊಬ್ಬರು ಘಟನೆಯ ಬೆನ್ನಲ್ಲೇ ಹೇಳಿದ್ದರು.

ನಡೆದದ್ದೇನು?: ಮಧ್ಯಾಹ್ನ 12.30ರ ಸುಮಾರಿಗೆ ಯುವ ಕಾಂಗ್ರೆಸ್ ಕಾರ್ಯಕರ್ತರು 'ಭಾರತ ಮಂಟಪ'ದ ಹಾಲ್ ಸಂಖ್ಯೆ 5ರ ಒಳಗೆ ಏಕಾಏಕಿ ಪ್ರವೇಶಿಸಿ ಶರ್ಟ್ ಬಿಚ್ಚಿ ಪ್ರತಿಭಟನೆ ನಡೆಸಿದರು. ಪ್ರಧಾನಿ ಮೋದಿ ಮತ್ತು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಚಿತ್ರಗಳಿರುವ ಟಿ-ಶರ್ಟ್‌ಗಳನ್ನು ಪ್ರದರ್ಶಿಸಿದರು. ಟಿ-ಶರ್ಟ್ ಮೇಲೆ 'ಭಾರತ– ಅಮೆರಿಕ ವ್ಯಾಪಾರ ಒಪ್ಪಂದ', 'ಎಪ್‌ಸ್ಟೈನ್ ಫೈಲ್ಸ್' ಮತ್ತು 'ಪ್ರಧಾನಿ ರಾಜಿಯಾಗಿದ್ದಾರೆ' ಎಂದು ಬರೆಯಲಾಗಿತ್ತು.

'ಪ್ರತಿಭಟನಕಾರರು ಆನ್‌ಲೈನ್‌ನಲ್ಲಿ ಹೆಸರು ನೋಂದಣಿ ಮಾಡಿಸಿ, ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದ ನಂತರ ಹಾಲ್‌ಗೆ ಪ್ರವೇಶಿಸಿದ್ದಾರೆ' ಎಂದು ಹೆಚ್ಚುವರಿ ಪೊಲೀಸ್ ಕಮಿಷನರ್ ದೇವೇಶ್ ಕುಮಾರ್ ಮಹ್ಲಾ ತಿಳಿಸಿದರು. 'ಟಿ-ಶರ್ಟ್ ಕಾಣದಂತೆ ಅದರ ಮೇಲೆ ಸ್ವೆಟರ್ ಧರಿಸಿದ್ದರು. ಹಾಲ್ ಪ್ರವೇಶಿಸಿದ ಬಳಿಕ ಸ್ವೆಟರ್ ತೆಗೆದು ಟಿ–ಶರ್ಟ್ ಪ್ರದರ್ಶಿಸಿದರು' ಎಂದರು.

ಪ್ರಧಾನಿ ಮೋದಿ ವಿರುದ್ಧ ಘೋಷಣೆ ಕೂಗುತ್ತಾ ಹಾಲ್‌ನಲ್ಲಿ ಒಂದಷ್ಟು ದೂರ ಮೆರವಣಿಗೆ ನಡೆಸಿದರು. ಈ ವೇಳೆ ಅಲ್ಲಿದ್ದ ಕೆಲವರು ಪ್ರತಿಭಟನಕಾರರ ಕೈಯಿಂದ ಟಿ–ಶರ್ಟ್ ಕಿತ್ತುಕೊಳ್ಳಲು ಪ್ರಯತ್ನಿಸಿದರು. ಪರಸ್ಪರ ಮಾತಿನ ಚಕಮಕಿ ನಡೆದು ಸ್ಥಳದಲ್ಲಿ ಗೊಂದಲ ಉಂಟಾಯಿತು. ಅಲ್ಲಿದ್ದ ಸ್ವಯಂಸೇವಕರು ಮತ್ತು ಭದ್ರತಾ ಸಿಬ್ಬಂದಿ ತಕ್ಷಣವೇ ಎಲ್ಲ ಪ್ರತಿಭಟನಕಾ-ರರನ್ನು ಹೊರಗೆ ಕಳುಹಿಸಿದ್ದಾರೆ.

'ಇನ್ನೆಲ್ಲಿ ಧ್ವನಿ ಎತ್ತಬೇಕು?'

ಭಾರತೀಯ ಯುವ ಕಾಂಗ್ರೆಸ್ (ಐವೈಸಿ) ಈ ಪ್ರತಿಭಟನೆಯನ್ನು ಸಮರ್ಥಿಸಿಕೊಂಡಿದೆ. ಪ್ರತಿಭಟನೆಯ ವಿಡಿಯೊವನ್ನು ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ಹಂಚಿಕೊಂಡಿದ್ದು, 'ಮಾಧ್ಯಮಗಳು, ವ್ಯವಸ್ಥೆ ಮತ್ತು ಪ್ರಧಾನಿಯೇ ರಾಜಿ ಮಾಡಿಕೊಂಡಿರುವ ಈ ದೇಶದಲ್ಲಿ ಅನ್ಯಾಯದ ವಿರುದ್ಧ ಧ್ವನಿ ಎತ್ತಲು ಯಾವ ವೇದಿಕೆ ಉಳಿದಿದೆ' ಎಂದು ಪ್ರಶ್ನಿಸಿದೆ.

'ಬೀದಿಗಿಳಿದು ಪ್ರತಿಭಟನೆ ನಡೆಸಿದರೆ ನಮ್ಮನ್ನು ತಡೆಯಲಾಗುತ್ತದೆ. ಸರ್ಕಾರದ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದರೆ, ಮಾಹಿತಿ ತಂತ್ರಜ್ಞಾನ ನಿಯಮಗಳ ನೆಪದಲ್ಲಿ ಕಿತ್ತುಹಾಕಲಾಗುತ್ತದೆ. ಮಾಧ್ಯಮಗಳು ಸರ್ಕಾರದ ಮುಖವಾಣಿಯಾಗಿ ಮಾರ್ಪಟ್ಟಿವೆ. ಹಾಗಾದರೆ ನಮ್ಮ ಮುಂದಿರುವ ದಾರಿ ಯಾವುದು?' ಎಂದು ಕೇಳಿದೆ.

> **ಈ ಘಟನೆ ಕಾಂಗ್ರೆಸ್‌ನ ಹತಾಶೆಯನ್ನು ತೋರಿಸುತ್ತದೆ. 140 ಕೋಟಿ ಭಾರತೀಯರನ್ನು ಜಾಗತಿಕವಾಗಿ ಮುಜುಗರಗೊಳಿಸಲು ನಡೆಸಿದ ಪ್ರಯತ್ನ ಇದು**
> **ಪೀಯೂಷ್ ಗೋಯಲ್**
> ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ

> **ಅಂತರರಾಷ್ಟ್ರೀಯ ವೇದಿಕೆಯಲ್ಲಿ ಭಾರತದ ಪ್ರತಿಷ್ಠೆಯನ್ನು ಹಾಳುಮಾಡಲು ನಡೆಸಿದ ಕಾಂಗ್ರೆಸ್‌ನ ಈ ಕೃತ್ಯವನ್ನು ನಾನು ಖಂಡಿಸುತ್ತೇನೆ**
> **ರಾಜನಾಥ ಸಿಂಗ್,**
> ರಕ್ಷಣಾ ಸಚಿವ

ದೇಶದ ಮೂಲಸೌಕರ್ಯ ವಲಯದ ಪ್ರಗತಿ ಇಳಿಕೆ

ನವದೆಹಲಿ (ಪಿಟಿಐ): ದೇಶದ ಎಂಟು ಪ್ರಮುಖ ಮೂಲ ಸೌಕರ್ಯ ವಲಯಗಳ ಉತ್ಪಾದನೆ ಜನವರಿಯಲ್ಲಿ ಶೇ 4ಕ್ಕೆ ಇಳಿದಿದೆ ಎಂದು ಕೇಂದ್ರ ಸರ್ಕಾರದ ಅಂಕಿ–ಅಂಶಗಳು ಶುಕ್ರವಾರ ತಿಳಿಸಿವೆ. ಇದು ಎರಡು ತಿಂಗಳ ಕನಿಷ್ಠ ಮಟ್ಟ.

ಕಳೆದ ವರ್ಷದ ಜನವರಿಯಲ್ಲಿ ಮೂಲಸೌಕರ್ಯ ವಲಯಗಳ ಉತ್ಪಾದನೆ ಶೇ 5.1 ಮತ್ತು ಡಿಸೆಂಬರ್‌ನಲ್ಲಿ ಶೇ 4.7ರಷ್ಟು ದಾಖಲಾಗಿತ್ತು. ಕಚ್ಚಾತೈಲ ಮತ್ತು ನೈಸರ್ಗಿಕ ಅನಿಲದ ಉತ್ಪಾದನೆ ಜನವರಿಯಲ್ಲಿ ಇಳಿಕೆ ಆಗಿದೆ.

ಕಲ್ಲಿದ್ದಲು, ಸಿಮೆಂಟ್ ಉತ್ಪಾದನೆಯು ಕ್ರಮವಾಗಿ ಶೇ 3.1 ಮತ್ತು ಶೇ 10.7ರಷ್ಟು ದಾಖಲಾಗಿದೆ. ಕಳೆದ ವರ್ಷದ ಜನವರಿಯಲ್ಲಿ ಇದು ಶೇ 4.6 ಮತ್ತು ಶೇ 14.3ರಷ್ಟಿತ್ತು. ರಸಗೊಬ್ಬರ, ಉಕ್ಕು ಮತ್ತು ವಿದ್ಯುತ್ ಉತ್ಪಾದನೆಯು ಸಕಾರಾತ್ಮಕ ಬೆಳವಣಿಗೆ ಕಂಡಿದೆ ಎಂದು ತಿಳಿಸಿದೆ.

ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್–ಜನವರಿವರೆಗೆ ಈ ವಲಯಗಳ ಉತ್ಪಾದನೆ ಶೇ 2.8ರಷ್ಟು ದಾಖಲಾಗಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಇದು ಶೇ 4.5ರಷ್ಟಿತ್ತು ಎಂದು ತಿಳಿಸಿದೆ.

ಐಎಎಫ್ ತಂಡದ ವೈಮಾನಿಕ ಪ್ರದರ್ಶನ

ಜೈಪುರ (ಪಿಟಿಐ): ಭಾರತೀಯ ವಾಯುಪಡೆಯ ಸೂರ್ಯ ಕಿರಣ್ ಏರೋಬ್ಯಾಟಿಕ್ ತಂಡ (ಎಸ್‌ಕೆಎಟಿ) ಹಾಗೂ ಸಾರಂಗ್ ಹೆಲಿಕಾಪ್ಟರ್ ತಂಡಗಳು ಜೈಪುರದ ಪ್ರಖ್ಯಾತ ಜಲ್ ಮಹಲ್‌ನ ಬಾನಂಗಳದಲ್ಲಿ ಶುಕ್ರವಾರ ಮೈನವಿರೇಳಿಸುವ ವೈಮಾನಿಕ ಪ್ರದರ್ಶನ ನೀಡಿವೆ.

ಸಾರಂಗ್ ತಂಡದ ಅತ್ಯಾಧುನಿಕ ಲಘು ಹೆಲಿಕಾಪ್ಟರ್ (ಎಎಲ್‌ಎಚ್) ಆಗಿರುವ ಧ್ರುವ್ ಹಾರಾಟದ ಮೂಲಕ ವೈಮಾನಿಕ ಪ್ರದರ್ಶನಕ್ಕೆ ಚಾಲನೆ ದೊರಕಿದೆ. ಈ ಲೋಹದ ಹಕ್ಕಿಗಳು ಬಾನಂಗಳದಲ್ಲಿ ಚಿತ್ರಿಸಿದ ಬಾಣ ಹಾಗೂ ಹೃದಯಾಕಾರದ ಪ್ರದರ್ಶನಗಳನ್ನು ಕಂಡು ಜನರು ಹರ್ಷ ವ್ಯಕ್ತಪಡಿಸಿದ್ದಾರೆ. ಸೂರ್ಯ ಕಿರಣ್ ತಂಡದ 9 ಹಾಕ್ ಎಂಕೆ–132 ವಿಮಾನಗಳು ತೇಜಸ್ ವಿನ್ಯಾಸದ ಮೂಲಕ ಪ್ರದರ್ಶನ ಆರಂಭಿಸಿವೆ. ಬಳಿಕ ಹಲವು ವಿನ್ಯಾಸಗಳನ್ನು ಪ್ರದರ್ಶಿಸಲಾಗಿದೆ.

ನಾವು ನೋಡಿದ ಸಿನಿಮಾ

ಅಚ್ಚುಕಟ್ಟಾದ ಸೀತಾರಾಮ್

ಮಲೆನಾಡಿನ ಆನೆಗದ್ದೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆಯುವ ಅಪರಾಧ ಪ್ರಕರಣಗಳ ಕುರಿತಾದ ಕಥೆ ಹೊಂದಿರುವ ಚಿತ್ರ 'ಸೀತಾರಾಮ್ ಬಿನೋಯ್' 2021ರಲ್ಲಿ ತೆರೆ ಕಂಡಿತ್ತು. ಮಲೆನಾಡಿನ ಪ್ರಶಾಂತವಾದ ಊರುಗಳಲ್ಲಿನ ಕಳ್ಳತನ, ಕೊಲೆ, ಸ್ಥಳೀಯ ವ್ಯಾಜ್ಯಗಳೇ ಈ ಕಥೆಯ ಕೇಂದ್ರಬಿಂದುವಾಗಿತ್ತು. ಅದೇ ಠಾಣಾ ವ್ಯಾಪ್ತಿಯಲ್ಲಿ ನಡೆಯುವ ಮರ್ಡರ್ ಮಿಸ್ಟ್ರಿ ಕಥೆ ಹೊಂದಿರುವ ಚಿತ್ರ 'ಸೆಕೆಂಡ್ ಕೇಸ್ ಆಫ್ ಸೀತಾರಾಮ್'. ಕಥೆಯಾಗಿ 'ಸೀತಾರಾಮ್ ಬಿನೋಯ್'ಗೂ ಈ ಚಿತ್ರಕ್ಕೂ ಸಂಬಂಧವಿಲ್ಲ. ಆದರೆ ಅಲ್ಲಿನ ಜಾಗ, ಪಾತ್ರ, ಸಂಬಂಧಗಳು ಇಲ್ಲಿಯೂ ಮುಂದುವರಿದಿವೆ.

ಆನೆಗದ್ದೆ ಸಮೀಪದ ಊರಿನ ಅಶೋಕನ ಭೀಕರ ಕೊಲೆಯೊಂದಿಗೆ ಚಿತ್ರ ಪ್ರಾರಂಭವಾಗುತ್ತದೆ. ನಂತರ ಸರಣಿ ಕೊಲೆಗಳಾಗುತ್ತವೆ. ಇನ್‌ಸ್ಪೆಕ್ಟರ್ ಸೀತಾರಾಮ್‌ಗೆ ಈ ಕೊಲೆಗಳು ಸವಾಲಾಗುತ್ತವೆ. ನಿಜವಾದ ಕೊಲೆಗಾರರನ್ನು ಹುಡುಕಿಕೊಂಡು ಹೋಗುವುದೇ ಚಿತ್ರದ ಒಟ್ಟಾರೆ ಕಥೆ. ಸಸ್ಪೆನ್ಸ್, ಥ್ರಿಲ್ಲರ್ ಸಿನಿಮಾಗಳಲ್ಲಿ ಕುತೂಹಲವೆಂಬುದು ಪ್ರೇಕ್ಷಕನನ್ನು ಕುರ್ಚಿಯ ತುದಿಗೆ ತಂದು ಕೂರಿಸಬೇಕು. ಜತೆಗೆ ಚಿತ್ರಕಥೆಯನ್ನು ಸರಪಳಿಯ ಕೊಂಡಿಯಂತೆ ಬೆಸೆಯಬೇಕು. ಸರಪಳಿಯ ಮೊದಲ ಕೊಂಡಿಗೂ, ಕೊನೆಯ ಕೊಂಡಿಗೂ ತಾತ್ವಿಕವಾದ ಬೆಸುಗೆ ಇರಬೇಕು. ಆ ವಿಚಾರದಲ್ಲಿ ಇಲ್ಲಿ ಚಿತ್ರಕಥೆ ಸೋಲುತ್ತದೆ.

ಮಾನಸಿಕ ಅಸ್ವಸ್ಥನಾಗಿ ಬರುವ ಸಬಾಸ್ಟೀನ್ ಊರಿನಲ್ಲಿ ನಡೆಯುವ ಎಲ್ಲ ಕೊಲೆಗಳಿಗೂ ಕಾರಣವೆಂಬಂತೆ ಬಿಂಬಿಸಿ, ಆತನನ್ನು ಬಂಧಿಸಲಾಗುತ್ತದೆ. ನೋಡುಗನಿಗೆ ಆತನೇ ಕೊಲೆಗಾರ ಎನ್ನಿಸುವ ದೃಶ್ಯಗಳನ್ನು ಸೃಷ್ಟಿಸುವಲ್ಲಿ ನಿರ್ದೇಶಕರು ಯಶಸ್ವಿಯಾಗಿದ್ದಾರೆ. ಇದೇ ಗುಮಾನಿಯಲ್ಲಿ ಚಿತ್ರದ ಮೊದಲಾರ್ಧ ಮುಗಿದಿದ್ದೇ ಗೊತ್ತಾಗುವುದಿಲ್ಲ. ಆದರೆ ಆತ ಯಾಕೆ ಕೊಲೆಗಾರನಲ್ಲ ಎಂಬುದಕ್ಕೆ ಸ್ಪಷ್ಟವಾದ ತಾತ್ವಿಕ ವಿವರಣೆ ಸಿಗುವುದಿಲ್ಲ. ಕೊಲೆಗೆ ಸಾಕ್ಷಿ, ವಿಚಾರಣೆಗಳು ಎಲ್ಲಿಯೂ ತೀವ್ರ ಎನಿಸುವುದೇ ಇಲ್ಲ.

ಇದೊಂದು ಅಂಶವನ್ನು ಬದಿಗಿಟ್ಟು ನೋಡಿದರೆ ಹಿತವಾದ ಅನುಭವ ನೀಡುವ, ಅಚ್ಚುಕಟ್ಟಾದ ಸಿನಿಮಾವಿದು. ಕಥೆಯ ಜತೆಗೆ ಮಲೆನಾಡಿನ ಊರುಗಳನ್ನು, ಅಲ್ಲಿಯ ಬದುಕನ್ನು ಬಹಳ ಸೊಗಸಾಗಿ ಕಟ್ಟಿಕೊಡಲಾಗಿದೆ. ಸೀತಾರಾಮನಾಗಿ ವಿಜಯ ರಾಘವೇಂದ್ರ ಇಷ್ಟವಾಗುತ್ತಾರೆ. ಸಬಾಸ್ಟಿನ್ ಆಗಿ ಗೋಪಾಲಕೃಷ್ಣ ದೇಶಪಾಂಡೆ ಗಮನ ಸೆಳೆಯುತ್ತಾರೆ. ಉಳಿದ ಬಹುತೇಕ ಪಾತ್ರಗಳನ್ನು ನಿರ್ದೇಶಕರು ಸ್ಥಳೀಯರಿಂದ ಮಾಡಿಸಿದ್ದಾರೆ. ಹೀಗಾಗಿ ಅವರೆಲ್ಲ ಪಾತ್ರವಾಗದೆ, ಆ ಊರಿನ ಸಹಜ ವ್ಯಕ್ತಿಗಳೆನಿಸುತ್ತಾರೆ.

ಕಥೆಯೊಂದಿಗೆ ಸಂಗೀತವನ್ನು ಬೆರೆಸಿದ ರೀತಿ ಚೆನ್ನಾಗಿದೆ. ಹೀಗಾಗಿ ಹಿನ್ನೆಲೆ ಸಂಗೀತ ಬಹಳ ಆಪ್ತವೆನಿಸುತ್ತದೆ. ಆದರೆ ಹಾಡುಗಳು ನೆನಪಿನಲ್ಲಿ ಉಳಿಯುವುದಿಲ್ಲ. ಚಿತ್ರದಲ್ಲಿ ಮಲೆನಾಡನ್ನು ಇನ್ನಷ್ಟು ಸೊಗಸಾಗಿ ತೋರಿಸುವ ಅವಕಾಶವಿತ್ತು. ಚಿತ್ರಕಥೆಯನ್ನು ಇನ್ನಷ್ಟು ಕುತೂಹಲಕಾರಿಯಾಗಿಸಿದ್ದರೆ 'ಸೀತಾರಾಮನ' ಪಯಣ ಮತ್ತಷ್ಟು ಎತ್ತರಕ್ಕೆ ತಲುಪುವ ಸಾಧ್ಯತೆಯಿತ್ತು.

-ವಿನಾಯಕ ಕೆ.ಎಸ್.

ನೋಡಬಹುದಾದ ಸಿನಿಮಾ

ಸೆಕೆಂಡ್ ಕೇಸ್ ಆಫ್ ಸೀತಾರಾಮ್ (ಕನ್ನಡ)

- ನಿರ್ಮಾಣ: ಸಾತ್ವಿಕ್ ಹೆಬ್ಬಾರ್
- ನಿರ್ದೇಶನ: ದೇವಿಪ್ರಸಾದ್ ಶೆಟ್ಟಿ
- ತಾರಾಗಣ: ವಿಜಯ ರಾಘವೇಂದ್ರ, ಗೋಪಾಲಕೃಷ್ಣ ದೇಶಪಾಂಡೆ, ಉಷಾ ಭಂಡಾರಿ ಮತ್ತಿತರರು

ಕರಾವಳಿ ಸೊಗಡು, 'ಮಾರ್ನಮಿ' ಸೊಗಸು

ಕರಾವಳಿ ಭಾಗದ ಸಂಸ್ಕೃತಿ, ಆಚರಣೆ, ನಂಬಿಕೆಗಳನ್ನು ಕಥಾವಸ್ತುಗಳನ್ನಾಗಿ ಇಟ್ಟುಕೊಂಡು ಹಲವು ಸಿನಿಮಾಗಳು ಬಂದಿವೆ. 'ಮಾರ್ನಮಿ'ಯೂ ಕರಾವಳಿಯ ಹುಲಿವೇಷ ಹಿನ್ನೆಲೆಯಲ್ಲಿ ಪ್ರೇಮಕಥೆಯೊಂದನ್ನು ತೆರೆಗೆ ತಂದಿದೆ. ಮೊದಲಾರ್ಧದಲ್ಲಿ ಗಮನಸೆಳೆಯುವ ಕಥೆಯು ದ್ವಿತೀಯಾರ್ಧದಲ್ಲಿ ಬೇರೊಂದು ಆಯಾಮದಲ್ಲಿ ಸಾಗಬಹುದಿತ್ತು ಎನಿಸುವಂತೆ ಮಾಡುತ್ತದೆ.

ಚೇತು(ರಿತ್ವಿಕ್ ಮಠದ್) ಅಮ್ಮನ ಮುದ್ದಿನ ಮಗ. ಬಾಲ್ಯದಲ್ಲಿ ಈತನಿಗೆ ಸೀತಾಳೆ ಸಿಡುಬು(ಚಿಕನ್ ಪಾಕ್ಸ್) ರೋಗ ಬರುತ್ತದೆ. ತಾಯಿ ಈತ ಗುಣಮುಖನಾದರೆ ದಸರಾ(ತುಳುವಿನಲ್ಲಿ ಮಾರ್ನಮಿ) ಹಬ್ಬಕ್ಕೆ ಈತನಿಗೆ ಹುಲಿವೇಷ ಹಾಕಿಸಿ ದೇವಿ ಮುಂದೆ ಕುಣಿಸುವ ಹರಕೆ ಹೊರುತ್ತಾಳೆ. ಆತ ಗುಣಮುಖನಾಗುತ್ತಾನೆ. ಬಳಿಕ ತಾಯಿ ಟಿಬಿಯಿಂದ ನಿಧನಳಾಗುತ್ತಾಳೆ. ಮಾವನ ಜೊತೆ ಬೆಳೆಯುವ ಚೇತು ದೊಡ್ಡ ಕನಸುಗಳಿಲ್ಲದೆ ಪುಟ್ಟ ಸಂಸಾರದ ಕನಸು ಕಾಣುತ್ತಾನೆ. ಆಗ 'ದೀಕ್ಷಾ'(ಚೈತ್ರಾ ಜೆ.ಆಚಾರ್) ಸಿಗುತ್ತಾಳೆ. ಕಥೆ ಹೀಗೆ ತೆರೆದುಕೊಳ್ಳುತ್ತದೆ.

'ಗರುಡ ಗಮನ..' ಸಿನಿಮಾದ ಒಂದು ಅಂಶವನ್ನಿಟ್ಟುಕೊಂಡೇ ಸಿನಿಮಾದ ಮೊದಲಾರ್ಧದ ಕಥೆ ಆರಂಭವಾಗುತ್ತದೆ. ಮೊದಲಾರ್ಧದಲ್ಲಿ ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಕಥೆಗಿದೆ. ಒಂದು ಮುಗ್ಧ ಪ್ರೀತಿ ಸೆಳೆಯುವಂತಿದೆ. ಕೊಂಚ ಎಳೆದಂತೆ ಅನಿಸಿದರೂ ಚಿತ್ರಕಥೆ ಗಟ್ಟಿಯಾಗಿದೆ. ಸಂಭಾಷಣೆಗಳೂ ಸೊಗಸಾಗಿವೆ. ಹುಲಿವೇಷದ ಆಚರಣೆ, ಅದರ ಹಿನ್ನೆಲೆ, ಸಿದ್ಧತೆಯ ವಿವರಣೆಗೆ ಇಲ್ಲಿ ಹೆಚ್ಚಿನ ತೆರೆ ಅವಧಿ ನೀಡಲಾಗಿದೆ. ಜೊತೆಗೆ ಹುಲಿವೇಷ ಕುಣಿಸುವ ಎರಡು ತಂಡಗಳ ನಡುವಿನ ಸ್ಪರ್ಧೆ, ಜಿದ್ದನ್ನೂ ಇಲ್ಲಿ ಚಿತ್ರಿಸಲಾಗಿದೆ. ಮಧ್ಯಂತರ ತಲುಪುವ ವೇಳೆಗೆ ನಿರ್ದೇಶಕರು ಚಿತ್ರಕಥೆಯನ್ನು ಅನಗತ್ಯವಾಗಿ ಬೇರೆಡೆ ಎಳೆದಂತೆ ಭಾಸವಾಗುತ್ತದೆ. ಅಪಶಕುನದ ಕಥೆಯ ಅಗತ್ಯವಿರಲಿಲ್ಲ. ದ್ವಿತೀಯಾರ್ಧದ ಕಥೆಗೆ ಬೇರೆ ರೂಪ ನೀಡುವ ಅವಕಾಶ ನಿರ್ದೇಶಕರಿಗಿತ್ತು. ಇದರಿಂದ ಭಿನ್ನ ಕ್ಲೈಮ್ಯಾಕ್ಸ್‌ನ ಸಾಧ್ಯತೆಯೂ ಇತ್ತು. ಈ ಭಾಗದ ಬರವಣಿಗೆಯೂ ಗಟ್ಟಿಯಾಗಿರಬೇಕಿತ್ತು. ಒಟ್ಟಾರೆ ಈ ಭಾಗ ಸಿನಿಮಾ ಅವಧಿಯನ್ನೂ ಹೆಚ್ಚಿಸಿದೆ. ಪಾತ್ರಗಳಿಗೆ ವೃತ್ತಿ ನಿಗದಿ ಮಾಡದೇ ಇರುವ ಕೊರತೆ ಕಥೆಗೂ ಅಡ್ಡಿಯಾಗಿದೆ.

ನಟನೆಯಲ್ಲಿ ಕರಾವಳಿಯ ಹುಡುಗಿ 'ದೀಕ್ಷಾ'ಳಾಗಿ ಚೈತ್ರಾ ಜೆ. ಆಚಾರ್ ಜೀವಿಸಿದ್ದಾರೆ. ಅವರ ಸಂಭಾಷಣೆ, ಹಾವಭಾವದಲ್ಲಿ ನೈಜತೆ ಇದೆ. ರಿತ್ವಿಕ್ 'ಚೇತು' ಪಾತ್ರಕ್ಕೆ ನ್ಯಾಯ ನೀಡಿದ್ದಾರೆ. ಸೋನು ಗೌಡ, ಸ್ವರಾಜ್ ಶೆಟ್ಟಿ ನಟನೆ ಚೆನ್ನಾಗಿದೆ. ಪ್ರಕಾಶ್ ತೂಮಿನಾಡು- ಚೈತ್ರಾ ಶೆಟ್ಟಿ ಜೋಡಿಯ ನಟನೆ ಸ್ಥಳೀಯ ಸೊಗಡಿನ ಸಿನಿಮಾಗೆ ಹೇಳಿ ಮಾಡಿಸಿದಂತಿದೆ. 'ಏ ಮಾರಾಯ..' ಹಾಡು ಮತ್ತೆ ಮತ್ತೆ ಗುನುಗುವಂತಿದೆ. ಶಿವಸೇನಾ ಕರಾವಳಿಯ ಜಾತ್ರೆ, ಜನಜೀವನವನ್ನು ಸೆಳೆಯುವಂತೆ ಸೆರೆಹಿಡಿದಿದ್ದಾರೆ.

-ಅಭಿಲಾಷ್ ಪಿ.ಎಸ್.

ನೋಡಬಹುದಾದ ಸಿನಿಮಾ

ಮಾರ್ನಮಿ (ಕನ್ನಡ)

- ನಿರ್ಮಾಣ: ಶಿಲ್ಪಾ ನಿಶಾಂತ್
- ನಿರ್ದೇಶನ: ರಿಶಿತ್ ಶೆಟ್ಟಿ
- ತಾರಾಗಣ: ರಿತ್ವಿಕ್ ಮಠದ್, ಚೈತ್ರಾ ಜೆ. ಆಚಾರ್, ಸೋನು ಗೌಡ, ಪ್ರಕಾಶ್ ತೂಮಿನಾಡು, ಚೈತ್ರಾ ಶೆಟ್ಟಿ, ಜ್ಯೋತೀಶ್ ಶೆಟ್ಟಿ, ಸ್ವರಾಜ್ ಶೆಟ್ಟಿ ಮತ್ತಿತರರು.

ಆಸ್ಟ್ರೇಲಿಯಾದಲ್ಲಿ ದಾಖಲೆ ಬರೆಯುವತ್ತ ಕೌರ್ ಪಡೆ ಚಿತ್ತ

ಸರಣಿ ಜಯದ ಮೇಲೆ ಭಾರತ ಕಣ್ಣು

ಅಡಿಲೇಡ್ (ಪಿಟಿಐ): ಆಸ್ಟ್ರೇಲಿಯಾದ ನೆಲದಲ್ಲಿ ಮೊದಲ ಬಾರಿಗೆ ಮಹಿಳೆಯರ ಟಿ20 ಸರಣಿ ಗೆದ್ದು ಐತಿಹಾಸಿಕ ಸಾಧನೆ ಮಾಡುವ ಅವಕಾಶದ ಹೊಸ್ತಿಲಲ್ಲಿ ಭಾರತ ತಂಡ ಇದೆ.

ಮೂರು ಪಂದ್ಯಗಳ ಈ ಸರಣಿಯಲ್ಲಿ ಉಭಯ ತಂಡಗಳು 1–1ರ ಸಮಬಲ ಸಾಧಿಸಿವೆ. ಕೊನೆಯ ಪಂದ್ಯವು ಶನಿವಾರ ಇಲ್ಲಿ ನಡೆಯಲಿದೆ. ಭಾರತ ತಂಡವು ಈ ಹಿಂದೆಯೂ ಕೆಲವು ಪಂದ್ಯಗಳಲ್ಲಿ ಜಯಿಸಿದೆ. ಆದರೆ, ಸರಣಿ ಗೆದ್ದಿಲ್ಲ. ಇದಕ್ಕಾಗಿ ಭಾರತದ ಪ್ರಮುಖ ಬ್ಯಾಟರ್‌ಗಳು ತಮ್ಮ ನೈಜ ಸಾಮರ್ಥ್ಯ ಮೆರೆಯಬೇಕಾದ ಅಗತ್ಯವಿದೆ. ಅದರಲ್ಲೂ ಸ್ಮೃತಿ ಮಂದಾನ ಮತ್ತು ಶಫಾಲಿ ವರ್ಮಾ ಅವರು ಉತ್ತಮ ಆರಂಭ ನೀಡಿದರೆ ನಂತರದ ಕ್ರಮಾಂಕದ ಬ್ಯಾಟರ್‌ಗಳಿಗೆ ಸುಲಭವಾಗಲಿದೆ.

ಎರಡನೇ ಪಂದ್ಯದಲ್ಲಿ 164 ರನ್‌ಗಳ ಗುರಿ ಬೆನ್ನಟ್ಟಿದ ಸಂದರ್ಭದಲ್ಲಿ ಸ್ಮೃತಿ ಮತ್ತು ಶಫಾಲಿ ಅವರು ಉತ್ತಮ ಆರಂಭ ನೀಡಲಿಲ್ಲ. ಆಸ್ಟ್ರೇಲಿಯಾ ತಂಡದ ಅನುಭವಿಗಳಾದ ಕಿಮ್ ಗಾರ್ಥ್, ಅನಾಬೆಲ್ ಸದರ್ಲೆಂಡ್ ಮತ್ತು ಸೋಫಿ ಮಾಲಿನೆ ಅವರು ಭಾರತ ತಂಡದ ಐದು ವಿಕೆಟ್‌ಗಳನ್ನು ಏಳು ರನ್‌ಗಳ ಅಂತರದಲ್ಲಿ ಉರುಳಿಸಿದ್ದರು.

ಹರ್ಮನ್‌ಪ್ರೀತ್ ಕೌರ್ ಎಎಫ್‌ಪಿ ಸಂಗ್ರಹ ಚಿತ್ರ

ಆದರೆ ಅಡಿಲೇಡ್ ಮೈದಾನದಲ್ಲಿ ಉತ್ತಮ ಔಟ್‌ಫೀಲ್ಡ್ ಇದೆ. ಬ್ಯಾಟರ್‌ಗಳಿಗೆ ಹೆಚ್ಚು ನೆರವು ನೀಡುವ ಲಕ್ಷಣಗಳಿವೆ. ಇದರಿಂದಾಗಿ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್, ಜೆಮಿಮಾ ರಾಡ್ರಿಗಸ್ ಮತ್ತು ರಿಚಾ ಘೋಷ್ ಅವರಿಗೆ ರನ್ ಗಳಿಸಲು ಉತ್ತಮ ಅವಕಾಶಗಳಿವೆ. ಮಧ್ಯಮವೇಗಿಗಳಾದ ರೇಣುಕಾ ಸಿಂಗ್, ಅರುಂಧತಿ ರೆಡ್ಡಿ, ಕ್ರಾಂತಿ ಗೌಡ್ ಮತ್ತು ಅಮನ್ಜೋತ್ ಕೌರ್ ಅವರ ಮುಂದೆ ಆಸ್ಟ್ರೇಲಿಯಾದ ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ಸವಾಲು ಇದೆ.

ಸ್ಪಿನ್ನರ್ ದೀಪ್ತಿ ಶರ್ಮಾ ಮತ್ತು ಶ್ರೀ ಚರಣಿ ಅವರೂ ತಮ್ಮ ಕೈಚಳಕ ತೋರಿದರೆ ಬೌಲಿಂಗ್ ವಿಭಾಗದ ಶಕ್ತಿ ಹೆಚ್ಚಬಹುದು.

ಆತಿಥೇಯ ತಂಡದ ಯುವ ಆಟಗಾರ್ತಿ ಜಾರ್ಜಿಯಾ ವೋಲ್ ಅವರಿಗೆ ತಡೆಯೊಡ್ಡುವುದೇ ಪ್ರಮುಖ ಸವಾಲಾಗಲಿದೆ. 22 ವರ್ಷದ ಜಾರ್ಜಿಯಾ ಅವರು ಕಳೆದ ಪಂದ್ಯದಲ್ಲಿಯೂ ಮಿಂಚಿದ್ದರು. ಅವರು ಮತ್ತು ಬೆತ್ ಮೂನಿ ಅವರು ಸೇರಿ ಉತ್ತಮ ಆರಂಭ ನೀಡಿದ್ದರು. ಇವರಲ್ಲದೇ ಅನಾಬೆಲ್ ಸದರ್ಲೆಂಡ್ ಹಾಗೂ ಆ್ಯಷ್ಲೆ ಗಾರ್ಡನರ್ ಅವರು ರನ್ ಪೇರಿಸಬಲ್ಲ ಸಮರ್ಥರಾಗಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 1.45

ಪ್ರೊ ಲೀಗ್ ಹಾಕಿ: ಹೋಬಾರ್ಟ್ ಲೆಗ್ ಇಂದಿನಿಂದ

ಭಾರತ ತಂಡಕ್ಕೆ ಪುಟಿದೇಳುವ ತವಕ

ಹೋಬಾರ್ಟ್ (ಪಿಟಿಐ): ತವರಿನಲ್ಲಿ ನಡೆದ ಎಫ್‌ಐಎಚ್ ಪ್ರೊ ಲೀಗ್ ಋತುವಿನ ಮೊದಲ ಲೆಗ್‌ನಲ್ಲಿ ಭಾರತ ಹಾಕಿ ತಂಡ ದಯನೀಯ ವೈಫಲ್ಯ ಅನುಭವಿಸಿದೆ. ಇದೀಗ, ಶನಿವಾರ ಆರಂಭವಾಗಲಿರುವ ಹೋಬಾರ್ಟ್ ಲೆಗ್‌ನಲ್ಲಿ ಹೊಸ ನಾಯಕ ಹಾರ್ದಿಕ್ ಸಿಂಗ್ ನೇತೃತ್ವದ ತಂಡವು ಪುಟಿದೇಳುವ ತವಕದಲ್ಲಿದೆ.

ಭಾರತ ತಂಡವು ಶನಿವಾರ ತಾಸ್ಮೇನಿಯಾ ಹಾಕಿ ಸೆಂಟರ್‌ನಲ್ಲಿ ನಡೆಯುವ ಪಂದ್ಯದಲ್ಲಿ ಸ್ಪೇನ್ ತಂಡವನ್ನು ಎದುರಿಸಲಿದೆ. ಹೋಬಾರ್ಟ್ ಲೆಗ್‌ನಲ್ಲಿ ಆತಿಥೇಯ ಆಸ್ಟ್ರೇಲಿಯಾ ತಂಡವೂ ಕಣದಲ್ಲಿದೆ.

ರೂರ್ಕೆಲಾ ಲೆಗ್‌ನಲ್ಲಿ ಭಾರತ ತಂಡ ಅರ್ಜೆಂಟೀನಾ, ಬೆಲ್ಜಿಯಂ ವಿರುದ್ಧ ಆಡಿದ ತಲಾ ಎರಡು ಪಂದ್ಯಗಳಲ್ಲೂ ಸೋಲನುಭವಿಸಿತು. ಈ ಲೆಗ್ ನಂತರ ನಾಯಕ ಹರ್ಮನ್‌ಪ್ರೀತ್ ಸಿಂಗ್ ವೈಯಕ್ತಿಕ ಕಾರಣ ನೀಡಿ ವಿರಾಮ ಪಡೆದಿದ್ದಾರೆ. ಅವರು ಎರಡನೇ ಮಗುವಿನ ನಿರೀಕ್ಷೆಯಲ್ಲಿದ್ದಾರೆ.

ಮುಂಬರುವ ಎಫ್‌ಐಎಚ್ ವಿಶ್ವಕಪ್, ಬಳಿಕ ನಡೆಯಲಿರುವ ಏಷ್ಯನ್ ಗೇಮ್ಸ್‌ಗೆ ತಂಡದ ಸಂಯೋಜನೆ ರೂಪಿಸಲು, ಪರೀಕ್ಷಿಸಲು, ಲೋಪಗಳನ್ನು ತಿದ್ದಿಕೊಳ್ಳಲು ಈ ಪ್ರೊ ಲೀಗ್ ಭಾರತಕ್ಕೆ ಸದವಕಾಶ ಒದಗಿಸಿದೆ.



ಹಾರ್ದಿಕ್ ಸಿಂಗ್

ಭಾರತ ಶನಿವಾರ ಸ್ಪೇನ್ ವಿರುದ್ಧ ಪಂದ್ಯ ಆಡಲಿರುವ ಭಾರತ ತಂಡವು, ಭಾನುವಾರ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ. ಫೆ. 24ರಂದು ಮರು ಪಂದ್ಯದಲ್ಲಿ ಸ್ಪೇನ್ ತಂಡವನ್ನು, 25ರಂದು ಮರು ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಭಾರತ ತಂಡವು ಮುಖಾಮುಖಿಯಾಗಲಿದೆ. ಸ್ಪೇನ್ – ಭಾರತ ತಂಡಗಳು ಈ ಹಿಂದಿನ ಹತ್ತು ಮುಖಾಮುಖಿಗಳಲ್ಲಿ ತಲಾ ನಾಲ್ಕು ಪಂದ್ಯಗಳನ್ನು ಗೆದ್ದುಕೊಂಡಿವೆ. ಎರಡು ಪಂದ್ಯಗಳು ಡ್ರಾ ಆಗಿದ್ದು, ಎರಡೂ ಬಾರಿ ಭಾರತ ಶೂಟೌಟ್‌ನಲ್ಲಿ ಜಯಗಳಿಸಿದೆ.

ಆಸ್ಟ್ರೇಲಿಯಾ ವಿರುದ್ಧ ಪಂದ್ಯಗಳಲ್ಲಿ ಸಾಕಷ್ಟು ಗೋಲುಗಳು ದಾಖಲಾಗಿದ್ದರೂ ಭಾರತದ ಸಾಧನೆ ಅಷ್ಟೇನೂ ಉತ್ತಮವಾಗಿಲ್ಲ. ಕೊನೆಯ 10 ಪಂದ್ಯಗಳಲ್ಲಿ ಕಾಂಗರೂ ಪಡೆ ಆರು ಪಂದ್ಯಗಳನ್ನು ಗೆದ್ದರೆ, ಭಾರತ ಎರಡರಲ್ಲಷ್ಟೇ ಜಯಗಳಿಸಿದೆ. ಎರಡು ಡ್ರಾ ಆಗಿವೆ. **ಪಂದ್ಯ ಆರಂಭ:** ಮಧ್ಯಾಹ್ನ 12 ಗಂಟೆಗೆ.

ಹುಬ್ಬಳ್ಳಿಯಲ್ಲಿ ಗರಿಗೆದರಿದ ಸಂಭ್ರಮ

24ರಿಂದ ರಣಜಿ ಟ್ರೋಫಿ ಫೈನಲ್ ಪಂದ್ಯ: ನಗರಕ್ಕೆ ಬಂದ ಜಮ್ಮು ಕಾಶ್ಮೀರ ತಂಡ

• ಸತೀಶ ಬಿ.

ಹುಬ್ಬಳ್ಳಿ: ರಾಜನಗರದ ಕೆಎಸ್‌ಸಿಎ ಕ್ರಿಕೆಟ್ ಕ್ರೀಡಾಂಗಣದಲ್ಲಿ ಸಂಭ್ರಮ ಗರಿಗೆದರಿದೆ. ಇದೇ 24ರಿಂದ ಇಲ್ಲಿ ನಡೆಯಲಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯಕ್ಕಾಗಿ ಅಂತಿಮ ಹಂತದ ಸಿದ್ಧತೆಗಳು ಭರದಿಂದ ನಡೆಯುತ್ತಿವೆ. ಕರ್ನಾಟಕ ಮತ್ತು ಜಮ್ಮು– ಕಾಶ್ಮೀರ ತಂಡಗಳು ಮುಖಾಮುಖಿಯಾಗಲಿವೆ.

ಪಂದ್ಯ ವೀಕ್ಷಣೆಗೆ ಬರುವವರಿಗಾಗಿ 5 ಸಾವಿರ ಆಸನಗಳ ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. 200 ಮಂದಿ ಗಣ್ಯ ವ್ಯಕ್ತಿಗಳು, ಮಾಧ್ಯಮದವರಿಗೆ ಪ್ರತ್ಯೇಕ ವ್ಯವಸ್ಥೆ ಇರಲಿದೆ.

ಕ್ರೀಡಾಂಗಣದ ಸ್ಟ್ಯಾಂಡ್, ಗ್ರಿಲ್‌ಗಳಿಗೆ ಬಣ್ಣ ಬಳಿದು, ಶುಚಿಗೊಳಿಸಲಾಯಿತು. ಡ್ರೆಸ್ಸಿಂಗ್ ಕೊಠಡಿ ಇರುವ ಕ್ಲಬ್ ಹೌಸ್ ಕಟ್ಟಡದಲ್ಲೂ ಸ್ವಚ್ಛತಾ ಕಾರ್ಯ ನಡೆಯಿತು. ಸ್ವಯಂಸೇವಕರು, ವಿವಿಧ ಕ್ಲಬ್‌ಗಳ ಸದಸ್ಯರು, ಆಟಗಾರರು ಸೇರಿ 200ಕ್ಕೂ ಹೆಚ್ಚು ಸಿಬ್ಬಂದಿ ಸಿದ್ಧತಾ ಕಾರ್ಯದಲ್ಲಿ ತೊಡಗಿದ್ದಾರೆ.

'ಮುಂಬೈನಿಂದ ಬಿಸಿಸಿಐ ಪಿಚ್ ಕ್ಯುರೇಟರ್ ಬಂದಿದ್ದಾರೆ. ಅವರಿಗೆ ಅಗತ್ಯ ಸಾಮಗ್ರಿ ಒದಗಿಸಲಾಗಿದೆ. ಅವರು ಪಿಚ್ ಮತ್ತು ಔಟ್‌ಫೀಲ್ಡ್ ನಿರ್ವಹಿಸುವರು. ಇಲ್ಲಿ ಎಂಟು ಮಂದಿ ಮೈದಾನ ಸಿಬ್ಬಂದಿ ಇದ್ದಾರೆ. ಬೆಳಗಾವಿಯಿಂದ ಹೆಚ್ಚುವರಿಯಾಗಿ ಐವರು ಸಿಬ್ಬಂದಿಯನ್ನು ಕರೆಸಿಕೊಂಡಿದ್ದೇವೆ. 25ಕ್ಕೂ ಹೆಚ್ಚು ಬಾಲ್ ಬಾಯ್‌ಗಳನ್ನು ನಿಯೋಜಿಸಲಾಗುವುದು' ಎಂದು ಕೆಎಸ್‌ಸಿಎ ಧಾರವಾಡ ವಲಯದ ನಿಮಂತ್ರಕ ವೀರಣ್ಣ ಸವಡಿ 'ಪ್ರಜಾವಾಣಿ'ಗೆ ತಿಳಿಸಿದರು.

'ಸ್ಟಾರ್ ಸ್ಪೋರ್ಟ್ಸ್ ಮತ್ತು ಜಿಯೊ ಹಾಟ್‌ಸ್ಟಾರ್‌ನಲ್ಲಿ ಪಂದ್ಯದ ನೇರಪ್ರಸಾರ ಇರಲಿದೆ. ಅವರ 50 ಮಂದಿ ಸಿಬ್ಬಂದಿ ಬರುವರು. ಕ್ಯಾಮೆರಾ ಅಳವಡಿಕೆಗೆ ನಾಲ್ಕು ಕಡೆ ಸ್ಟ್ಯಾಂಡ್ ವ್ಯವಸ್ಥೆ ಮಾಡಲಾಗುವುದು' ಎಂದು ಹೇಳಿದರು.

'ಪಂದ್ಯ ವೀಕ್ಷಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ಜನ ಬರುವ ನಿರೀಕ್ಷೆಯಿದ್ದು, ಹೆಚ್ಚಿನ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ, ಸೂಕ್ತ ಭದ್ರತೆ ಒದಗಿಸುವಂತೆ ಹುಬ್ಬಳ್ಳಿ ಧಾರವಾಡ ಪೊಲೀಸ್ ಕಮಿಷನರ್ ಅವರಿಗೆ ಕೋರಲಾಗಿದೆ. ಯಾವ ದ್ವಾರದಿಂದ ಸಾರ್ವಜನಿಕರ ಪ್ರವೇಶಕ್ಕೆ ಅವಕಾಶ ನೀಡಬೇಕು ಎಂಬ ಬಗ್ಗೆ ಪೊಲೀಸ್ ಸಿಬ್ಬಂದಿ ಜತೆ ಚರ್ಚಿಸಿ ನಿರ್ಧರಿಸಲಾಗುವುದು' ಎಂದರು.

> **ಜಮ್ಮು ಮತ್ತು ಕಾಶ್ಮೀರ ತಂಡ ಹುಬ್ಬಳ್ಳಿಗೆ ಈಗಾಗಲೇ ಬಂದಿದೆ. ಶನಿವಾರ ಅವರು ಅಭ್ಯಾಸ ಆರಂಭಿಸುವರು. ಪ್ರಾಕ್ಟೀಸ್ ಪಿಚ್‌ಗಳನ್ನು ಸಿದ್ಧಪಡಿಸಲಾಗಿದೆ. ಕರ್ನಾಟಕ ತಂಡವು ಭಾನುವಾರ ಬರಲಿದೆ**
> **ವೀರಣ್ಣ ಸವಡಿ,** ನಿಮಂತ್ರಕ, ಕೆಎಸ್‌ಸಿಎ ಧಾರವಾಡ ವಲಯ

> **ಅನುಮಾನಾಸ್ಪದ ವ್ಯಕ್ತಿಗಳು ಕ್ರೀಡಾಂಗಣಕ್ಕೆ ಬಾರದಂತೆ ನಿಗಾ ವಹಿಸಲಾಗುವುದು. ಪಂದ್ಯಕ್ಕೂ ಮುನ್ನ ಕ್ರೀಡಾಂಗಣದ ಸುತ್ತಮುತ್ತ ಪರಿಶೀಲನೆ ನಡೆಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು**
> **ಎನ್.ಶಶಿಕುಮಾರ್,** ಪೊಲೀಸ್ ಕಮಿಷನರ್, ಹುಬ್ಬಳ್ಳಿ–ಧಾರವಾಡ

ಕ್ರೀಡಾಂಗಣದಲ್ಲಿ ಶುಕ್ರವಾರ ಪಿಚ್ ಸಿದ್ಧತೆಯಲ್ಲಿ ತೊಡಗಿದ್ದ ಸಿಬ್ಬಂದಿ ಚಿತ್ರ: ಗುರು ಹಬೀಬ

ಕರ್ನಾಟಕ ತಂಡದಲ್ಲಿ ಬದಲಾವಣೆ ಇಲ್ಲ

ಬೆಂಗಳೂರು: ಜಮ್ಮು ಮತ್ತು ಕಾಶ್ಮೀರ ತಂಡದ ವಿರುದ್ಧ ಇದೇ 24 ರಿಂದ 28ರವರೆಗೆ ಹುಬ್ಬಳ್ಳಿಯಲ್ಲಿ ನಡೆಯಲಿರುವ ರಣಜಿ ಟ್ರೋಫಿ ಪಂದ್ಯಕ್ಕೆ ಕರ್ನಾಟಕ ತಂಡವನ್ನು ಶುಕ್ರವಾರ ಪ್ರಕಟಿಸಲಾಗಿದೆ. ಉತ್ತರಾಖಂಡ ವಿರುದ್ಧ ಸೆಮಿಫೈನಲ್‌ನಲ್ಲಿ ಆಡಿದ ತಂಡವನ್ನೇ ಅಂತಿಮ ಪಂದ್ಯಕ್ಕೂ ಉಳಿಸಿಕೊಳ್ಳಲಾಗಿದೆ.

ಎಂಟು ಬಾರಿಯ ಚಾಂಪಿಯನ್ ಕರ್ನಾಟಕ ತಂಡ 11 ವರ್ಷಗಳ ನಂತರ ಫೈನಲ್ ತಲುಪಿದೆ.

15 ಮಂದಿಯ ತಂಡ: ಮಯಂಕ್ ಅಗರವಾಲ್, ಕೆ.ಎಲ್.ರಾಹುಲ್, ಅನೀಶ್ ಕೆ.ವಿ., ದೇವದತ್ತ ಪಡಿಕ್ಕಲ್ (ನಾಯಕ), ಕರುಣ್ ನಾಯರ್, ಸ್ಮರಣ್ ಆರ್., ಶ್ರೇಯಸ್ ಗೋಪಾಲ್, ಕೃತಿಕ್ ಕೃಷ್ಣ (ವಿಕೆಟ್ ಕೀಪರ್), ವಿದ್ವತ್ ಕಾವೇರಪ್ಪ, ವಿದ್ಯಾಧರ ಪಾಟೀಲ, ಪ್ರಸಿದ್ಧ ಕೃಷ್ಣ, ಮೊಹ್ಸಿನ್ ಖಾನ್, ಶಿಖರ್ ಶೆಟ್ಟಿ, ಶ್ರೀಜಿತ್ ಕೆ.ಎಲ್. (ವಿಕೆಟ್ ಕೀಪರ್) ಮತ್ತು ವೈಶಾಖ್ ವಿಜಯಕುಮಾರ್.

ಸಿ.ಎಂ ಕಪ್ ಬ್ಯಾಡ್ಮಿಂಟನ್ ಟೂರ್ನಿ ಇಂದಿನಿಂದ

ಬೆಂಗಳೂರು: '9 ಡ್ರೀಮ್ಸ್' ಸಂಸ್ಥೆಯ ಆಶ್ರಯದಲ್ಲಿ 'ಸಿ.ಎಂ ಕಪ್ 2026' ಬ್ಯಾಡ್ಮಿಂಟನ್ ಟೂರ್ನಿಯು ವಸಂತನಗರದ ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಶನಿವಾರ ಮತ್ತು ಭಾನುವಾರ ನಡೆಯಲಿದೆ.

ಜನಪ್ರತಿನಿಧಿಗಳು, ಅಧಿಕಾರಿಗಳು, ವೈದ್ಯರು ಹಾಗೂ ಪತ್ರಕರ್ತರನ್ನು ಒಳಗೊಂಡ 8 ಫ್ರ್ಯಾಂಚೈಸಿಗಳ ತಂಡಗಳು ಟೂರ್ನಿಯಲ್ಲಿ ಪ್ರಶಸ್ತಿಗೆ ಪೈಪೋಟಿ ನಡೆಸಲಿವೆ.

ಸಿ.ಟಿ ಸ್ಕ್ಯಾನ್: ಪರ್ಯಾಯ ವ್ಯವಸ್ಥೆ

ಒಂದನೇ ಪುಟದಿಂದ...

ಅಲ್ಲದೇ 'ಅವರು ಹೇಳಿದಷ್ಟು ಹಣ ಕೊಡಲು ಸಾಧ್ಯವಿಲ್ಲ. ಆದ್ದರಿಂದ ಎಷ್ಟು ಕೊಡಬೇಕು ಮತ್ತು ಯಾವಾಗ ಕೊಡಬೇಕು ಎಂಬುದನ್ನು ತೀರ್ಮಾನ ಮಾಡಿ ಬಿಲ್ ಪಾವತಿಸುತ್ತೇವೆ. ಬಿಲ್ ಪಾವತಿಗೆ ಸರ್ಕಾರದ ಬಳಿ ಹಣದ ಕೊರತೆ ಇಲ್ಲ. ವಿರೋಧ ಪಕ್ಷಗಳು ಸುಮ್ಮನೆ ಅಪಪ್ರಚಾರ ಮಾಡುತ್ತಿವೆ' ಎಂದರು.

ಇವರು ಇಡೀ ದೇಹದ ಸ್ಕ್ಯಾನ್ ಮಾಡುವುದರ ಬದಲು, ಬೇರೆ ಬೇರೆ ಅಂಗಗಳ ಸ್ಕ್ಯಾನ್ ಮಾಡಿದ ಬಿಲ್‌ಗಳನ್ನು ಕೊಟ್ಟಿದ್ದಾರೆ. ಹೀಗಾಗಿ ಪ್ರತಿ ದಿನದ ಸ್ಕ್ಯಾನ್ ಸಂಖ್ಯೆ ಸಂಶಯಾಸ್ಪದ ರೀತಿಯಲ್ಲಿ ಏರಿಕೆಯಾಗಿತ್ತು. ಹೀಗಾಗಿ ಸುತ್ತೋಲೆ ಹೊರಡಿಸಿ, ದೇಹದ ಪ್ರತ್ಯೇಕ ಸ್ಕ್ಯಾನಿಂಗ್ ಮಾಡುವುದಕ್ಕೆ ಅವಕಾಶವಿಲ್ಲ, ಇಡೀ ದೇಹದ ಸ್ಕ್ಯಾನಿಂಗ್ ಮಾಡಬೇಕೆಂದು ಸೂಚಿಸಲಾಗಿತ್ತು. ಆ ಬಳಿಕ ದೈನಂದಿನ ಸ್ಕ್ಯಾನಿಂಗ್ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿತ್ತು ಎಂದು ದಿನೇಶ್ ಅವರು ಅಂಕಿ–ಸಂಖ್ಯೆ ಉಲ್ಲೇಖಿಸಿ ವಿವರಿಸಿದರು.

'ನಾವು ತೆಗೆದುಕೊಂಡ ಕಟ್ಟುನಿಟ್ಟಿನ ಕ್ರಮದ ಕಾರಣ ಕಳೆದ ಒಂದೂವರೆ ವರ್ಷದಲ್ಲಿ ಸರ್ಕಾರಕ್ಕೆ ಸುಮಾರು ₹200 ಕೋಟಿ ಉಳಿತಾಯ ಆಗಿದೆ. ಹಣ ಬಿಡುಗಡೆಗಾಗಿ ಹಲವು ರೀತಿಯ ಒತ್ತಡ ತಂದಿದ್ದರು. ನಾವು ಅದಕ್ಕೆ ಬಗ್ಗಲಿಲ್ಲ. ಆ ಅವಧಿಯಲ್ಲಿ ಅಂಗಾಂಗಳ ಸ್ಕ್ಯಾನಿಂಗ್ ಮಾಡಿದ್ದಕ್ಕೆ ದೃಢೀಕರಣ ಪತ್ರ ಕೊಟ್ಟರೆ ಮಾತ್ರ ಹಣ ಬಿಡುಗಡೆ ಮಾಡುವುದಾಗಿ ಷರತ್ತು ಹಾಕಿದ್ದೇವೆ' ಎಂದರು.

'ಸರ್ಕಾರಿ ಆಸ್ಪತ್ರೆಗಳಲ್ಲಿ ಎಂಆರ್‌ಐ ಮತ್ತು ಸಿ.ಟಿ ಸ್ಕ್ಯಾನ್‌ಗಳ ಸೇವೆ ನಿಲ್ಲಿಸಿರುವ ವಿಚಾರದಲ್ಲಿ ವಿರೋಧ ಪಕ್ಷಗಳು ಸತ್ಯಕ್ಕೆ ದೂರವಾದ ಆರೋಪಗಳನ್ನು ಮಾಡುತ್ತಿವೆ. ಸರ್ಕಾರದ ಬಳಿ ಹಣ ಇಲ್ಲ ಎಂದೂ ಆರೋಪಿಸಿವೆ. ಅವರ ಆರೋಪದಲ್ಲಿ ಹುರುಳಿಲ್ಲ. ಖಾಸಗಿ ಕಂಪನಿ ಬರೆದ ಪತ್ರವನ್ನು ಆಧರಿಸಿ ಆರೋಪಗಳನ್ನು ಮಾಡುತ್ತಿದ್ದಾರೆ. ಇದಕ್ಕೆ ಪ್ರತಿಕ್ರಿಯೆ ನೀಡುವುದಿಲ್ಲ. ಸಾರ್ವಜನಿಕರಿಗೆ ತೊಂದರೆ ಆಗದಂತೆ ವ್ಯವಸ್ಥೆ ಮಾಡುವುದು ನಮ್ಮ ಕರ್ತವ್ಯ' ಎಂದರು.

'ಏಳು ಸರ್ಕಾರಿ ಆಸ್ಪತ್ರೆಗಳಲ್ಲಿ ಎಂಆರ್‌ಐ ಮತ್ತು ಮೂರು ಸಿ.ಟಿ ಸ್ಕ್ಯಾನ್‌ಗಳನ್ನು ಖರೀದಿಸಲು ಟೆಂಡರ್ ಕರೆಯಲಾಗಿದೆ. ಇಲಾಖೆ ವತಿಯಿಂದಲೇ ಯಂತ್ರಗಳನ್ನು ಪೂರೈಕೆ ಮಾಡುತ್ತೇವೆ' ಎಂದು ಹೇಳಿದರು.

1,200 ಜನರಿಗೆ ನೇಮಕ ಪತ್ರ ವಿತರಣೆ ಇಂದು

ಆರೋಗ್ಯ ಇಲಾಖೆಯಲ್ಲಿ ವಿವಿಧ ಹುದ್ದೆಗಳಿಗೆ ಭರ್ತಿ ಆಗಿರುವ ಸುಮಾರು 1,200 ಜನರಿಗೆ ನೇಮಕಾತಿ ಪತ್ರವನ್ನು ಅಂಬೇಡ್ಕರ್ ಭವನದಲ್ಲಿ ಶನಿವಾರ ನಡೆಯುವ ಕಾರ್ಯಕ್ರಮದಲ್ಲಿ ವಿತರಿಸಲಾಗುವುದು ಎಂದು ದಿನೇಶ್ ಹೇಳಿದರು. ಡಿ ಫಾರ್ಮಾ ಓದುತ್ತಿರುವ 223 ಮಂದಿ ವಿದ್ಯಾರ್ಥಿಗಳಿಗೆ ಒಂದು ವರ್ಷದ ಇಂಟರ್ನ್‌ಶಿಪ್ ಕಾರ್ಯಕ್ರಮಕ್ಕೆ ಅನುಮತಿ ನೀಡಿದ್ದೇವೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಅವರು ಕೆಲಸ ಮಾಡುತ್ತಾರೆ ಎಂದರು.

ಎಸ್‌ಐಆರ್‌ಗೆ ನ್ಯಾಯಾಧೀಶರು

ಒಂದನೇ ಪುಟದಿಂದ...

ಎಸ್‌ಐಆರ್ ಪರಿಷ್ಕರಣೆಯ ಕೆಲಸಕ್ಕಾಗಿ ಗ್ರೂಪ್ 'ಎ' ದರ್ಜೆಯ ನೌಕರರನ್ನು ನಿಯೋಜಿಸದ ರಾಜ್ಯ ಸರ್ಕಾರದ ಕ್ರಮವನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಪೀಠವು, ಈ ಕೆಲಸಕ್ಕೆ ನೆರವಾಗಲು ನಿವೃತ್ತ ನ್ಯಾಯಮೂರ್ತಿಗಳು, ನ್ಯಾಯಾಂಗ ಅಧಿಕಾರಿಗಳನ್ನು ನಿಯೋಜಿಸುವಂತೆ ಕಲ್ಕತ್ತ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸುಜಯ್ ಪಾಲ್ ಅವರಿಗೆ ಸೂಚನೆ ನೀಡಿದೆ.

ರಾಜ್ಯ ಸರ್ಕಾರದ ತೀವ್ರ ಆಕ್ಷೇಪಣೆಯ ಹೊರತಾಗಿಯೂ ಈ ಹಿಂದೆ ನಿಗದಿಪಡಿಸಿದ ಗಡುವಿನಂತೆ ಫೆಬ್ರುವರಿ 28ರಂದು ಮತದಾರರ ಕರಡು ಪಟ್ಟಿಯನ್ನು ಸಲ್ಲಿಸಲು ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಅವಕಾಶ ನೀಡಿತು. ಅನಂತರ ಪೂರಕ ಪಟ್ಟಿ ಬಿಡುಗಡೆ ಮಾಡಬಹುದು. ನಾಮಪತ್ರ ಸಲ್ಲಿಕೆಯ ಕೊನೇ ದಿನಾಂಕದವರೆಗೂ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೆ ಅವಕಾಶವಿದೆ ಎಂದು ತಿಳಿಸಿತು. ಎಸ್‌ಐಆರ್ ಪ್ರಕ್ರಿಯೆಯಲ್ಲಿ ಮೈಕ್ರೋ ಅಬ್ಸರ್ವರ್ಸ್ ಹಾಗೂ ರಾಜ್ಯ ಸರ್ಕಾರದ ಅಧಿಕಾರಿಗಳಿಗೆ ನ್ಯಾಯಾಂಗ ಅಧಿಕಾರಿಗಳು ಸಹಾಯ ಮಾಡಲಿದ್ದಾರೆ ಎಂದು ಸ್ಪಷ್ಟಪಡಿಸಿದೆ.

ನ್ಯಾಯಾಂಗ ಅಧಿಕಾರಿಗಳ ನಿಯೋಜನೆಗೆ ಸಂಬಂಧಿಸಿದಂತೆ, ರಾಜ್ಯದ ಮುಖ್ಯ ಕಾರ್ಯದರ್ಶಿ, ಡಿಜಿಪಿ, ಅಡ್ವೊಕೇಟ್ ಜನರಲ್ ಹಾಗೂ ಚುನಾವಣಾ ಆಯೋಗದ ಅಧಿಕಾರಿಗಳ ಜೊತೆಗೆ ಶನಿವಾರ ಸಭೆ ನಡೆಸುವಂತೆ ಕಲ್ಕತ್ತ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗೆ ಸುಪ್ರೀಂ ಕೋರ್ಟ್ ಪೀಠವು ಸೂಚನೆ ನೀಡಿದೆ. ನ್ಯಾಯಾಧೀಶರನ್ನು ನಿಯೋಜಿಸುವ ವಿಧಾನಗಳನ್ನು ಅಂತಿಮಗೊಳಿಸುವ ಕುರಿತಂತೆ ಹೆಚ್ಚುವರಿ ಸಾಲಿಸಿಟರ್ ಜನರಲ್ ಹಾಗೂ ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್‌ಗೆ ನಿರ್ದೇಶನ ನೀಡಿದೆ.

2002ರ ಮತದಾರರ ಪಟ್ಟಿಯೊಂದಿಗೆ ಹೋಲಿಕೆ ಮಾಡುವ ವೇಳೆ ಕೆಲವು ಮತದಾರರು ಹಾಗೂ ಅವರ ಹೆತ್ತವರ ವಯಸ್ಸಿನ ಅಂತರವು 15 ವರ್ಷಗಳಿಗಿಂತಲೂ ಕಡಿಮೆ ಹಾಗೂ 50 ವರ್ಷಗಳಿಗಿಂತಲೂ ಹೆಚ್ಚಾಗಿತ್ತು.

ಮಮತಾ ಪರ ವಕೀಲರ ಆಕ್ಷೇಪ

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪರ ಹಾಜರಾದ ಹಿರಿಯ ವಕೀಲ ಶ್ಯಾಮ್ ದಿವಾನ್, ಮತದಾರರ ನೋಂದಣಿ ಅಧಿಕಾರಿಗಳು (ಇಆರ್‌ಒ) ಹೊರಡಿಸಿದ ಆದೇಶಗಳನ್ನು ವಿಶೇಷ ಅಧಿಕಾರಿಗಳು (ಎಸ್‌ಆರ್‌ಒ) ಎಂದು ಕರೆಸಿಕೊಳ್ಳುವ 'ಹೊಸ ತಳಿಯ' ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ ಎಂದು ಆರೋಪಿಸಿದರು.

'ಇಆರ್‌ಒಗಳನ್ನು ವಿಶೇಷ ತಳಿಯ ಅಧಿಕಾರಿಗಳು ಹಿಂದಿಕ್ಕಲು ಸಾಧ್ಯವಿಲ್ಲ. ಇಆರ್‌ಒ ಮಾಡಿದ್ದನ್ನು ಈ ಅಧಿಕಾರಿಗಳು ಸಂಪೂರ್ಣವಾಗಿ ತಿರಸ್ಕರಿಸಲು ಹೇಗೆ ಸಾಧ್ಯ' ಎಂದು ಪ್ರಶ್ನಿಸಿದರು.

ಮಮತಾ ಪರ ವಕೀಲರ ಆರೋಪವನ್ನು ತಿರಸ್ಕರಿಸಿದ ಚುನಾವಣಾ ಆಯೋಗ, ಎಸ್‌ಆರ್‌ಒಗಳು ಮೊದಲಿನಿಂದಲೂ ಇದ್ದಾರೆ ಎಂದು ತಿಳಿಸಿತು.

> **ಬಂಗಾಳದ ಜನರಿಗೆ ಬಹುದೊಡ್ಡ ಗೆಲುವು. ಚುನಾವಣಾ ಆಯೋಗದ ದುರಹಂಕಾರದ ಐತಿಹಾಸಿಕ ಧ್ವಂಸವನ್ನು ನ್ಯಾಯಾಲಯದ ತೀರ್ಪು ಸೂಚಿಸುತ್ತದೆ**
> **ತೃಣಮೂಲ ಕಾಂಗ್ರೆಸ್,** 'ಎಕ್ಸ್'ನಲ್ಲಿ ಮಾಡಿದ ಪೋಸ್ಟ್

ಅಧಿಕಾರಿಗಳ ವಿರುದ್ಧ ದೂರು

ಚುನಾವಣಾ ಆಯೋಗದ ಪರವಾಗಿ ಹಾಜರಾದ ಹಿರಿಯ ವಕೀಲ ಡಿ.ಎಸ್.ನಾಯ್ಡು, 'ಪಶ್ಚಿಮ ಬಂಗಾಳದ ಪೊಲೀಸ್ ಇಲಾಖೆಯು ಅಸಹಕಾರವನ್ನು ಮುಂದುವರಿಸಿದೆ. ದುಷ್ಕರ್ಮಿಗಳು ಆಯೋಗದ ದಾಖಲೆಗಳನ್ನು ಹರಿದುಹಾಕಿದ್ದರೂ ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ' ಎಂದು ಸುಪ್ರೀಂ ಕೋರ್ಟ್‌ನ ಗಮನ ಸೆಳೆದರು.

'ವಿವಿಧ ರಾಜಕೀಯ ಪಕ್ಷಗಳ ಪದಾಧಿಕಾರಿಗಳು ಚುನಾವಣಾ ಅಧಿಕಾರಿಗಳ ವಿರುದ್ಧ ಹೇಳಿಕೆ ನೀಡಿದ್ದರೂ ಯಾರ ವಿರುದ್ಧವೂ ಎಫ್‌ಐಆರ್ ದಾಖಲಿಸಿಲ್ಲ' ಎಂದು ಪೀಠದ ಮುಂದೆ ದಾಖಲೆಗಳನ್ನು ಸಲ್ಲಿಸಿದರು.

ಪಕ್ಷಗಳ ಮುಖಂಡರ ಹೇಳಿಕೆಗಳನ್ನು ಪರಿಶೀಲಿಸಿದ ಸಿಜೆಐ ಸೂರ್ಯಕಾಂತ್, 'ಚುನಾವಣೆಯ ಹೊಸ್ತಿಲಲ್ಲಿ ಇಂತಹ ಹೇಳಿಕೆ ನೀಡುವುದು ದುರದೃಷ್ಟಕರ. ಕ್ರಮ ಕೈಗೊಳ್ಳದಿದ್ದರೆ, ಡಿಜಿಪಿ ವಿರುದ್ಧವೇ ಶಿಸ್ತು ಕ್ರಮ ಕೈಗೊಳ್ಳಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದರು.

> **ರಾಜ್ಯ ಸರ್ಕಾರ ಎಸ್‌ಐಆರ್ ಪ್ರಕ್ರಿಯೆಗೆ ಅಡಚಣೆ ಮಾಡುವ ಮೂಲಕ ಜನರ ಹಾದಿ ತಪ್ಪಿಸುತ್ತಿದೆ. ಆಯೋಗವು ನ್ಯಾಯಸಮ್ಮತ ಚುನಾವಣೆ ನಡೆಸಲು ಪ್ರಯತ್ನಿಸುತ್ತಿದ್ದರೆ, ರಾಜ್ಯ ಸರ್ಕಾರವು ಮೊದಲಿನಿಂದಲೂ ಅಸಹಕಾರ ಮುಂದುವರಿಸಿದೆ**
> **ಸುಕಾಂತ ಮಜುಂದಾರ್,** ಬಿಜೆಪಿ ನಾಯಕ, ಕೇಂದ್ರ ಸಚಿವ

ಕೆಪಿಬಿ ಟ್ರಸ್ಟ್ ಐಟಿಎಫ್ ಟೆನಿಸ್ ಟೂರ್ನಿ: ಸೆಮಿಫೈನಲ್‌ಗೆ ಪುಣೆಯ ಆಟಗಾರ್ತಿ

ಯಶಸ್ಸಿನ ಓಟ ಮುಂದುವರಿಸಿದ ವೈಷ್ಣವಿ

ಬೆಂಗಳೂರು: ವೈಲ್ಡ್‌ಕಾರ್ಡ್ ಮೂಲಕ ಟೂರ್ನಿಯಲ್ಲಿ ಆಡುವ ಅರ್ಹತೆ ಗಳಿಸಿದ ಭಾರತದ ವೈಷ್ಣವಿ ಅಡ್ಕರ್, ತಮಗಿಂತ ಮೇಲಿನ ಕ್ರಮಾಂಕದ ಆಟಗಾರ್ತಿಯರ ವಿರುದ್ಧ ಗೆಲುವಿನ ಓಟವನ್ನು ಮುಂದುವರಿಸಿದರು. ಶುಕ್ರವಾರ ನಡೆದ ಮೂರನೇ ಸುತ್ತಿನ ಪಂದ್ಯದಲ್ಲಿ ಅವರು ನಾಲ್ಕನೇ ಶ್ರೇಯಾಂಕದ ಟೇಲಾ ಪ್ರೆಸ್ಟನ್ ಅವರನ್ನು ಸೋಲಿಸಿ ಕೆಪಿಬಿ ಟ್ರಸ್ಟ್ ಐಟಿಎಫ್ ಮಹಿಳಾ ಓಪನ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು.

ಅದೃಷ್ಟಗಳ ಏರಿಳಿತ ಕಂಡ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 21 ವರ್ಷ ವಯಸ್ಸಿನ ವೈಷ್ಣವಿ 6–3, 1–6, 6–4 ರಿಂದ ಆಸ್ಟ್ರೇಲಿಯಾದ ಆಟಗಾರ್ತಿಯನ್ನು ಸೋಲಿಸಿದರು. ಪುಣೆಯ ವೈಷ್ಣವಿ ವಿಶ್ವ ಕ್ರಮಾಂಕದಲ್ಲಿ 690ನೇ ಸ್ಥಾನ ಪಡೆದಿದ್ದರೆ, ಆಸ್ಟ್ರೇಲಿಯಾದ 20 ವರ್ಷ ವಯಸ್ಸಿನ ಆಟಗಾರ್ತಿ 148ನೇ ಸ್ಥಾನದಲ್ಲಿದ್ದಾರೆ.

ವೈಷ್ಣವಿ, ಗುರುವಾರ ನಡೆದ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 220ನೇ ಸ್ಥಾನದಲ್ಲಿರುವ ಮಾಯಿ ಹೊಂಟಮಾ (ಜಪಾನ್) ಅವರನ್ನು ಹಿಮ್ಮೆಟ್ಟಿಸಿದ್ದರು.

ಕಬ್ಬನ್ ಪಾರ್ಕ್‌ನ ಎಸ್.ಎಂ.ಕೃಷ್ಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಈ ಟೂರ್ನಿಯ ಸೆಮಿಫೈನಲ್‌ನಲ್ಲಿ ವೈಷ್ಣವಿ ಅವರು ಶನಿವಾರ 2ನೇ ಶ್ರೇಯಾಂಕದ ಲನ್ಲಾನಾ ತರಾರುಡೀ ಅವರನ್ನು ಎದುರಿಸಲಿದ್ದಾರೆ. ಥಾಯ್ಲೆಂಡ್‌ನ ಆಟಗಾರ್ತಿ ಇನ್ನೊಂದು ಕ್ವಾರ್ಟರ್ ಫೈನಲ್‌ನಲ್ಲಿ ಎಂಟನೇ ಶ್ರೇಯಾಂಕದ ಎಲಿನಾ ಪ್ರಿಡನ್ಕಿನಾ ಅವರನ್ನು 6–1, 6–3 ರಿಂದ ಮಣಿಸಿದರು.



ಭಾರತದ ವೈಷ್ಣವಿ ಅಡ್ಕರ್ ಚಿತ್ರ ಪ್ರಶಾಂತ್ ಎಚ್.ಜಿ.

'ಟೇಲಾ ನನಗಿಂತ ಮೇಲಿನ ರ‍್ಯಾಂಕಿನ ಆಟಗಾರ್ತಿಯಾಗಿದ್ದರೂ, ನಾನು ಒತ್ತಡಕ್ಕೆ ಸಿಲುಕಲಿಲ್ಲ. ಏಕೆಂದರೆ ನಾನೇನೂ ಕಳಪೆಯಾಗಿ ಆಡಲಿಲ್ಲ' ಎಂದು ವೈಷ್ಣವಿ ಪಂದ್ಯದ ನಂತರ ಪ್ರತಿಕ್ರಿಯಿಸಿದರು.

'ಅವರು (ಟೇಲಾ) ಆರಂಭದಲ್ಲಿ ಉತ್ತಮವಾಗಿ ಆಡಿದರು. ಅವರ ಹೊಡೆತಗಳು ಗುರಿ ತಪ್ಪುತ್ತಿರಲಿಲ್ಲ. ಹೀಗಾಗಿ, ನಾನು ಅವರ ಮಟ್ಟದಲ್ಲಿ ಅಥವಾ ಅದಕ್ಕಿಂತಲೂ ಉತ್ತಮವಾಗಿ ಆಡಬೇಕಾಗಿತ್ತು. ಒಂದೊಂದೇ ಪಾಯಿಂಟ್ ಪಡೆಯುವತ್ತ ಗಮನಹರಿಸಿದೆ. ಬೇರಾವುದರ ಯೋಚನೆ ಮಾಡಲಿಲ್ಲ. ಇದು ನನ್ನ ಮೊದಲ ಡಬ್ಲ್ಯು 100 ಮಟ್ಟದ ಸ್ಪರ್ಧೆ. ತವರಿನಲ್ಲಿ ಸೆಮಿಫೈನಲ್ ತಲುಪಿದ್ದು ಸಂತಸ ಮೂಡಿಸಿದೆ' ಎಂದರು.

ತಾಲಿಯಾ ನಿರ್ಗಮನ: ದಿನದ ಇನ್ನೊಂದು ಅನಿರೀಕ್ಷಿತ ಫಲಿತಾಂಶದಲ್ಲಿ ಐದನೇ ಶ್ರೇಯಾಂಕದ ಪೊಲಿನಾ ಇಯಾಟ್ಸೆಂಕೊ ಅವರು 6–2, 7–5 ರಿಂದ ಅಗ್ರ ಶ್ರೇಯಾಂಕದ ತಾಲಿಯಾ ಗಿಬ್ಬನ್ (ಆಸ್ಟ್ರೇಲಿಯಾ) ಅವರನ್ನು ಸೋಲಿಸಿದರು. ರಷ್ಯಾದ ಆಟಗಾರ್ತಿ ಪೊಲಿನಾ ಸೆಮಿಫೈನಲ್‌ನಲ್ಲಿ ಮೂರನೇ ಶ್ರೇಯಾಂಕದ ಹ್ಯಾನಿ ವೆಂಡೆವಿಂಕೆಲ್ ಅವರನ್ನು ಎದುರಿಸಲಿದ್ದಾರೆ. ಬೆಲ್ಜಿಯಂನ ಹ್ಯಾನಿ 6–2, 6–2 ರಿಂದ ಚೀನಾದ ಫಾಂಗ್ರಾನ್ ಟಿಯಾನ್ ಅವರನ್ನು ಮಣಿಸಿದರು.

ನ್ಯೂಜಿಲೆಂಡ್‌ಗೆ ಸ್ಪಿನ್ನರ್‌ಗಳ ಸವಾಲು

‘ಸೂಪರ್ 8’ ಹಂತ ಇಂದಿನಿಂದ: ಮಿಚೆಲ್ ಸ್ಯಾಂಟನರ್ ಪಡೆಗೆ ಪಾಕ್ ತಂಡ ಸವಾಲು

ಇಂದಿನ ಪಂದ್ಯ
ನ್ಯೂಜಿಲೆಂಡ್ V/s ಪಾಕಿಸ್ತಾನ
ತಾಣ: ಕೊಲಂಬೊ, ಆರಂಭ: ರಾತ್ರಿ 7
ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊಹಾಟ್‌ಸ್ಟಾರ್

ಕೊಲಂಬೊ (ಪಿಟಿಐ): ನ್ಯೂಜಿಲೆಂಡ್ ಕ್ರಿಕೆಟ್ ತಂಡದ ಬ್ಯಾಟಿಂಗ್ ಶಕ್ತಿ ಮತ್ತು ಪಾಕಿಸ್ತಾನದ ಸ್ಪಿನ್ನರ್‌ಗಳ ಮುಖಾಮುಖಿಗೆ ಆರ್. ಪ್ರೇಮದಾಸ ಕ್ರೀಡಾಂಗಣ ಸಿದ್ಧವಾಗಿದೆ.

ಸೂಪರ್ 8ರ ಹಂತದ ಮೊದಲ ಪಂದ್ಯವು ಶನಿವಾರ ಇಲ್ಲಿ ನಡೆಯಲಿದೆ. ಕಿವೀಸ್ ಬಳಗದ ಆರಂಭಿಕ ಜೋಡಿ ಟಿಮ್ ಸೀಫರ್ಟ್ ಮತ್ತು ಫಿನ್ ಅಲೆನ್ ಅವರಿಬ್ಬರೂ ಸೇರಿ ಒಟ್ಟು ಮೂರು ಅರ್ಧ ಶತಕ ದಾಖಲಿಸಿದ್ದಾರೆ. ಆದರೆ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಾದ ಗ್ಲೆನ್ ಫಿಲಿಪ್ಸ್, ರಚಿನ್ ರವೀಂದ್ರ, ಮಾರ್ಕ್ ಚಾಪ್ಮನ್ ಮತ್ತು ಡ್ಯಾರಿಲ್ ಮಿಚೆಲ್ ಅವರು ಲಯಕ್ಕೆ ಮರಳಬೇಕಿದೆ. ಈ ಟೂರ್ನಿಯಲ್ಲಿ ಫಿಲಿಪ್ಸ್ ಮತ್ತು ರಚಿನ್ ಅವರು ತಲಾ ಒಂದು ಅರ್ಧಶತಕ ಗಳಿಸಿದ್ದಾರೆ. ರಚಿನ್ ಒಟ್ಟು 72 ರನ್ ಗಳಿಸಿದ್ದು, ಅದರಲ್ಲಿ ಕೆನಡಾ ಎದುರಿನ ಪಂದ್ಯದಲ್ಲಿ ಹೊಡೆದ 59 ರನ್‌ಗಳು ಸೇರಿವೆ.

ಪವರ್‌ಪ್ಲೇನಲ್ಲಿ ಅಲೆನ್ ಮತ್ತು ಸೀಫರ್ಟ್ ಅವರು ಹಾಕಿಕೊಟ್ಟ ಉತ್ತಮ ಅಡಿಪಾಯದ ಮೇಲೆ ದೊಡ್ಡ ಮೊತ್ತ ಪೇರಿಸುವ ಕಾರ್ಯವನ್ನು ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಮಾಡಬೇಕು. ಆಗ ಎದುರಾಳಿ ತಂಡದ ಮೇಲೆ ಒತ್ತಡ ಹೇರಲು ಸಾಧ್ಯವಾಗುತ್ತದೆ.

ಕಿವೀಸ್ ತಂಡವು ಕೊಲಂಬೊದಲ್ಲಿ ಮೊದಲ ಪಂದ್ಯ ಆಡಲಿದೆ. ಇದು ಕೂಡ ತಂಡಕ್ಕೆ ಪ್ರಮುಖ ಸವಾಲಾಗಲಿದೆ. ಏಕೆಂದರೆ; ಪಾಕಿಸ್ತಾನ ತಂಡವು ಟೂರ್ನಿಯ ಆರಂಭದಿಂದಲೂ ಇದೇ ನಗರದಲ್ಲಿ ಠಿಕಾಣಿ ಹೂಡಿದೆ. ಪ್ರೇಮದಾಸ ಕ್ರೀಡಾಂಗಣದಲ್ಲಿ ಎರಡು ಪಂದ್ಯಗಳನ್ನೂ ಆಡಿದೆ. ಪಾಕ್ ತಂಡದ ಸ್ಪಿನ್ನರ್‌ಗಳು ಮತ್ತು ಬೌಲರ್‌ಗಳಿಗೆ ಇಲ್ಲಿಯ ಪಿಚ್ ಸ್ವರೂಪ ಚೆನ್ನಾಗಿಗೊತ್ತಿದೆ.

ಸ್ಪಿನ್ನರ್‌ಗಳಾದ ಉಸ್ಮಾನ್ ತಾರೀಖ್, ಅಬ್ರಾರ್ ಅಹಮದ್, ಸೈಮ್ ಅಯೂಬ್, ಮೊಹಮ್ಮದ್ ನವಾಜ್ ಮತ್ತು ಶಾದಾಬ್ ಖಾನ್ ಅವರು ಪಾಕ್ ತಂಡಕ್ಕೆ ಬಲ ತುಂಬುವ ಪ್ರಮುಖರಾಗಿದ್ದಾರೆ. ಆದರೆ ಬ್ಯಾಟಿಂಗ್ ವಿಭಾಗದಲ್ಲಿ ಕೊರತೆಗಳು ಇವೆ. ಸಾಹೀಬ್‌ಝಾದಾ ಫರ್ಹಾನ್ (220 ರನ್) ಹಾಗೂ ಶಾದಾಬ್ ಖಾನ್ (88 ರನ್) ಅವರು ಪಾಕ್ ಪರ ಅತಿ ಹೆಚ್ಚು ರನ್ ಗಳಿಸಿರುವ ಬ್ಯಾಟರ್‌ಗಳು. ಅನುಭವಿ ಬ್ಯಾಟರ್ ಬಾಬರ್ ಆಜಂ (4 ಪಂದ್ಯಗಳಿಂದ 66) ಅವರು 115.78ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದ್ದಾರೆ. ಇದರಿಂದಾಗಿ ಮಧ್ಯಮ ಕ್ರಮಾಂಕವು ದುರ್ಬಲವಾಗಿದೆ. ಕಳೆದ ಪಂದ್ಯಗಳಲ್ಲಿ ಬೆಂಚ್‌ನಲ್ಲಿದ್ದ ಫಕಾರ್ ಜಮಾನ್ ಅವರಿಗೆ ಅವಕಾಶ ಕೊಟ್ಟು ಬಾಬರ್ ಅವರಿಗೆ ವಿಶ್ರಾಂತಿ ಕೊಡುವ ಸಾಧ್ಯತೆಯೂ ಇದೆ.

ಗುಂಪು ಹಂತದಲ್ಲಿ ನಮೀಬಿಯಾ ಎದುರಿನ ಪಂದ್ಯದಲ್ಲಿ ಜಯಿಸುವುದು ತಂಡಕ್ಕೆ ಮುಖ್ಯವಾಗಿತ್ತು. ಆದರೆ ಶಾಹೀನ್ ಶಾ ಅಫ್ರಿದಿ ಅವರನ್ನು ಆ ಪಂದ್ಯದಲ್ಲಿ ಕಣಕ್ಕಿಳಿಸಿರಲಿಲ್ಲ. ಅವರು ಮೂರು ಪಂದ್ಯಗಳಿಂದ ಪಡೆದಿರುವುದು ಕೇವಲ 3 ವಿಕೆಟ್ ಮಾತ್ರ. ನಿಧಾನಗತಿಯಲ್ಲಿ ಚೆಂಡಿನ ಚಲನೆ ಮತ್ತು ಪುಟಿತ ಇರುವ ಪಿಚ್‌ನಲ್ಲಿ ಸಾಮರ್ಥ್ಯವನ್ನು ತೋರುವಲ್ಲಿ ಅವರು ವಿಫಲರಾಗಿದ್ದಾರೆ.

ಕಿವೀಸ್ ತಂಡದ ಪ್ರಮುಖ ವೇಗದ ಬೌಲರ್‌ಗಳಾದ ಲಾಕಿ ಫರ್ಗ್ಯುಸನ್, ಮ್ಯಾಟ್ ಹೆನ್ರಿ, ಜೇಕಬ್ ಡಫಿ ಮತ್ತು ಜೇಮ್ಸ್ ನೀಶಮ್ ಅವರು ಇದುವರೆಗೂ ದುಬಾರಿಯಾಗಿದ್ದಾರೆ. ಆದ್ದರಿಂದ ಸ್ಪಿನ್ನರ್‌ಗಳಾದ ಮಿಚೆಲ್ ಸ್ಯಾಂಟನರ್, ಈಶ್ ಸೋಧಿ, ಸಾಂದರ್ಭಿಕ ಬೌಲರ್‌ಗಳಾದ ರಚಿನ್ ಮತ್ತು ಫಿಲಿಪ್ಸ್ ಅವರ ಮೇಲೆ ತಂಡವು ಹೆಚ್ಚು ಅವಲಂಬಿತವಾಗುತ್ತಿದೆ.

ನ್ಯೂಜಿಲೆಂಡ್ ತಂಡದ ಟಿಮ್ ಸೀಫರ್ಟ್ (ಎಡ) ಪಾಕಿಸ್ತಾನ ತಂಡದ ಸ್ಪಿನ್ನರ್ ಉಸ್ಮಾನ್ ತಾರೀಖ್

ಗೆಲುವಿನೊಂದಿಗೆ ಅಭಿಯಾನ ಮುಗಿಸಿದ ಆಸ್ಟ್ರೇಲಿಯಾ

ಜಂಪಾ ದಾಳಿಗೆ ಕುಸಿದ ಒಮಾನ್

ಪಲ್ಲೆಕೆಲೆ, ಶ್ರೀಲಂಕಾ (ಪಿಟಿಐ): ಸ್ಪಿನ್ನರ್ ಆ್ಯಡಂ ಜಂಪಾ ಅವರ ಅಮೋಘ ಬೌಲಿಂಗ್ ಬಲದಿಂದ ಆಸ್ಟ್ರೇಲಿಯಾ ತಂಡವು ಟಿ20 ವಿಶ್ವಕಪ್ ಟೂರ್ನಿಯ ಗುಂಪು ಹಂತದ ಕೊನೆ ಪಂದ್ಯದಲ್ಲಿ ಒಮಾನ್ ವಿರುದ್ಧ ಗೆದ್ದಿತು.

ಆಸ್ಟ್ರೇಲಿಯಾ ತಂಡವು ಸೂಪರ್ 8ರ ಹಂತಕ್ಕೆ ಅರ್ಹತೆ ಗಳಿಸುವಲ್ಲಿ ವಿಫಲವಾಗಿದೆ. ಶುಕ್ರವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ಜಂಪಾ (21ಕ್ಕೆ4) ಅವರ ಅಮೋಘ ಬೌಲಿಂಗ್ ಮುಂದೆ ಒಮಾನ್ ತಂಡವು 16.2 ಓವರ್‌ಗಳಲ್ಲಿ 104 ರನ್‌ಗಳ ಅಲ್ಪಮೊತ್ತ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಒಮಾನ್ ತಂಡದ ಆರಂಭಿಕ ಬ್ಯಾಟರ್ ಆಮೀರ್ ಕಲೀಂ ಅವರು ಇನಿಂಗ್ಸ್‌ನ ಮೊದಲ ಎಸೆತದಲ್ಲಿ ಔಟಾದರು. ವಿಕೆಟ್ ಗಳಿಸಿದ ಝೇವಿಯರ್ ಬಾರ್ಟ್ಲೆಟ್ ಸಂಭ್ರಮಿಸಿದರು. ನಾಯಕ ಜತೀಂದರ್ ಸಿಂಗ್ (17; 15ಎ) ಮತ್ತು ಕರಣ್ ಸೋನಾವಳೆ (16; 13ಎ, 4x1) ಎರಡನೇ ವಿಕೆಟ್ ಜೊತೆಯಾಟದಲ್ಲಿ 24 ರನ್ ಗಳಿಸಿ ಹೋರಾಟ ತೋರಿದರು.

ಸಿಂಗ್ ಅವರಿಗೆ ಬಾರ್ಟ್ಲೆಟ್ ಪೆವಿಲಿಯನ್ ಹಾದಿ ತೋರಿದರೆ, ಕರಣ್ ಅವರ ವಿಕೆಟ್ ನೇಥನ್ ಎಲ್ಲಿಸ್ ಪಾಲಾಯಿತು. ವಾಸೀಂ ಅಲಿ (32; 33ಎ) ಅವರು ಬೌಲರ್‌ಗಳನ್ನು ಧೈರ್ಯವಾಗಿ ಎದುರಿಸಿದರು. ಇದರಿಂದಾಗಿ ತಂಡವು ಮೂರಂಕಿ ಮೊತ್ತ ದಾಟಿತು.

ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ತಂಡವು 9.4 ಓವರ್‌ಗಳಲ್ಲಿ 1 ವಿಕೆಟ್‌ಗೆ 108 ರನ್ ಗಳಿಸಿ ಗೆದ್ದಿತು. ನಾಯಕ ಮಿಚೆಲ್ ಮಾರ್ಷ್ ಅಜೇಯ 64 ರನ್ ಗಳಿಸಿದರು. 33 ಎಸೆತಗಳನ್ನು ಆಡಿದರು. 7 ಬೌಂಡರಿ ಮತ್ತು 4 ಸಿಕ್ಸರ್ ಸಿಡಿಸಿದರು. ಟ್ರಾವಿಸ್ ಹೆಡ್ (32; 19ಎ, 4x6) ಅವರು ಮಾರ್ಷ್ ಜೊತೆಗೆ ಮೊದಲ ವಿಕೆಟ್‌ಗೆ 93 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಒಮಾನ್: 16.2 ಓವರ್‌ಗಳಲ್ಲಿ 104 (ಹಮದ್ ಮಿರ್ಜಾ 16, ಜತೀಂದರ್ ಸಿಂಗ್ 17, ವಾಸೀಮ್ ಅಲಿ 32, ಝೇವಿಯರ್ ಬಾರ್ಟ್ಲೆಟ್ 27ಕ್ಕೆ2, ಆ್ಯಡಂ ಜಂಪಾ 21ಕ್ಕೆ4, ಗ್ಲೆನ್ ಮ್ಯಾಕ್ಸ್‌ವೆಲ್ 13ಕ್ಕೆ2) ಆಸ್ಟ್ರೇಲಿಯಾ: 9.4 ಓವರ್‌ಗಳಲ್ಲಿ 1 ವಿಕೆಟ್‌ಗೆ 108 (ಮಿಚೆಲ್ ಮಾರ್ಷ್ ಔಟಾಗದೇ 64, ಟ್ರಾವಿಸ್ ಹೆಡ್ 32, ಜೋಶ್ ಇಂಗ್ಲಿಸ್ ಔಟಾಗದೇ 12, ಶಕೀಲ್ ಅಹಮದ್ 29ಕ್ಕೆ1)
ಪಂದ್ಯದ ಆಟಗಾರ: ಆ್ಯಡಂ ಜಂಪಾ.

ಆಸ್ಟ್ರೇಲಿಯಾ ತಂಡದ ಸ್ಪಿನ್ನರ್ ಆ್ಯಡಂ ಜಂಪಾ ಅವರನ್ನು ಅಭಿನಂದಿಸಿದ ಸಹ ಆಟಗಾರರು
ಎಎಫ್‌ಪಿ ಚಿತ್ರ

ಭಾರತ ಮಹಿಳಾ ಎ ತಂಡ ಫೈನಲ್‌ಗೆ

ರೈಸಿಂಗ್ ಸ್ಟಾರ್ಸ್ ಏಷ್ಯಾ ಕಪ್ ಟೂರ್ನಿ: ಶ್ರೀಲಂಕಾ ವಿರುದ್ಧ 5 ವಿಕೆಟ್ ಗೆಲುವು

ಬ್ಯಾಂಕಾಕ್ (ಪಿಟಿಐ): ನಾಯಕಿ ರಾಧಾ ಯಾದವ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ಭಾರತ ಎ ತಂಡವು ಮಹಿಳಾ ರೈಸಿಂಗ್ ಸ್ಟಾರ್ಸ್ ಟಿ20 ಏಷ್ಯಾ ಕಪ್ ಟೂರ್ನಿಯಲ್ಲಿ ಶುಕ್ರವಾರ ಶ್ರೀಲಂಕಾ ತಂಡವನ್ನು ಐದು ವಿಕೆಟ್‌ಗಳಿಂದ ಸೋಲಿಸಿ ಫೈನಲ್‌ಗೆ ಮುನ್ನಡೆಯಿತು.

ಭಾರತ ತಂಡ ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಬಾಂಗ್ಲಾದೇಶ ವಿರುದ್ಧ ಆಡಲಿದೆ. ಬಾಂಗ್ಲಾದೇಶ ವನಿತೆಯರು ಮತ್ತೊಂದು ಸೆಮಿಫೈನಲ್‌ನಲ್ಲಿ ಪಾಕಿಸ್ತಾನ ತಂಡವನ್ನು 54 ರನ್‌ಗಳಿಂದ ಸೋಲಿಸಿದರು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡುವ ಶ್ರೀಲಂಕಾ ನಿರ್ಧಾರ ಆ ತಂಡಕ್ಕೆ ತಿರುಗುಬಾಣವಾಯಿತು. ಎಡಗೈ ಸ್ಪಿನ್ನರ್ ರಾಧಾ (19ಕ್ಕೆ4) ನೇತೃತ್ವದಲ್ಲಿ ಭಾರತದ ಬೌಲರ್‌ಗಳು ಎದುರಾಳಿ ತಂಡವನ್ನು ಎರಡು ಎಸೆತಗಳು ಉಳಿದಿರುವಂತೆ 118 ರನ್‌ಗಳಿಗೆ ಉರುಳಿಸಿದರು. ಎಡಗೈ ಸ್ಪಿನ್ನರ್ ತನುಜಾ ಕನ್ವರ್ (20ಕ್ಕೆ2), ಲೆಗ್ ಸ್ಪಿನ್ನರ್ ಪ್ರೇಮಾ ರಾವತ್ (9ಕ್ಕೆ2) ಅವರು ನಾಯಕಿಗೆ ಬೆಂಬಲ ನೀಡಿದರು. ದ್ವೀಪ ರಾಷ್ಟ್ರದ ಪರ ಆರಂಭ ಆಟಗಾರ್ತಿ ಸಂಜನಾ ಕವಿಂದಿ (31 ರನ್, 35 ಎಸೆತ) ಸ್ವಲ್ಪ ಪ್ರತಿರೋಧ ತೋರಿದರಷ್ಟೇ.

ಶ್ರೀಲಂಕಾ ತಂಡದ ಆರಂಭ ಉತ್ತಮವಾಗಿತ್ತು. 10 ಓವರುಗಳ ಬಳಿಕ 2 ವಿಕೆಟ್‌ಗೆ 71 ರನ್ ಗಳಿಸಿ ಸವಾಲಿನ ಮೊತ್ತ ದಾಖಲಿಸುವಂತೆ ಕಂಡಿತು. ಆದರೆ ಸ್ಪಿನ್ನರ್‌ಗಳ ದಾಳಿಗೆ ಕುಸಿಯತೊಡಗಿತು.

ಭಾರತ ತಂಡ 13.3 ಓವರುಗಳಲ್ಲೇ 5 ವಿಕೆಟ್ ಕಳೆದುಕೊಂಡು ಗುರಿ ತಲುಪಿತು. ಆರಂಭ ಆಟಗಾರ್ತಿ ವೃಂದಾ ದಿನೇಶ್ 20 ಎಸೆತಗಳಲ್ಲಿ 42 ರನ್ ಗಳಿಸಿ ಬಿರುಸಿನ ಆರಂಭಕ್ಕೆ ನೆರವಾದರು. ವೃಂದಾ ಸೇರಿ ಮೂವರು 21 ರನ್ ಅಂತರದಲ್ಲಿ ನಿರ್ಗಮಿಸಿದ್ದಾಗ ಲಂಕಾ ಹೋರಾಟ ನೀಡುವಂತೆ ಕಂಡಿತು. ಆದರೆ ರಾಧಾ ಬ್ಯಾಟಿಂಗ್‌ನಲ್ಲೂ ಮಿಂಚಿ 18 ಎಸೆತಗಳಲ್ಲಿ ಅಜೇಯ 31 ರನ್ ಸಿಡಿಸಿದರು.

ಸಂಕ್ಷಿಪ್ತ ಸ್ಕೋರು: ಲಂಕಾ ‘ಎ’ ಮಹಿಳಾ ತಂಡ: 19.4 ಓವರುಗಳಲ್ಲಿ 118 (ಸಂಜನಾ ಕವಿಂದಿ 31; ತನುಜಾ ಕನ್ವರ್ 20ಕ್ಕೆ2, ರಾಧಾ ಯಾದವ್ 19ಕ್ಕೆ4, ಪ್ರೇಮಾ ರಾವತ್ 9ಕ್ಕೆ2); ಭಾರತ ‘ಎ’ ಮಹಿಳಾ ತಂಡ: 13.3 ಓವರುಗಳಲ್ಲಿ 5 ವಿಕೆಟ್‌ಗೆ 119 (ವೃಂದಾ ದಿನೇಶ್ 42, ರಾಧಾ ಯಾದವ್ ಔಟಾಗದೇ 31; ಶಶಿನಿ ಗಿಮ್ಹನಿ 33ಕ್ಕೆ2).
ಪಂದ್ಯದ ಆಟಗಾರ್ತಿ: ರಾಧಾ ಯಾದವ್.

ರಾಧಾ ಯಾದವ್

‘ಮಾತೃ ಕಪ್’ ಬ್ಯಾಸ್ಕೆಟ್‌ಬಾಲ್ ಮಾರ್ಚ್ 5ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯು (ಕೆಎಸ್‌ಬಿಬಿಎ) 2025–26ನೇ ಋತುವಿನ ‘ಮಾತೃ ಕಪ್’ ಮಹಿಳಾ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ಅನ್ನು ಮಾರ್ಚ್ 5ರಿಂದ 8ರ ವರೆಗೆ ಆಯೋಜಿಸಿದೆ. ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯಲಿವೆ.

ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವ, ಸಂಸ್ಥೆಯ ಸಂಯೋಜನೆಗೆ ಒಳಪಟ್ಟ ಜಿಲ್ಲಾ ಬ್ಯಾಸ್ಕೆಟ್‌ಬಾಲ್ ಸಂಸ್ಥೆಗಳು ಹಾಗೂ ಸದಸ್ಯ ಕ್ಲಬ್‌ಗಳು ಫೆ.25ರ ಒಳಗೆ ksbb08@gmail.comಗೆ ನೋಂದಣಿ ಅರ್ಜಿ ಸಲ್ಲಿಸಬೇಕೆಂದು ಕೆಎಸ್‌ಬಿಬಿಎ ಪ್ರಕಟಣೆಯಲ್ಲಿ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಮಾರ್ಕೆಲ್ ಸಹೋದರರು ಈಗ ಎದುರಾಳಿಗಳು

ಮಾರ್ನೆ ಮಾರ್ಕೆಲ್

ಅಲ್ಬೀ ಮಾರ್ಕೆಲ್

ಅಹಮದಾಬಾದ್ (ಪಿಟಿಐ): ಒಂದೇ ಕ್ರಿಕೆಟ್ ತಂಡದಲ್ಲಿ ಸಹೋದರರು ಆಡುವುದು ಹೊಸದೇನಲ್ಲ. ಆದರೆ ಬೇರೆ ಬೇರೆ ತಂಡಗಳಲ್ಲಿದ್ದು ಎದುರಾಳಿಗಳಾಗಿ ಇಳಿಯುವುದು ಅಪರೂಪ. ಭಾನುವಾರ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುವ ಟಿ20 ವಿಶ್ವಕಪ್ ಟೂರ್ನಿಯ ಸೂಪರ್ 8 ಪಂದ್ಯದಲ್ಲಿ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ಪಂದ್ಯದಲ್ಲಿ ಅಲ್ಬೀ ಮತ್ತು ಮಾರ್ನೆ ಮಾರ್ಕೆಲ್ ಸಹೋದರರು ಎದುರಾಳಿಗಳಾಗಿ ಕಾರ್ಯನಿರ್ವಹಿಸಲಿದ್ದಾರೆ.

ಅಲ್ಬೀ ಅವರು ದಕ್ಷಿಣ ಆಫ್ರಿಕಾ ತಂಡದ ವಿಶೇಷ ಸಲಹೆಗಾರರಾಗಿದ್ದಾರೆ. ಮಾರ್ನೆ ಭಾರತ ತಂಡದ ಬೌಲಿಂಗ್ ಕೋಚ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

‘ನಾವಿಬ್ಬರೂ ಮಾತನಾಡುವುದಿಲ್ಲ. ನಮಗಿಂತಲೂ ಅಮ್ಮನಿಗೆ ಹೆಚ್ಚು ಚಿಂತೆ ಇದೆ. ಯಾವ ತಂಡವನ್ನು (ಭಾರತ ಅಥವಾ ದಕ್ಷಿಣ ಆಫ್ರಿಕಾ) ಬೆಂಬಲಿಸಬೇಕು ಎಂಬ ಗೊಂದಲದಲ್ಲಿದ್ದಾರೆ’ ಎಂದು ಅಲ್ಬೀ ಹೇಳಿದ್ದಾರೆ. ‘ಅವರು (ಅಲ್ಬೀ) ಮೈದಾನಕ್ಕೆ ಬಂದಿರುವುದನ್ನು ನಾನು ನೋಡಿದೆ. ಆದರೆ ನಾವು ಹೆಚ್ಚು ಮಾತನಾಡಿಲ್ಲ. ಅವರನ್ನು ಇಲ್ಲಿ ನೋಡಲು ಸಂತಸವಾಗುತ್ತಿದೆ’ ಎಂದು ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಮಾರ್ನೆ ಅವರು ಅಲ್ಬೀ ಬಗ್ಗೆ ಹೇಳಿದರು.

ಸೂಪರ್ ಡಿವಿಷನ್‌ಗೆ ಬಡ್ತಿ ಪಡೆದ ಸ್ಟ್ರೈಡ್ ಎಫ್‌ಸಿ

ಬೆಂಗಳೂರು: ಸ್ಟ್ರೈಡ್ ಎಫ್‌ಸಿ ತಂಡವು ಶುಕ್ರವಾರ ನಡೆದ ಬಿಡಿಎಫ್‌ಎ ಎ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 4–2ರಿಂದ ರೈಲು ಗಾಲಿ ಫ್ಯಾಕ್ಟರಿ ಎಫ್‌ಸಿ ತಂಡವನ್ನು ಮಣಿಸಿತು. ಅದರೊಂದಿಗೆ, ಲೀಗ್‌ನಲ್ಲಿ 13 ಪಂದ್ಯಗಳಿಂದ 34 ಅಂಕ ಸಂಪಾದಿಸಿರುವ ಸ್ಟ್ರೈಡ್ ತಂಡವು ಸೂಪರ್ ಡಿವಿಷನ್ ಲೀಗ್‌ಗೆ ಬಡ್ತಿ ಪಡೆಯುವುದನ್ನು ಖಚಿತಪಡಿಸಿಕೊಂಡಿತು.

ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಸ್ಟ್ರೈಡ್ ತಂಡವು ಲೀಗ್‌ನ ತನ್ನ ಕೊನೆಯ ಪಂದ್ಯದಲ್ಲಿ ಸ್ನೈಪರ್ ಎಫ್‌ಸಿ ತಂಡದ ವಿರುದ್ಧ ಡ್ರಾ ಮಾಡಿಕೊಂಡರೂ, ಎ ಡಿವಿಷನ್‌ನ ಚಾಂಪಿಯನ್ ಪಟ್ಟವನ್ನು ತನ್ನದಾಗಿಸಿಕೊಳ್ಳಲಿದೆ. ಬಿಟಿಎಂ ಫುಟ್‌ಬಾಲ್ ಕ್ಲಬ್ (29 ಅಂಕ; 13 ಪಂದ್ಯಗಳು) ಹಾಗೂ ಟೆಕ್ನಿಕೊ ಫುಟ್‌ಬಾಲ್ ಫೌಂಡೇಶನ್ (29 ಅಂಕ; 13 ಪಂದ್ಯಗಳು) ತಂಡಗಳು ಅಂಕಪಟ್ಟಿಯಲ್ಲಿ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.

ಮತ್ತೊಂದು ಪಂದ್ಯದಲ್ಲಿ, ಅಕ್ಷಯ್ (45ನೇ ನಿ.) ಅವರು ಗಳಿಸಿದ ಗೋಲಿನ ನೆರವಿನಿಂದ ಆದಾಯ ತೆರಿಗೆ ಇಲಾಖೆ ಎಫ್‌ಸಿ ತಂಡ 1–0ಯಿಂದ ಸ್ನೈಪರ್ ಎಫ್‌ಸಿ ತಂಡವನ್ನು ಮಣಿಸಿತು.

ಬಿ ಡಿವಿಷನ್ ಲೀಗ್‌ನ ಪಂದ್ಯದಲ್ಲಿ ಅಥುಲ್ ಕೃಷ್ಣ ಪಿ.ಎ. ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಎಡಿಇ ಫುಟ್‌ಬಾಲ್ ಕ್ಲಬ್ ತಂಡವು 6–4ರಿಂದ ಬೆಂಗಳೂರು ವಾರಿಯರ್ಸ್ ಎಫ್‌ಸಿ ತಂಡವನ್ನು ಮಣಿಸಿತು. ಇನ್ನೊಂದು ಪಂದ್ಯದಲ್ಲಿ ಮೈಸೂರು ವಿಜಯನಗರ ಎಫ್‌ಸಿ ತಂಡವು 3–0ಯಿಂದ ಸೌತ್ ಇಂಡಿಯಾ ಎಫ್‌ಸಿ ತಂಡದ ವಿರುದ್ಧ ಸುಲಭ ಗೆಲುವು ಸಾಧಿಸಿತು.

Reliance Growth is Life
NOW BIGGER & BETTER
PHOENIX MARKET CITY, LOWER GROUND FLOOR, SHOP NO. G-22, 28 A 29
1T ACs Starting from ₹17990*
1.5T ACs Starting from ₹18990*
*Prices after cashback & under exchange

GODREJ INVERTER 1.5T AC SIC18TTC3-WYQ/WYA/WZQ
• 5 in 1 Convertible Technology • i-Sense Feature • Anti Freeze Thermostat
EMI of ₹69* Per Day
BENEFITS 5 years Comrehensive Warranty*

BPL INVERTER 1.5T AC BAS-V193ABFG5
• AI Mode • PM 2.5 Filter • Blue Aluminum Coating (Eva + Cond)
EMI of ₹79* Per Day
BENEFITS Installation at ₹999+Tax*

HITACHI INVERTER 1.5T AC G318PCC2SS1
• ice Clean (FrostWash) • 4 Way Swing • Silent air (Wave Blade Design)
EMI of ₹89* Per Day
BENEFITS Installation at ₹499+Tax*

LLOYD INVERTER 1.5T AC GLS18I3KOAHR
• 5 in 1 Expandable • Smart 4 Way Swing • Low Gas Detection
EMI of ₹89* Per Day
BENEFITS Installation at ₹899+Tax*

digital PERSONALISING TECHNOLOGY
ಚಿಲ್ ಫೆಸ್ಟ
ನಿಮ್ಮ ಮನಸ್ಸನ್ನು ಕೂಲ್ ಆಗಿಸಲು, ನಮ್ಮಲ್ಲಿ ಎಲ್ಲಾ ರೀತಿಯ ಪರಿಹಾರಗಳಿವೆ!
GST ಕಡಿತವಾದ ಬೆಲೆಗಳು*

₹21000 ವರೆಗೆ ಕ್ಯಾಶ್‌ಬ್ಯಾಕ್* ಪ್ರಮುಖ ಬ್ಯಾಂಕ್ ಕಾರ್ಡ್‌ಗಳು ಮತ್ತು ಪೇಪರ್ ಫೈನಾನ್ಸ್ ಮೇಲೆ
AC@₹1*
1 ಇಎಂಐ ಉಚಿತ ಪೇಪರ್ ಫೈನಾನ್ಸ್ ಮೇಲೆ*
www.reliancedigital.in

REFRIGERATORS
REFRIGERATORS STARTING FROM ₹7990*
FRENCH DOOR Starting from ₹69990* EMI of ₹3999*
SIDE BY SIDE Starting from ₹39990* EMI of ₹2999*
DOUBLE DOOR Starting from ₹18990* EMI of ₹1490*
BENEFITS Havells Air Fryer at ₹1499*, boAt Soundbar at ₹499*, Philips Iron at ₹299*
*Prices inclusive of bank cashback
RANGE AVAILABLE FROM 150L TO 592L
OPEN BOX SALE LIMITED PERIOD OFFER
UP TO 50% OFF* + UP TO 15% ADDITIONAL DISCOUNT* ON LEADING BANK CARDS
Latest models | Convertible | AI-enabled Wi-Fi & Smartphone control
BOSCH BPL Electrolux Godrej Haier IFB LLOYD LG LIEBHERR SAMSUNG Whirlpool

SYMPHONY PERSONAL COOLER HI FLO 40L ~~₹9999~~ ₹6690*
HAVELLS DESERT COOLER KOOLWAVE 55L ~~₹20190~~ ₹9490*
BAJAJ DESERT COOLER ELEVATE 72 ~~₹19900~~ ₹10999*
SYMPHONY TOWER COOLER DIET 3D-55I W/R ~~₹13599~~ ₹12490*

VOLTAS INVERTER 1.5T AC 183V VERTISZEPHYRGOLD
• 5 Step Adjustable Mode • Ice-Wash Technology • Super Dry
EMI of ₹89* Per Day
BENEFITS Installation at ₹899+Tax*

DAIKIN INVERTER 1.5T AC FTKM50U
• Dew Clean Technology • PM 2.5 Filter, 3D Airflow • Air Throw: 16 Meters (52 Feet)
EMI of ₹99* Per Day

HAIER INVERTER 1.6T AC HSU19KPYAIR5BN
• Voice Control and Wi-Fi • Frost Self Clean • Intelli Convertible 7-in-1
EMI of ₹99* Per Day
BENEFITS Free Standard Installation*

PANASONIC INVERTER 1.5T AC EU18BKY5XFM
• True AI • 7-in-1 Convertible • PM 0.1 Filter
EMI of ₹99* Per Day
BENEFITS 5 years Comrehensive Warranty*

NEW ARRIVAL
SAMSUNG INVERTER 1.5T AC AR50H18D13H
• AI Energy Mode • 5 Step Convertible Mode • 4 Way Swing
EMI of ₹99* Per Day
BENEFITS Free Standard Installation*

BLUESTAR INVERTER 1.5T AC ID518NNURS
• Smart AC • 5-in-1 Convertible • PM2.5 Anti-Microbial Filter with Activated Carbon
EMI of ₹109* Per Day
BENEFITS 5 years Comrehensive Warranty*

NEW ARRIVAL
LG INVERTER 1.5T AC AS-Q18CWXE
• AI • Cools at 52° C • Fan Speed - 6 Steps
EMI of ₹109* Per Day

Exchange Bonus up to ₹4000* | Lowest EMI at ₹69* Per Day | 5 Years Comprehensive Warranty* | Free installation on select 5 Star models | Get AC bracket at ₹1* worth ₹899* | Get Mini Bar free worth ₹9490* on select 5 star ACs

SCAN QR CODE FOR STORE LOCATION
ಉಚಿತ ಡೆಲಿವರಿ & ಇನ್ಸ್ಟಾಲೇಷನ್.* ₹1500 ವರೆಗೆ ಉಳಿಸಿ*
FREE ₹699 ವರೆಗಿನ* ಉಚಿತ AC ಸ್ಟ್ಯಾಂಡ್
₹2500 ವರೆಗಿನ ಎಕ್ಸ್‌ಚೇಂಜ್ ಬೆನಿಫಿಟ್ಸ್*
5 ವರ್ಷಗಳ ವಿಸ್ತೃತ ವಾರಂಟಿ*
₹9590 ವರೆಗಿನ ಖಚಿತ* ಉಚಿತ ಕೊಡುಗೆಗಳು
ಇಲ್ಲಿ ಕೂಡ ಶಾಪಿಂಗ್ ಮಾಡಿ
SHOP ANY ELECTRONICS AT MY JIO STORE Jio DIGITAL LIFE
BLUE STAR BPL Carrier DAIKIN Haier HITACHI Kelvinator LG LLOYD GENERAL Panasonic SAMSUNG VOLTAS

Unless specified, the retail prices shown are for 1 unit of the product.
Terms & Conditions Apply: Cards - : 1 EMI FREE will be given to customer max up to Rs 2000/- & applicable on AC category only. 1 EMI FREE will be given in 12/4 scheme only and will be Applicable on Brand tie up scheme only,Not applicable on Resq & small appliances. Offer validity:07th to 28th Feb'26. 1 EMI FREE will be given to customer register Bank account with 60 days post 1 EMI clearance. Upto 30,000 Cashback with IDFC First Bank. Offer valid on AC, Ref, LED, WM, Dishwasher, Smartphone & Laptop. Offer validity from 15th Feb – 28th Feb'26 Pan India. Upto 21,00 cashback on AC, Ref, Deep Freezer & Cooler only In Kerala from 14th Feb – 16th Mar'26 with HDB Financial services. Up to Rs 21,000/- Cashback on Consumer durable products(Except Panel), laptop & Digital Products with HDB Financial services. 10% cashback upto Rs.11,000 on Panel with HDB. Offer for Pan India on Friday& Saturday and selective states on Sunday & Monday. Offer validity from 06th Feb – 02nd Mar'26. All Paper finance offers are available on select brands / products/ Schemes & select customers. Offer valid in select states/cities. For more details contact In-store finance executive. For Paper Finance, benefit shall be given to the customer in form of cashback which shall be posted by respective financier as per their terms. Offers valid till stocks last. MRP of all products is inclusive of all taxes. *GST will be applicable on all the FREE products. Please visit the website/store and read the detailed T&Cs. Reliance Retail reserves its right to amend, withdraw/modify the offers at any point of time without any notice. All disputes are subject to jurisdiction of Courts in Mumbai only.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

Smart Agricultural investment Opportunity

Just 45 Minutes Drive From Bangalore Outer Ring Road

Sandalwood Plantation

COTTAGE ON YOUR **Farm Land** Live with Nature

Near Kanakapura

32 Acres Project	Project is secured with a 9 feet Bricks wall	Attached NH-209	24x7 security	Ready for Registration

CALL FOR MORE DETAILS: 9743811566

Prime Location Premium Plots for Sale

ACTUAL LAYOUT PICTURES

BMRDA/NPA ಅನುಮೋದಿತ 'E' ಖಾತಾ ಸೈಟುಗಳು

ದಾಬಸ್ ಪೇಟೆ ಹತ್ತಿರ

ಬೆಂಗಳೂರು-ತುಮಕೂರು (NH-48)
10 ಲೈನ್ ಗ್ರೀನ್ ಎಕ್ಸ್‌ಪ್ರೆಸ್‌ವೇ ಗೆ ಹೊಂದಿಕೊಂಡಿದೆ

STRR ಗೆ ರಸ್ತೆಗೆ ಸಂಪರ್ಕವಿದೆ ಕ್ವಿನ್ ಸಿಟಿ (ಜ್ಞಾನ ಆರೋಗ್ಯ ನಾವೀನ್ಯತೆ ಸಂಶೋಧನೆ-ನಗರ) ದಾಬಸ್ ಪೇಟೆ ಬಳಿ 40,000 ಕೋಟಿ ರೂಪಾಯಿಗಳ ಮೆಗಾ ಯೋಜನೆ

• ಇಂಡಿವಿಜುಯಲ್ ನೀರಿನ ಸಂಪರ್ಕ • ಮಕ್ಕಳ ಆಟದ ಉದ್ಯಾನ • ಬೀದಿ ದೀಪಗಳು • ಅವೆನ್ಯೂ ಪ್ಲಾಂಟೇಶನ್ • ಗ್ರಾಂಡ್ ವೆಲ್ಕಮ್ ಆರ್ಚ್ • ಚರಂಡಿ ಸಂಸ್ಕರಣಾ ಘಟಕ • 24/7 ಭದ್ರತಾ ನಾಗರಿಕ ಸೌಲಭ್ಯಗಳು • ಗೇಟೆಡ್ ಸಮುದಾಯ ವಿದ್ಯುತ್ ಸರಬರಾಜು • ವಾಸ್ತು ಆಧಾರಿತ ವಿನ್ಯಾಸ • 30 ಮತ್ತು 40 ಅಡಿ ಸಿಸಿ ರಸ್ತೆಗಳು

ನೋಂದಣಿ ಮತ್ತು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ

ಸೈಟ್ ಭೇಟಿಗಾಗಿ ಕರೆ ಮಾಡಿ: **97392 92375, 63601 78209**

THE HINDU GROUP

VAISHNAVI®

Presents

THE HINDU Livingspaces 2026

Powered By

Bangalore Development Authority | ORCHIDS® The International School

PROPERTY SHOPPING SEASON IS HERE!

WALK IN TO BAG THE BEST PROPERTY DEALS IN TOWN.

The Hindu Livingspaces brings you an unmatched range of homes, apartments & commercial investments that best suit your tastes, budget, and dreams. The exhibition features **reputed builders, trusted land developers, and leading financial institutions** under one roof.

Join the contests at the venue and win prizes worth upto ₹10,000.*

FEBRUARY 21&22 | CHANDRA SAGARA CONVENTION HALL, JAYANAGAR, NEAR ASHOKA PILLAR BENGALURU | 200+ PRESTIGIOUS PROJECTS

Inauguration by

MR. RAMALINGA REDDY

Minister for Transport and Muzrai, Government of Karnataka

*T&C apply

FREE ENTRY

FOR QUERIES, CONTACT +91 94483 64925

To find your dream property, register using the QR code or visit link: newsth.live/LSBL2026PA

Title Sponsor: VAISHNAVI — Powered By: Bangalore Development Authority, ORCHIDS The International School — In Association with: SBR GROUP, DS MAX — Gold Sponsors: Assetz, LivingWalls, KNS INFRA, SOWPARNIKA Delivering Happiness, SENTIENT DEVELOPERS, ABHEE VENTURES, AMBERSTONE, Sapthagiri Promoters & Developers

Gold Sponsors: AASHIRVAD, ELEGANT Builders & Developers, MOGG'S ESTATES, NISCHITHA PROPERTIES Pvt.Ltd., HABULUS, ALLIANCE SQUARE PROPERTIES, A&A Realti, AFZ PROPERTIES — Banking Partners: Repco Home Finance, IDBI BANK Bank Aisa Dost Jaisa — Construction Partner: SUDARSHAN PIPES & FITTINGS — Food Partner: Empire — Jewellery Partner: Prathibha — Beverage Partner: Cothas Coffee — Radio Partner: BIG LIVE

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಕಲ್ಪವೃಕ್ಷ ಗ್ರೀನ್
Kalpavruksha Green

DREAM PLOT FOR SALE

Near Devanahalli, North Bangalore

PRICE STARTS AT ₹9.53 Lakhs

HURRY UP! LIMITED TIME OFFER

Pay in 4 Installments

- Close to Residential Areas
- Near IT Tech Parks
- Easy Access to Highways
- Rapidly Developing Zone

ಎಂಟ್ರನ್ಸ್ ಆರ್ಚ್ | ಮಕ್ಕಳ ಆಟದ ಪ್ರದೇಶ | ಸೌರ ಬೀದಿ ದೀಪ | ಭೂಗತ ಸ್ಯಾವೇಜ್ ಲೈನ್ಸ್ | ಕ್ಲಬ್‌ಹೌಸ್ ಅಥವಾ ಪಾರ್ಟಿ ಹಾಲ್ | ಭೂಗತ ವಿದ್ಯುತ್ | 24 ಗಂಟೆಗಳ ಭದ್ರತೆ

Easy Installment | All Bank Loans Available

ಬುಕಿಂಗ್ ಕರೆಗಾಗಿ 90355 97620 / 63615 47442

REAL ESTATE SELLING

Sites

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

KANAKAPURA ROAD, BSK 6th Stage, 60' Road, 30x40 corner site, BDA Katha, 13,000/- sft. 9845000299/ 6361387570.

30X50 EAST Banashankari 2nd stage, 30x40 and 40x60 Banashankari 3rd stage, Kathriguppe Water Tank. 8618373754

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

Andrahalli

SITE FOR SALE 2350 Sqft W/S CORNER SEMI COMMERCIAL RATE 1.85CR ANDRAHALLI CONTACT: 9108133156

Anjanapura

SITE SALE ANJANAPURA 30x40 E/F Developed 5th Block, 50x80 8th Block Commercial Good Location: 9880776950

Multiple Locations

BDA SITES AVAILABLE 50x80, 40x60, 30x40, 30x20 in Vishweshwaraiah Layout and Kempegowda Layout. 9900999919.

Mysore Road

MYSORE ROAD Near Kengeri Gated Community with Clubhouse 50x80 E/F, E-Khatha Site Immediately Sale 2699/- Sft 9535151616

Nagarabhavi

"MPM CORNER Site 40x60, `D`Group 30x40 Vishveshwaraiah 6th 80`feet Road Opp.KLE Law College. 7259675150/ 9448733456"

Nelamangala

BYRASHETTYHALLI AISHWARYA County BMRDA 40x60, East And Banashankari BDA 30x40,Sites For Sale : 9620117773/9845857006

30X57 VIJAYA VITTAL Layout Near Hyundai Showroom 400 Meter From Tumkur Road Nelamangala Contact: 9590009797

Ramamurthy Nagar

48'X42' SITE for SALE 'A'Katha, North Facing Yerranapalya, Ramurthynagar, Bengaluru.Near Shell Petrol Bunk.No Broker Serious Buyer`Only. 9986747747 9845953689.

Rajarajeshwari Nagar

R.R.NAGAR 40X67 2 Plots W/F 'E'Khata Done,Rate 13000/- Slightly Negotiable Near Global`Village R.V.College &.Metro Station.(NRI Buyers Welcome) Call:9886519864

Uttarahalli

40X60 EAST BHCS Layout, Uttharahalli (Pattalamma Bharath), 30x40 Near NPS School, Buyer/ Sellers contact: 6362196652

Vishweshwariah Layout

RAILWAY LAYOUT 2nd Stage, West South Corner, 1170 Sqft. Near Vidhyanikethan School Ullal Road. BDA-KHATHA. Call: 9164089633.

DIRECT OWNER 40x60 E/F Site Sale VISHWESHWARAIAH LAYOUT BLOCK-1 Behind 100ft-Road, Bank loan Available. 9742681666

VISHWESHWARAIAH LAYOUT, BDA 2nd Block, 40x60 North Facing, 40 Feet Road, Direct Owner Meeting: 9980860138

40X60 SITE SALE Vishveshwaraiah Layout BDA 1st Block North Face. 30X40 2nd Block WF Near 100ft Road: 9844845864

BTM Layout

SITE FOR Sale 30×40 40×60 East North Facing BTM 2nd Stage 25000 to 30000, 9945377119 /9844099557

House

J P Nagar

J.P.NAGAR 1ST Phase, 45x60 with houses 31,000/- Sft. South, Jayanagar 40x50 corner, (Agents Excuse) 9845144365

30X40 BDA East Facing Old House For Sale at J.P.Nagar 3Phase Broker Excuse. Contact:9845538555

Mysore

HOUSE FOR SALE: 40/60 SIZE GROUND and FIRST FLOOR. No.3999, 20th Main, Near Hampi circle Back side Road. Vijaya Nagar 2nd Stage MYSORE. Contact: 8073303048

Nagarabhavi

30X40 G+3 Triplex House and 30x40 G+3 Building for Sale. @ Nagarabhavi. 9342874483 9844333109

Uttarahalli

UTTARAHALLI BHARAT HOUSING SOCIETY, OPPOSITE PARK, 20X40 WEST FACING 3 BHK DUPLEX HOUSE SALE. Call: 9945724472.

General

SIRSI- (KASTURBA Nagar, near RTO & bus depo): 5 guntas Income Property: 3BHK house (GF 1,130 sqft) + commercial floor (FF 1,130 sqft) rented to Co-op Bank (separate entry). Coconut & fruit trees (₹Rs 2 lakh/yr). Own well + tanks. All facilities within 500 m. Rs 2.30 Cr (Neg.) Call: 9741923704

Agricultural Land Converted

Intl Airport Road

1- 50 Acres Agriculture/ Conversion Land aroundDevanahalli Doddaballpura Nandi Hills Chikkaballapur Available Out rate Sale.9164565566

Agricultural Land

Out-Station

JUST 12KM from Bangalore 13000sft Land Suitable for farm house Residential & Commercial 1450/-sft 9535151616

Commerical

Basaveshwaranagar

BASAVESHWAR NAGAR 100 Feet Road Commercial 40X60 BDA Property For Sale Call: 9341260828

Flat

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Industrial & Factory

Peenya

SALE/ RENT. KIADB/ KSSIDC. Peenya. Commercial Building/ Industrial Shed and Land available. 'BRUNDANA REALESTATE' 9880434915

Residential/ Commercial

Mangaluru

SALE: 13.50 cents Residential land with house in Shakthinagar, Mangalore. Ph: 7795595796 (Brokers Excuse)

REAL ESTATE BUYING

General

General

WE DO FUNDING & Solutions/ Settlements for disputed properties under Bank,High Court, Civil/DC/AC/ Tribunal/Tahsildar courts pending cases. Contact Verna Developers, Barton Centre, MG Road,Blr. 9620253180.

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. genuine Sellers Contact: 9902038118, 9449060605

WANTED SITE ANJANAPURA BCCHS Layout Narayan`Nagar Jayanagar Housing Society, Banashankari 6th`Stage 30x40,40x60. Direct Registration. Broker Excuse. Call:9663454878

Vasanthnagar

REQUIRED 40X60 Site in Kumara Park, Vasanthnagar and nearby. Contact: 9448355660, 080-23465660

Banashankari

BDA-SITES WANTED @ BSK 6th Stage all Blk Vishweshwaraiah Lyt Kempegowda Lyt 30x40, 40x60, 50x80 Call:9845555666

Multiple Locations

WANTED BDA Sites Anjanapura- Arkavathi, Banashankari 6th stage, Vishweswaraiah, Kempegowda, Dr. Shivaramkaranth Layout. Contact: Sapthagiri "(Opposite BDA Head Office) "9036360366.

Vishweshwariah Layout

"VISVESHWARAIAH LAYOUT, Nagarabhavi, Kempegowda Layout Wanted 30x40, 20x30 direct Registration, Genuine Owners Contact: 9035444429/ 9448733456"

RENTAL PROPERTIES

Accommodation Available

Commercial

13900 SQ.FT basement plus three commercial building for rent suitable for diagnostic office tutorial college play home hospital at jayanagar 7 th block contact 9845010485

COMMERCIAL SPACE for Rent Suitable for: Hotel/ Lodge (16 Rooms) Location: Kuvempunagar, Mysore. Contact: 8105926688

COMMERCIAL SPACE for-Rent 6000`Sq.ft 1st Floor 2000`Sqft, 2nd floor 2000`Sqft, 3rd-floor 2000`Sqft Suitable`for Study centre, Office,Bank, Gym`Etc.,at Marenahalli Main- Road, Vijayanagar Bangalore. Contact: 9880200117/ 9448068082

Godown

1400SFT WAREHOUSE Space Near Falcon City Kanakapura Road Available for RENT- 45K. Contact: 99001-45768

General

BSK 6TH STAGE, 2ND BLOCK, Technology Road, 50×80 Site available for RENT. Shivanna: 9535352226, 9448684258

ಕರ್ನಾಟಕದ ಅತಿ ದೊಡ್ಡ OG ಸೀರೆ ಉತ್ಸವ 2.0

100000+ ಸೀರೆಗಳು 10,000+ವಿನ್ಯಾಸ 1000+ವಿಧಗಳು

MYSORE SILKS Weaver's OG Seere Utsava By Sulakshmi Silks

ನೇರ ನೇಕಾರರಿಂದ ಕನಿಷ್ಠ ಬೆಲೆಯ ಖಾತರಿ

100 ವರ್ಷಗಳ ವಿಶ್ವಾಸಾರ್ಹ ಪರಂಪರೆ

SULAKSHMI SILKS

18ನೇ ಯಿಂದ 28ನೇ ಫೆಬ್ರವರಿ 2026

11 AM TO 9 PM

SIGNATURE SILK SAREE COLLECTIONS

- ಶುದ್ಧ ಮೈಸೂರು ಸಿಲ್ಕ್ • ಕಾಂಜೀವರಂ • ಪಟೋಲ
- ಬನಾರಸ್ • ಉಪ್ಪಾದ • ಪೈಠಾನಿ • ಚಂದೇರಿ • ಗದ್ವಾಲ್,
- ಇಳಕಲ್ • ಪೋಚಂಪಲ್ಲಿ • ಭಾಗಲ್ಪುರ್ • ಇಕತ್ • ಆರ್ನಿ
- ಜಮದಾನಿ • ಮುಗ • ಕ್ರೇಪ್ • ಗಜ್ಜಿ • ಬಂಧನಿ
- ಕಾಟನ್ ಕ್ಲಾಸಿಕ್ಸ್ • ಬೆಂಗಳೂರು ಸಿಲ್ಕ್ ಮತ್ತು ಇತರೆ.

ಶ್ರೀ ಸೂರ್ಯೋದಯ ಕಲ್ಯಾಣ ಮಂಟಪ
ವೆಸ್ಟ್ ಆಫ್ ಕಾರ್ಡ್ ರೋಡ್, ವಿಜಯನಗರ
99727 18898 | 96631 27606
93531 38343 | 98863 06643

REQUIRED

LAND FOR PETROLEUM COMPANY. RENT Rs 30/50 PER SQ FT + PROFIT SHARING WITHOUT INVESTMENT, FOR 20 YEARS LICENSE AVAILABLE WITH US 8000 - 15,000 Sft. ON ANY 60 FT WIDE MAIN ROAD IN BLORE CITY, PROPERTY TAX PAID BY COMPANY.

Contact: 96861 75666/ 99451 55688

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

MORE Classifieds IN MAIN ISSUE

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

DS MAX Sky Blossom
UNFOLD HAPPINESS...

UNFOLD

Accessibility, Connectivity & Luxurious Amenities

5 Mins - Singasandra Metro Station **(YELLOW LINE)**

DS MAX®

PRM/KA/RERA/1251/310/PR/210324/006724

ಡಿಎಸ್ ಮ್ಯಾಕ್ಸ್ ಸ್ಕೈ ಬ್ಲಾಸಮ್

Live At The Epicenter of Ease

Experience The Ultimate Urban Lifestyle Surrounded by Metro Stations, IT Parks, Top Universities and Premier Shopping.

Prime Living at **BEGUR**

10 MINS. FROM CENTRAL SILK BOARD & MADIWALA

SUPER-LUXURIOUS 2 & 3-BHK

BBMP APPROVED | G+14 FLOORS

2-BHK HOMES @
₹87.62L*

3-BHK HOMES @
₹1.04Cr*

8880 013 310

www.dsmaxproperties.com

2, 3 & 4-BHK APARTMENTS FOR SALE IN VARIOUS LOCATIONS

RERA No.	Location	Floors	Landmark	Price	Phone
PRM/KA/RERA/1251/308/PR/291225/008366	HOSUR ROAD	G+22	10 MINS. ELECTRONIC CITY	₹ 60.30 - 98.70 Lakhs*	8880 003 003
PRM/KA/RERA/1250/304/PR/251024/007179	WHITEFIELD	G+14	10 MINS. HOPE FARM METRO STN.	₹ 77.91 L - 1.32 Cr*	8880 461 461
PRM/KA/RERA/1251/472/PR/250225/007524	AIRPORT ROAD	G+14	NEAR PRESTIGE TECH IT PARK	₹ 87.89 L - 1.21 Cr*	8880 465 465
PRM/KA/RERA/1251/310/PR/150223/005721	MYSORE ROAD	G+14	NEAR CHALLAGHATTA METRO STN.	₹ 67.28 - 95.28 Lakhs*	8880 461 461
PRM/KA/RERA/1251/308/PR/281125/008287	JIGANI	G+14	5 MINS. APC CIRCLE	₹ 58.45 - 92.06 Lakhs*	8880 003 003
PRM/KA/RERA/1251/310/PR/151223/006489	BANASHANKARI	G+3	OPP. NPS SCHOOL (3 & 4-BHK)	₹ 1.45 - 2.17 Cr*	8880 461 461
PRM/KA/RERA/1250/301/PR/251024/007178	YELAHANKA	G+14	5 MINS. RAJANUKUNTE	₹ 54.85 - 97.21 Lakhs*	8880 465 465
PRM/KA/RERA/1251/308/PR/160824/006973	BANNERGHATTA RD.	G+14	NEAR KOPPA GATE	₹ 62.42 - 85.23 Lakhs*	8880 013 310
PRM/KA/RERA/1251/308/PR/230126/008427	SARJAPURA	G+4	SARJAPUR - ATTIBELE ROAD	₹ 63.60 - 83.25 Lakhs*	8880 003 003
PRM/KA/RERA/1251/308/PR/160824/006972	HOSA ROAD METRO	G+4	NEAR ELECTRONIC CITY	₹ 67.92 L - 1.34 Cr*	8880 013 310
PRM/KA/RERA/1250/304/PR/150224/006622	WHITEFIELD	G+14	SOUKYA ROAD	₹ 70.65 L - 1.06 Cr*	8880 461 461

Visit our website or talk to our advisors for the complete portfolio

ಡಿಎಸ್ ಮ್ಯಾಕ್ಸ್

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

*T & C Apply

CREDAI BENGALURU

FACILITY MANAGEMENT SERVICES

We Manage and Maintain Your Apartment

9164 022 000

INTERIORS

We design and style your home.

9164 056 000

REFER A DS MAX HOME

Refer a buyer to earn big

9164 043 000

REFER A LAND TO DS MAX

Offer a Land, Get a Home.

8880 463 463

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PRM/KA/RERA/1270/305/PR/140126/008404

Developer:

VIKAAS
Vikaas Infra Builder

VIKAAS WHITE LAND MEADOWS

ಐಷಾರಾಮಿ ವಿಲ್ಲಾ ಪ್ಲಾಟ್‌ಗಳು

where tranquility is a way of life.

BMRDA APPROVED
RERA REGISTERED

Project by:
WHITE LAND REALTY LLP
YOUR REALTOR FOR LIFE!

- Excellent facilities
- Lifestyle amenities
- 9 parks
- 299 plots of varying dimensions
- Wide roads
- Well planned layout
- Spread over 18 acres & 4 guntas
- Proposed Airport

ಉದ್ಘಾಟನೆ
Feb | 22nd
ಬೆಳಿಗ್ಗೆ 11.30 ರಿಂದ

WELCOME
TO A
RELAXED
LIFESTYLE

ಉದ್ಘಾಟಿಸುವವರು
ಸ್ಯಾಂಡಲ್ ವುಡ್ ನಟ
ಡಾಲಿ ಧನಂಜಯ್

Sales & marketing:
laksh
PROPERTIES
expect the best

+91 7026 119 119

www.lakshproperties.in